ಮಂಗಳೂರು
ಶನಿವಾರ, 18 ಏಪ್ರಿಲ್ 2026
ಸಂಪುಟ 48, ಸಂಚಿಕೆ 30, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ವಿದ್ಯುತ್ ದರ ಏರಿಕೆ: ಗ್ರಾಹಕರಿಗೆ ಬರೆ • ಪುಟ 2

ಕೃಷ್ಣನ ಮುಂದೆ ಮಾಂಸಾಹಾರ; ಉದ್ಧಟತನ | 02

ವಿಶ್ವದಲ್ಲೇ ಅತಿ ಬಿಸಿ ದೇಶ ಭಾರತ? | 02

ನಾರೀಶಕ್ತಿಗೆ ಸೋಲು

• **ಹೊಸದಿಲ್ಲಿ:** ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲು ಒದಗಿಸುವ ಉದ್ದೇಶದ ಸಂವಿಧಾನ(131ನೇ ತಿದ್ದುಪಡಿ) ಮಸೂದೆ ಲೋಕಸಭೆಯಲ್ಲಿ ಶುಕ್ರವಾರ ಐತಿಹಾಸಿಕ ಸೋಲು ಕಂಡಿದೆ. ಅಗತ್ಯವಾದ ಮೂರನೇ ಎರಡರಷ್ಟು ಬಹುಮತವನ್ನು ಪಡೆಯಲು ವಿಫಲವಾದ ಹಿನ್ನೆಲೆಯಲ್ಲಿ ಮಸೂದೆ ಅಂಗೀಕಾರವಾಗದೆ ಕುಸಿದಿದ್ದು, ಮಹಿಳೆಯರ ಸಬಲೀಕರಣ ದಶಕಗಳ ಕನಸಿಗೆ ಮತ್ತೊಮ್ಮೆ ಬ್ರೇಕ್ ಬಿದ್ದಂತಾಗಿದೆ. • ವಿವರ ಪುಟ 2



ವಿನಯ್ ಸೇರಿ 16 ಮಂದಿಗೆ ಜೀವಾವಧಿ




• **ಬೆಂಗಳೂರು:** ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಅಪರಾಧಿಗಳಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜೀವಾವಧಿ ಜೈಲು ಶಿಕ್ಷೆ ವಿಧಿಸಿ ಶುಕ್ರವಾರ ಮಹತ್ವದ ತೀರ್ಪು ಪ್ರಕಟಿಸಿದೆ. ಇದರಿಂದ ವಿನಯ್ ಕುಲಕರ್ಣಿ ಶಾಸಕ ಸ್ಥಾನಕ್ಕೆ ಕುತ್ತು ಎದುರಾಗಿದೆ. ಅಂತೆಯೇ ಯೋಗೀಶ್ ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲು ನ್ಯಾಯಾಲಯ ಸೂಚನೆ ನೀಡಿದೆ. • ವಿವರ ಪುಟ 2

9 ಮಂದಿ ಸಜೀವ ದಹನ, ಓರ್ವ ಪಾರು

• **ಯಾದಗಿರಿ:** ಖಾಸಗಿ ಬಸ್ ಹಾಗೂ ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ 9 ಮಂದಿ ಸಜೀವ ದಹನವಾದ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ಶಾಂತಪುರ ಕ್ರಾಸ್ ಬಳಿಯ ಬೀದರ್-ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಶುಕ್ರವಾರ ನಡೆದಿದೆ. • ವಿವರ ಪುಟ 2





ಶನಿವಾರ, 18 ಏಪ್ರಿಲ್ 2026
ಸಂಪುಟ 48, ಸಂಚಿಕೆ 30, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ


ಲೋಕಹಿತಂ ಮಮ ಕರಣೀಯಂ



ಲೋಕಸಭೆಯಲ್ಲಿ ವಿರೋಧ ಪಕ್ಷಗಳಿಂದ ಸಿಗದ ಬೆಂಬಲ
ಮೂರನೇ ಎರಡು ಬಹುಮತ ಸಿಗದೇ ಮಸೂದೆ ವಿಫಲ

ನಾರೀಶಕ್ತಿಗೆ ಸೋಲು





ಮತಗಳು

ಪರ	ವಿರುದ್ಧ
298	230

ಗೈರು - 0

ಮುಂದೇನು?

2029ರೊಳಗೆ ಮಹಿಳಾ ಮೀಸಲು ಜಾರಿಗೆ ತರಬೇಕೆಂಬ ಉದ್ದೇಶಕ್ಕೆ ಹಿನ್ನಡೆ ಉಂಟಾಗಿದೆ. ಸರ್ಕಾರ ಮರುಪರಿಶೀಲನೆ ಮಾಡಿ ಹೊಸ ರೂಪದಲ್ಲಿ ಮಸೂದೆ ತರಬಹುದೇ ಎಂಬುದು ಈಗ ಗಮನಾರ್ಹವಾಗಿದೆ. ಇನ್ನೊಂದೆಡೆ, ಮಹಿಳಾ ಪ್ರತಿನಿಧಿತ್ವದ ಪ್ರಶ್ನೆ ಮತ್ತೆ ರಾಜಕೀಯ ಕೇಂದ್ರಬಿಂದುವಾಗಿ ಮುಂದಿನ ಚುನಾವಣಾ ರಾಜಕೀಯ ದಲ್ಲೂ ಪ್ರಭಾವ ಬೀರುವ ಸಾಧ್ಯತೆ ಇದೆ.

ಹೊಸದಿಲ್ಲಿ: ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲು ಒದಗಿಸುವ ಉದ್ದೇಶದ ಸಂವಿಧಾನ(131ನೇ ತಿದ್ದುಪಡಿ) ಮಸೂದೆ ಲೋಕಸಭೆಯಲ್ಲಿ ಶುಕ್ರವಾರ ಐತಿಹಾಸಿಕ ಸೋಲು ಕಂಡಿದೆ. ಅಗತ್ಯವಾದ ಮೂರನೇ ಎರಡರಷ್ಟು ಬಹುಮತವನ್ನು ಪಡೆಯಲು ವಿಫಲವಾದ ಹಿನ್ನೆಲೆಯಲ್ಲಿ ಮಸೂದೆ



ಅಂಗೀಕಾರವಾಗದೆ ಕುಸಿದಿದ್ದು, ಮಹಿಳೆಯರ ಸಬಲೀಕರಣ ದಶಕಗಳ ಕನಸಿಗೆ ಮತ್ತೊಮ್ಮೆ ಬ್ರೇಕ್ ಬಿದ್ದಂತಾಗಿದೆ.

ಮಸೂದೆಗೆ ಬೆಂಬಲವಾಗಿ 298 ಮತಗಳು ಬಂದರೆ, 230 ಮಂದಿ ವಿರೋಧಿಸಿದರು. ಆದರೆ ಸಂವಿಧಾನ ತಿದ್ದುಪಡಿ ಮಸೂದೆ ಆಗಿರುವುದರಿಂದ 2/3 ಬಹುಮತ ಆಗತ್ಯವಾಗಿದ್ದು, ಸರ್ಕಾರ ಆ ಸಂಖ್ಯೆಯನ್ನು ತಲುಪಲಿಲ್ಲ. ಇಡೀ ಇಂಡಿ ಕೂಟ ಮಹಿಳಾ ಮಸೂದೆ ವಿರುದ್ಧವಾಗಿ ಮತ ಹಾಕಿತು. ಈ ಮಸೂದೆ ಸೋತಿದ್ದರಿಂದ ಮುಂದಿನ ಎರಡು ಮಸೂದೆಗಳನ್ನು ಮತಕ್ಕೆ ಹಾಕಲಿಲ್ಲ.

ಮತದಾನಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಸಂಸದರಿಗೆ ಮನವಿ ಮಾಡಿ, "ಮಹಿಳಾ ಸಬಲೀಕರಣದ ದೃಷ್ಟಿಯಿಂದ ಈ ಮಸೂದೆಗೆ ಬೆಂಬಲ ನೀಡಿ" ಎಂದು ಕೋರಿದ್ದರೂ ಅದು ಫಲ ನೀಡಲಿಲ್ಲ. ➡ಪುಟ ೪

ಬಿಜೆಪಿಯಿಂದ ಪ್ರತಿಭಟನೆ

ಲೋಕಸಭೆಯಲ್ಲಿ ಮಹಿಳಾ ಮಸೂದೆಗೆ ಸೋಲಾಗುತ್ತಿದ್ದಂತೆ ಸಂಸತ್ ಹೊರಗೆ ಬಿಜೆಪಿಯ ಮಹಿಳಾ ಸಂಸದೆಯರು ಬೀದಿಗಿಳಿದು ಇಂಡಿ ಕೂಟದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು. ಸುರಿವ ಮಳೆಯಲ್ಲೂ ಘೋಷಣೆ ಕೂಗುತ್ತಾ ನಡೆದ ಅವರು, ಇಂಡಿ ನಾಯಕರ ವಿರುದ್ಧ ಕಿಡಿಕಾರಿದರು. ಮಹಿಳಾ ಮೀಸಲಾತಿ ವಿಚಾರದಲ್ಲಿ ಬೆಂಬಲ ಕೊಡದೆ, ಮಹಿಳಾ ವಿರೋಧಿ ನಡೆ ಅನುಸರಿಸಿವೆ ಎಂದು ವಾಗ್ದಾಳಿ ನಡೆಸಿದರು.

- ಪ್ರಧಾನಿ, ಗೃಹ ಸಚಿವರ ಮನವಿಗೆ ಸಿಗದ ಮಾನ್ಯ
- ಮಸೂದೆ ಬಗ್ಗೆ ಕಾಂಗ್ರೆಸ್ ನಾಯಕರಿಂದ ಟೀಕೆ
- ಮಹಿಳಾ ಮೀಸಲು, ಪುನರ್ವಿಂಗಡಣೆಗೆ ವಿರೋಧ ಪಕ್ಷಗಳ ವಿರೋಧ
- ಎಸ್‌ಸಿ,ಎಸ್‌ಟಿ ಸ್ಥಾನ ಹೆಚ್ಚಳಕ್ಕೂ ಅಡ್ಡಿ: ಆರೋಪ
- ಒಬ್ಬ ವ್ಯಕ್ತಿ ಒಂದು ಮತ ಒಂದು ಮೌಲ್ಯ ತತ್ವಕ್ಕೆ ವ್ಯತ್ಯಾಸ ಇರುವುದು ಒಪ್ಪಿಗೆ
- 2026 ಬಳಿಕ ಜನಗಣತಿ, ಬಳಿಕ ಮಹಿಳಾ ಮೀಸಲು ಜಾರಿ ಭರವಸೆ

ಮಹಿಳಾ ಸಬಲೀಕರಣ ನಮ್ಮ ಸರ್ಕಾರದ ಪ್ರಮುಖ ಗುರಿ. ಈ ಮಸೂದೆಗೆ ಬೆಂಬಲ ನೀಡುವುದು ದೇಶದ ಭವಿಷ್ಯಕ್ಕೆ ಬೆಂಬಲ ನೀಡಿದಂತೆ.
■ ನರೇಂದ್ರ ಮೋದಿ, ಪ್ರಧಾನಿ

ವಿಪಕ್ಷಗಳು ಮಹಿಳೆಯರ ಹಕ್ಕಿಗೆ ಅಡ್ಡಿಯಾಗಿವೆ. ಇದು ನಾರಿ ಶಕ್ತಿಗೆ ಮಾಡಿದ ಅನ್ಯಾಯ. ದೇಶದ ಮಹಿಳೆಯರು ಇದಕ್ಕೆ ಉತ್ತರ ನೀಡುತ್ತಾರೆ.
■ ಅಮಿತ್ ಶಾ, ಕೇಂದ್ರ ಗೃಹ ಸಚಿವ

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಹತ್ಯೆ ಪ್ರಕರಣ

ಶಾಸಕ ವಿನಯ್ ಸೇರಿ 16 ಮಂದಿಗೆ ಜೀವಾವಧಿ ಸಜೆ

ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಅಪರಾಧಿಗಳಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜೀವಾವಧಿ ಜೈಲು ಶಿಕ್ಷೆ ವಿಧಿಸಿ ಶುಕ್ರವಾರ ಮಹತ್ವದ ತೀರ್ಪು ಪ್ರಕಟಿಸಿದೆ. ಇದರಿಂದ ವಿನಯ್ ಕುಲಕರ್ಣಿ ಶಾಸಕ ಸ್ಥಾನಕ್ಕೆ ಕುತ್ತು ಎದುರಾಗಿದೆ. ಅಂತೆಯೇ ಯೋಗೀಶ್‌ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲು ನ್ಯಾಯಾಲಯ ಸೂಚನೆ ನೀಡಿದೆ.



ಕೊಲೆಯಾದ ಯೋಗೀಶ್‌ಗೌಡ

ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಬುಧವಾರ ಒಟ್ಟು 17 ಮಂದಿಯನ್ನು ದೋಷಿಗಳು ಎಂದು ತೀರ್ಪು ನೀಡಿದ್ದರು. ಗುರುವಾರ ಶಿಕ್ಷೆಯ ಪ್ರಮಾಣ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಸಿಬಿಐ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಹಾಗೂ ವಿನಯ್ ಕುಲಕರ್ಣಿ ಪರ ಹಿರಿಯ ವಕೀಲ ಶ್ಯಾಮಸುಂದರ್, ಇತರೆ ಅಪರಾಧಿಗಳ ಪರ ವಕೀಲರು ಹಾಗೂ ಸ್ವತಃ ಅಪರಾಧಿಗಳ ಮನವಿಯನ್ನು ಆಲಿಸಿದ್ದ ನ್ಯಾಯಾಲಯವು ಶುಕ್ರವಾರಕ್ಕೆ ತೀರ್ಪು ಕಾಯ್ದಿರಿಸಿತ್ತು.

ಬಟ್ಟೆ ಬದಲಿಸಲು ಅನುಮತಿ ನೀಡುವಂತೆ ಮನವಿ: ಜೀವಾವಧಿ ಶಿಕ್ಷೆ ಘೋಷಣೆ ಮಾಡಿದ ಬೆನ್ನಲ್ಲೇ ಶಾಸಕ ವಿನಯ್ ಕುಲಕರ್ಣಿ ಪರ ವಕೀಲ ಸುನಿಲ್ ಅವರು, ನನ್ನ ಕಕ್ಷಿದಾರರು 3 ದಿನದಿಂದ ಒಂದೇ ಬಟ್ಟೆಯಲ್ಲಿದ್ದಾರೆ, ಬಟ್ಟೆ ಬದಲಿಸಲು ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ. ಅಪರಾಧಿಗಳಿಗೆ ಬಟ್ಟೆ ಒದಗಿಸಲು ಜೈಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜೈಲು ಕೈಪಿಡಿಯಲ್ಲಿರುವಂತೆ ಬಟ್ಟೆ ಒದಗಿಸಲು ಜಡ್ಜ್ ಸೂಚನೆ ನೀಡಿದ್ದಾರೆ. ➡ಪುಟ ೪



- ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಿಂದ ತೀರ್ಪು ಪ್ರಕಟ
- ಯೋಗೀಶ್‌ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲು ನ್ಯಾಯಾಲಯ ಸೂಚನೆ

ಜೀವಾವಧಿ ಶಿಕ್ಷೆಗೆ ಗುರಿಯಾದವರು

ವಿಕ್ರಮ್ ಬಳ್ಳಾರಿ(ಎ2), ಕೀರ್ತಿ ಕುಮಾರ್ ಅಲಿಯಾಸ್ ಬಸವರಾಜ್ ಕುರಹಟ್ಟಿ (ಎ3), ಸಂದೀಪ್ ಸವದತ್ತಿ(ಎ24), ವಿನಾಯಕ್ ಕಟಗಿ(ಎ5), ಮಹಾಬಲೇಶ್ವರ್ ಹೊಂಗಲ್ ಅಲಿಯಾಸ್ ಮುದಕ (ಎ6), ಸಂತೋಷ್ ಸವದತ್ತಿ(ಎ7), ಎಂ.ದಿನೇಶ್ (ಎ8), ಎಸ್.ಅಶ್ವತ್(ಎ9), ಕೆ.ಎಸ್. ಸುನೀಲ್ (ಎ10), ನಜೀರ್ ಅಹ್ಮದ್ (ಎ11), ಶನ್ವಾಜ್ (ಎ12), ಕೆ.ನೂತನ್ (ಎ13), ಸಿ.ಹರ್ಷಿತ್ (ಎ14), ವಿನಯ್ ಕುಲಕರ್ಣಿ (ಎ15), ಚಂದ್ರಶೇಖರ್ ಇಂಡಿ ಅಲಿಯಾಸ್ ಚಂದ್ರು ಮಾಮ (ಎ16) ಮತ್ತು ವಿಕಾಸ್ ಕಲಬುರ್ಗಿಗೆ (ಎ18) ಐಪಿಸಿ ಸೆಕ್ಷನ್ 302 ಹಾಗೂ 120ಬಿ ಅಪರಾಧಕ್ಕೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ಟೆಂಗರಿಕರ್‌ಗೆ 7 ವರ್ಷ ಜೈಲು ಶಿಕ್ಷೆ

ಇದೇ ಅಪರಾಧಕ್ಕೆ ಐಪಿಸಿ ಸೆಕ್ಷನ್ 218 ಅನ್ವಯ 19ನೇ ಆರೋಪಿ



ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದ ಚನ್ನಕೇಶವ ಟೆಂಗರಿಕರ್‌ಗೆ ಏಳು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಜತೆಗೆ 30 ಸಾವಿರ ರೂ. ದಂಡ ವಿಧಿಸಲಾಗಿದೆ. ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಹೆಚ್ಚುವರಿಯಾಗಿ ಮೂರು ತಿಂಗಳು ಜೈಲು ವಾಸ ಅನುಭವಿಸಲು ನ್ಯಾಯಾಲಯ ಆದೇಶಿಸಿದೆ.

ಶಾಸಕ ಸ್ಥಾನ ಕಳೆದುಕೊಂಡ ವಿನಯ್ ಕುಲಕರ್ಣಿ

ಯಾವುದೇ ಜನಪ್ರತಿನಿಧಿಗಳ ವಿರುದ್ಧ 2 ವರ್ಷಕ್ಕೂ ಹೆಚ್ಚಿನ ವರ್ಷ ಜೈಲು ಶಿಕ್ಷೆ ಪ್ರಕಟವಾದರೆ, ತಕ್ಷಣ ಅವರ ಶಾಸಕ ಸ್ಥಾನ ರದ್ದಾಗುತ್ತದೆ. ಸದ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಜೀವಾವಧಿ ಜೈಲು ಶಿಕ್ಷೆ ವಿಧಿಸಲಾಗಿದೆ. ಈ ಹಿನ್ನೆಲೆ ವಿನಯ್ ಕುಲಕರ್ಣಿ ಅವರು ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಕೋರ್ಟ್ ತನ್ನ ತೀರ್ಪಿನ ಪ್ರತಿಯನ್ನು ಸ್ಪೀಕರ್‌ಗೆ ಕಳುಹಿಸಲಿದ್ದು, ಆ ಬಳಿಕ ಸಭಾಧ್ಯಕ್ಷರು, ವಿನಯ್ ಕುಲಕರ್ಣಿ ಅವರನ್ನು ಅಧಿಕೃತವಾಗಿ ಶಾಸಕ ಸ್ಥಾನದಿಂದ ಅನರ್ಹಗೊಳಿಸಲಿದ್ದಾರೆ.

ಕೈ ನಾಯಕನ ಕುಕೃತ್ಯದ ಕತ್ತಲ ಲೋಕ

ಪ್ರಕರಣಕ್ಕೆ ಹೊಸ ತಿರುವು ನೀಡಿದ ಸಿಬಿಐ ಅಧಿಕಾರಿ ರಾಕೇಶ್ ರಂಜನ್

• ಪುಟ ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅಶ್ವಿನಿ

ದಿನದ ಮಾತು

ನಿಜವಾದ ಜ್ಞಾನಕ್ಕೂ ಪುಸ್ತಕ ಪಾಂಡಿತ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ.
▲ ಸುಭಾಷಿತ

ಕಿರುಸುದ್ದಿ

ಮಹಿಳಾ ಮೀಸಲು ಮಸೂದೆ: ಗೃಹಸಚಿವ ಅಮಿತ್ ಶಾ ಸಮರ್ಥನೆ

ಹೊಸದಿಲ್ಲಿ: ಮಹಿಳಾ ಮಸೂದೆಯನ್ನು ಕಾಂಗ್ರೆಸ್ ವಿರೋಧಿಸುತ್ತಿರುವುದು ಯಾಕೆಂದರೆ , ಅದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಡಿಸಿದ್ದಾರೆ ಎಂಬ ಏಕೈಕ ಕಾರಣಕ್ಕಾಗಿ. ಇದೊಂದು ಕುರುಡು ದ್ವೇಷದ ರಾಜ ಕಾರಣ ಎಂಬುದಾಗಿ ಕೇಂದ್ರ ಗೃಹಸಚಿವ ಅಮಿತ್ ಶಾ ಲೋಕಸಭೆಯಲ್ಲಿ ವಿಪಕ್ಷಗಳನ್ನು ತರಾಟೆಗೆತ್ತಿಕೊಂಡಿದ್ದಾರೆ.

★ ಮಹಿಳಾ ಮೀಸಲು ಮಸೂದೆಗೆ ತಡೆ ಒಡ್ಡುವ ವಿಪಕ್ಷಗಳದು ಒಂದು 'ಕ್ರೂರ ರಾಜಕೀಯ '

★ ಕ್ಷೇತ್ರ ಪುನರ್ವಿಂಗಡಣೆಯನ್ನು ವಿರೋಧಿ ಸುವುದೆಂದರೆ ಪರಿಶಿಷ್ಟ ಜಾತಿ–ಪಂಗಡಗಳಿಗಾಗಿ ಇರುವ ಸ್ಥಾನಗಳನ್ನು ಹೆಚ್ಚಿಸುವುದನ್ನು ವಿರೋಧಿಸುವುದೆಂದೇ ಅರ್ಥ ➡ಪುಟ ೪

ಮಸೂದೆ ಮಹಿಳಾ ಸಬಲೀಕರಣಕ್ಕಾಗಿ ಅಲ್ಲ: ರಾಹುಲ್ ಗಾಂಧಿ ಟೀಕೆ

ಅಧಿಕಾರ ಉಳಿಸಿಕೊಳ್ಳಲು ಮಾಡಿದ ಯತ್ನ

ಹೊಸದಿಲ್ಲಿ: ಮಹಿಳಾ ಮೀಸಲು ಕಾಯ್ದೆಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಗಳ ಕುರಿತು ತೀವ್ರ ಟೀಕೆ ವ್ಯಕ್ತಪಡಿಸಿರುವ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಈ ಮಸೂದೆ ಮಹಿಳಾ



ಸಬಲೀಕರಣಕ್ಕಾಗಿ ಅಲ್ಲ, ಬದಲಾಗಿ ದೇಶದ ಚುನಾವಣಾ ರಚನೆಯನ್ನು ಬದಲಾಯಿಸಿ ಅಧಿಕಾರವನ್ನು ಉಳಿಸಿಕೊಳ್ಳಲು ಮಾಡಿದ ಪ್ರಯತ್ನ ಎಂದು ಆರೋಪಿಸಿದರು. ಮಾತ್ರವಲ್ಲದೇ ಇದು ರಾಷ್ಟ್ರವಿರೋಧಿ ಕ್ರಮ ಎಂದು ಅವರು ಹೇಳಿದರು.

ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ರಾಹುಲ್ ಗಾಂಧಿ, ಈ ಮಸೂದೆ ಮಹಿಳೆಯರ ಹಕ್ಕುಗಳಿಗೆ ಸಹಾಯ ಮಾಡುವುದಿಲ್ಲ ಎಂದರು. ಸರ್ಕಾರ ಮಹಿಳೆಯರ ಹೆಸರನ್ನು ಬಳಸಿಕೊಂಡು ನಿಜವಾದ ಉದ್ದೇಶವನ್ನು ಮರೆಮಾಚುತ್ತಿದೆ. ➡ಪುಟ ೪

ರಾಹುಲ್ ಆರೋಪಗಳು

- ಈ ಮಸೂದೆ ಮಹಿಳಾ ಸಬಲೀಕರಣಕ್ಕಾಗಿ ಅಲ್ಲ, ದೇಶದ ಚುನಾವಣಾ ರಚನೆ ಬದಲಾಯಿಸಲು ಸರ್ಕಾರ ಯತ್ನಿಸುತ್ತಿದೆ
- ಇದು ರಾಷ್ಟ್ರವಿರೋಧಿ ಕ್ರಮ, ಮಹಿಳೆಯರ ಹೆಸರನ್ನು ಬಳಸಿಕೊಂಡು ನಿಜವಾದ ಉದ್ದೇಶವನ್ನು ಮರೆಮಾಚಲಾಗುತ್ತಿದೆ
- 2023ರ ಮಹಿಳಾ ಮೀಸಲು ಕಾಯ್ದೆ ತಕ್ಷಣ ಜಾರಿಗೆ ತರಬೇಕು, ಇದಕ್ಕೆ ವಿರೋಧ ಪಕ್ಷದ ಸಂಪೂರ್ಣ ಬೆಂಬಲವಿದೆ
- ಮಸೂದೆ ಒಬಿಸಿ, ಎಸ್‌ಸಿ–ಎಸ್‌ಟಿ, ಸಣ್ಣ ರಾಜ್ಯಗಳ ವಿರುದ್ಧವಾಗಿದೆ
- ಜಾತಿ ಗಣತಿ ತಪ್ಪಿಸಿ, ಒಬಿಸಿ ವರ್ಗಗಳ ಪ್ರಾತಿನಿಧ್ಯ ಕಡಿಮೆಗೆ ಯತ್ನ

ಖಾಸಗಿ ಬಸ್–ಕಾರ್ ನಡುವೆ ಭೀಕರ ಅಪಘಾತ | ಹೊತ್ತಿ ಉರಿದ ವಾಹನಗಳು

9 ಮಂದಿ ಸಜೀವ ದಹನ, ಓರ್ವ ಪಾರು

ಯಾದಗಿರಿ: ಖಾಸಗಿ ಬಸ್ ಹಾಗೂ ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ 9 ಮಂದಿ ಸಜೀವ ದಹನವಾದ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ಶಾಂತಪುರ ಕ್ರಾಸ್ ಬಳಿಯ ಬೀದರ್–ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಶುಕ್ರವಾರ ನಡೆದಿದೆ. ಘಟನೆ ಇಡೀ ಜಿಲ್ಲೆಯನ್ನೇ ಬೆಚ್ಚಿಬೀಳಿಸಿದೆ. ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಸಿರವಾರ ಪಟ್ಟಣದ ನಿವಾಸಿಗಳಾದ ಕೃಷ್ಣ ನಾಯಕ್(52), ಅನಂತ ಕಲಾ(45), ಶರಣಪ್ಪ(36), ನಿಸರ್ಗ(30), ಸಿದ್ಧಾರ್ಥ(3), ಅದ್ವಿಕ್/ಶರಣಪ್ಪ(5) ಶ್ರೀನಿಧಿ(1.5 ವರ್ಷ), ಶಶಿಕಲಾ(30) ಹಾಗೂ ಚಂದನ್(8) ಮೃತ ದುರ್ದೈವಿಗಳಾಗಿದ್ದಾರೆ. ➡ಪುಟ ೪



ಕಾರಿನಲ್ಲಿದ್ದ 9 ಜನರ ಸಾವು

ಸಿರವಾರದಿಂದ ಸುರಪುರ ಪಟ್ಟಣದ ಪ್ರಸಿದ್ಧ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ತೆರಳಿ ವಾಪಸ್ ಊರಿಗೆ ಮರಳುವಾಗ ಈ ದುರ್ಘಟನೆ ಸಂಭವಿಸಿದೆ. ಘಟನೆಯಲ್ಲಿ ಕಾರು, ಖಾಸಗಿ ಬಸ್ ಕ್ಷಣಾರ್ಧದಲ್ಲಿ ಧಗಧಗನೆ ಉರಿದಿದ್ದು, ಕಾರಿನಲ್ಲಿದ್ದ 9 ಜನ ಸಜೀವ ದಹನವಾಗಿದ್ದಾರೆ. ಏರಾಟ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿಯ ತೀವ್ರತೆಗೆ ಕೆಲವರ ತಲೆ ಬುರುಡೆಗಳು ಮಾತ್ರ ಕಾಣಿಸಿದ್ದು, ಇವು ಯಾರವು ಎಂಬುದು ಸಹ ಪತ್ತೆ ಹಚ್ಚುವುದು ಸವಾಲಿನ ಕೆಲಸವಾಗಿದೆ.

ಭಾರೀ ಆದಾಯ ಕೊರತೆ | ಗ್ರಾಹಕರಿಗೆ ಬರೆ

ವಿದ್ಯುತ್ ದರ ಏರಿಕೆ

ಬೆಂಗಳೂರು: ಬಿಸಿಲಿನ ತಾಪದ ನಡುವೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಬೆಸ್ಕಾಂ) ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಗ್ರಾಹಕರಿಗೆ ವಿದ್ಯುತ್ ಬೆಲೆ ಏರಿಕೆ ಬಿಸಿ ತಟ್ಟಲಿದೆ.

2024–25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಉಂಟಾದ ಭಾರೀ ಆದಾಯ ಕೊರತೆಯನ್ನು ಸರಿದೂಗಿಸಲು, ಬೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ 56 ಪೈಸೆಯಂತೆ, ಸೆಸ್ಕಾಂ ವ್ಯಾಪ್ತಿಯಲ್ಲಿ 15 ಪೈಸೆಯಂತೆ ಹೆಚ್ಚುವರಿ ಮೊತ್ತವನ್ನು ಗ್ರಾಹಕರಿಂದ ವಸೂಲಿ ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅನುಮತಿ ನೀಡಿದೆ. ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿದ್ದ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಅರ್ಜಿಯನ್ನು ಪುರಸ್ಕರಿಸಿರುವ ಆಯೋಗವು, 2024–25ನೇ ಸಾಲಿನಲ್ಲಿ ವಿದ್ಯುತ್ ಮಾರಾಟದಿಂದ ಬೆಸ್ಕಾಂಗೆ ಒಟ್ಟು 2068.38 ಕೋಟಿ ರೂ. ಹಾಗೂ ಸೆಸ್ಕಾಂಗೆ 121.71 ಕೋಟಿ ರೂ. ಆದಾಯ ಕೊರತೆ ಉಂಟಾಗಿರುವುದನ್ನು ಮಾನ್ಯ ಮಾಡಿದೆ. ಈ ನಷ್ಟವನ್ನು ಭರಿಸಲು ಗ್ರಾಹಕರ ಮೇಲೆ ಟ್ರೂ ಅಪ್ ಹೆಸರಿನಲ್ಲಿ ಬೆಲೆ ಹೆಚ್ಚಳ ಮಾಡಲಾಗುತ್ತಿದೆ.

ಯಾವಾಗಿನಿಂದ ಜಾರಿಗೆ ಬರಲಿದೆ?: ಕೆಇಆರ್‌ಸಿ ಆದೇಶವು ಏಪ್ರಿಲ್ 17ರಂದು ಹೊರಬಿದ್ದಿದ್ದು, ಪರಿಷ್ಕೃತ ದರವು ಮೇ 1ರಿಂದ ಜಾರಿಗೆ ಬರಲಿದೆ. ಅಂದರೆ, ಮೇ ತಿಂಗಳಿನಲ್ಲಿ ಬರುವ ವಿದ್ಯುತ್ ಬಿಲ್‌ಗಳಲ್ಲಿ ಗ್ರಾಹಕರು ಬೆಸ್ಕಾಂ ವ್ಯಾಪ್ತಿಯಲ್ಲಿ 56 ಪೈಸೆ, ಸೆಸ್ಕಾಂ ವ್ಯಾಪ್ತಿಯಲ್ಲಿ 15 ಪೈಸೆ ಟ್ರೂ ಅಪ್ ದರವನ್ನು ಪಾವತಿಸಬೇಕಾಗುತ್ತದೆ. ಈ ವಸೂಲಾತಿಯು 2026–27ರ ಇಡೀ ಆರ್ಥಿಕ ವರ್ಷದಲ್ಲಿ ಅನ್ವಯವಾಗಲಿದ್ದು ಅಂದರೆ 2027–ಏಪ್ರಿಲ್ 30ರವರೆಗೆ ಮುಂದುವರಿಯಲಿದೆ. ➡ಪುಟ ೪



ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಪರಿಷ್ಕೃತ ದರ ಪಟ್ಟಿ

- ಬೆಸ್ಕಾಂ–ಪ್ರತಿ ಯೂನಿಟ್‌ಗೆ 56 ಪೈಸೆ ಗ್ರಾಹಕರಿಂದ ಹೆಚ್ಚುವರಿ ಸಂಗ್ರಹ
- ಸೆಸ್ಕ್ –ಪ್ರತಿ ಯೂನಿಟ್‌ಗೆ 15 ಪೈಸೆ ಗ್ರಾಹಕರಿಂದ ಹೆಚ್ಚುವರಿ ಸಂಗ್ರಹ
- ಹೆಸ್ಕಾಂ–ಪ್ರತಿ ಯೂನಿಟ್‌ಗೆ 10 ಪೈಸೆ ಗ್ರಾಹಕರಿಗೆ ವಾಪಸ್
- ಜೆಸ್ಕಾಂ–ಪ್ರತಿ ಯೂನಿಟ್‌ಗೆ 10 ಪೈಸೆ ಗ್ರಾಹಕರಿಗೆ ವಾಪಸ್
- ಮೆಸ್ಕಾಂ–ಪ್ರತಿ ಯೂನಿಟ್‌ಗೆ 9 ಪೈಸೆ ಗ್ರಾಹಕರಿಗೆ ವಾಪಸ್

ಮುಂದಿನ 2 ವಾರಗಳ ಕಾಲ ದೇಶದಲ್ಲಿ ತೀವ್ರ ಬಿಸಿಗಾಳಿ

ವಿಶ್ವದಲ್ಲೇ ಅತಿ ಬಿಸಿ ದೇಶ ಭಾರತ?

ಹೊಸದಿಲ್ಲಿ: ಜಾಗತಿಕ ಬಿಸಿ ಏರುವಿಕೆ ಪರಿಣಾಮವಾಗಿ ಮುಂದಿನ ಎರಡು ವಾರಗಳಲ್ಲಿ ದೇಶದಲ್ಲಿ ದಾಖಲೆ ಬಿಸಿಗಾಳಿ ಬೀಸಲಿದ್ದು, ವಿಶ್ವದಲ್ಲೇ ಅತ್ಯಂತ ಬಿಸಿ ಪ್ರದೇಶವಾಗುವ ಎಲ್ಲಾ ಸಾಧ್ಯತೆಗಳಿವೆ ಎಂದು ಅಂದಾಜಿಸಲಾಗಿದೆ. ಹಲವು ರಾಜ್ಯಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗುವ ನಿರೀಕ್ಷೆಯಿದ್ದು, ಕೆಲವು ಪ್ರದೇಶಗಳಲ್ಲಿ 48 ಡಿಗ್ರಿ ಸೆಲ್ಸಿಯಸ್ ಸಮೀಪಿಸುವ ಭೀತಿಯಿದೆ ಎಂದು ಭಾರತದ ಹವಾಮಾನ ಇಲಾಖೆ(ಐಎಂಡಿ) ಶುಕ್ರವಾರ ಹೇಳಿದೆ.

ಅತಿ ಉಷ್ಣತೆಗೆ ಕಾರಣವೇನು?: ಈ ತೀವ್ರ ಬಿಸಿಗಾಳಿಗೆ ಹಲವು ಹವಾಮಾನ ಸಂಬಂಧಿತ ಕಾರಣಗಳಿವೆ. ಮುಖ್ಯವಾಗಿ, ಒಂದು ಸ್ಥಿರವಾದ ಉನ್ನತ ಒತ್ತಡದ ವ್ಯವಸ್ಥೆ(ಹೈ ಪ್ರೆಶರ್ ಸಿಸ್ಟಮ್) ಭಾರತ ಉಪಖಂಡದ ಮೇಲೆ ಆವರಿಸಿಕೊಂಡಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ.

ಇದು ಬಿಸಿಯಾದ ಗಾಳಿಯನ್ನು ಹೊರಗೆ ಹೋಗದಂತೆ ಬಂಧಿಸುವ ಹೀಟ್ ಡೋಮ್ ಸ್ಥಿತಿಯನ್ನು ಉಂಟುಮಾಡುತ್ತದೆ. ಇದರ ಜತೆಗೆ ಪಶ್ಚಿಮದಿಂದ ಬರುವ ಒಣಗಾಳಿ ಹಾಗೂ ಮುಂಗಾರು ಮಳೆ ತಡವಾಗಿರುವುದು ಈ ಬಿಸಿಯನ್ನು ಮತ್ತಷ್ಟು ಹೆಚ್ಚಿಸಿದೆ. ಮೋಡಗಳ ಕೊರತೆಯಿಂದ ಸೂರ್ಯನ ಕಿರಣಗಳು ನೇರ ಭೂಮಿಯನ್ನು ತಾಕುತ್ತವೆ, ಇದರಿಂದ ಭೂಮಿ ಬೇಗ ಬಿಸಿ ಆಗುತ್ತದೆ. ➡ಪುಟ ೪

ದೇಶದಲ್ಲಿ ತಾಪಮಾನ 45-48 ಡಿಗ್ರಿ ಸೆಲ್ಸಿಯಸ್ ತಲುಪುವ ಭೀತಿ



ಕೃಷಿ ಉತ್ಪಾದನೆಗೆ ಹೊಡೆತ

ಈ ಉಷ್ಣತೆಯ ಅಲೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಜೀವನದ ಮೇಲೂ ಪರಿಣಾಮ ಬೀರುತ್ತಿದೆ. ವಿಶೇಷವಾಗಿ ಗೋಧಿ ಮುಂತಾದ ಬೆಳೆಗಳು ಹೆಚ್ಚಿನ ತಾಪಮಾನಕ್ಕೆ ಸಂವೇದನಾಶೀಲ ಆಗಿರುವುದರಿಂದ ಕೃಷಿ ಉತ್ಪಾದನೆಗೆ ಹೊಡೆತ ಬೀಳಬಹುದು. ವಿದ್ಯುತ್ ಬಳಕೆ ಕೂಡ ಹೆಚ್ಚಾಗುವ ಸಾಧ್ಯತೆ ಇದೆ. ಏಕೆಂದರೆ ಜನರು ತಂಪು ಸಾಧನಗಳ ಮೇಲೆ ಹೆಚ್ಚಿನ ಅವಲಂಬನೆ ಇಡುತ್ತಾರೆ. ➡ಪುಟ ೪

ಕೃಷ್ಣನ ಮುಂದೆ ಮಾಂಸಾಹಾರ:

ಹೋಟೇಲ್‌ವೊಂದರ ಉದ್ಧಟತನ

- ಕೇರಳದಲ್ಲಿ ವಿಷು ಪೋಸ್ಟರ್ ವಿವಾದ
- ಹೋಟೇಲ್ ಮಾಲೀಕ ಅರ್ಷದ್ ಸೇರಿ ಇಬ್ಬರ ಬಂಧನ
- ಧಾರ್ಮಿಕ ಭಾವನೆಗೆ ಧಕ್ಕೆ ಆರೋಪ
- ಪ್ರತಿಭಟನೆ ಭೀತಿ ಹಿನ್ನೆಲೆ ಪೊಲೀಸ್ ಮುನ್ನೆಚ್ಚರಿಕೆ
- ಉಪಾಹಾರ ಗೃಹ ಮಾಲೀಕರಿಂದ ಸಾರ್ವಜನಿಕ ಕ್ಷಮಾಪಣೆ

ಆಲಪ್ಪುಳ(ಕೇರಳ): ವಿಷು ಹಬ್ಬದ ಅಂಗವಾಗಿ ಒಂದು ಉಪಾಹಾರ ಗೃಹದ ಪ್ರಚಾರ ಪೋಸ್ಟರ್‌ನಲ್ಲಿ ಬಾಲಕೃಷ್ಣನನ್ನು ಮಾಂಸಾಹಾರ ತಿನಿಸಿನ ಮುಂದೆ ಕುಳಿತಿರುವಂತೆ ಚಿತ್ರಿಸಿ ಉದ್ಧಟತನ ಮೆರೆದಿದ್ದು, ಈ ಸಂಬಂಧ



ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಪೊಲೀಸರ ಮಾಹಿತಿ ಪ್ರಕಾರ, ಕುಝಿ ಮಂಡಿ ಎಂಬ ಅರೇಬಿಕ್ ಮಾಂಸಾಹಾರ ಪದಾರ್ಥದ ಮುಂದೆ ಬಾಲಕೃಷ್ಣನ ಚಿತ್ರ ಹೊಂದಿದ ಪೋಸ್ಟರ್ ಅನ್ನು ವಾಟ್ಸಾಪ್ ಮೂಲಕ ಹಂಚಿಕೊಂಡ ಆರೋಪದಲ್ಲಿ ಚೆರ್ತಾಲಾ ಮನೋರಮಾ ಜಂಕ್ಷನ್ ಬಳಿಯ ಮೆಹರ್ ಮಂಡಿ ಆ್ಯಂಡ್ ಗ್ರಿಲ್ಸ್‌ನ ಮಾಲೀಕ ಅರ್ಷದ್‌ನನ್ನೂ ಬಂಧಿಸಲಾಗಿದೆ. ಈ ಕೃತ್ಯದಿಂದ ಹಿಂದೂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಉದ್ದೇಶ ಇದ್ದ ಆರೋಪದ ಹಿನ್ನೆಲೆಯಲ್ಲಿ ಬಂಧಿಸಲಾಗಿದೆ. ➡ಪುಟ ೪

ಖಡಕ್ ತೀರ್ಪುಗಳ ನ್ಯಾ. ಸಂತೋಷ್ ಗಜಾನನ ಭಟ್

ಭ್ರಷ್ಟ ಜನಪ್ರತಿನಿಧಿಗಳಿಗೆ ಸಿಂಹಸ್ವಪ್ನ

ಬೆಂಗಳೂರು: ಪ್ರಜ್ವಲ್ ರೇವಣ್ಣ, ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ. ಪ್ರಕರಣ ಬೇರೆ ಬೇರೆಯಾದರೂ, ಅಪರಾಧಿ ಯಾರೇ ಆಗಿದ್ದರೂ, ಎಷ್ಟೇ ಪ್ರಭಾವಿಯಾಗಿದ್ದರೂ, ನ್ಯಾಯಬದ್ಧವಾಗಿ ಶಿಕ್ಷೆ ವಿಧಿಸಿದ್ದು ಹಿರಿಯ ನ್ಯಾಯಾಧೀಶ ಸಂತೋಷ್ ಗಜಾನನ ಭಟ್.

ಸಂತೋಷ್ ಗಜಾನನ ಭಟ್ ಬೆಂಗಳೂರಿನಲ್ಲಿ ಪ್ರಧಾನ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅದರಲ್ಲೂ ಜನಪ್ರತಿನಿಧಿಗಳು ಅಂದರೆ, ಹಾಲಿ ಸಂಸದ, ಶಾಸಕರು, ಮಾಜಿ ಸಂಸದ/ಶಾಸಕರುಗಳಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣಗಳನ್ನು ನಿರ್ವಹಿಸುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಾರೆ. ಲೈಂಗಿಕ ದೌರ್ಜನ್ಯ ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹೈ–ಪ್ರೊಫೈಲ್ ಪ್ರಕರಣಗಳನ್ನು ಇವರು ನಿಭಾಯಿಸಿದ್ದಾರೆ.

ಈ ಹಿಂದೆ ಇಡೀ ದೇಶದ ಗಮನ ಸೆಳೆದಿದ್ದ ಪ್ರಜ್ವಲ್ ರೇವಣ್ಣ ಪ್ರಕರಣದ ತೀರ್ಪಿನ ಬಳಿಕ ಮಾತನಾಡಿದ್ದ ಹಿರಿಯ ವಕೀಲರೊಬ್ಬರು, ರಾಜಕೀಯ ಹಸ್ತಕ್ಷೇಪ ಅಥವಾ ಹಣದ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತ ವಾದ ಪ್ರಕರಣವೊಂದನ್ನು ನಾವು ಕಣ್ಣಾರೆ ಕಂಡೆವು. ಖಂಡಿತವಾಗಿಯೂ ಈ ತೀರ್ಪು ಸಾರ್ವಜನಿಕ ವಲಯದಲ್ಲಿ ದೀರ್ಘ ಕಾಲ ಚರ್ಚೆಯಾಗಲಿದೆ ಎಂದು ಬಣ್ಣಿಸಿದ್ದರು. ➡ಪುಟ ೪



ಸಂಚಲನ ಮೂಡಿಸಿದ ತೀರ್ಪುಗಳು

ಕೇವಲ ಅತ್ಯಾಚಾರ, ಕೊಲೆ ಪ್ರಕರಣಗಳು ಮಾತ್ರವಲ್ಲ, ಭ್ರಷ್ಟ, ಅಪ್ರಮಾಣಿಕ ಜನಪ್ರತಿನಿಧಿಗಳ ಪಾಲಿಗೂ ಇವರು ಸಿಂಹಸ್ವಪ್ನರಾಗಿದ್ದಾರೆ. ಇವರ ನ್ಯಾಯಾಲಯದ ಮೆಟ್ಟಿಲೇರಿದ ಘಟಾನುಘಟಿ ರಾಜಕಾರಣಿಗಳು ಕೂಡ ನಡುಗಿದ್ದಾರೆ ಎಂದರೆ ತಪ್ಪಾಗಲ್ಲ. ಕೆ.ಆರ್. ನಗರದ ಮನೆ ಕೆಲಸದಾಕೆ ಮೇಲೆ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಮಾತ್ರವಲ್ಲದೆ, ಅಕ್ರಮ ಗಣಿಗಾರಿಕೆ ಮತ್ತು ಭ್ರಷ್ಟಾಚಾರ ಪ್ರಕರಣಗಳಲ್ಲೂ ಇವರು ನೀಡಿದ ತೀರ್ಪುಗಳು ಸಂಚಲನ ಮೂಡಿಸಿವೆ. ➡ಪುಟ ೪

ಕಿರುಸುದ್ದಿ

ಏ. 20: ಮರೋಳಿ ದೇವಸ್ಥಾನದಲ್ಲಿ ಯಾಗಶಾಲೆ ಕಟ್ಟಡದ ಶಿಲಾನ್ಯಾಸ

ಮಂಗಳೂರು: ಇತಿಹಾಸ ಪ್ರಸಿದ್ಧ ಮರೋಳಿ ಶ್ರೀ ಸೂರ್ಯನಾರಾಯಣದೇವಸ್ಥಾನದಲ್ಲಿ ಏ. 20ನೇ ಸೋಮವಾರ ಬೆಳಗ್ಗೆ 10ರಿಂದ ಬ್ರಹ್ಮಶ್ರೀ ಕೆ.ಯು..ನೀಲೇಶ್ವರ ಪದ್ಮನಾಭ ತಂತ್ರಿವರೇಣ್ಯರ ಮಾರ್ಗದರ್ಶನದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಯಾಗಶಾಲೆ ಕಟ್ಟಡದ ಶಿಲಾನ್ಯಾಸ ಸಮಾರಂಭವು ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಜರಗಲಿದೆ. ಬೆಳಗ್ಗೆ ಗಂಟೆ 10.30ರಿಂದ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ಗಣೇಶ ಶೆಟ್ಟಿ ಜಪ್ಪುಗುಡ್ಡೆಗುತ್ತು ವಹಿಸಲಿದ್ದಾರೆ. ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನುವಂಶೀಯ ಮೊಕ್ತೇಸರ ಅನಂತ ಅಸ್ರಣ್ಣ ಆಶೀರ್ವಚನ ನೀಡಲಿದ್ದಾರೆ. ನಂದಕಿಶೋರ್‌ರೆಡ್ಡಿ ದೀಪ ಪ್ರಜ್ವಲನೆ ಮಾಡಲಿದ್ದು, ಸಂಸದ ಕ್ಯಾ. ಬ್ರಿಜೇಶ್‌ಚೌಟ, ಶಾಸಕ ಡಿ. ವೇದವ್ಯಾಸ ಕಾಮತ್, ವಿಧಾನಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಆರೂರು ಪ್ರಭಾಕರ್ ರಾವ್, ಚಿತ್ತರಂಜನ್ ಗರೋಡಿ, ನವೀನ್ ರೈ, ಎಂ. ಮಹಾಬಲ ಕೊಟ್ಟಾರಿ, ಸೀತಾರಾಮ್ ಮುಳಿಹಿತ್ಲು, ಸುರೇಶ್ ಭಂಡಾರಿ ಕಡಂದಲೆ, ಚಿತ್ತರಂಜನ್ ಬೋಳಾರ, ಭಾಗವಹಿಸಲಿರುವರು ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಮನಪಾ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಶಂಕುಸ್ಥಾಪನೆ

ಮಂಗಳೂರು: ಮಂಗಳೂರು ಮಹಾನಗರಪಾಲಿಕೆಯಲ್ಲಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ (ಹಂತ-2) ಮತ್ತು ಎನ್‌ಜಿಟಿ ಪರಿಹಾರ ನಿಧಿ ಕಾಮಗಾರಿಗಳ ಶಂಕುಸ್ಥಾಪನೆ ಏ. 18 ರಂದು ನಡೆಯಲಿದೆ. ಬೆಳಿಗ್ಗೆ 9 ಗಂಟೆಗೆ ಮರವೂರು ಏರ್‌ಪೋರ್ಟ್ ರಸ್ತೆ ಕಾಂಕ್ರೀಟೀಕರಣ, 9.45– ವೆಲ್ಲೆಸ್ಲಿಯಾ ಚರ್ಚ್ ರಸ್ತೆ ಕಾಂಕ್ರೀಟೀಕರಣ, 10.30– ಸುಂಕದಕಟ್ಟೆ ಉರ್ವಸ್ಟೋರ್ ರಸ್ತೆ ಕಾಂಕ್ರೀಟೀಕರಣ, 10.45– ಚಿಲಿಂಬಿಗುಡ್ಡೆ ರಸ್ತೆ ಕಾಂಕ್ರೀಟೀಕರಣಕ್ಕೆ ಗುದ್ದಲಿ ಪೂಜೆ ನಡೆಯಲಿದೆ. ಸಭಾ ಕಾರ್ಯಕ್ರಮ ಬೆಳಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ. ಸ್ಪೀಕರ್ ಯು. ಟಿ. ಖಾದರ್ ಫರೀದ್, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಸುರೇಶ್ ಬಿ. ಎಸ್, ಶಾಸಕ ಡಿ. ವೇದವ್ಯಾಸ ಕಾಮತ್ ಮತ್ತಿತರರು ಉಪಸ್ಥಿತರಿರುವರು.

ಕೂಟ ಮಹಾ ಜಗತ್ತು ಆಶ್ರಯದಲ್ಲಿ ವಸಂತ ವೇದ ಪಾಠ ಶಿಬಿರ ಆರಂಭ

ಮಂಗಳೂರು: ಕೂಟ ಮಹಾ ಜಗತ್ತು ಮಂಗಳೂರು ಅಂಗ ಸಂಸ್ಥೆಯ ಆಶ್ರಯದಲ್ಲಿ 25ನೇ ವರ್ಷದ ವಸಂತ ವೇದ ಪಾಠ ಶಿಬಿರವನ್ನು ಪಾಂಡೇಶ್ವರದ ಶ್ರೀ ಗುರು ನರಸಿಂಹ ಸಭಾಭವನದಲ್ಲಿ ವಿದ್ವಾಂಸರಾದ ಶ್ರೀಕರ ಭಟ್ ಉದ್ಘಾಟಿಸಿ, ಸಂಧ್ಯಾವಂದನೆ ಬ್ರಾಹ್ಮಣರ ಒಂದು ಆಧ್ಯಾತ್ಮಿಕ ಪ್ರಕ್ರಿಯೆ ಹಾಗೂ ಪ್ರಕೃತಿಯ ಆರಾಧನೆ ಜ್ಞಾನ ಮತ್ತು ಬುದ್ಧಿಶಕ್ತಿಯನ್ನು ಜಾಗೃತಗೊಳಿಸಿ ದೇವತಾ ಸಾನಿಧ್ಯವನ್ನು ಪಡೆಯುವ ಆಧ್ಯಾತ್ಮಿಕ ಆಚರಣೆ ಆಗಿರುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ ಅಂಗ ಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳರು ಬ್ರಾಹ್ಮಣ ವರ್ಗದಲ್ಲಿ ಉಪನಯನ ಎಂಬ ಪ್ರಕ್ರಿಯೆಗೆ ವಿಶೇಷವಾದ ಮಹತ್ವವಿದೆ ದೇವ ಪಿತೃ ಮತ್ತು ಋಷಿ ಋಣಗಳ ಸಂಕೇತವಾದ ಮೂರು ಎಳೆಗಳ ಜನಿವಾರ ಧರಿಸಿ ಸಂಧ್ಯಾವಂದನಾದಿ ಅಗ್ನಿ ಕಾರ್ಯಗಳನ್ನು ಮಾಡುವುದರಿಂದ ಸಕಾರಾತ್ಮಕ ಶಕ್ತಿಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ. ಮಕ್ಕಳಿಗೆ ಸಂಸ್ಕಾರದ ಜೊತೆಗೆ ಭಾರತೀಯ ಸಂಸ್ಕೃತಿಯ ಅರಿವನ್ನು ನೀಡಬೇಕು ಎಂದರು. ಕಾರ್ಯದರ್ಶಿ ಜಿಕೆ ಮಯ್ಯ ಸ್ವಾಗತಿಸಿದರು. ಲಲಿತ ಉಪಾಧ್ಯಾಯ ಪಂಕಜ ಪ್ರಾರ್ಥಿಸಿದರು. ಮಹಿಳಾ ಸಮಿತಿಯ ಅಧ್ಯಕ್ಷೆ ಪ್ರಭಾ ರಾವ್, ಕೂಟ ಮಹಾಜಗತ್ತಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸನಾತನ ಹಿಂದೂ ಸಂಸ್ಕೃತಿಯ ಸಂರಕ್ಷಣೆ–ಸಂವರ್ಧನೆಗಾಗಿ ಶ್ರೀಪುತ್ತಿಗೆ ಸುಗುಣ ಶಿಬಿರ

ಉಡುಪಿ: ಶ್ರೀ ಪುತ್ತಿಗೆ ಮಠದ ಯತಿಕುಲ ಚಕ್ರವರ್ತಿ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಮತ್ತವರ ಶಿಷ್ಯ ಶ್ರೀ ಸುಶೀಂದ್ರತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ ಉಡುಪಿ ಗೀತಾಮಂದಿರದಲ್ಲಿ ಶ್ರೀಪುತ್ತಿಗೆ ಸುಗುಣ ಶಿಬಿರವನ್ನು ಆಯೋಜಿಸಲಾಗುತ್ತಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ. ಏ. 20ರಿಂದ ಏಪ್ರಿಲ್ 30ರವರೆಗೆ ಪ್ರತಿದಿನ ಅಪರಾಹ್ನ 2ರಿಂದ ಸಂಜೆ 5.30ರವರೆಗೆ ನಡೆಯಲಿರುವ ಈ ಶಿಬಿರದ ಉದ್ಘಾಟನಾ ಸಮಾರಂಭವು ಏ. 19ರಂದು ಅಪರಾಹ್ನ 3 ಗಂಟೆಯಿಂದ ನಡೆಯಲಿದೆ. ಪರ್ಯಾಯ ಶ್ರೀಶೀರೂರು ಮಠದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಉದ್ಘಾಟನೆಗೈಯಲ್ಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ಯಶಪಾಲ್ ಸುವರ್ಣ, ರಾಷ್ಟ್ರಪ್ರಶಸ್ತಿ ವಿಜೇತ ನಟ–ನಿರ್ದೇಶಕ ರಿಷಭ್ ಶೆಟ್ಟಿ, ಕಾಪು ಹೊಸ ಮಾರಿಗುಡಿ ಕ್ಷೇತ್ರದ ರಾಜರ್ಷಿ ವಾಸುದೇವ ಶೆಟ್ಟಿ ಮತ್ತು ಮಂಗಳೂರು ಶ್ರೀನಿವಾಸ ಯುನಿವರ್ಸಿಟಿಯ ಕುಲಾಧಿಪತಿ ಡಾ. ಶ್ರೀನಿವಾಸ ರಾವ್ ಭಾಗವಹಿಸಲಿದ್ದಾರೆ. ಸಮಗ್ರ ಶಿಬಿರಕ್ಕೆ ಭಾರತೀಯ ಸಂತ ಮಹಾಪರಿಷತ್, ವಿಶ್ವಹಿಂದೂ ಪರಿಷತ್, ಸಂಸ್ಕಾರ ಭಾರತಿ, ಕುಟುಂಬ ಪ್ರಬೋಧನ ಸಮಿತಿ ಮತ್ತು ಪತಂಜಲಿ ಯೋಗ ಸಮಿತಿಗಳ ಉಡುಪಿ ಘಟಕಗಳು ಸಹಯೋಗ ನೀಡಲಿವೆ. ಈ ಶಿಬಿರದಲ್ಲಿ 5 ವರ್ಷ ವಯೋಮಿತಿಯಿಂದ 60 ವರ್ಷ ಮೇಲ್ಪಟ್ಟವರೆಗೂ ಐದು ವಿಭಾಗಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತದೆ. ಸರಳ ನಿತ್ಯ–ವಿಧಿಗಳು, ಹಿಂದೂ ಆಚಾರ–ವಿಚಾರಗಳು, ಹಾಡು, ಭಜನೆ, ಕಲೆ, ಹೂ ಕಟ್ಟುವುದು, ರಂಗವಲ್ಲಿ, ವಿವಿಧ ಆಟಗಳು, ಕರ–ಕುಶಲ, ಹಬ್ಬ–ಹರಿದಿನಗಳ ಮಾಹಿತಿ, ಉಪನ್ಯಾಸಗಳು ಹಾಗೂ ಸಾಧಕ–ಸಂವಾದ ವಿಭಾಗಗಳಿರುತ್ತವೆ. ಯಾವುದೇ ವಯೋಮಾನದ ಹಿಂದೂ ಬಾಂಧವರು ಶಿಬಿರದಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂಬುದಾಗಿ ಶಿಬಿರ ಸಮಿತಿ ಮತ್ತು ಶ್ರೀಮಠದ ಪ್ರಕಟಣೆ ತಿಳಿಸಿದೆ.



ಒಟ್ಟು ಹತ್ತು ದಿನಗಳ ಕಾಲ ನಡೆಯಲಿರುವ ಈ ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ವಾಂಸರಾದ ವೇದವ್ಯಾಸ ಪುರಾಣಿಕ ಡಾ. ಸುನೀಲ ಆಚಾರ್ಯ, ಕೆ. ವಿ. ರಮಣಾಚಾರ್ಯ, ವಿಕ್ರಮ್ ಕುಂಟಾರ್, ಸಮರ್ಥ ಜೋಷಿ, ರಾಘವೇಂದ್ರ ಆಚಾರ್ಯ, ರಾಘವೇಂದ್ರ ಭಟ್, ವಿ. ಉಷಾ ಹೆಬ್ಬಾರ್, ಸರಸ್ವತಮ್ಮ, ಸರೋಜಕ್ಕ, ಸುಮಿತ್ರ ಕೆರೆಮಠ, ಜಯಂತ ಮಲ್ಪೆ ಮತ್ತಿತರರು ತರಬೇತಿ ನೀಡಲಿದ್ದಾರೆ. ಏಪ್ರಿಲ್ 30ರಂದು ಹಿರಿಯಡ್ಕದಲ್ಲಿರುವ ಶ್ರೀ ಪುತ್ತಿಗೆ ಮೂಲಮಠದಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗಾಗಿ ಶಿಬಿರ ಸಂಚಾಲಕರಾದ ರಮೇಶ್ ಭಟ್: 9880835626 ಅಥವಾ ವಿ। ಕೆ. ವಿ. ರಮಣಾಚಾರ್ಯ: 8792158946 ಅಥವಾ ಕಿರಣ್ ಭಟ್: 9663891702 ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಕಿರು ಮೀನುಗಾರಿಕಾ ಜೆಟ್ಟಿ, ಬ್ರೇಕ್ ವಾಟರ್ ನಿರ್ಮಾಣ ಕಾರ್ಯ

ಕಾಮಗಾರಿ ಮತ್ತೆ ಚುರುಕು

ಸುರತ್ಕಲ್: ಸುರತ್ಕಲ್ ಸಮೀಪದ ಕುಳಾಯಿ ಪ್ರದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಿರು ಮೀನುಗಾರಿಕಾ ಜೆಟ್ಟಿ ಹಾಗೂ ಬ್ರೇಕ್ ವಾಟರ್ ಕಾಮಗಾರಿ ಇದೀಗ ಮತ್ತೆ ಚುರುಕುಗೊಂಡಿದ್ದು, ಮಳೆಗಾಲದ ಹಿನ್ನಲೆಯಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಮುದ್ರ ಅಲೆಗಳ ಅಬ್ಬರದಿಂದ ಬ್ರೇಕ್‌ವಾಟರ್‌ಗೆ ಹಾನಿಯಾಗದಂತೆ ಟೆಟ್ರಾಪಾಡ್ ಅಳವಡಿಕೆ ಕಾರ್ಯವನ್ನು ತ್ವರಿತಗೊಳಿಸಲಾಗಿದ್ದು, ಈ ಹಂತವನ್ನು ಪೂರ್ಣಗೊಳಿಸುವತ್ತ ಅಧಿಕಾರಿಗಳು ಹೆಚ್ಚಿನ ಗಮನ ಹರಿಸಿದ್ದಾರೆ. ಈ ಬಾರಿ ಅಲೆಗಳ ಹೊಡೆತಕ್ಕೆ ಬ್ರೇಕ್ ವಾಟರ್ ಸುರಕ್ಷಿತವಾಗಿ ಇರುವಂತೆ ಮಾಡಲಾಗಿದೆ.

ಈ ಯೋಜನೆ ಆರಂಭದಿಂದಲೇ ವಿವಾದಗಳಿಗೆ ಕಾರಣವಾಗಿತ್ತು. ಬ್ರೇಕ್ ವಾಟರ್ ನಿರ್ಮಾಣವು ನಾಡ ದೋಣಿ ಮೀನುಗಾರಿಕೆಗೆ ಪೂರಕವಾಗುವುದಿಲ್ಲ ಹಾಗೂ ಮಳೆಗಾಲದಲ್ಲಿ ಕಿರು ಜೆಟ್ಟಿ ಅಪಾಯಕಾರಿ ಆಗಬಹುದು ಎಂಬ ಆರೋಪಗಳು ಕೇಳಿಬಂದಿದ್ದರಿಂದ ಕಾಮಗಾರಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ವಿಳಂಬವಾಗಿತ್ತು. ಬಳಿಕ ತಜ್ಞರ ತಂಡ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ತಾಂತ್ರಿಕವಾಗಿ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಪ್ರಮಾಣೀಕರಿಸಿದ ನಂತರವೇ ಕಾಮಗಾರಿ ಪುನರಾರಂಭಗೊಂಡು ಇದೀಗ ವೇಗ ಪಡೆದುಕೊಂಡಿದೆ. ಸುಮಾರು 196.6 ಕೋಟಿ ರೂಪಾಯಿ ವೆಚ್ಚದ ಈ ಮಹತ್ವದ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜೊತೆಗೆ ನವಮಂಗಳೂರು ಬಂದರು ಪ್ರಾಧಿಕಾರ ಜಂಟಿಯಾಗಿ ಶೇ 75ರಷ್ಟು ಕೇಂದ್ರ ಆರ್ಥಿಕ ನೆರವು ಒದಗಿಸುತ್ತಿದ್ದು, ಕಾಮಗಾರಿಯ ಉಸ್ತುವಾರಿಯನ್ನು ಬಂದರು ಪ್ರಾಧಿಕಾರವೇ ವಹಿಸಿಕೊಂಡಿದೆ. ಸಮುದ್ರ ತೀರದ ತಳಿಯ ಮೀನುಗಾರರಿಗೆ ಸುರಕ್ಷಿತ ತಂಗುದಾಣ ಒದಗಿಸುವುದು ಹಾಗೂ ಮೀನುಗಾರಿಕೆಗೆ ಉತ್ತಮ ಸೌಲಭ್ಯ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.



ಹಲವಾರು ಉದ್ಯೋಗ ಸೃಷ್ಟಿ

ಈ ಕಿರು ಜಟ್ಟಿ ನಿರ್ಮಾಣದಿಂದ ಸ್ಥಳೀಯ ಮೀನುಗಾರರಿಗೆ ಮಾತ್ರವಲ್ಲದೆ ನೇರ ಮತ್ತು ಪರೋಕ್ಷವಾಗಿ ಹಲವಾರು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಇದಲ್ಲದೆ, ಸುಮಾರು ಒಂದು ವರೆ ಕಿಲೋಮೀಟರ್ ಉದ್ದದ ಬ್ರೇಕ್‌ವಾಟರ್ ಪಥ ಭವಿಷ್ಯದಲ್ಲಿ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ ರೂಪುಗೊಳ್ಳುವ ಸಾಧ್ಯತೆ ಇದ್ದು, ಬೀಚ್ ಅಭಿವೃದ್ಧಿಗೆ ಸಹ ಪೂರಕವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗುತ್ತಿದೆ. ಇನ್ನೊಂದೆಡೆ, ಜಟ್ಟಿಗೆ ಸಮರ್ಪಕ ಸಂಪರ್ಕ ಕಲ್ಪಿಸಲು ಹೆದ್ದಾರಿಯಿಂದ ನಾಲ್ಕು ಪಥದ ರಸ್ತೆ ಅಗತ್ಯವಿದ್ದು, ಈ ಕುರಿತು ರಾಜ್ಯ ಸರ್ಕಾರ, ಮೀನುಗಾರಿಕಾ ಇಲಾಖೆ ಹಾಗೂ ಸ್ಥಳೀಯ ಆಡಳಿತ ಸೂಕ್ತ ಯೋಜನೆ ರೂಪಿಸಿ ಕಾಮಗಾರಿ ಪೂರ್ಣಗೊಳ್ಳುವ ಮೊದಲು ಜಾರಿಗೆ ತರುವ ಅಗತ್ಯವಿದೆ. ಪ್ರಸ್ತುತ ಕಾಮಗಾರಿ ನಡೆಯುತ್ತಿರುವ ಸಂದರ್ಭದಲ್ಲಿ ಕಿರಿದಾದ ಮೀನುಗಾರರ ರಸ್ತೆಗಳನ್ನೇ ನೂರಾರು ಟ್ರಕ್‌ಗಳು ಬಳಸುತ್ತಿರುವುದರಿಂದ ರಸ್ತೆಗಳು ಹಾನಿಗೊಂಡಿದ್ದು, ಸ್ಥಳೀಯರಿಗೆ ತೊಂದರೆ ಉಂಟಾಗಿದೆ. ಈ ರಸ್ತೆಗಳನ್ನು ತಕ್ಷಣ ದುರಸ್ತಿ ಮಾಡುವಂತೆ ಸಾರ್ವಜನಿಕರಿಂದ ಆಗ್ರಹ ವ್ಯಕ್ತವಾಗುತ್ತಿದೆ.

ಒಟ್ಟಾರೆ, ಕುಳಾಯಿ ಕಿರು ಮೀನುಗಾರಿಕಾ ಜಟ್ಟಿ ಯೋಜನೆ ಕರಾವಳಿ ಭಾಗದ ಅಭಿವೃದ್ಧಿಗೆ ಮಹತ್ವದ ಮೈಲುಗಲ್ಲಾಗುವ ನಿರೀಕ್ಷೆಯಿದ್ದು, ಮೀನುಗಾರಿಕೆ ಮತ್ತು ಪ್ರವಾಸೋದ್ಯಮ ಎರಡಕ್ಕೂ ಹೊಸ ದಿಕ್ಕು ನೀಡುವ ಸಾಮರ್ಥ್ಯ ಹೊಂದಿದೆ. ಆದರೆ, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿ ಮೂಲಸೌಕರ್ಯ ಹಾಗೂ ಸುರಕ್ಷತಾ ಅಂಶಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಅತ್ಯಂತ ಅಗತ್ಯವಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಕುಳಾಯಿಯಲ್ಲಿ ಕಿರು ಮೀನುಗರಿಕಾ ಬಂದರು ನಿರ್ಮಾಣ

9.75 ಎಕರೆ ಪ್ರದೇಶದಲ್ಲಿ ಇದ್ದು ದೋಣಿ ನಿಲುಗಡೆ, ಏಲಂ ಸ್ಥಳ, ನೆಟ್ ದುರಸ್ತಿ ಕೇಂದ್ರ,ಮೀನು ಲೋಡಿಂಗ್ ಶೆಡ್,ಮೂಲ ಸೌಲಭ್ಯ ರೇಡಿಯೋ ಟವರ್ ಮತ್ತು ತರಹ ಸೌಲಭ್ಯಗಳಿದೆ. ನವಮಂಗಳೂರು ಬಂದರು ನಿರ್ಮಾಣದ ವೇಳೆ ಒಕ್ಕಲೆಬ್ಬಿಸಿದ ಮೀನುಗಾರ ಸಮುದಾಯಗಳಿಗೆ ನೀಡಿದ ಭರವಸೆಯಂತೆ ಕುಳಾಯಿಯಲ್ಲಿ ಕಿರು ಮೀನುಗರಿಕಾ ಬಂದರು ನಿರ್ಮಾಣವಾಗುತ್ತಿದೆ.

ಹೊಸದಿಲ್ಲಿಯಲ್ಲಿ ಪೇಜಾವರ ಶ್ರೀಗಳ ಚಾತುರ್ಮಾಸ್ಯ ವ್ರತ

ಸಮಿತಿ ಅಧ್ಯಕ್ಷರಾಗಿ ಆಲೋಕ್ ಕುಮಾರ್

ಉಡುಪಿ: ಮೊದಲ ಬಾರಿಗೆ ಪೇಜಾವರ ಮಠಾಧೀಶ ಹಾಗೂ ಅಯೋಧ್ಯಾ ರಾಮಮಂದಿರ ಟ್ರಸ್ಟ್ ವಿಶ್ವಸ್ಥರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ತಮ್ಮ 39 ನೇ ಚಾತುರ್ಮಾಸ್ಯ ವ್ರತವನ್ನು ಹೊಸದಿಲ್ಲಿಯ ತಮ್ಮ ಶಾಖಾ ಮಠದಲ್ಲಿ ನಡೆಸಲು ಸಂಕಲ್ಪಿಸಿದ್ದಾರೆ.

ಇದರ ಪೂರ್ವಭಾವಿ ಸಮಾಲೋಚನಾ ಸಭೆಯು ಹೊಸದಿಲ್ಲಿಯ ವಸಂತ್ ಕುಂಜ್‌ನಲ್ಲಿರುವ ಪೇಜಾವರ ಮಠದಲ್ಲಿ ನಡೆಯಿತು. ಸುಪ್ರೀಂಕೋರ್ಟ್ ನ್ಯಾಯವಾದಿ , ವಿಶ್ವಹಿಂದು ಪರಿಷತ್ ಅಂತಾರಾಷ್ಟ್ರೀಯ ಅಧ್ಯಕ್ಷ ಆಲೋಕ್ ಕುಮಾರ್ , ಹಾಗೂ ಭಾರತೀಯ ಜನತಾಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಛುಗ್, ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿವಿ ಉಪಕುಲಪತಿ ಹಾಗೂ ಸಮಿತಿ ಪ್ರಧಾನ ಕಾರ್ಯದರ್ಶಿ ಡಾ. ಶ್ರೀನಿವಾಸ ಆಚಾರ್ಯ ವರಖೇಡಿ, ಹೊಸದಿಲ್ಲಿ ಪೇಜಾವರ ಮಠದ ವ್ಯವಸ್ಥಾಪಕರೂ ಶ್ರೀ ವೇದವ್ಯಾಸ ಗುರುಕುಲದ ಪ್ರಾಚಾರ್ಯರೂ ಆಗಿರುವ ಡಾ. ವಿಠೋಬಾಚಾರ್ಯ, ನಿವೃತ್ತ ಐಎಎಸ್ ಅಧಿಕಾರಿ ರಾಕೇಶ್ ಗೌರ್ ಉಪಸ್ಥಿತರಿದ್ದರು.

ಇದೇ ವೇಳೆ ಸಂದೇಶ ನೀಡಿದ ಪೇಜಾವರ ಶ್ರೀಗಳು, ಪೇಜಾವರ ಮಠ ನಮ್ಮ ಗುರುಗಳಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅನುಗ್ರಹಪೂರ್ಣ ಮಾರ್ಗದರ್ಶನದಲ್ಲಿ ಯಾವತ್ತೂ ಹಿಂದು ಸಮಾಜದ ಶ್ರೇಯಸ್ಸಿಗಾಗಿ ಚಿಂತಿಸುವುದರ ಜೊತೆಗೆ ಭಕ್ತರ ಸಹಕಾರದೊಂದಿಗೆ ಕಾರ್ಯನಿರ್ವಹಿಸಿಕೊಂಡು ಬಂದಿದೆ. ಈ ಚಾತುರ್ಮಾಸ್ಯವೂ ಅದರ ಭಾಗವಾಗಬೇಕು ಎಂದರು.

ಸರ್ವಾನುಮತದಿಂದ ಶ್ರೀಗಳ ಈ 39 ನೇ ಚಾತುರ್ಮಾಸ್ಯ ವ್ರತದ ಸಂಯೋಜನ ಸಮಿತಿಯ ಅಧ್ಯಕ್ಷರಾಗಿ ಆಲೋಕ್ ಕುಮಾರ್ ಅವರನ್ನು ನಿಯುಕ್ತಿಗೊಳಿಸಿ ಘೋಷಿಸಲಾಯಿತು.

ಭೂಪೇಂದ್ರ ಸಿಂಗ್ ಅವರ ಭಜನ್‌ನೊಂದಿಗೆ ಆರಂಭಗೊಂಡು ಸುಮನ್ ಆಚಾರ್ಯ ಅವರು ಕಾರ್ಯಕ್ರಮ ನಿರೂಪಿಸಿದರು. ವಿದ್ವಾನ್ ವೀರನಾರಾಯಣ ಆಚಾರ್ಯ ಪಾಂಡುರಂಗಿಯವರು ವಂದನಾರ್ಪಣೆಗೈದರು.



ಸಮಿತಿಯ ಅಧ್ಯಕ್ಷರಾಗಿ ಆಲೋಕ್ ಕುಮಾರ್ ನಿಯುಕ್ತಗೊಂಡರು

ರಾಷ್ಟ್ರ ಮಟ್ಟದ ಈಜು ಸ್ಪರ್ಧೆಯಲ್ಲಿ ಲಾಸ್ಯ ಕಿಶನ್ ಸಾಧನೆ

ಪುತ್ತೂರು: ಅಹ್ಮದಾಬಾದಿನ ವೀರ ಸಾರ್ವಕರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ ಅಸ್ಮಿತಾ ಸ್ವಿಮ್ಮಿಂಗ್ ಲೀಗ್ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಈಜು ಸ್ಪರ್ಧೆಯಲ್ಲಿ ವಿವೇಕಾನಂದ ಸೆಂಟ್ರಲ್ ಸ್ಕೂಲಿನ 9ನೇ ತರಗತಿಯ ವಿದ್ಯಾರ್ಥಿನಿ ಲಾಸ್ಯ ಕಿಶನ್




ರಾಷ್ಟ್ರ ಮಟ್ಟದ ಈಜು ಸ್ಪರ್ಧೆಯಲ್ಲಿ, 15 ವರ್ಷ ವಯಸ್ಸಿನ ಕೆಳಗಿನ ವಿಭಾಗದಲ್ಲಿ, 50 ಮೀಟರ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 33.70 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ. ಅವರು ಕಿಶಾನ್ ಡಿ.ಪಿ. ಮತ್ತು ದೀನಾ ಕಿಶಾನ್ ದಂಪತಿ ಪುತ್ರಿ.

ಕೋರ್ಟ್ ವಾರ್ಡ್‌ನಲ್ಲಿ ನೀರಿನ ಸಮಸ್ಯೆಯಿಲ್ಲ | ಮೂರು ಟ್ಯಾಂಕ್‌ಗಳಿಂದ ನೀರು ಸರಬರಾಜು

ದಿನಕ್ಕೆ ನಾಲ್ಕೈದು ಗಂಟೆ ನೀರಿನ ಪೂರೈಕೆ ಯಥೇಚ್ಛ

ಹರೀಶ ಕುಲ್ಕುಂದ



ಮಂಗಳೂರು: ನಗರದ ಪ್ರಮುಖ ವ್ಯಾಪಾರ ಕೇಂದ್ರ ಹಂಪನಕಟ್ಟೆಯ ಒಂದು ಭಾಗ, ಸರಕಾರಿ ವೆನ್ಲಾಕ್ ಆಸ್ಪತ್ರೆ, ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ನ್ಯಾಯಾಲಯ ಒಳಗೊಂಡು ಬಹುತೇಕ ವಾಣಿಜ್ಯ, ಅಂಗಡಿ ಕಟ್ಟಡಗಳು, ಫ್ಲ್ಯಾಟ್‌ಗಳೇ ಇರುವ ಕೋರ್ಟ್ ವಾರ್ಡ್‌ನಲ್ಲಿ ನೀರಿನ ಪೂರೈಕೆ ಯಥೇಚ್ಛವಾಗಿದೆ.

ಬಲ್ಮಠ, ಲೋಬೋ ಲೇನ್, ಆರ್ಯ ಸಮಾಜ ರಸ್ತೆ, ಚಿನ್ಮಯ ಶಾಲೆ ರಸ್ತೆ, ಬಲ್ಮಠ ಬ್ರಿಡ್ಜ್ ರೋಡ್, ಬಲ್ಮಠ ನ್ಯೂ ರೋಡ್, ಬಲ್ಮಠ ಕಾಲೇಜು, ಅಂಬೇಡ್ಕರ್ ವೃತ್ತ, ಬಂಟ್ಸ್ ಹಾಸ್ಟೆಲ್ ರಸ್ತೆ, ಪತ್ರಾವೊ ಲೇನ್, ಕೋರ್ಟ್ ರಸ್ತೆ, ಮಿಲಾಗ್ರಿಸ್ ಕ್ರಾಸ್ ರೋಡ್, ರೈಲ್ವೆ ಕಾಲನಿ, ಹಂಪನಕಟ್ಟೆ, ಕಟ್ಟಪುಣಿ, ಅತ್ತಾವರ ಮೆಸ್ಕಾಂ ರೋಡ್, ಕುಶೆ ಶಾಲೆ ರಸ್ತೆ, ಮೋಹನ್‌ದಾಸ್ ಲೇನ್, ಮಂಗಳೂರು ವಿವಿ ಕಾಲೇಜು, ವೆನ್ಲಾಕ್ ಆಸ್ಪತ್ರೆ, ಮಿಲಾಗ್ರಿಸ್ ಪ್ರದೇಶಗಳನ್ನು ಒಳಗೊಂಡಿರುವ ಕೋರ್ಟ್ ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ನೀರಿನ ಸಮಸ್ಯೆ ಕಂಡುಬಂದಿಲ್ಲ. ತಾಂತ್ರಿಕ ತೊಂದರೆ ಹೊರತುಪಡಿಸಿದರೆ ನಗರದ ಹೃದಯಭಾಗದಲ್ಲಿರುವ ಕೋರ್ಟ್ ವಾರ್ಡ್ ಪ್ರದೇಶಕ್ಕೆ ಪ್ರತಿದಿನ ಹೇರಳವಾಗಿ ನೀರಿನ ಸರಬರಾಜು ಆಗುತ್ತಿದೆ. ಈ ವಾರ್ಡ್‌ಗೆ ಪಡೀಲು, ಬಾವುಟಗುಡ್ಡೆ, ಬೆಂದೂರ್‌ವೆಲ್ ಟ್ಯಾಂಕ್‌ಗಳಿಂದ ನೀರು ಬರುತ್ತಿದೆ. ಪಡೀಲು ಟ್ಯಾಂಕ್‌ನಿಂದ ಪ್ರತಿ ದಿನ ರಾತ್ರಿ 1ರಿಂದ ಬೆಳಗ್ಗೆ 11.30ರವರೆಗೆ, ಎರಡು ದಿನಕ್ಕೊಮ್ಮೆ ಸಂಜೆ 4ರಿಂದ ರಾತ್ರಿ 8ರವರೆಗೆ ಕಟ್ಟಪುಣಿ, ಅತ್ತಾವರ ಕಟ್ಟೆ, ಮೋಹನ್‌ದಾಸ್ ಲೇನ್‌ಗೆ ನೀರು ಬರುತ್ತಿದೆ. ಬಾವುಟಗುಡ್ಡೆ ಟ್ಯಾಂಕ್‌ನಿಂದ ಬೆಳಗ್ಗೆ 9ರಿಂದ 12ರವರೆಗೆ, ಸಂಜೆ 6ರಿಂದ 8.30ರವರೆಗೆ, ಜಲಸಿರಿ ಲೈನ್‌ನಲ್ಲಿ ಬೆಳಗ್ಗೆ 6ರಿಂದ 9ರವರೆಗೆ ಬಲ್ಮಠ ಸುತ್ತಲಿನ ಪ್ರದೇಶ, ಮಿಲಾಗ್ರಿಸ್, ಕೋರ್ಟ್, ಬಂಟ್ಸ್ ಹಾಸ್ಟೆಲ್ ಸುತ್ತಲಿನ ಪ್ರದೇಶಕ್ಕೆ ನೀರು ಒದಗಿಸಲಾಗುತ್ತಿದೆ. ಬೆಂದೂರುವೆಲ್ ಟ್ಯಾಂಕ್‌ನಿಂದ ಬೆಳಗ್ಗೆ 5.30ರಿಂದ 10ರವರೆಗೆ, ಸಂಜೆ 5ರಿಂದ ರಾತ್ರಿ 10ರವರೆಗೆ ಲೋಬೋ ಲೇನ್, ಪ್ರಕೃತಿ ಅಪಾರ್ಟ್‌ಮೆಂಟ್, ವೆಂಕಪ್ಪ ಗಾರ್ಡನ್ ರಸ್ತೆ, ಅಭಿಮಾನ್ ಗಾರ್ಡನ್ ರಸ್ತೆಗೆ ನೀರು ಪೂರೈಕೆಯಾಗುತ್ತಿದೆ.

ಪ್ರತಿದಿನ ನಾಲ್ಕೈದು ಗಂಟೆಗಳ ಕಾಲ ಉತ್ತಮ ಪ್ರೆಶರ್‌ನೊಂದಿಗೆ ನೀರು ಬರುತ್ತಿರುವುದರಿಂದ ಈ ವಾರ್ಡ್‌ನಲ್ಲಿ ನೀರಿಗಾಗಿ ಹಾಹಾಕಾರ ಕಂಡುಬಂದಿಲ್ಲ. ಹಾಗಾಗಿ ಟ್ಯಾಂಕರ್ ಮೂಲಕ ನೀರು ಪೂರೈಸುವ ಅನಿವಾರ್ಯತೆ ಉಂಟಾಗಿಲ್ಲ. ಮಿಲಾಗ್ರಿಸ್ ಬಳಿ ಸರಕಾರಿ ಬಾವಿ ಇದ್ದು, ಇದರ ನೀರನ್ನು ಕುಡಿಯಲು ಉಪಯೋಗಿಸುತ್ತಿಲ್ಲ. ಈ ವಾರ್ಡ್‌ನಲ್ಲಿ ಕೊಳವೆಬಾವಿಗಳು ಇಲ್ಲ.

ಕೋರ್ಟ್ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಶೇ.50ರಷ್ಟು ಪೂರ್ಣಗೊಂಡಿದೆ. ನಗರದ ಪ್ರಮುಖ ಭಾಗ ಹಾಗೂ ಕಾಂಕ್ರೀಟ್ ರಸ್ತೆಗಳು ಹೆಚ್ಚಾಗಿರುವ ಕಾರಣ ರಸ್ತೆ ಅಗೆದು ಪೈಪ್‌ಲೈನ್ ಅಳವಡಿಕೆ ವಿಳಂಬವಾಗಿದೆ.

ಚಿತ್ರ: ರಾಜೇಶ್ ಶೆಟ್ಟಿ ಬಿಜ್ಜಾಲ್‌ಬಾಗ್



ಬಲ್ಮಠ ಪರಿಸರದಲ್ಲಿ ರಸ್ತೆ, ಫುಟ್‌ಪಾತ್ ಅಭಿವೃದ್ಧಿಗೊಂಡಿದೆ

ಕುಡುಂಬಿ ಗಾರ್ಡನ್‌ನಲ್ಲಿ ಡ್ರೈನೇಜ್ ಸಮಸ್ಯೆ

ಕೋರ್ಟ್ ವಾರ್ಡ್‌ನ ಕುಡುಂಬಿ ಗಾರ್ಡನ್ ಪ್ರದೇಶದಲ್ಲಿ ಡ್ರೈನೇಜ್ ಸಮಸ್ಯೆ ಇದೆ. ಬಲ್ಮಠ ನ್ಯೂ ರೋಡ್‌ನಿಂದ ಮಿಲಾಗ್ರಿಸ್- ಅತ್ತಾವರ ಮೆಸ್ಕಾಂವರೆಗೆ ಹೊಸ ಯುಜಿಡಿ ಲೈನ್ ಆಗುತ್ತಿದೆ. ಕುಡುಂಬಿ ಗಾರ್ಡನ್ ಬಳಿಕ ಖಾಸಗಿ ಜಮೀನಿನವರು ಜಾಗ ನೀಡಲು ಒಪ್ಪದ ಕಾರಣ ಇಲ್ಲಿ ಡ್ರೈನೇಜ್ ಓವರ್‌ಫ್ಲೋ ಆಗುತ್ತಿದೆ.



ನಮ್ಮಲ್ಲಿ ನೀರಿನ ಯಾವುದೇ ಸಮಸ್ಯೆ ಇಲ್ಲ. ಪ್ರತಿದಿನ ಬೆಳಗ್ಗೆ 6ರಿಂದ 8.30ರವರೆಗೆ ಹಾಗೂ ಸಂಜೆ 6ರಿಂದ ರಾತ್ರಿ 9ರವರೆಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಪೂರೈಕೆ ಆಗುತ್ತಿದೆ. ತುಂಬೆಯಿಂದ ನೀರು ಸ್ಥಗಿತಗೊಂಡರೆ ಅಥವಾ ತಾಂತ್ರಿಕ ಸಮಸ್ಯೆ ಇದ್ದಾಗ ಮಾತ್ರ ನೀರು ಬರುವುದಿಲ್ಲ. ಉಳಿದ ಸಮಯದಲ್ಲಿ ನಮಗೆ ನೀರಿನ ಯಾವುದೇ ತೊಂದರೆ ಇಲ್ಲ.

■ ಸತೀಶ್ ಬಿ., ಬಲ್ಮಠ ನಿವಾಸಿ



ಕೋರ್ಟ್ ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ನೀರಿನ ಯಾವುದೇ ಸಮಸ್ಯೆ ಕಂಡುಬಂದಿಲ್ಲ. ಪ್ರತಿದಿನ ನಾಲ್ಕೈದು ಗಂಟೆಗಳ ಕಾಲ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ಮೂರು ಟ್ಯಾಂಕ್‌ಗಳಿಂದ ವಾರ್ಡ್‌ಗೆ ನೀರು ಪೂರೈಕೆ ಆಗುತ್ತಿದೆ. ತಾಂತ್ರಿಕ ಸಮಸ್ಯೆ ಕಂಡುಬಂದರೆ ಮಾತ್ರ ಇಲ್ಲಿ ನೀರು ಸ್ಥಗಿತಗೊಳ್ಳುತ್ತದೆ. ಫ್ಲ್ಯಾಟ್‌ಗಳಲ್ಲಿ ದೊಡ್ಡ ದೊಡ್ಡದಾದ ನೀರಿನ ತೊಟ್ಟಿಗಳಿದ್ದು, ಅಲ್ಲಿಯೂ ನೀರಿನ ಸಮಸ್ಯೆ ಕಾಣಿಸಿಕೊಂಡಿಲ್ಲ. ಕುಡುಂಬಿ ಗಾರ್ಡನ್‌ನಲ್ಲಿ ಡ್ರೈನೇಜ್ ಸಮಸ್ಯೆ ಬಗೆಹರಿಸಲು 40 ಲಕ್ಷ ರೂ. ವೆಚ್ಚದಲ್ಲಿ ಹೊಸ ಲೈನ್ ಅಳವಡಿಸಲಾಗುವುದು. ಲೈಟ್‌ಹೌಸ್ ಹಿಲ್‌ನಿಂದ ರೂಪಾ ಹೊಟೇಲ್‌ವರೆಗೆ ಹಳೆಯ ಯುಜಿಡಿ ಲೈನ್ ಬದಲಾವಣೆಗೆ ಒಂದು ಕೋಟಿ ರೂ. ಮಂಜೂರುಗೊಂಡಿದೆ. ಸ್ಟರಕ್ ರಸ್ತೆಯಿಂದ ಅತ್ತಾವರ ಮೆಸ್ಕಾಂವರೆಗೆ ಯುಜಿಡಿ ಲೈನ್ ಶಿಥಿಲಾವಸ್ಥೆಯಲ್ಲಿದ್ದು, ದುರಸ್ತಿ ಆಗಬೇಕಿದೆ. ಕೆ.ಎಸ್. ರಾವ್ ರಸ್ತೆಯಿಂದ ಕೋರ್ಟ್‌ಗೆ ತೆರಳುವ ರಸ್ತೆ ಐದು ಕೋಟಿ ರೂ. ವೆಚ್ಚದಲ್ಲಿ ತಡೆಗೋಡೆ ಸಹಿತ ಅಭಿವೃದ್ಧಿಗೊಳ್ಳಲಿದೆ.

■ ಎ.ಸಿ. ವಿನಯರಾಜ್, ಕೋರ್ಟ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಮುಂದಿನ ವಾರ್ಡ್ -41
ಸೆಂಟ್ರಲ್ ಮಾರ್ಕೆಟ್ ಪರಿಸರದ ಸ್ಥಿತಿಗತಿ

ವಿಶ್ವದಲ್ಲೇ ಅತಿ ಬಿಸಿ ದೇಶ ಭಾರತ?

ಪುಟ ೨➡ ಮಳೆ ಅಭಾವದಿಂದ ಶೀತಲೀಕರಣದ ಯಾವುದೇ ಪ್ರಭಾವವಿಲ್ಲ. ಈ ಎಲ್ಲಾ ಕಾರಣಗಳು ಸೇರಿ ದೇಶದಾದ್ಯಂತ ತೀವ್ರ ಉಷ್ಣತೆಯ ಪರಿಸ್ಥಿತಿಯನ್ನು ನಿರ್ಮಿಸುತ್ತಿವೆ.

ಅತ್ಯಂತ ಬಾಧಿತ ಪ್ರದೇಶಗಳು: ರಾಜಸ್ಥಾನ, ಮಧ್ಯಪ್ರದೇಶ, ಉತ್ತರ ಪ್ರದೇಶ ಹಾಗೂ ದಿಲ್ಲಿ ರಾಜ್ಯಗಳು ಈ ಬಿಸಿಗಾಳಿಯಿಂದ ಹೆಚ್ಚು ತತ್ತರಿಸುತ್ತಿವೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಅರ್ಬನ್ ಹೀಟ್ ಐಲ್ಯಾಂಡ್ ಪರಿಣಾಮದಿಂದ ತಾಪಮಾನ ಇನ್ನಷ್ಟು ಹೆಚ್ಚಾಗುತ್ತದೆ. ಕಟ್ಟಡಗಳ ದಟ್ಟತೆ ಮತ್ತು ಹಸಿರು ಪ್ರದೇಶಗಳ ಕೊರತೆ ಇದರ ಪ್ರಮುಖ ಕಾರಣ. ಗ್ರಾಮೀಣ ಪ್ರದೇಶಗಳಲ್ಲಿಯೂ ಪರಿಸ್ಥಿತಿ ಗಂಭೀರವಾಗಿದೆ. ತೆರೆದ ಜಾಗಗಳು ದಿನಪೂರ್ತಿ ಬಿಸಿಯನ್ನು ಹೀರಿಕೊಂಡು ರಾತ್ರಿ ಹೊತ್ತಿಗೂ ಉಳಿಸಿಕೊಳ್ಳುತ್ತವೆ. ಇದರ ಪರಿಣಾಮವಾಗಿ ರಾತ್ರಿ ತಾಪಮಾನವೂ ಕಡಿಮೆಯಾಗದೇ ಜನರಿಗೆ ವಿಶ್ರಾಂತಿ ಸಿಗದ ಪರಿಸ್ಥಿತಿ ಉಂಟಾಗಿದೆ.

ಮುಂದಿನ ನಿರೀಕ್ಷೆಗಳು: ಈ ತೀವ್ರ ಪರಿಸ್ಥಿತಿಯ ಮಧ್ಯೆ ಕೆಲವು ನಿರಾಳತೆಯ ಲಕ್ಷಣಗಳೂ ಕಾಣಿಸುತ್ತಿವೆ. ಮುಂದಿನ ಎರಡು ವಾರಗಳ ಕೊನೆಗೆ ಮುಂಗಾರು ಪೂರ್ವ ಚಟುವಟಿಕೆಗಳು ಸ್ವಲ್ಪ ಮಟ್ಟಿಗೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವು ಪ್ರದೇಶಗಳಲ್ಲಿ ಗುಡುಗು– ಮಿಂಚು ಸಹಿತ ಮಳೆಯಾಗಬಹುದು. ಇದರಿಂದ ತಾಪಮಾನ ಸ್ವಲ್ಪ ಇಳಿಕೆಯಾಗಬಹುದು. ಆದರೆ, ಅದುವರೆಗೆ, ಭಾರತವು ಈ ಋತುವಿನ ಅತ್ಯಂತ ಕಠಿಣ ಉಷ್ಣತೆಯ ಅವಧಿಯನ್ನು ಎದುರಿಸಬೇಕಾಗುತ್ತದೆ.


ಕೃಷಿ ಉತ್ಪಾದನೆಗೆ ಹೊಡೆತ

ಪುಟ ೨➡ ಇದರಿಂದ ವಿದ್ಯುತ್ ಪೂರೈಕೆ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾಗಿ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಬಹುದು. ಜನರು ತಮ್ಮ ದಿನಚರಿಯನ್ನು ಬದಲಾಯಿಸಿಕೊಂಡು, ಹೊರಾಂಗಣ ಚಟುವಟಿಕೆಗಳನ್ನು ಕಡಿಮೆ ಮಾಡುತ್ತಿದ್ದಾರೆ. ಕೆಲಸದ ಸಮಯದಲ್ಲೂ ಬದಲಾವಣೆಗಳನ್ನು ಮಾಡಲಾಗುತ್ತಿದೆ.

ಪರಿಣಾಮ ಮತ್ತು ಸಲಹೆ: ಈ ತೀವ್ರ ಬಿಸಿಯಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇದೆ. ಹೀಟ್ ಸ್ಟ್ರೋಕ್, ದೇಹದ ನೀರಿನ ಕೊರತೆ(ಡಿಹೈಡ್ರೇಷನ್) ಮತ್ತು ಇತರ ಗಂಭೀರ ಕಾಯಿಲೆಗಳು ಕಾಣಿಸಿಕೊಳ್ಳಬಹುದು. ಹವಾಮಾನ ಇಲಾಖೆ ಜನರಿಗೆ ಮಧ್ಯಾಹ್ನದ ಹೊತ್ತಿನಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಲು ಸಲಹೆ ನೀಡಿದೆ.

ತಿಳಿ ಬಣ್ಣದ ಸಡಿಲ ಬಟ್ಟೆಗಳನ್ನು ಧರಿಸುವುದು, ಸಾಕಷ್ಟು ನೀರು ಕುಡಿಯುವುದು ಹಾಗೂ ತಂಪಾದ ಸ್ಥಳಗಳಲ್ಲಿ ಉಳಿಯುವುದು ಮುಖ್ಯ. ಮಕ್ಕಳಿಗೆ, ವೃದ್ಧರಿಗೆ ಹಾಗೂ ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವಿಶೇಷ ಜಾಗ್ರತೆ ಅಗತ್ಯ. ಆಸ್ಪತ್ರೆಗಳು ಕೂಡ ಬಿಸಿಗಾಳಿಯಿಂದ ಉಂಟಾಗುವ ರೋಗಿಗಳ ಸಂಖ್ಯೆಯಲ್ಲಿ ಏರಿಕೆಯನ್ನು ಎದುರಿಸಲು ಸಿದ್ಧವಾಗಿವೆ.

ರಾಮ ಬಾಣ



ತೃತೀಯ ಭಾಷೆಗೆ ಕೃಪಾಂಕ ನೀಡಲು ಮನವಿ

ಬೆಂಗಳೂರು: ಎಸ್ಎಸ್ಎಲ್‌ಸಿ ಪರೀಕ್ಷೆ –1ರಲ್ಲಿ ತೃತೀಯ ಭಾಷೆ ಪರೀಕ್ಷೆಗೆ ನಾಲ್ಕು ದಿನಗಳಿರುವಾಗ ಸರ್ಕಾರ ಮೌಲ್ಯಮಾಪನದ ಬಗ್ಗೆ ಗೊಂದಲ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ತೃತೀಯ ಭಾಷೆಗೆ 8 (ಶೇ.10) ಕೃಪಾಂಕ ನೀಡಬೇಕು ಎಂದು ಖಾಸಗಿ ಶಾಲೆಗಳ ಒಕ್ಕೂಟವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದು ಆಗ್ರಹಿಸಿದೆ.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಅವರು ಪತ್ರ ಬರೆದಿದ್ದು, ವಿದ್ಯಾರ್ಥಿಗಳು ತೃತೀಯ ಭಾಷೆಗೆ ಅಂಕಗಳ ಬದಲಾಗಿ ಗ್ರೇಡ್ ನೀಡಲಾಗುತ್ತದೆ ಎಂಬ ಭಾವನೆಯಲ್ಲಿ ನಿರ್ಲಕ್ಷ್ಯಕ್ಕೆ ಕಾರಣವಾಗಿದೆ. ಈ ರೀತಿಯ ಅಸ್ಪಷ್ಟತೆ ಮತ್ತು ಅಂತಿಮ ಕ್ಷಣದಲ್ಲಿ ಉಂಟಾದ ಬದಲಾವಣೆಗಳು ವಿದ್ಯಾರ್ಥಿಗಳಲ್ಲಿ ಗೊಂದಲ ಕಾರಣವಾಗಿದ್ದು, ವಿದ್ಯಾರ್ಥಿಗಳು ಪರೀಕ್ಷೆಗೆ ಸರಿಯಾದ ಮಹತ್ವ ನೀಡದಂತಾಗಿದೆ. ಅಲ್ಲದೇ, ಪರೀಕ್ಷೆಗೆ ಮೊದಲು ಈ ಸಂಬಂಧ ಯಾವುದೇ ಸ್ಪಷ್ಟವಾದ ತಿದ್ದುಪಡಿ ಅಧಿಸೂಚನೆಗಳು ಅಥವಾ ಕಾನೂನುಬದ್ಧ ಆದೇಶಗಳನ್ನು ಇಲಾಖೆಯಿಂದ ಹೊರಡಿಸಲಾಗಿಲ್ಲ ಎಂದು ತಿಳಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಅತಿ ವಿಳಂಬವಾಗಿ ತೀರ್ಪು ಕೊಡುವ ಅಭ್ಯಾಸ ತೊಲಗಲಿ
– ಸುಪ್ರೀಂ ಕೋರ್ಟ್ ಅಭಿಮತ

– ತಡವಾಗಿ ಬಂದ ತೀರ್ಪು ಮರ ಸತ್ತ ಮೇಲೆ ನೀರು ಹಾಕಿದಂತೆ, ಮನುಷ್ಯನ ಜೀವ ಹೋದ ಮೇಲೆ ಅನ್ನ ದೊರಕಿದಂತೆ!

ದಿನ ಭವಿಷ್ಯ

ಮೇಷ ಎಲ್ಲವೂ ಇಂದು ನಿಮಗೆ ಪೂರಕವಾಗಿ ಸಾಗುವುದು. ಈ ದಿನ ಸದುಪಯೋಗ ಮಾಡಿಕೊಳ್ಳಿ. ಪ್ರಮುಖ ಕಾರ್ಯ ಮುಗಿಸಿಕೊಳ್ಳಿ.

ವೃಷಭ ಆರ್ಥಿಕ ಪ್ರಗತಿ ಸಾಧಾರಣ. ಆಧ್ಯಾತ್ಮದತ್ತ ಆಸಕ್ತಿ. ಸಣ್ಣ ವಿಷಯಗಳಿಗೆ ಹೆಚ್ಚು ಚಿಂತಿಸಬೇಡಿ. ದೃಢ ಮನಸ್ಸು ಪ್ರದರ್ಶಿಸಿ. ಕ್ರೀಡಾಳುಗಳಿಗೆ ಯಶಸ್ಸು.

ಮಿಥುನ ನಿಮ್ಮ ಉದ್ದೇಶ ಇಂದು ಈಡೇರಲಿದೆ. ತುಸು ಹೆಚ್ಚಿನ ಪ್ರಯತ್ನ ಬೇಕಾದೀತು. ಮನೆಯವರ ಸಲಹೆಗೆ ಕಿವಿಗೊಡಿ, ತಿರಸ್ಕರಿಸಬೇಡಿ.

ಕಟಕ ನಿಮ್ಮ ವ್ಯವಹಾರ ವಿಸ್ತರಣೆ ಇಂದಿನ ಗುರಿ ಆಗಿರಲಿ. ಅದರಲ್ಲಿ ಯಶ ಸಿಗಲಿದೆ. ಉದ್ಯೋಗ ಹುಡುಕಾಟ ಸಫಲ. ಚಿಕಿತ್ಸೆಗೆ ಹಣ ಖರ್ಚು.

ಸಿಂಹ ವ್ಯಕ್ತಿಯೊಬ್ಬರ ಆಕರ್ಷಣೆ ಒಳಗಾಗುವ ಸಂಭವ. ಸ್ನೇಹಪ್ರಾಪ್ತಿ. ಉದ್ಯೋಗ ಅರಸುವವರಿಗೆ ಶುಭ ಸುದ್ದಿ. ಹೂಡಿಕೆಯಿಂದ ಲಾಭ.

ಕನ್ಯಾ ಕೆಲಸದಲ್ಲಿ ಬದ್ಧತೆ ಇರಲಿ. ಪ್ರತಿಫಲ ತಾನಾಗಿ ಸಿಗುವುದು. ಆತ್ಮೀಯರ ಒಡನಾಟ ಉತ್ಸಾಹ ತುಂಬಲಿದೆ. ಖರೀದಿ ಖರ್ಚು ಹೆಚ್ಚಿಸಲಿದೆ.

ತುಲಾ ಫಲಪ್ರದ ದಿನ. ಕೆಲಸದಲ್ಲಿ ಅಪೇಕ್ಷಿತ ಪ್ರಗತಿ. ಹೊಣೆಗಾರಿಕೆ ಸಮರ್ಥ ನಿರ್ವಹಣೆ. ಕುಟುಂಬಸ್ಥರ ಜತೆ ಸಮಯ ಕಳೆಯಿರಿ.

ವೃಶ್ಚಿಕ ನಿಮಗೆ ಕೆಟ್ಟದ್ದನ್ನು ಬಯಸುವವರ ಒತ್ತಡಕ್ಕೆ ಮಣಿಯಬೇಡಿ. ಎದುರಿಸಿ ನಿಲ್ಲಿ. ಕೌಟುಂಬಿಕ ಬದುಕು ಏರುಪೇರು ಎದುರಿಸೀತು. ಸಮಚಿತ್ತವಿರಲಿ.

ಧನು ನಿಮ್ಮ ಸುತ್ತಲಿನ ಜನರಲ್ಲಿ ಉತ್ಸಾಹ ತುಂಬುವ ಕಾರ್ಯ ನಿಮ್ಮಿಂದ ಆಗಲಿದೆ. ಹಿನ್ನಡೆಗೆ ಅಂಜಬೇಕಿಲ್ಲ. ಸೂಕ್ತ ಬೆಂಬಲ ಲಭ್ಯ.

ಮಕರ ಹಣದ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ. ನಷ್ಟ ಆದೀತು. ವೃತ್ತಿಯಲ್ಲಿ ಬಿಡುವಿಲ್ಲದ ಕೆಲಸ. ಆರೋಗ್ಯ ಕಡೆಗಣಿಸದಿರಿ. ಆಪ್ತ ಬಂಧು ಭೇಟಿ.

ಕುಂಭ ದೈನಂದಿನ ಕಾರ್ಯ ಬೇಸರ ತರಬಹುದು. ಹೊಸತನಕ್ಕೆ ತುಡಿತ. ಆಪ್ತರ ಜತೆ ಪ್ರವಾಸ ಹೊರಡಿ. ಕೌಟುಂಬಿಕ ಸಮಸ್ಯೆ ಪರಿಹಾರದ ಸಂಕೇತ.

ಮೀನ ಅಸಾಧ್ಯ ಕೆಲಸ ಇಂದು ಸಾಧಿಸುವಿರಿ. ಶ್ರಮ ಹೆಚ್ಚು ಬೇಕಾದೀತು. ಹಣದ ವ್ಯವಹಾರದಲ್ಲಿ ಲಾಭ. ಹಳೆ ಸ್ನೇಹಿತರ ಭೇಟಿ ಸಂಭವ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 8,0,3,5

ಒಮ್ಮೆಗೆ ಗರಿಷ್ಠ 150 ಜನರಿಗೆ ಮಾತ್ರ ಅವಕಾಶ: ಖಂಡ್ರೆ ಸ್ಪಷ್ಟನೆ

ಚಾರಣಕ್ಕೆ ನೇಚರ್ ಗೈಡ್

ಬೆಂಗಳೂರು: ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲ ಅನುಮೋದಿತ ಚಾರಣ ಪಥಗಳಲ್ಲಿ ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕ (ನೇಚರ್ ಗೈಡ್) ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಶುಕ್ರವಾರ ಚಾರಣಿಗರ ಸುರಕ್ಷತೆಗಾಗಿ ರೂಪಿಸಲಾಗಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಬಿಡುಗಡೆ ಮಾಡಿ ಮಾತನಾಡಿದ ಅವರು, ಪ್ರತಿ 10 ಚಾರಣಿಗರಿಗೆ ಒಬ್ಬರು ಸ್ಥಳೀಯ ಪ್ರಕೃತಿ ಮಾರ್ಗದರ್ಶಕರಿರುತ್ತಾರೆ. ಎಲ್ಲ ಚಾರಣ ಪಥಗಳಲ್ಲಿ ಒಂದು ಬಾರಿಗೆ ಗರಿಷ್ಠ 150 ಜನರಿಗೆ ಮಾತ್ರ ಸೀಮಿತಗೊಳಿಸಲಾಗುವುದು ಎಂದರು.

ಚಾರಣಕ್ಕೆ ಬರುವವರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಒಂದೊಮ್ಮೆ ಯಾವುದೇ ದಿನ ಒಬ್ಬರೇ ಚಾರಣಿಗರು ನೋಂದಾಯಿಸಿದ್ದರೂ ಗೈಡ್ ಸೌಲಭ್ಯ ಕಲ್ಪಿಸಲಾಗುವುದು, ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶವಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇತ್ತೀಚೆಗೆ ಕೊಡಗಿನ ತಡಿಯಾಂಡಮೋಳ್ ಬೆಟ್ಟದಲ್ಲಿ ಕೇರಳದಿಂದ ಚಾರಣಕ್ಕೆ ಬಂದಿದ್ದ ಮಹಿಳೆ ನಾಪತ್ತೆಯಾಗಿ ಕಾಡಿನಲ್ಲಿ 3 ದಿನ ಕಳೆಯುವಂತಾದ ಹಾಗೂ ಅರಣ್ಯ ವ್ಯಾಪ್ತಿಗೆ ಒಳಪಡದ ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ನಾಪತ್ತೆಯಾಗಿ ಶವವಾಗಿ ಬಾಲಕಿ ಪತ್ತೆಯಾದ ಹಿನ್ನೆಲೆಯಲ್ಲಿ ಚಾರಣಿಗರ ಸುರಕ್ಷತೆಗಾಗಿ ಈ ಎಸ್‌ಒಪಿ ರೂಪಿಸಲು ಸೂಚಿಸಿದ್ದಾಗಿ ಸಚಿವರು ತಿಳಿಸಿದರು.

ಚಾರಣಿಗರ ಮೊಬೈಲ್‌ಗೆ ಟ್ರ್ಯಾಕಿಂಗ್ ಆ್ಯಪ್: ಅಲ್ಲದೇ ಪ್ರತಿಯೊಂದು ಚಾರಣಪಥದಲ್ಲೂ ನೇಚರ್ ಗೈಡ್‌ಗಳಿಗೆ ಜಿಪಿಎಸ್ ಅಳವಡಿಸಿದ ವಾಕಿಟಾಕಿಯನ್ನು ಕಡ್ಡಾಯವಾಗಿ ನೀಡಲಾಗುವುದು. ಅದೇ ರೀತಿ ಪ್ರತಿಯೊಬ್ಬ ಚಾರಣಿಗರ ಮೊಬೈಲ್‌ಗೆ ಚಾರಣಪಥದ ನಕ್ಷೆ ಸಹಿತ ಆ್ಯಪ್ ಅನ್ನು ಅಳವಡಿಸಲಾಗುವುದು. ಆಕಸ್ಮಾತ್ ಯಾರೇ ಚಾರಣಿಗರು ದಾರಿ ತಪ್ಪಿದರೆ ಅವರ ಶೋಧಕ್ಕೆ ಈ ಆ್ಯಪ್ ಸಹಕಾರಿಯಾಗಲಿದೆ. ಮೂಲ ನೆಲೆ(ಬೇಸ್‌ಕ್ಯಾಂಪ್)ಯಲ್ಲಿ ಚಾರಣಿಗರಿಗೆ ಸಂಕ್ಷಿಪ್ತ ಮಾಹಿತಿ ನೀಡಲಾಗುವುದು. ಹೆಚ್ಚು ಶಬ್ದ ಮಾಡುವ ಯಾವುದೇ ಸಾಧನಗಳಿಗೆ, ಹರಿತವಾದ ಲೋಹದ ವಸ್ತು, ಆಯುಧಗಳನ್ನು ತೆಗೆದುಕೊಂಡು ಹೋಗಲು ಮತ್ತು ಕ್ಯಾಂಪ್ ಫೈರ್‌ಗೆ ಚಾರಣ ಪಥದಲ್ಲಿ ಅವಕಾಶವಿರುವುದಿಲ್ಲ ಎಂದು ವಿವರಿಸಿದರು.



ನೇಚರ್ ಗೈಡ್‌ಗಳಿಗೆ ಹೊಣೆಗಾರಿಕೆ

ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕರು (ಗೈಡ್) ಯಾವುದೇ ಚಾರಣಿಗ ತಮಗಿಂತ ಮುಂದೆ ಹೋಗಿಲ್ಲ ಹಾಗೂ ಹಿಂದೆ ಉಳಿದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬೇಸ್ ಕ್ಯಾಂಪ್, ವಿಶಾಂತಿ ತಾಣಗಳಲ್ಲಿ ಕಡ್ಡಾಯವಾಗಿ ಚಾರಣಿಗರ ಎಣಿಕೆ ಮಾಡಬೇಕು. ಪ್ರತಿ ಅರ್ಧ ತಾಸಿಗೊಮ್ಮೆ ತಮ್ಮ ವಾಕಿ ಟಾಕಿ ಮೂಲಕ ಬೇಸ್ ಕ್ಯಾಂಪ್‌ನೊಂದಿಗೆ ಸಂವಹನ ನಡೆಸಬೇಕು. ಚಾರಣಿಗರ ಜವಾಬ್ದಾರಿ ಹೊರುವಂತೆ ಅವರಿಗೆ ಹೊಣೆಗಾರಿಕೆ ನೀಡಲಾಗುವುದು. ಚಾರಣ ಆರಂಭವಾದ ಒಂದು ತಾಸಿನೊಗೆ ವಾಕಿಟಾಕಿ ಸಂವಹನ ಗೈಡ್ ಕಡೆಯಿಂದ ನಡೆಯದಿದ್ದರೆ ಬೇಸ್ ಕ್ಯಾಂಪ್ ಸಿಬ್ಬಂದಿಯೇ ಕರೆ ಮಾಡಿ ಖಚಿತಪಡಿಸಿಕೊಳ್ಳುತ್ತಾರೆ ಎಂದು ಸಚಿವ ಖಂಡ್ರೆ ತಿಳಿಸಿದರು. ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕರು (ಗೈಡ್) ಯಾವುದೇ ಚಾರಣಿಗ ತಮಗಿಂತ ಮುಂದೆ ಹೋಗಿಲ್ಲ ಹಾಗೂ ಹಿಂದೆ ಉಳಿದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬೇಸ್ ಕ್ಯಾಂಪ್, ವಿಶಾಂತಿ ತಾಣಗಳಲ್ಲಿ ಕಡ್ಡಾಯವಾಗಿ ಚಾರಣಿಗರ ಎಣಿಕೆ ಮಾಡಬೇಕು. ಪ್ರತಿ ಅರ್ಧ ತಾಸಿಗೊಮ್ಮೆ ತಮ್ಮ ವಾಕಿ ಟಾಕಿ ಮೂಲಕ ಬೇಸ್ ಕ್ಯಾಂಪ್‌ನೊಂದಿಗೆ ಸಂವಹನ ನಡೆಸಬೇಕು. ಚಾರಣಿಗರ ಜವಾಬ್ದಾರಿ ಹೊರುವಂತೆ ಅವರಿಗೆ ಹೊಣೆಗಾರಿಕೆ ನೀಡಲಾಗುವುದು. ಚಾರಣ ಆರಂಭವಾದ ಒಂದು ತಾಸಿನೊಗೆ ವಾಕಿಟಾಕಿ ಸಂವಹನ ಗೈಡ್ ಕಡೆಯಿಂದ ನಡೆಯದಿದ್ದರೆ ಬೇಸ್ ಕ್ಯಾಂಪ್ ಸಿಬ್ಬಂದಿಯೇ ಕರೆ ಮಾಡಿ ಖಚಿತಪಡಿಸಿಕೊಳ್ಳುತ್ತಾರೆ ಎಂದು ಸಚಿವ ಖಂಡ್ರೆ ತಿಳಿಸಿದರು.

ಎಸ್‌ಒಪಿಯಲ್ಲಿ ಇನ್ನೂ ಏನಿದೆ?

- ಅಪ್ರಾಪ್ತ ವಯಸ್ಕರು ಚಾರಣಕ್ಕೆ ತೆರಳಲು ಅವರ ಪಾಲಕರ, ಪೋಷಕರ ಅನುಮತಿ ಪತ್ರ ಕಡ್ಡಾಯ
- ಹಿರಿಯ ನಾಗರಿಕರು ಚಾರಣ ಕೈಗೊಳ್ಳಲು ತಮ್ಮ ದೈಹಿಕ ಸಾಮರ್ಥ್ಯ ಮತ್ತು ಸದೃಢತೆಯ ಪ್ರಮಾಣ ಪತ್ರ ಒದಗಿಸಬೇಕು
- ಚಾರಣಿಗರಿಗೆ ಎದುರಾಗುವ ಆರೋಗ್ಯ ಸಮಸ್ಯೆಗೆ ಆರೈಕೆಗಾಗಿ ಗೈಡ್ ತಮ್ಮ ಜೊತೆ ಪ್ರಥಮ ಚಿಕಿತ್ಸಾ ಕಿಟ್ ಒಯ್ಯಬೇಕು
- ಫ್ಲಾಶ್ ಬಳಸಿ ಫೋಟೋ ತೆಗೆಯುವುದು, ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಕ್ಯಾರಿ ಬ್ಯಾಗ್ ತೆಗೆದುಕೊಂಡು ಹೋಗುವುದು ನಿಷೇಧ
- ಯಾವುದೇ ತ್ಯಾಜ್ಯವನ್ನು ಚಾರಣಿಗರು ತಂದು ಬೇಸ್ ಕ್ಯಾಂಪ್‌ನಲ್ಲೇ ವಿಲೇವಾರಿ ಮಾಡಬೇಕು

ಭ್ರಷ್ಟ ಜನಪ್ರತಿನಿಧಿಗಳಿಗೆ ಸಿಂಹಸ್ವಪ್ನ

ಪುಟ ೨➡ ಅಂತಹ ನ್ಯಾಯಸಮ್ಮತವಾದ ತೀರ್ಪನ್ನು ನೀಡಿದವರು ಇದೇ, ಸಂತೋಷ ಗಜಾನನ ಭಟ್.

14 ದಿನದಲ್ಲಿ ಅತ್ಯಾಚಾರಿಗೆ ಜೈಲು: ಸಂತೋಷ್ ಗಜಾನನ ಭಟ್ ಅವರು ಬೆಂಗಳೂರಿಗೆ ಬರುವ ಮುನ್ನ ಹಾಸನದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ಅಲ್ಲಿ ಅವರು ಅತ್ಯಂತ ವೇಗವಾಗಿ ಮತ್ತು ಸಾಕ್ಷ್ಯಾಧಾರಗಳ ಆಧಾರದ ಮೇಲೆ ತೀರ್ಪುಗಳನ್ನು ನೀಡುವ ಮೂಲಕ ದೊಡ್ಡ ಹೆಸರು ಮಾಡಿದ್ದರು. ಹಾಸನದಲ್ಲಿ ಅತ್ಯಾಚಾರ ಪ್ರಕರಣವೊಂದರ ವಿಚಾರಣೆ ನಡೆಸಿದ್ದ ನ್ಯಾಯಾಧೀಶ ಭಟ್ ಅವರು, ಕೇವಲ 14 ದಿನಗಳ ವಿಚಾರಣೆಯಲ್ಲೇ ಆರೋಪಿಗೆ ಶಿಕ್ಷೆ ಪ್ರಕಟಿಸಿದ್ದರು.

ಭೈರತಿ ಬಸವರಾಜ್ ಪ್ರಕರಣ: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ಶಾಸಕ ಭೈರತಿ ಬಸವರಾಜ್ ಆರೋಪಿಯಾಗಿದ್ದಾರೆ.

ಸೂರಜ್ ರೇವಣ್ಣ ಪ್ರಕರಣ: ಲೈಂಗಿಕ ಕಿರುಕುಳದ ಆರೋಪದಲ್ಲಿ ಸುಮಾರು ಒಂದು ತಿಂಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಸೂರಜ್ ರೇವಣ್ಣ ಪ್ರಕರಣವನ್ನೂ ಇವರೇ ವಿಚಾರಣೆ ನಡೆಸುತ್ತಿದ್ದರು.

ಬಿಎಸ್‌ವೈ ವಿರುದ್ಧದ ಪೋಕ್ಸೋ ಪ್ರಕರಣ: ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು, ಯಡಿಯೂರಪ್ಪ ಅವರಿಗೆ ವಿಧಿಸಲಾಗಿದ್ದ ಬಂಧನದ ಭೀತಿಯಿಂದ ತಾತ್ಕಾಲಿಕ ಸಮಾಧಾನ ನೀಡಿದ್ದರು.

ಸಂಚಲನ ಮೂಡಿಸಿದ ತೀರ್ಪುಗಳು



ಪುಟ ೨➡ ರಾಜ್ಯದಲ್ಲಿ ಭಾರೀ ಬಿರುಗಾಳಿ ಎಬ್ಬಿಸಿದ ಮೈಸೂರು ಮುಡಾ ಪ್ರಕರಣದಲ್ಲೂ ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ತನಿಖೆಗೆ ಆದೇಶಿಸಿದ್ದು ಇದೇ ಜನಪ್ರತಿನಿಧಿಗಳ ನ್ಯಾಯಾಲಯ. ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ನೀಡಿದ್ದ ಅನುಮತಿ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಇದೇ ಆದೇಶದ ಆಧಾರದ ಮೇಲೆ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಸಿಎಂ ವಿರುದ್ಧ ತನಿಖೆಗೆ ಆದೇಶಿಸಿದ್ದರು.

ಸರ್ಕಾರಕ್ಕೂ ಕ್ಲಾಸ್!

ಇನ್ನು ಕೋರ್ಟ್ ವ್ಯಾಪ್ತಿಯನ್ನು ಮೀರಿ ಸರ್ಕಾರ ಹಸ್ತಕ್ಷೇಪ ಮಾಡುವುದನ್ನು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಎಂದಿಗೂ ಸಹಿಸಲ್ಲ. ಬಿಜೆಪಿ ಶಾಸಕ ಮುನಿರತ್ನ ಅವರ ಪ್ರಕರಣ. ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣ ಸೇರಿದಂತೆ ಮುನಿರತ್ನ ವಿರುದ್ಧದ ಪ್ರಕರಣಗಳ ತನಿಖೆಗಾಗಿ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿತ್ತು. ಅಕ್ಟೋಬರ್ 15ರಂದು ಮುನಿರತ್ನಗೆ ಜಾಮೀನು ನೀಡುವ ವೇಳೆ ಸರ್ಕಾರದ ಆ ಅಧಿಸೂಚನೆಯನ್ನು ನ್ಯಾಯಾಧೀಶರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಕ್ರಿಮಿನಲ್ ಪ್ರಕರಣದಲ್ಲಿ ರಾಜ್ಯ ಸರ್ಕಾರವೂ ಒಂದು ಪಕ್ಷ. ಹಾಗಿದ್ದರೂ ಸರ್ಕಾರವು ತಟಸ್ಥತೆಯನ್ನು ಕಾಪಾಡಿಕೊಳ್ಳಬೇಕು. ತನಿಖೆಯ ಪ್ರತಿಯೊಂದು ಹೆಜ್ಜೆಯನ್ನೂ ಸರ್ಕಾರವೇ ಕಣ್ಗಾವಲು ಮಾಡುವುದರ ಮೂಲಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಕಸಿದುಕೊಳ್ಳುವಂತಿಲ್ಲ ಎಂದು ಅವರು ಖಡಕ್ ಆಗಿ ಹೇಳಿದರು.

ಅಧಿಕಾರ ಉಳಿಸಿಕೊಳ್ಳಲು ಮಾಡಿದ ಯತ್ನ

ಪುಟ ೨➡ 2023ರ ಮಹಿಳಾ ಮೀಸಲು ಕಾಯ್ದೆಯನ್ನು ತಕ್ಷಣ ಜಾರಿಗೆ ತರಬೇಕು ಎಂದು ಅವರು ಒತ್ತಾಯಿಸಿ, ಅದಕ್ಕೆ ವಿರೋಧ ಪಕ್ಷದ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದರು.

ಭಾರತದ ಇತಿಹಾಸದಲ್ಲಿ ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಅನುಭವಿಸಿದ ಅನ್ಯಾಯವನ್ನು ಅವರು ಉಲ್ಲೇಖಿಸಿದರು. ಸರ್ಕಾರವು ಜಾತಿ ಗಣತಿಯನ್ನು ತಪ್ಪಿಸಲು ಯತ್ನಿಸುತ್ತಿದೆ ಮತ್ತು ಅದರ ಮೂಲಕ ಒಬಿಸಿ ವರ್ಗಗಳ ರಾಜಕೀಯ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು. ಸಂವಿಧಾನದ ಮೇಲೆ ಮನುವಾದವನ್ನು ಹೇರಲು ಯತ್ನ ನಡೆಯುತ್ತಿದೆ ಎಂದು ಹೇಳಿದರು.

ಗೃಹಸಚಿವ ಅಮಿತ್ ಶಾ ಸಮರ್ಥನೆ

ಪುಟ ೨➡ ★ಕ್ಷೇತ್ರ ಪುನರ್ವಿಂಗಡಣೆ ಎಂದರೆ ಸಂವಿಧಾನದಲ್ಲಿ ಹೇಳಲಾಗಿರುವ ಸಮಾನ ಪ್ರಾತಿನಿಧ್ಯವನ್ನು ಖಾತ್ರಿಪಡಿಸುತ್ತದೆ.

★ಪ್ರಧಾನಿ ಮೋದಿಯವರ ನಿರ್ಧಾರಗಳನ್ನು ಸರಿಯಾದ ಚಿಂತನೆ ಮಾಡದೆಯೇ ಕಾಂಗ್ರೆಸ್ ವಿರೋಧಿಸುತ್ತಿರುವುದು ವಿಷಾದನೀಯ.

★ಬಿಜೆಪಿಯ ಮಹಿಳಾ ಮುಖ್ಯಮಂತ್ರಿಗಳು ಮತ್ತು ಹಿಂದುಳಿದ ಬುಡಕಟ್ಟು ಸಮುದಾಯದ ಮಹಿಳಾ ರಾಷ್ಟ್ರಪತಿ ಆಯ್ಕೆಯೇ ಬಿಜೆಪಿ ಮಹಿಳಾ ನಾಯಕತ್ವ ಬಗ್ಗೆ ಹೊಂದಿರುವ ಬದ್ಧತೆ ಎಂತಹುದು ಎಂಬುದಕ್ಕೆ ಸಾಕ್ಷಿ

★ಹಿಂದುಳಿದ ವರ್ಗಗಳ ಬಗ್ಗೆ ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ 'ನಕಲಿ ಕಾಳಜಿ'ಪ್ರದರ್ಶಿಸುತ್ತಿದೆ. ಮೀಸಲಾತಿ ಸಮಿತಿಗಳು ಸ್ಥಗಿತಗೊಂಡಿರುವುದು ಮತ್ತು ಸಲಹೆಗಳನ್ನು ನಿರ್ಲಕ್ಷಿಸಿರುವುದೇ ಕಾಂಗ್ರೆಸ್ ಹಿಂದುಳಿದವರ ಕುರಿತಂತೆ ಎಷ್ಟು ಕಾಳಜಿ ವಹಿಸಿದೆ ಎಂಬುದನ್ನು ತೋರಿಸುತ್ತದೆ.

★ಮೋದಿ ಸರಕಾರವು 2026ರ ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ನಡೆಸುತ್ತಿದೆ.ಹೀಗಿರುವಾಗ ಕಾಂಗ್ರೆಸ್ ದೂಷಣೆಗೆ ಅರ್ಥವೇನು?

★ಸಂವಿಧಾನದಲ್ಲಿ ಮತ–ಧರ್ಮಾಧಾರಿತ ಮೀಸಲಿಗೆ ಅವಕಾಶ ಇಲ್ಲ.ಆದರೆ ಕಾಂಗ್ರೆಸ್ ಮಹಿಳಾ ಮೀಸಲಿಗೆ ತಡೆ ಒಡ್ಡಲು ತುಷ್ಟೀಕರಣ ರಾಜಕೀಯದ ದಾಳ ಉರುಳಿಸಲು ಮುಂದಾಗಿದೆ.

★ತಮ್ಮ ಮತಗಳಿಲ್ಲದೆ ಮಹಿಳಾ ಮೀಸಲು ಮಸೂದೆ ವಿಫಲವಾಗಲಿದೆ ಎಂದು ರಾಹುಲ್ ಗಾಂಧಿ ಭಾವಿಸಿದ್ದು, ಹಾಗೆ ಆಗಲು ಬಿಡುವುದಿಲ್ಲ.ರಾಹುಲ್ ಗಾಂಧಿ ಸಂಸತ್ತಿನ ಅಮೂಲ್ಯ ಸಮಯವನ್ನು ವ್ಯರ್ಥಗೊಳಿಸುತ್ತಿದ್ದಾರೆ.

★ಕ್ಷೇತ್ರ ಪುನರ್ವಿಂಗಡಣೆಯು ದಕ್ಷಿಣದ ವಿರೋಧಿ ಅಲ್ಲ. ಆದರೆ ವಿಪಕ್ಷವು ಉತ್ತರ –ದಕ್ಷಿಣ ಎಂದು ವಿಭಜಿಸಲು ನೋಡುತ್ತಿರುವುದು ವಿಪರ್ಯಾಸ.

★ಕ್ಷೇತ್ರ ಪುನರ್ವಿಂಗಡಣೆ ಮಸೂದೆ ಯಾಕೆ ವಿಳಂಬಿಸಲಾಗಿದೆ ಎಂದು ಪ್ರಶ್ನಿಸಲಾಗುತ್ತದೆ. ಆದರೆ ಇದು ಕೋವಿಡ್ ಕಾರಣದಿಂದಾಗಿ ವಿಳಂಬಗೊಂಡಿದ್ದೇ ವಿನಾ ಬೇರಾವುದೇ ಕಾರಣದಿಂದಲ್ಲ

★ಮಹಿಳಾ ಮೀಸಲು ಮತ್ತು ಕ್ಷೇತ್ರ ಪುನರ್ವಿಂಗಡಣೆಯ ಮೂಲಕ 2029ರೊಳಗೆ ಶೇ.50ರಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಗುರಿ ಹೊಂದಿದೆ.

★1972ರಿಂದ ದೇಶದ ಜನಸಂಖ್ಯೆ ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಆದರೆ ಈ ಏರಿದ ಜನಸಂಖ್ಯೆಗೆ ಅನುಗುಣವಾಗಿ ಕ್ಷೇತ್ರಗಳ ವಿಂಗಡಣೆಯಾಗಿಲ್ಲ.ಇದರಿಂದ ಅನೇಕ ಅಡ್ಡ ಪರಿಣಾಮಗಳುಂಟಾಗಿವೆ.ಆದ್ದರಿಂದ ಸರಕಾರ ಇಂತಹ ಒಂದು ತೀರ್ಮಾನಕ್ಕೆ ಬಂದಿದೆ.

9 ಮಂದಿ ಸಜೀವ ದಹನ

ಪುಟ ೨➡ ಇನ್ನೂ ಘಟನೆಯಲ್ಲಿ ವಿರಾಟ್ ಎಂಬುವವರಿಗೆ ಗಂಭೀರ ಗಾಯಗಳಾಗಿದ್ದು, ರಾಯಚೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಘಟನೆ ನಡೆಯುತ್ತಿದ್ದಂತೆಯೇ ಸ್ಥಳೀಯರು ಸುರಪುರ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಸುರಪುರ ಶಾಸಕ ರಾಜಾ ವೇಣುಗೋಪಾಲ ನಾಯಕ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಅಪಘಾತ ಹೇಗೆ ಸಂಭವಿಸಿದೆ ಎಂಬ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲಾಗುತ್ತಿದ್ದು, ನಮ್ಮ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

■ ಪೃಥ್ವಿಕ್ ಶಂಕರ್, ಎಸ್ಪಿ

ಕೃಷ್ಣನ ಮುಂದೆ ಮಾಂಸಾಹಾರ: ಹೋಟೆಲ್‌ವೊಂದರ ಉದ್ಧಟತನ

ಪುಟ ೨➡ ಚೆರ್ತಾಲಾ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದಂತೆ, ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಕಲಂ 192(ಗಲಭೆಗೆ ಪ್ರಚೋದನೆ ನೀಡುವ ಉದ್ದೇಶದ ಕೃತ್ಯ) ಅನ್ವಯ ಪ್ರಕರಣ ದಾಖಲಿಸಲಾಗಿದೆ. ಇದೇ ವೇಳೆ, ಚೆರ್ತಾಲಾದಲ್ಲಿರುವ ಆ ಉಪಾಹಾರ ಗೃಹದ ವಿರುದ್ಧ ಹಿಂದೂ ಸಂಘಟನೆಯೊಂದು ಪ್ರತಿಭಟನೆ ನಡೆಸುವ ಸಾಧ್ಯತೆ ಇರುವ ಹಿನ್ನೆಲೆ, ಯಾವುದೇ ಅನಾಹುತ ಸಂಭವಿಸದಂತೆ ಪೊಲೀಸರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ. ವಿವಾದ ಹೆಚ್ಚುತ್ತಿದ್ದಂತೆ, ಸಂಬಂಧಿತ ಉಪಾಹಾರ ಗೃಹದ ಮಾಲೀಕ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದಾನೆ. ಪೋಸ್ಟರ್ ತಯಾರಿಸುವ ಕೆಲಸವನ್ನು ಬೇರೆಯವರಿಗೆ ನೀಡಲಾಗಿದ್ದು, ಅವರ ನಿರ್ಲಕ್ಷ್ಯದಿಂದ ಇಂತಹ ವಿವಾದಾತ್ಮಕ ಚಿತ್ರ ರಚಿಸಲಾಗಿದೆ ಎಂದಿದ್ದಾನೆ.

ವಿದ್ಯುತ್ ದರ ಏರಿಕೆ

ಪುಟ ೨➡ **ಕರಾವಳಿ-ಉತ್ತರ ಕರ್ನಾಟಕ ಗ್ರಾಹಕರು ನಿರಾಳ:** ಒಂದೆಡೆ ಬೆಸ್ಕಾಂ ಮತ್ತು ಸೆಸ್ಕ್ ಗ್ರಾಹಕರಿಗೆ ದರ ಏರಿಕೆಯ ಬಿಸಿ ತಟ್ಟಿದರೆ ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಹೆಸ್ಕಾಂ), ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಜೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಮೆಸ್ಕಾಂ) ವ್ಯಾಪ್ತಿಯ ಗ್ರಾಹಕರಿಗೆ ಸ್ವಲ್ಪ ಮಟ್ಟಿನ ಸಮಾಧಾನ ಸಿಕ್ಕಂತಾಗಿದೆ. ಈ ಭಾಗದ ಗ್ರಾಹಕರಿಗೆ ಯೂನಿಟ್‌ಗೆ ತಲಾ 9 ರಿಂದ 10 ಪೈಸೆಯಷ್ಟು ಹಣ ಬಿಲ್‌ನಲ್ಲಿ ಕಡಿತವಾಗಲಿದೆ.

ನಾರೀಶಕ್ತಿಗೆ ಸೋಲು

ಪುಟ ೨➡ ಲೋಕಸಭೆಯಲ್ಲಿ ನಡೆದ ಚರ್ಚೆಯ ವೇಳೆ ಗೃಹ ಸಚಿವ ಅಮಿತ್ ಶಾ, 'ಇದು 2029ರೊಳಗೆ ಮಹಿಳಾ ಮೀಸಲು ಜಾರಿಗೆ ತರುವ ಐತಿಹಾಸಿಕ ಸುಧಾರಣೆ' ಎಂದು ಹೇಳಿ ವಿರೋಧ ಪಕ್ಷಗಳನ್ನು ಮನವೊಲಿಸಲು ಪ್ರಯತ್ನಿಸಿದರು.

ಅವರು ಪುನರ್ವಿಂಗಡಣೆ ಮೂಲಕ ಪ್ರತಿ ಮತಕ್ಕೂ ಸಮಾನ ಮೌಲ್ಯ ದೊರೆಯಲಿದೆ ಎಂದೂ ವಾದಿಸಿದರು. ಅಲ್ಲದೆ, ಪುನರ್ವಿಂಗಡಣೆ ವಿಚಾರದಲ್ಲಿ ಉತ್ತರ ಮತ್ತು ದಕ್ಷಿಣವೆಂದು ದೇಶವನ್ನು ಇಬ್ಭಾಗ ಮಾಡಬೇಡಿ ಎಂದು ಪ್ರತಿಪಕ್ಷಗಳಿಗೆ ತಿವಿದ ಅಮಿತ್ ಶಾ ಅವರು, ಶೇ.50ರ ಆಧಾರದಲ್ಲೇ ಲೋಕಸಭಾ ಕ್ಷೇತ್ರಗಳ ವಿಂಗಡಣೆ ಮಾಡಲಾಗುವುದು. ಇದರಿಂದ ಯಾವುದೇ ರಾಜ್ಯಗಳಿಗೂ ಮೋಸವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಈಗ ಇರುವ ಸದಸ್ಯರ ಸಂಖ್ಯೆ ಮೂಲಕ ಮಹಿಳಾ ಮಸೂದೆ ನೀಡುವುದು ಕಷ್ಟ.

ಹೀಗಾಗಿಯೇ, ಪುನರ್ವಿಂಗಡಣೆಗೆ ಮುಂದಾಗಿದ್ದೇವೆ ಎಂಬ ಸ್ಪಷ್ಟನೆಯನ್ನೂ ನೀಡಿದರು. ಆದರೆ, ಮಸೂದೆ ಸೋಲಿನ ಬಳಿಕ ಶಾ ತೀವ್ರ ಪ್ರತಿಕ್ರಿಯೆ ನೀಡಿದ್ದು, 'ಮಹಿಳೆಯರ ಹಕ್ಕನ್ನು ವಿರೋಧ ಪಕ್ಷಗಳು ತಡೆದಿವೆ. ಇದು ನಾರೀಶಕ್ತಿಗೆ ಅವಮಾನ' ಎಂದು ಆರೋಪಿಸಿದರು. ಮುಂದಿನ ಚುನಾವಣೆಗಳಲ್ಲಿ ಮಹಿಳೆಯರು ಇದಕ್ಕೆ ಉತ್ತರ ನೀಡಲಿದ್ದಾರೆ ಎಂದೂ ಎಚ್ಚರಿಸಿದರು. ಇನ್ನೊಂದೆಡೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸರ್ಕಾರದ ಉದ್ದೇಶಗಳನ್ನೇ ಪ್ರಶ್ನಿಸಿ, 'ಇದು ಮಹಿಳಾ ಮೀಸಲು ಮಸೂದೆ ಅಲ್ಲ; ದೇಶದ ಚುನಾವಣಾ ರಚನೆಯನ್ನು ಬದಲಿಸುವ ಪ್ರಯತ್ನ'' ಎಂದು ಟೀಕಿಸಿದರು. ಮಸೂದೆ ಮೂಲಕ ಜನಸಂಖ್ಯಾ ಆಧಾರಿತ ರಾಜಕೀಯ ಸಮೀಕರಣಗಳನ್ನು ಬದಲಿಸಲು ಯತ್ನಿಸಲಾಗಿದೆ ಎಂದು ಅವರು ಆರೋಪಿಸಿದರು. ಪ್ರಿಯಾಂಕಾ ಗಾಂಧಿ ಸಹ ಪ್ರತಿಕ್ರಿಯಿಸಿ, 'ಇದು ಮಹಿಳಾ ಹಕ್ಕಿನ ವಿಷಯವಲ್ಲ; ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಉಳಿಸುವ ಹೋರಾಟ' ಎಂದು ಹೇಳಿದ್ದು, ಮಸೂದೆ ಸೋಲನ್ನು ಪ್ರಜಾಸತ್ತಾತ್ಮಕ ಜಯ ಎಂದು ವರ್ಣಿಸಿದರು. ಲೋಕಸಭೆಯಲ್ಲಿ ಮತದಾನ ನಂತರ ತೀವ್ರ ಗದ್ದಲದ ನಡುವೆ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಬಿಜೆಪಿ ನಾಯಕರು ಸಂಸತ್ ಭವನದ ಹೊರಗೆ ಪ್ರತಿಭಟನೆ ನಡೆಸಿದರು.

> **ಇದು ಮಹಿಳಾ ಮೀಸಲು ಮಸೂದೆ ಅಲ್ಲ; ಚುನಾವಣಾ ವ್ಯವಸ್ಥೆಯನ್ನು ಬದಲಿಸುವ ರಾಜಕೀಯ ಯತ್ನ. ನಾವು ಇದರ ವಿರುದ್ಧ ನಿಂತಿದ್ದೇವೆ.**
> ■ ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷ ನಾಯಕ

ಈ ಮಸೂದೆಗೆ ಕ್ಷೇತ್ರ ಮರುವಿಂಗಡಣೆ ಬಿಲ್ ಜೋಡಣೆ ಮಾಡಲಾಗಿದ್ದೇ ಪ್ರಮುಖ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ದಕ್ಷಿಣ ರಾಜ್ಯಗಳ ಪ್ರತಿನಿಧಿತ್ವ ಕುಗ್ಗುವ ಸಾಧ್ಯತೆ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದರೆ, ಸರ್ಕಾರ ಅದನ್ನು ಸಂಪೂರ್ಣ ವಾಗಿ ತಳ್ಳಿ ಹಾಕಿತ್ತು. ಮಸೂದೆ ವಿಫಲವಾದ ಹಿನ್ನೆಲೆಯಲ್ಲಿ, ಅದರೊಂದಿಗೆ ಸಂಪರ್ಕ ಹೊಂದಿದ್ದ ಡಿಲಿಮಿಟೇಶನ್ ಬಿಲ್‌ಗಳನ್ನೂ ಸರ್ಕಾರ ಹಿಂಪಡೆಯಲು ತೀರ್ಮಾನಿಸಿತು.

ಪ್ರತಿಪಕ್ಷಗಳ ವಿರುದ್ಧ ಅಮಿತ್ ಶಾ ಚಾಟಿ

ಹೊಸದಿಲ್ಲಿ: ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಮೀಸಲು ಮತ್ತು ಎಸ್‌ಸಿ-ಎಸ್‌ಟಿ ಸ್ಥಾನಗಳ ಹೆಚ್ಚಳಕ್ಕೆ ವಿರೋಧ ಪಕ್ಷಗಳು ಅಡ್ಡಿಯಾಗುತ್ತಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಶುಕ್ರವಾರ ನೇರ ವಾಗ್ದಾಳಿ ನಡೆಸಿದರು.



ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾಯ್ದೆ ತಿದ್ದುಪಡಿ ಹಾಗೂ ಕ್ಷೇತ್ರ ಪುನರ್ವಿಂಗಡಣೆ ಆಯೋಗ ರಚನೆಗೆ ಸಂಬಂಧಿಸಿದ ಮೂರು ಮಸೂದೆಗಳ ಚರ್ಚೆಗೆ ಉತ್ತರ ನೀಡಿದ ಶಾ, ಪ್ರತಿ ಕ್ಷೇತ್ರದಲ್ಲೂ ಮತದಾರರ ಸಂಖ್ಯೆಯನ್ನು ಸಮನಾಗಿಸುವುದೇ ಪುನರ್ವಿಂಗಡಣೆಯ ಉದ್ದೇಶ ಎಂದು ಹೇಳಿದರು. ಕೆಲವು ಕ್ಷೇತ್ರಗಳಲ್ಲಿ 40 ಲಕ್ಷಕ್ಕೂ ಹೆಚ್ಚು ಮತದಾರರು ಇದ್ದರೆ, ಇನ್ನೂ ಕೆಲವು ಕಡೆ ಕಡಿಮೆ ಮತದಾರರಿದ್ದಾರೆ ಎಂಬ ಅಸಮತೋಲನವನ್ನು ಸರಿಪಡಿಸಲಾಗುತ್ತದೆ ಎಂದರು. ಚರ್ಚೆಯಲ್ಲಿ ಸುಮಾರು 130 ಸಂಸದರು ಪಾಲ್ಗೊಂಡಿದ್ದರು. 'ಎಲ್ಲರೂ ಮಹಿಳಾ ಮೀಸಲು ಸಂವಿಧಾನ ತಿದ್ದುಪಡಿ ಕ್ರಮವನ್ನು ಸ್ವಾಗತಿಸುತ್ತೇವೆ ಎಂದರೂ, ಇಂಡಿ ಕೂಟ ಮೈತ್ರಿ ಸದಸ್ಯರು ಸ್ಪಷ್ಟವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ' ಎಂದು ಶಾ ಆರೋಪಿಸಿದರು.

ಶಾಸಕ ವಿನಯ್ ಸೇರಿ 16 ಮಂದಿಗೆ ಜೀವಾವಧಿ ಸಜೆ

ಪುಟ ೨➡ **17 ಅಪರಾಧಿಗಳಿಗೆ ಶಿಕ್ಷೆ ಘೋಷಣೆ:** 20ನೇ ಆರೋಪಿ ವಾಸುದೇವ ರಾಮ ನಿಲೇಕಣಿ ಮತ್ತು 21ನೇ ಆರೋಪಿ ಸೋಮಶೇಖರ್ ಬಸಪ್ಪ ನ್ಯಾಮಗೌಡ ಅವರಿಗೆ ಅನುಮಾನದ ಲಾಭ ನೀಡಿ ಅವರನ್ನು ಪ್ರಕರಣದಲ್ಲಿ ಖುಲಾಸೆಗೊಳಿಸಲಾಗಿದೆ. ಒಂದನೇ ಆರೋಪಿ ಬಸವರಾಜ್ ಮುತ್ತಗಿ ನೀಡಲಾಗಿದ್ದ ಕ್ಷಮಾದಾನವನ್ನು ಕಾಯಂಗೊಳಿಸಲಾಗಿದೆ. ಅಪ್ರೂವರ್ ಆಗಿ, ಪ್ರತೀಕೂಲ ಸಾಕ್ಷಿಯಾಗಿ ಬದಲಾಗಿದ್ದ 17ನೇ ಆರೋಪಿ ಶಿವಾನಂದ ಬಿರಾದಾರ್‌ನನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಲು ಅಗತ್ಯ ಅನುಮತಿ ಪಡೆಯಲು ಪ್ರಾಸಿಕ್ಯೂಷನ್‌ಗೆ ಅನುಮತಿಸಲಾಗಿದೆ. ಹೀಗಾಗಿ, ಒಟ್ಟು 21 ಆರೋಪಿಗಳ ಪೈಕಿ ನಾಲ್ವರನ್ನು ಹೊರತುಪಡಿಸಿ ಉಳಿದ 17 ಮಂದಿಗೆ ಶಿಕ್ಷೆಯಾಗಿದೆ.

ಪತಿ ಸಾವಿಗೆ ಸಿಕ್ಕ ನ್ಯಾಯ: ಮಲ್ಲಮ್ಮ

ಧಾರವಾಡ: ನ್ಯಾಯಾಲಯದ ತೀರ್ಪಿಗೆ ತಲೆ ಬಾಗುವೆ. ನನ್ನ ಪತಿ ಇಲ್ಲದೆ 10 ವರ್ಷಗಳು ಅನುಭವಿಸಿದ ನೋವಿಗಿಂತ 10 ಪಟ್ಟು ನೋವು ಅಪರಾಧಿಗಳು ಜೈಲಿನಲ್ಲಿ ಅನುಭವಿಸುತ್ತಾರೆ ಎಂದು ಯೋಗೀಶಗೌಡರ ಪತ್ನಿ ಮಲ್ಲಮ್ಮ ಗೌಡರ ಹೇಳಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಹಾಬಲೇಶ್ವರ ನನ್ನ ಮನೆಯಲ್ಲಿ ಇದ್ದು, ಉಂಡು ಪತಿಯ ಹತ್ಯೆ ಮಾಡಿದ್ದು ಬಹಳ ದುಃಖ ತರಿಸಿದೆ. ಕೋರ್ಟ್‌ನಿಂದ ನ್ಯಾಯ ಸಿಕ್ಕಿದೆ. ಯೋಗೀಶಗೌಡರ ನಮ್ಮನ್ನು ಅಗಲಿಲ್ಲ. ನೆನಪಲ್ಲಿ ಇದ್ದಾರೆ ಎಂದರು. ಅಪರಾಧಿಗಳ ಕುರಿತು ಏನೂ ಮಾತನಾಡಲ್ಲ ಎಂದರು.

139 ಶಾಸಕರು ನನ್ನದೇ ಗುಂಪು: ಡಿಕೆಶಿ

◆ **ಬೆಂಗಳೂರು:** 139 ಶಾಸಕರು ನನ್ನದೇ ಗುಂಪು, ಕಾಂಗ್ರೆಸ್ ಗುಂಪು. ನಮಗೆ ಪಕ್ಷ ಹಾಗೂ ಪಕ್ಷದ ಹಿತ ಮುಖ್ಯ. ಪಕ್ಷದ ಅಭಿವೃದ್ಧಿಗೆ ಹಾಗೂ ಅದರ ಒಳಿತಿಗೆ ಏನು ಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದೇವೆ. ನಾವೆಲ್ಲ ಒಟ್ಟಿಗೆ ಸೇರಿ ಕೆಲಸ ಮಾಡುತ್ತಿದ್ದೇವೆ, ಮಾಡುತ್ತೇವೆ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ, ನಾನು ಒಟ್ಟಿಗೇ ಇದ್ದೇವೆ. ಪ್ರತಿದಿನ ಜತೆಯಲ್ಲೇ ಕೂರುತ್ತೇವೆ, ಚರ್ಚಿಸುತ್ತೇವೆ. ಎಲ್ಲರೂ ನಮ್ಮ ಶಾಸಕರೇ. ಮಾಧ್ಯಮಗಳೇ ನಮ್ಮನ್ನು ಇಬ್ಭಾಗ ಮಾಡುತ್ತಿವೆ. ಬೆಂಗಳೂರಿನ ಟ್ರಾಫಿಕ್ ಹೇಗೆ ನಿಯಂತ್ರಣ, ಕಡಿಮೆ ಮಾಡಬೇಕು ಎನ್ನುವ ವಿಚಾರವಾಗಿ ನಾನು ಹಾಗೂ ಸತೀಶ್ ಜಾರಕಿಹೊಳಿ ಚರ್ಚೆ ನಡೆಸಿದ್ದೇವೆ. ನೆಲಮಂಗಲದಿಂದ ಗೊರಗುಂಟೆಪಾಳ್ಯ ದವರೆಗೆ ಹೆಚ್ಚು ವಾಹನ ಸಂಚಾರ ದಟ್ಟಣೆ ಇದೆ. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಮೂಲಕ ನಗರದ ಒಳಗೆ ವಾಹನಗಳು ಬರದಂತೆ ಹೇಗೆ ಬದಲಿ ವ್ಯವಸ್ಥೆ ಮಾಡಬಹುದು. ನೈಸ್ ರಸ್ತೆಗೆ ಮುನ್ನ ಯಾವ ವ್ಯವಸ್ಥೆ ಮಾಡಬಹುದು ಎಂದು ಚರ್ಚೆ ನಡೆಸಿದ್ದೇವೆ. ಈಗಾಗಲೇ ಬಿಜಿನೆಸ್ ಕಾರಿಡಾರ್ ಯೋಜನೆ ಕೈಗೆತ್ತಿಕೊಂಡಿದ್ದೇವೆ ಎಂದರು.

ನನ್ನ ಮೇಲೆ ದೂರಿದರೂ ಚಿಂತೆ ಇಲ್ಲ

ಪಕ್ಷಕ್ಕೆ ತನ್ನದೇ ಆದ ರೀತಿ-ರಿವಾಜುಗಳಿವೆ. ಎಂಎಲ್‌ಎ, ಎಂಎಲ್ ಸಿ ವಿಚಾರವಾಗಿ ದಿಲ್ಲಿ ನಾಯಕರು ಏನೂ ಹೇಳದೇ, ನಾವು ಏನೂ ಮಾಡಲೂ ಆಗುವುದಿಲ್ಲ. ಕೆಲವನ್ನು ಮಾರ್ಗದರ್ಶನದ ಅನುಸಾರವಾಗಿ ಮಾಡಬೇಕಾಗುತ್ತದೆ. ಕೆಲವರು ನನ್ನ ಮೇಲೆ ದೂರಬಹುದು. ಹಾಗೇ ನನ್ನ ಮೇಲೆ ಹೇಳಿದರೂ ಚಿಂತೆಯಿಲ್ಲ. ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ ಎಂದರು.

ಹಕ್ಕಿಜ್ವರ ತಡೆಗೆ ಕ್ರಮ: ಸಚಿವ

◆ **ಬೆಂಗಳೂರು:** ನಗರದ ಹೆಸರಘಟ್ಟದ ಮತ್ತೂರು ಗ್ರಾಮದಲ್ಲಿ ಕೋಳಿಗಳಲ್ಲಿ ಹಕ್ಕಿಜ್ವರ (ಎಚ್5ಎನ್1) ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರ ಸುರಕ್ಷತೆಗಾಗಿ ನಮ್ಮ ಸರ್ಕಾರವು ಸಮರೋಪಾದಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ಜನರು ಆತಂಕಪಡುವ ಅಗತ್ಯವಿಲ್ಲ. ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದಾರೆ.



ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಭೋಪಾಲ್ ಎನ್‌ಐಎಚ್‌ಎಸ್‌ಎಡಿ ಪ್ರಯೋಗಾಲಯದ ವರದಿಯ ಪ್ರಕಾರ, ಕಳೆದ ಏ.14ರಂದು ಮತ್ತೂರಿನ ಕೇಂದ್ರದಲ್ಲಿ ಹಕ್ಕಿಜ್ವರ ದೃಢಪಟ್ಟಿದೆ. ವಿಷಯ ತಿಳಿಯುತ್ತಿದ್ದಂತೆ ಏ.16ರಂದು ರಾಜ್ಯ ಮತ್ತು ಜಿಲ್ಲಾ ಮಟ್ಟದ ಆರೋಗ್ಯ ಇಲಾಖೆಯ ತ್ವರಿತ ಪ್ರತಿಕ್ರಿಯೆ ತಂಡಗಳು (ಆರ್‌ಆರ್‌ಟಿ) ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿವೆ. ಈಗಾಗಲೇ ಮುತ್ತೂರು ಗ್ರಾಮವನ್ನು ಸೋಂಕಿತ ವಲಯ (3 ಕಿ.ಮೀ ವ್ಯಾಪ್ತಿ) ಮತ್ತು ಸುತ್ತಲಿನ 10 ಕಿ.ಮೀ ಪ್ರದೇಶವನ್ನು ಕಣ್ಗಾವಲು ವಲಯ ಎಂದು ಘೋಷಿಸಲಾಗಿದೆ. ಈ ಪ್ರದೇಶವನ್ನು ಒಂದು ವರ್ಷದವರೆಗೆ ನಿಷೇಧಿತ ಪ್ರದೇಶವೆಂದು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ.

10 ಸಿಬ್ಬಂದಿ ಕ್ವಾರಂಟೈನ್: ಏ.15 ರಂದು 7,444 ಕೋಳಿಗಳು, 14 ಸಾವಿರಕ್ಕೂ ಅಧಿಕ ಮೊಟ್ಟೆಗಳು, 2,250 ಕೆ.ಜಿ. ಕೋಳಿ ಆಹಾರಗಳನ್ನು ಪಶುಪಾಲನೆ ಇಲಾಖೆ ನೇತೃತ್ವದಲ್ಲಿ ವೈಜ್ಞಾನಿಕವಾಗಿ ಕಲ್ಲಿಂಗ್ ಮಾಡಿ ವಿಲೇವಾರಿ ಮಾಡಲಾಗಿದ್ದು, ಇದರಲ್ಲಿ ಭಾಗಿಯಾಗಿದ 10 ಸಿಬ್ಬಂದಿ ಕ್ವಾರಂಟೈನ್ ಮಾಡಿ, ಒಸೆಲ್ಟಾಮಿವಿರ್ ಔಷಧಿಯೊಂದಿಗೆ ವೈದ್ಯ ಕೀಯ ನಿಗಾದಲ್ಲಿ ಇರಿಸಲಾಗಿದೆ. ಈ ಸ್ಥಳವನ್ನು ಒಂದು ವರ್ಷದವರೆಗೆ ನಿಷೇಧಿತ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ ಎಂದರು.

ಆರೋಗ್ಯ ಇಲಾಖೆ ಕಣ್ಗಾವಲು ಪ್ರಗತಿಯಲ್ಲಿದ್ದು, 3 ಕಿ.ಮೀ. ವ್ಯಾಪ್ತಿ ವಲಯದಲ್ಲಿ ಒಟ್ಟು 3,422 ಜನಸಂಖ್ಯೆಯ 2 ಗ್ರಾಮಗಳಿದ್ದು, 3 ರಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಒಟ್ಟು 22,395 ಜನಸಂಖ್ಯೆ ಇರುವ 17 ಗ್ರಾಮಗಳಿವೆ. ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತರು ದಿನನಿತ್ಯ ಮನೆ-ಮನೆ ಭೇಟಿ ನೀಡಿ ಮುಂದಿನ ಹತ್ತು ದಿನಗಳ ಕಾಲ ಜ್ವರ ಕಣ್ಗಾವಲು ನಡೆಸಲಾಗುವುದು ಎಂದರು.

ನಾರೀಶಕ್ತಿಗೆ ಮಾಡಿದ ದ್ರೋಹ: ಛಲವಾದಿ

◆ **ಬೆಂಗಳೂರು:** ಸಂಸತ್ತಿನಲ್ಲಿ ನಾರೀ ಶಕ್ತಿ ವಂದನಾ ಮಸೂದೆಯನ್ನು ವಿರೋಧಿಸುವ ಮೂಲಕ ಮಹಿಳಾ ವಿರೋಧಿ ಕಾಂಗ್ರೆಸ್‌ನ ಅಸಲಿ ಮುಖವಾಡ ಬಯಲಾಗಿದೆ. ಇದು ನಾರಿಶಕ್ತಿಗೆ ಮಾಡಿದ ದ್ರೋಹ! ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.



ನಾರಿಶಕ್ತಿ ವಂದನಾ ಮಸೂದೆಯ ಸೋಲನ್ನು ತನ್ನ ಐತಿಹಾಸಿಕ ಜಯ ಎಂದು ಸಂಭ್ರಮಿಸುತ್ತಿರುವ ಕಾಂಗ್ರೆಸ್ ಪಕ್ಷದ ನಡೆ ಅತ್ಯಂತ ಅಮಾನವೀಯ ಮತ್ತು ಕೀಳು ಮನಸ್ಥಿತಿಯ ಪರಮಾವಧಿಯಾಗಿದೆ. ಮಹಿಳೆಯರಿಗೆ ಸಿಗಬೇಕಿದ್ದ ಸಾಂವಿಧಾನಿಕ ಹಕ್ಕು ಮತ್ತು ಅಧಿಕಾರವನ್ನು ಕಿತ್ತುಕೊಂಡು ಅದನ್ನು ಗೆಲುವು ಎಂದು ಆಚರಿಸುವುದು ಈ ದೇಶದ ನಾರಿಶಕ್ತಿಗೆ ಮಾಡುತ್ತಿರುವ ಘೋರ ಅವಮಾನವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಅವರ ಆಶಯಕ್ಕೆ ದ್ರೋಹ: ಪ್ರಜಾಪ್ರಭುತ್ವದ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಅಂದೇ ಹಿಂದು ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಆಸ್ತಿಯಲ್ಲಿ ಪಾಲು ನೀಡಬೇಕೆಂದು ಹೋರಾಡಿದ್ದರು. ಅಂದು ಅಂಬೇಡ್ಕರ್ ಅವರ ಆಶಯಗಳಿಗೆ ಅಡ್ಡಗಾಲು ಹಾಕಿದ್ದ ಕಾಂಗ್ರೆಸ್, ಇಂದು ಮೋದಿ ಸರ್ಕಾರ ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬಲು ತಂದ ಮಸೂದೆಯನ್ನು ವಿಫಲಗೊಳಿಸಿ ತನ್ನ ಹಳೆಯ ರೋಗವನ್ನು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಟೀಕಿಸಿದ್ದಾರೆ.

ಮಹಿಳಾ ಸಬಲೀಕರಣ ಕಾಂಗ್ರೆಸ್‌ಗೆ ಭಯ ತರುತ್ತಿದೆಯೇ? ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರು ಈ ದೇಶದ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲುದಾರರಾಗಬೇಕು ಎಂಬ ಉದ್ದೇಶದಿಂದ ಈ ಮಸೂದೆಯನ್ನು ಮಂಡಿಸಿತ್ತು. ಆದರೆ, ಮಹಿಳೆಯರು ಪ್ರಬಲರಾದರೆ ತಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕೆ ಧಕ್ಕೆ ಬರುತ್ತದೆ ಎಂಬ ಭಯದಿಂದ ಕಾಂಗ್ರೆಸ್ ಈ ಪ್ರಕ್ರಿಯೆಯನ್ನು ಹಳಿ ತಪ್ಪಿಸಿದೆ ಎಂದು ಆರೋಪಿಸಿದ್ದಾರೆ.

ಮಹಿಳೆಯರ ಹಕ್ಕುಗಳು ಸಮಾಧಿಯಾಗುವುದನ್ನು ತನ್ನ ಜಯ ಎಂದು ಹೆಮ್ಮೆ ಪಡುವ ಕಾಂಗ್ರೆಸ್‌ನ ಮನಸ್ಥಿತಿ ಎಂತಹ ಕ್ರೂರ ಮನಸ್ಥಿತಿ ಇರಬೇಕು? ಇದು ಕಾಂಗ್ರೆಸ್ಸಿಗರ ಮಹಿಳಾ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತಿದೆ. ಅವರ ದೃಷ್ಟಿಯಲ್ಲಿ ಮಹಿಳೆಯರು ಕೇವಲ ಘೋಷಣೆಗಳಿಗೆ ಸೀಮಿತವಾಗಬೇಕೇ ಹೊರತು ಅಧಿಕಾರಕ್ಕೆ ಬರಬಾರದು ಎಂಬುದು ಸ್ಪಷ್ಟವಾಗಿದೆ ಎಂದಿದ್ದಾರೆ. ಯಾವ ಪಕ್ಷವು ಮಹಿಳೆಯರ ಏಳಿಗೆಯನ್ನು ಕಂಡು ಸಂಭ್ರಮಿಸುವುದಿಲ್ಲವೋ, ಯಾವ ಪಕ್ಷವು ನಿಮ್ಮ ಹಕ್ಕಿನ ಸೋಲನ್ನು ತನ್ನ ಗೆಲುವು ಎಂದು ಕರೆಯುತ್ತದೆಯೋ, ಅಂತಹ ಪಕ್ಷಕ್ಕೆ ಈ ಪ್ರಜಾಪ್ರಭುತ್ವದಲ್ಲಿ ಜಾಗವಿಲ್ಲ. ಕಾಂಗ್ರೆಸ್ ಪಕ್ಷದ ಈ ದ್ರೋಹವನ್ನು ಪ್ರತಿಯೊಬ್ಬ ಮಹಿಳೆಯೂ, ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯೂ ಖಂಡಿಸಬೇಕಿದೆ ಎಂದರು.

ಕಿರುಸುದ್ದಿ

ಮಹಿಳೆಯರ ಉನ್ನತಿಗೆ ಕಾಂಗ್ರೆಸ್ ಅಡ್ಡಗಾಲು: ಬಿಜೆಪಿ

◆ **ಬೆಂಗಳೂರು:** ಸಂಸತ್ತಿನಲ್ಲಿ ಮಂಡನೆಯಾದ ನಾರಿ ಶಕ್ತಿ ವಂದನಾ ಅಧಿನಿಯಮ ಮಸೂದೆಯನ್ನು ಪ್ರತಿಪಕ್ಷ ಕಾಂಗ್ರೆಸ್ ಸೋಲಿಸಿದೆ ಎಂದು ರಾಜ್ಯ ಬಿಜೆಪಿ ಟೀಕಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಕಟುವಾಗಿ ಟೀಕಿಸಿರುವ ರಾಜ್ಯ ಬಿಜೆಪಿ, ದೇಶ ಈ ದಿನವನ್ನೆಂದೂ ಮರೆಯದು. ಭವ್ಯ ಭಾರತದ ಇತಿಹಾಸಕ್ಕೆ ಇದೊಂದು ಕರಾಳ ದಿನ ಎಂದು ಹೇಳಿದೆ. ಮಹಿಳೆಯರಿಗೆ ಶೇ.33 ಮೀಸಲಾತಿ ಒದಗಿಸುವ ಐತಿಹಾಸಿಕ ಮಸೂದೆಯನ್ನು ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ಸೋಲಿಸಿದೆ. ಮಹಿಳೆಯರ ಉನ್ನತಿಗೆ ಅಡ್ಡಗಾಲು ಹಾಕಿದ ಪ್ರತಿಪಕ್ಷಗಳನ್ನು ದೇಶದ ನಾರಿಶಕ್ತಿ ಎಂದಿಗೂ ಕ್ಷಮಿಸದು. ದೇಶದ ಹಿತದೃಷ್ಟಿಯಿಂದ, ಮಹಿಳೆಯರ ಸಬಲೀಕರಣಕ್ಕಾಗಿ ಸ್ವತಃ ದೇಶದ ಪ್ರಧಾನಿಯೇ ಮಸೂದೆಯನ್ನು ಪಕ್ಷಾತೀತವಾಗಿ ಬೆಂಬಲಿಸುವಂತೆ ಕೋರಿಕೊಂಡರೂ ರಾಜಕೀಯ ಜಿದ್ದಿಗೆ ಬಿದ್ದ ಮಹಿಳಾ ವಿರೋಧಿಗಳು ಮಸೂದೆಗೆ ಸೋಲುಣಿಸಿದ್ದಾರೆ ಎಂದು ತಿಳಿಸಿದೆ. ಇದು ಮಸೂದೆಯ ಸೋಲಲ್ಲ, ದೇಶದ ಸೋಲು. ದೇಶದ ಜನತೆ ಎಂದಿಗೂ ಕಾಂಗ್ರೆಸ್ ಪಕ್ಷ ಕ್ಷಮಿಸಲಾರರು ಎಂದು ರಾಜ್ಯ ಬಿಜೆಪಿ ಹೇಳಿದೆ.

ಅಸಹಾಯಕ ಪರಿಸ್ಥಿತಿಯಲ್ಲಿ ಸಿಎಂ: ಕೆ.ಎನ್.ರಾಜಣ್ಣ

◆ **ಬೆಂಗಳೂರು:** ಕೆಲವು ಒತ್ತಡಗಳಿಂದಾಗಿ ಸಿಎಂ ಸಿದ್ದರಾಮಯ್ಯ ಅಸಹಾಯಕ ಪರಿಸ್ಥಿತಿಯಲ್ಲಿದ್ದು, ಡಿಸಿಎಂ ಡಿ.ಕೆ ಶಿವಕುಮಾರ್ ಹಾದಿ ತಪ್ಪುತ್ತಿದ್ದಾರೆ ಎಂದು ಶಾಸಕ ಕೆ.ಎನ್ ರಾಜಣ್ಣ ಹೇಳಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಮೀರ್ ಅಹಮದ್ ಅವರನ್ನೇ ಟಾರ್ಗೆಟ್ ಮಾಡಲಾಗುತ್ತಿದೆ. ಹಿಂದೆ ವಾಲ್ಮೀಕಿ ಸಮುದಾಯವನ್ನು ಗುರಿಯಾಗಿಸಲಾಗಿತ್ತು, ಈಗ ಅಲ್ಪಸಂಖ್ಯಾತ ಸಮುದಾಯದವರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಈ ಸಂಬಂಧವಾಗಿ ತಾವು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡುವುದಾಗಿ ತಿಳಿಸಿದರು. ಪಕ್ಷದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ಹುನ್ನಾರಗಳನ್ನು ನಡೆಸುತ್ತಿವೆ. ಇಂತಹ ಸನ್ನಿವೇಶಗಳು ಬಂದಾಗ ಮುಖ್ಯಮಂತ್ರಿಗಳು ಗಟ್ಟಿಯಾಗಿ ನಿಲ್ಲಬೇಕು, ಆದರೆ ಅವರು ನಿಲ್ಲುತ್ತಿಲ್ಲ ಎಂಬುದು ತಮಗೆ ಬೇಸರ ತರಿಸಿದೆ. ಸಿದ್ದರಾಮಯ್ಯನವರು ಏನಾದ್ರೂ ಕಟ್ಟಿ ಹಾಕಿದ್ದಾರಾ, ನಾವು ಸಿದ್ದರಾಮಯ್ಯ ಅವರಿಂದ ಈ ರೀತಿ ಅಸಹಾಯಕ ಪರಿಸ್ಥಿತಿಯನ್ನು ನಿರೀಕ್ಷಿಸಿರಲಿಲ್ಲ ಎಂದು ಪ್ರಶ್ನಿಸಿದರು.

ನಂಜುಂಡೇಶ್ವರನ ಹುಂಡಿಯಲ್ಲಿ 2.11 ಕೋಟಿ ರೂ.

◆ **ಮೈಸೂರು:** ದಕ್ಷಿಣ ಕಾಶಿ ಎಂದು ಪ್ರಸಿದ್ಧಿಯಾಗಿರುವ ಜಿಲ್ಲೆಯ ನಂಜನಗೂಡಿನ ನಂಜುಂಡೇಶ್ವರನ ದೇವಾಲಯದಲ್ಲಿ ಕೇವಲ ಒಂದೇ ತಿಂಗಳಲ್ಲಿ ಬರೋಬರಿ ಎರಡು ಕೋಟಿಗೂ ಅಧಿಕ ಆದಾಯ ಸಂಗ್ರಹವಾಗಿದೆ. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಸಿಜೆ ಕೃಷ್ಣ ನೇತೃತ್ವದಲ್ಲಿ ಹುಂಡಿ ಹಣದ ಎಣಿಕೆ ಕಾರ್ಯ ನಡೆಸಲಾಯಿತು. ನಂಜನಗೂಡಿನ ಬ್ಯಾಂಕ್ ಆಫ್ ಬರೋಡ ಶಾಖೆಯ ವ್ಯವಸ್ಥಾಪಕ ಮತ್ತು ಸಿಬ್ಬಂದಿ ಹಾಗೂ ಗ್ರಾಮೀಣ ಪ್ರದೇಶದ ಸುತ್ತಮುತ್ತಲ ಮಹಿಳಾ ಸ್ತ್ರೀ ಶಕ್ತಿ ಸಂಘದ ನೂರಾರು ಮಹಿಳೆಯರು ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು. ನಂಜನಗೂಡಿನ ನಂಜುಂಡೇಶ್ವರನ ದೇವಾಲಯದ ದಾಸೋಹ ಭವನದಲ್ಲಿ 37 ಹುಂಡಿಗಳನ್ನು ಏಣಿಸಿದಾಗ, ಬರೋಬರಿ 2 ಕೋಟಿ 11 ಲಕ್ಷದ 48 ಸಾವಿರದ 728 ರೂ ಹಣ ಸಂಗ್ರಹವಾಗಿರುವುದು ಕಂಡು ಬಂದಿದೆ. ದಾಖಲೆಯ ಮೊತ್ತದ ಜೊತೆಗೆ ಭಕ್ತರಿಂದ 58 ಗ್ರಾಂ ಚಿನ್ನ, 2,ಕೆಜಿ 500 ಗ್ರಾಂ ಬೆಳ್ಳಿ, ಜತೆಗೆ 46 ವಿದೇಶಿ ಕರೆನ್ಸಿಗಳು ದೊರೆತಿವೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ

ನಾರೀಶಕ್ತಿಗೆ ಇಂಡಿ ಕೂಟ ಅಪಮಾನ

◆ **ಬೆಂಗಳೂರು:** ನಾರೀ ಶಕ್ತಿ ವಂದನಾ ಮಸೂದೆಗೆ ಸಂಸತ್ತಿನಲ್ಲಿ ಸೋಲುಂಟಾ ಗಿರುವುದು ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಯ ಕರಾಳ ದಿನವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಮಾಡಿರುವ ಅವರು, ಸಂವಿಧಾನದ ಆಶಯ ಮತ್ತು ಪ್ರಜಾ ಪ್ರಭುತ್ವದ ನೈಜ ಉದ್ದೇಶವನ್ನು ಸ್ವಾತಂತ್ರ್ಯಾನಂತರದಿಂದಲೂ ಮೆಟ್ಟಿ ನಿಲ್ಲುವುದು, ಸರ್ವಾಧಿಕಾರ ಮೆರೆಯುವುದು, ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವುದು ಕಾಂಗ್ರೆಸ್‌ನ ಸಂಸ್ಕೃತಿಯಾಗಿದೆ. ಲಕ್ಷಾಂತರ ಜನರ ತ್ಯಾಗ-ಬಲಿ ದಾನದಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿದ್ದು, ಅದನ್ನು ಸ್ವೇಚ್ಛಾಚಾರ ದಿಂದ ಕಾಂಗ್ರೆಸ್ ಬಳಸಿಕೊಂಡಿದೆ ಎಂದು ಟೀಕಿಸಿದ್ದಾರೆ.

ಸದ್ಯ ದೇಶದ ರಾಜಕೀಯ ಭೂಪಟದಲ್ಲಿ ಅಸ್ತಿತ್ವಕ್ಕಾಗಿ ತಿಣುಕಾಡುತ್ತಿರುವ ಕಾಂಗ್ರೆಸ್ ತನ್ನದೇ ಮನಸ್ಥಿತಿಯ ಇತರ ಪಕ್ಷಗಳನ್ನು ಕಟ್ಟಿಕೊಂಡು ಇಂಡಿ ಕೂಟದ ಹೆಸರಿನಲ್ಲಿ ಸ್ತ್ರೀ ಕುಲದ ಹಕ್ಕನ್ನು ಇಂದು ಲೋಕಸಭೆಯಲ್ಲಿ ಹಿಂಡಿದೆ. ದುಶ್ಯಾಸನ, ರಾವಣರ ಸಂಸ್ಕೃತಿ ನೆನಪಿಸುವ ರೀತಿಯಲ್ಲಿಇಂದು ಸಂಸತ್ತಿನಲ್ಲಿ ನಡೆದುಕೊಂಡು ಡಾ. ಅಂಬೇಡ್ಕರ್ ಅವರ ಮಹದಾಶಯ, ಅಣ್ಣ ಬಸವಣ್ಣ ಅವರು ಪ್ರತಿಪಾದಿಸಿದ ಲಿಂಗ ಸಮಾನತೆಯನ್ನು ಹತ್ತಿಕ್ಕಲು ಯತ್ನಿಸಿವೆ ಎಂದು ಆಕ್ಷೇಪಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರ್ಕಾರದ ಸ್ವಾತಂತ್ರ್ಯದ ನೈಜತೆ ಹಾಗೂ ಸಂವಿಧಾನದ ಶಕ್ತಿಯನ್ನು ನಾರಿ ಕುಲಕ್ಕೆ ಸಮರ್ಪಿಸಬೇಕೆಂಬ ಮಹತ್ವಾಕಾಂಕ್ಷೆಯ ಕಾಯ್ದೆಗೆ ಹಿನ್ನೆಡೆಯುಂಟಾಗಿರುವುದು ಕೇವಲ ತಾತ್ಕಾಲಿಕವಷ್ಟೇ. ಇಡೀ ದೇಶದ ಮಹಿಳಾಶಕ್ತಿ ಇಂಡಿ ಒಕ್ಕೂಟಕ್ಕೆ ಭವಿಷ್ಯತ್ತಿನಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ! ಅತೀ ಶೀಘ್ರದಲ್ಲಿ ಲಿಂಗ ಸಮಾನತೆ, ಪ್ರಜಾಪ್ರಭುತ್ವದ ಸುಂದರತೆ ಅರಳಲಿದೆ, ಸಂವಿಧಾನದ ಶಕ್ತಿ ಮೆರೆಯಲಿದೆ, ಮಹಿಳಾ ಮೀಸಲಾತಿ ವಿಜೃಂಭಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಪಕ್ಷಗಳಿಂದ ಅಡ್ಡಿ: ಅಶೋಕ

ದೇಶದ ಶಾಸನ ರಚನೆಯಲ್ಲಿ ಮತ್ತು ನೀತಿ ನಿರೂಪಣೆಯಲ್ಲಿ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಕಲ್ಪಿಸುವ ನಿಟ್ಟಿನಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಐತಿಹಾಸಿಕ ಅವಕಾಶವನ್ನು ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟ ಅಡ್ಡಗಟ್ಟಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಇದು ಯಾವುದೇ ಪಕ್ಷದ ಸೋಲಲ್ಲ ಅಥವಾ ಯಾವ ಸರ್ಕಾರಕ್ಕಾದ ಹಿನ್ನೆಡೆಯೂ ಅಲ್ಲ. ಇದು ದೇಶದ ಕೋಟ್ಯಂತರ ಮಹಿಳೆಯರ ಆಶಯಗಳ ಸೋಲು ಎಂದಿದ್ದಾರೆ. ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪಕ್ಷಾತೀತ ಕರೆಗೆ ಸ್ಪಂದಿಸದೇ ಮಹಿಳಾ ಸಬಲೀಕರಣಕ್ಕೆ ಕೊಡಲಿ ಪೆಟ್ಟು ಕೊಟ್ಟ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಧೋರಣೆಗೆ ದೇಶ ಇವತ್ತು ಸಾಕ್ಷಿಯಾಗಿದೆ ಎಂದು ಟೀಕಿಸಿದರು.

ಡ್ರಗ್ಸ್ ಜಾಲದ ವಿರುದ್ಧ ಕಠಿಣ ಕ್ರಮ: ಸಚಿವ ಡಾ.ಜಿ.ಪರಮೇಶ್ವರ

ಗಲಭೆರಹಿತ ರಾಜ್ಯ ನಮ್ಮದು

◆ **ಬೆಳಗಾವಿ:** ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ಕೋಮು ಗಲಭೆಗಳು ನಡೆದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಶುಕ್ರವಾರ ಬೆಳಗಾವಿ ನಗರದಲ್ಲಿ ಪೊಲೀಸ್ ಕಟ್ಟಡಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಸಮಾರಂಭ ಉದ್ಘಾಟಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಮೂರು ವರ್ಷವಾಗಿದೆ. ಇಲ್ಲಿಯವರೆಗೂ ಒಂದು ಕೋಮು ಗಲಭೆಯಾಗಿಲ್ಲ. ನಮ್ಮ ಪೊಲೀಸ್ ಇಲಾಖೆ ಒಳ್ಳೆಯ ರೀತಿ ಕೆಲಸ ಮಾಡುತ್ತಿವೆ ಎಂದರು. ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣ ದಲ್ಲಿ ಡ್ರಗ್ಸ್ ತಂದು ಹಂಚುವ ಪ್ರಯತ್ನ ನಡೆದಿದೆ. ಆ ಸಂಚನ್ನು ಮಟ್ಟಹಾಕಲು ನಮ್ಮ ಸರ್ಕಾರ ಡ್ರಗ್ಸ್ ಹಂಚುವವರು, ಸರಬರಾಜು ಮಾಡುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಮಟ್ಟಹಾಕಲಾಗಿದೆ. ಒಂದು ವರ್ಷದಲ್ಲಿ ಸಾವಿರಾರು ಕೋಟಿ ರೂ. ಡ್ರಗ್ಸ್ ಸುಟ್ಟು ಹಾಕಿದ್ದೇವೆ. ಇದನ್ನು ಸವಾಲ್ ಆಗಿ ಸ್ವೀಕರಿಸಿ ಅದನ್ನು ಮಟ್ಟ ಹಾಕುತ್ತೇವೆ ಎಂದರು.

ಸಮಾಜದ ವಿರುದ್ಧವಾಗಿ ಕೆಲಸ ಮಾಡು ತ್ತಾರೆ. ಅವರ ವಿರುದ್ಧ ಮುಲ್ಲಾಜಿಲ್ಲದೆ ಕ್ರಮ ಜರುಗಿಸಲಾಗುವುದು. ಪೊಲೀಸರು ಶಾಲಾ, ಕಾಲೇಜುಗಳಲ್ಲಿ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಾರೆ. ಡ್ರಗ್ಸ್ ವಿಚಾರದಲ್ಲಿ ನಾವು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದರು. ಮಹಾಂತೇಶ ಕೌಜಲಗಿ, ಎಡಿಜಿಪಿ ಆರ್.ಹಿತೇಂದ್ರ, ಐಜಿಪಿ ಡಾ.ಚೇತನಸಿಂಗ್ ರಾಥೋರ್, ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಉಪಸ್ಥಿತರಿದ್ದರು.



ಸೈಬರ್ ಕ್ರೈಂ ಹೆಚ್ಚಳ

ಇತ್ತೀಚಿಗೆ ಸಾಮಾನ್ಯ ಕ್ರೈಂ ಕಡಿಮೆ ಯಾಗುತ್ತಿವೆ. ಸೈಬರ್ ಕ್ರೈಂ ಹೆಚ್ಚಾಗಿವೆ. ನಿವೃತ್ತ ಹೊಂದಿದವರ ಖಾತೆಯಲ್ಲಿ ನೋಡಿ ಸೈಬರ್ ವಂಚಕರು ಹೊಂಚು ಹಾಕುತ್ತಿದ್ದಾರೆ. ಅದನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಸೈಬರ್ ಕ್ರೈಂ ತಡೆಯುವ ಪ್ರಯತ್ನ ನಮ್ಮ ತಂತ್ರಜ್ಞಾನದಿಂದ ತಡೆ ಹಿಡಿಯಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಸೈಬರ್ ಲ್ಯಾಬ್ ಮಾಡಿ ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿ ನೀಡಲು ಸೂಚನೆ ನೀಡಿದ್ದೇವೆ ಎಂದರು.

ಶೇ.33ರಷ್ಟು ಮೀಸಲಾತಿ: ಕ್ರಾಂತಿಕಾರಕ ಹೆಜ್ಜೆ

◆ **ಹೊಸದಿಲ್ಲಿ:** ಲೋಕಸಭೆ ಮತ್ತು ವಿಧಾಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇರಿಸಿರುವ ಹೆಜ್ಜೆ ಐತಿಹಾಸಿಕ ಎಂದು ಬಣ್ಣಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಈ ಮಸೂದೆಯು ಭಾರತದ ಪ್ರಜಾಪ್ರಭುತ್ವದ ಪಯಣದಲ್ಲಿ ಕ್ರಾಂತಿಕಾರಕ ಹೆಜ್ಜೆ ಎಂದಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಬೆಳಗ್ಗೆ ಮಹಿಳಾ ಮೀಸಲು ಮಸೂದೆ ಬೆಂಬಲಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷವು ನಿರಂತರವಾಗಿ ಸುಧಾರಣೆಗಳಿಗೆ ವ್ಯವಸ್ಥಿತವಾಗಿ ತಡೆಯೊಡ್ಡುತ್ತಿದೆ. ಈ ಮಸೂದೆಯನ್ನು ಬೆಂಬಲಿಸುವುದನ್ನು ಬಿಟ್ಟು ಜನರನ್ನು ದಾರಿತಪ್ಪಿಸುವ ಸಂಕಥನಗಳನ್ನು ಸೃಷ್ಟಿಸುತ್ತಿದೆ ಎಂದು ಹೇಳಿದರು. ಕಾಂಗ್ರೆಸ್ ಸೃಷ್ಟಿಸುತ್ತಿರುವ ಗೊಂದಲಗಳಿಗೆ ಅರ್ಥವಿಲ್ಲ, ಅವುಗಳನ್ನು ಜನರು ನಂಬುವುದಿಲ್ಲ ಹಾಗೂ ಸಂಕುಚಿತ ಸಂಕಥನಗಳ ಕಾಂಗ್ರೆಸ್ ವಾದವು ರಾಷ್ಟ್ರದ ವಿಶಾಲ ತಳಹದಿಯ ಭಾವನೆಯನ್ನು ಪ್ರತಿಬಿಂಬಿಸುವುದಿಲ್ಲ. ಕಾಂಗ್ರೆಸ್ ಹಾಗೂ ಡಿಎಂಕೆ ಪಕ್ಷಗಳ ವಾದಗಳು ಭಯ ಹುಟ್ಟಿಸುವ ರೀತಿಯಲ್ಲಿವೆ ಎಂದು ಹೇಳಿದರು.

ಸಂಘಟಿತ ಲವ್ ಜಿಹಾದ್ ವಿಸ್ತರಣೆ ಸಾಧ್ಯತೆ: ಸಿ.ಟಿ.ರವಿ

◆ **ಬೆಂಗಳೂರು:** ಮಹಾರಾಷ್ಟ್ರದ ನಾಸಿಕ್‌ನ ಟಿಸಿಎಸ್‌ನಲ್ಲಿ ನಡೆದ ಸಂಘಟಿತ ಲವ್ ಜಿಹಾದ್ ಪ್ರಕರಣ ಬೆಳಕಿಗೆ ಬಂದ ನಂತರ ಇಂತಹ ಸಂಘಟಿತ ಲವ್ ಜಿಹಾದ್ ಜಾಲ ಕರ್ನಾಟಕದ ಕಂಪನಿಗಳಲ್ಲೂ ವಿಸ್ತರಿಸಿರುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲೂ ಒಂದು ಎಸ್‌ಐಟಿ ರಚಿಸಿ ತನಿಖೆಯಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ನಾಸಿಕ್ ಪ್ರಕರಣ ಬಹಳ ಗಂಭೀರವಾಗಿದೆ. ಕರ್ನಾಟಕದಲ್ಲೂ ಟಿಸಿಎಸ್ ರೀತಿಯ ಅನೇಕ ಬಹುರಾಷ್ಟ್ರೀಯ ಕಂಪೆನಿಗಳಿವೆ. ಉದ್ಯೋಗಕ್ಕಾಗಿ ಬರುವ ಅಸಹಾಯಕ ಹೆಣ್ಣು ಮಕ್ಕಳ ಶೋಷಣೆ, ಲವ್ ಜಿಹಾದ್ ನಂತಹ ಮತಾಂತರದ ಜಾಲ ಇಲ್ಲೂ ಇರುವ ಸಾಧ್ಯತೆ ಇದೆ. ಆದ್ದರಿಂದ ಇವುಗಳ ಕುರಿತು ಸಮಗ್ರ ತನಿಖೆ ಆಗಬೇಕು ಎಂದರು.

ಹಾಲಿ ಅಥವಾ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಸಮಗ್ರ ತನಿಖೆ ಮಾಡಬೇಕು. ಆಗ ಸತ್ಯಾಸತ್ಯತೆ ಹೊರಬರಲಿದೆ. ಮತಾಂತರ ಮತ್ತು ಮತಾಂತರದ ನಂತರ ಇಡೀ ದೇಶವನ್ನೇ ದುರ್ಬಲಗೊಳಿಸುವ ಸಂಚು ತಿಳಿಯಲಿದೆ. ಮುಖ್ಯಮಂತ್ರಿಗಳು ಈ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಪೂರ್ವಕ ಮನವಿ ಮಾಡಿದರು.

ನಾಸಿಕ್ ಪೊಲೀಸರು ಒಳ್ಳೆಯ ಕೆಲಸ ಮಾಡಿದ್ದಾರೆ. ಪ್ರಕರಣವನ್ನು ಲಘುವಾಗಿ ಪರಿಗಣಿಸದೆ ವಿಶೇಷ ಕಾರ್ಯಪಡೆ ಮಾಡಿ ಉದ್ಯೋಗಿಗಳಾಗಿ ಸೇರಿ ವ್ಯವಸ್ಥಿತ ಜಾಲವನ್ನು ಬಯಲಿಗೆಳೆದರು. ಈ ರೀತಿ ಸಂಘಟಿತ ಜಾಲ ವಿದೇಶಿ ನೆಟ್‌ವರ್ಕ್ ಹೊಂದಿದೆ ಎಂಬ ಪ್ರಾಥಮಿಕ ವರದಿಯಿದೆ. ಇದು ನಾಸಿಕ್‌ಗೆ ಮಾತ್ರ ಸೀಮಿತವೇ ಅಥವಾ ದೇಶದ ಉದ್ದಗಲಕ್ಕೂ ಹರಡಿದೆಯೇ ಎಂಬ ಬಗ್ಗೆ ತನಿಖೆಯ ಅವಶ್ಯಕತೆ ಇದೆ. ಸರ್ಕಾರ ಈ ನಿಟ್ಟಿನಲ್ಲಿ ಕೈ ಕಟ್ಟಿ ಕೂರಬಾರದು. ಈ ಲವ್ ಜಿಹಾದ್ ಪ್ರಕರಣ ಕೇವಲ ನಾಸಿಕ್ ಮತ್ತು ಟಿಸಿಎಸ್‌ಗೆ ಸೀಮಿತವಾಗಿದೆ ಎಂದು ಭಾವಿಸಬಾರದು ಎಂದು ಸಿ.ಟಿ.ರವಿ ಹೇಳಿದರು.

ದ.ಕ. ಜಿಲ್ಲಾ ಸಿವಿಲ್ ಗುತ್ತಿಗೆದಾರರ ಸಂಘ ಆರೋಪ

ದ.ಕ. ಜಿಲ್ಲೆಯಲ್ಲಿ ಕಟ್ಟಡ ಕಾಮಗಾರಿ ಕ್ಷೇತ್ರ ತಲ್ಲಣ

◆ **ಮಂಗಳೂರು:**ದೇಶದ ವಿವಿಧ ರಾಜ್ಯಗಳಲ್ಲಿ ಚುನಾವಣೆ, ಎಸ್‌ಐಆರ್ ಪ್ರಕ್ರಿಯೆಗಳು ನಡೆಯುತ್ತಿರುವ ಕಾರಣ ಹೊರ ರಾಜ್ಯಗಳ ಕುಶಲಕರ್ಮಿ ಕಾರ್ಮಿಕರು ತಮ್ಮ ಊರಿಗೆ ತೆರಳಿರುವ ಕಾರಣ ದ.ಕ. ಜಿಲ್ಲೆಯಲ್ಲಿ ಕಟ್ಟಡ ಕಾಮಗಾರಿ ಕ್ಷೇತ್ರ ತಲ್ಲಣಗೊಂಡಿದೆ. ಕಾರ್ಮಿಕರು ಹಾಗೂ ಕಚ್ಚಾ ವಸ್ತುಗಳ ಅಭಾವದಿಂದ ನಿರ್ಮಾಣ ಕ್ಷೇತ್ರ ಸ್ತಬ್ಧಗೊಳ್ಳುವ ಆತಂಕ ಎದುರಾಗಿದೆ ಎಂದು ದ.ಕ. ಜಿಲ್ಲಾ ಸಿವಿಲ್ ಗುತ್ತಿಗೆದಾರರ ಸಂಘ ಆರೋಪಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮಹಾಬಲ ಕೊಟ್ಟಾರಿ, ಕಳೆದ ಕೆಲವು ವರ್ಷಗಳಿಂದ ನಿರ್ಮಾಣ ಕ್ಷೇತ್ರ ಅಗತ್ಯ ಮೂಲವಸ್ತುಗಳಾ ಕೆಂಪುಕಲ್ಲು, ಮರಳು, ಮತ್ತು ಎಂಸ್ಯಾಂಡ್ ಅಭಾದಿಂದ ತತ್ತರಿಸುತ್ತಿದೆ. ಇದೀಗ ಉತ್ತರ ಭಾರತ ಕೆಲವು ರಾಜ್ಯಗಳಲ್ಲಿ ನಡೆಯಲಿರುವ ಮತಪಟ್ಟಿ ಪರಿಷ್ಕರಣೆ, ಚುನಾವಣೆ ಹಾಗೂ ಹಬ್ಬದ ಕಾರಣ ಊರಿಗೆ ತೆರಳಿರುವ ಕಾರ್ಮಿಕರು ಹಿಂತಿರುಗದಿರುವುದು ಕ್ಷೇತ್ರಕ್ಕೆ ಮತ್ತಷ್ಟು ಹೊಡೆತ ನೀಡಿದೆ ಎಂದರು.

ದ.ಕ. ಜಿಲ್ಲೆಯಲ್ಲಿ ಬಹುತೇಕವಾಗಿ ಪಶ್ಚಿಮ ಬಂಗಾಲ ಸೇರಿದಂತೆ ಉತ್ತರ ಭಾರತದ ಎರಡೂವರೆ ಲಕ್ಷಕ್ಕೂ ಅಧಿಕ ಕಾರ್ಮಿಕರಿದ್ದಾರೆ. ಶೇ. 90ರಷ್ಟು ಕಾರ್ಮಿಕರು ಹಬ್ಬ, ಮತದಾನ ಹಾಗೂ ಇತರ ಕಾರಣದಿಂದ ಊರಿಗೆ ತೆರಳಿದವರು ವಾಪಸಾಗಿಲ್ಲ. ಪ್ಲಾಸ್ಟರಿಂಗ್, ಬಾರ್ಬೆಂಡಿಗ್‌ನಂತಹ ಕುಶಲಕರ್ಮಿ ಕಾರ್ಯಕ್ಕೆ ಈ ಕಾರ್ಮಿಕರನ್ನೇ ನಿರ್ಮಾಣ ಕ್ಷೇತ್ರ ಅವಲಂಬಿಸಿದೆ ಎಂದು ಅವರು ಹೇಳಿದರು.

ಸರಕಾರದ ಕಟ್ಟುನಿಟ್ಟಿನ ಕ್ರಮದಿಂದಾಗಿ ಕೆಂಪು ಕಲ್ಲು ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗುತ್ತಿಲ್ಲ. ನಾನ್ ಸಿಆರ್‌ಝೆಡ್ ಪ್ರದೇಶದ ಮರಳು ಅರ್ಧಕರ್ಧ ಉಪಯೋಗಕ್ಕೆ ಬರುವುದಿಲ್ಲ. ಎಂಸ್ಯಾಂಡ್ ಕೂಡಾ ಕೊರತೆ ಇರುವ ಕಾರಣ ನಿರ್ಮಾಣ ಕ್ಷೇತ್ರಕ್ಕೆ ತೊಂದರೆಯಾಗಿದೆ. ಇದರಿಂದ ಗುತ್ತಿಗೆದಾರರು ವಹಿಸಿಕೊಂಡ ಕಾಮಗಾರಿಗಳನ್ನು ನಿಗದಿತ ಸಮಯಕ್ಕೆ ಪೂರ್ತಿಗೊಳಿಸಲಾಗದೆ ಕಟ್ಟಡ ಮಾಲಕರ ಜತೆ ಕಾನೂನು ಸಂಘರ್ಷ ಎದುರಿಸುವ ಪರಿಸ್ಥಿತಿ ಎದುರಾಗಿದೆ. ದ.ಕ. ಜಿಲ್ಲಾಡಳಿತ ಹಾಗೂ ರಾಜ್ಯ ಸರಕಾರ ಕಚ್ಚಾ ವಸ್ತುಗಳನ್ನು ಬೇಡಿಕೆಗೆ ಅನುಗುಣವಾಗಿ ಪೂರೈಸಲು ಕ್ರಮ ವಹಿಸಬೇಕು. ಕಾರ್ಮಿಕರ ಕೊರತೆ ನೀಗಿಸಲು ಸ್ಥಳೀಯ ಕಾರ್ಮಿಕರಿಗೆ ಉತ್ತೇಜ ಕಾರ್ಯಕ್ರಮ ವಹಿಸಬೇಕು ಇಂಜಿನಿಯರ್ಸ್ ಅಸೋಸಿಯೇಶನ್‌ನ ಉಜ್ವಲ್ ಡಿಸೋಜಾ ಆಗ್ರಹಿಸಿದರು.

ಗೋಷ್ಠಿಯಲ್ಲಿ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ದಿನಕರ್, ಕಾರ್ಯದರ್ಶಿ ಅಶೋಕ್ ಕುಳಾಯಿ, ಸತೀಶ್ ಜೋಗಿ, ಅರುಣ್ ರಾಜ್, ಕೆನರಾ ಬಿಲ್ಡರ್ಸ್ ಅಸೋಸಿಯೇಶನ್‌ನ ವಿನಾಯಕ ಪೈ ಮೊದಲಾದವರು ಉಪಸ್ಥಿತರಿದ್ದರು.

ಬೆಳ್ಳಂಬೆಳಗ್ಗೆ ಹಿಂಡಲಗಾ ಜೈಲಿಗೆ ಡಿಜಿಪಿ ಭೇಟಿ

◆ **ಬೆಳಗಾವಿ:** ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದ ಮೇಲೆ ಶುಕ್ರವಾರ ಬೆಳ್ಳಂಬೆಳಗ್ಗೆ ಬಂಧಿಖಾನೆ ಡಿಜಿಪಿ ಅಲೋಕ್ ಕುಮಾರ್ ಅವರು ತಮ್ಮ ತಂಡದೊಂದಿಗೆ ಅನಿರೀಕ್ಷಿತ ದಾಳಿ ನಡೆಸಿದ್ದಾರೆ.

ಜೈಲಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಲು ನಡೆಸಿದ ಈ ಕಾರ್ಯಾಚರಣೆ ಈಗ ರಾಜ್ಯಾದ್ಯಂತ ಸಂಚಲನ ಮೂಡಿಸಿದೆ. ಬಂಧಿಖಾನೆ ಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ಬೆಳಗಾವಿಯ ಹಿಂಡಲಗಾ ಕೇಂದ್ರದ ಕಾರಾಗೃಹದ ಮೇಲೆ ದಾಳಿ ನಡೆಸಲಾಗಿದೆ. ದಾಳಿಯಲ್ಲಿ ಸುಮಾರು 52 ಜನ ಪೊಲೀಸ್ ಸಿಬ್ಬಂದಿ ಹಾಗೂ ಬೆಳಗಾವಿ ನಗರ ಪೊಲೀಸರ ಒಳಗೊಂಡ ತಂಡವು ಎರಡು ಶ್ವಾನಗಳ ಸಹಾಯದೊಂದಿಗೆ ಪ್ರತಿ ಸೆಲ್‌ಗಳನ್ನು ಕೂಲಂಕಷವಾಗಿ ತಪಾಸಣೆ ನಡೆಸಿತು.



ಸತತ 2 ಗಂಟೆ ನಡೆದ ಈ ಮಹತ್ವದ ಕಾರ್ಯಾಚರಣೆಯಲ್ಲಿ ಕೈದಿಗಳ ಬಳಿ ಇದ್ದ ಒಂದು ಸಿಗರೆಟ್ ಪ್ಯಾಕೆಟ್ ಹಾಗೂ ಅನಧಿಕೃತವಾಗಿ ಬಳಸುತ್ತಿದ್ದ ಜಿಮ್ ಡೆಂಬಲ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಜೈಲಿನೊಳಗೆ ಇಂತಹ ವಸ್ತುಗಳು ಪತ್ತೆಯಾಗಿರುವುದು ಸುರಕ್ಷತಾ ಲೋಪವನ್ನು ಎತ್ತಿ ತೋರಿಸಿದ್ದು, ಕರ್ತವ್ಯ ನಿರ್ಲಕ್ಷ್ಯ ತೋರಿದ ಸಿಬ್ಬಂದಿಯನ್ನು ಡಿಜಿಪಿ ತರಾಟೆಗೆ ತೆಗೆದುಕೊಂಡಿದ್ದಾರೆ. ಜೈಲಿನಲ್ಲಿ ಅಕ್ರಮ ತಡೆಯುವಲ್ಲಿ ವಿಫಲರಾದ ಜೈಲಾಧಿಕಾರಿಗಳಿಗೆ ಡಿಜಿಪಿ ಅಲೋಕ್ ಕುಮಾರ್ ಸ್ಥಳದಲ್ಲೇ ಚಳಿ ಬಿಡಿಸಿದ್ದಾರೆ. ದಾಳಿಯ ಬಳಿಕ ಮರಳಿ ಹೋಗುವಾಗ ತಪ್ಪಿತಸ್ಥ ಜೈಲಾಧಿಕಾರಿಗಳಿಗೆ ನಾನು ಖಂಡಿತವಾಗಿಯೂ ಶಿಕ್ಷೆ ನೀಡುತ್ತೇನೆ ಎಂದು ಖಡಕ್ ಎಚ್ಚರಿಕೆ ನೀಡುವ ಮೂಲಕ ಅಧಿಕಾರಿಗಳಲ್ಲಿ ನಡುಕ ಹುಟ್ಟಿಸಿದ್ದಾರೆ.

ಮನ್ ಕೀ ಬಾತ್‌ನಲ್ಲಿ ಕಲಬುರಗಿ ಖಡಕ್ ರೊಟ್ಟಿ ಕೊಂಡಾಡಿದ ಪ್ರಧಾನಿ ನರೇಂದ್ರ ಮೋದಿ

ಅಮೆರಿಕಕ್ಕೆ ಕಲಬುರಗಿ ಜಿಲ್ಲೆಯ ಖಡಕ್ ರೊಟ್ಟಿ!

▸ ರಾಚಪ್ಪಾ ಜಂಬಗಿ

ದಿಗಂತ ವಿಶೇಷ

◆ **ಕಲಬುರಗಿ:** ರೊಟ್ಟಿ ತಿಂದವ ಗಟ್ಟಿ ಎಂಬ ಜನಪ್ರಿಯಗಾದೆ ಮಾತಿನ ಅರ್ಥವನ್ನು ಜೀವಂತಗೊಳಿಸುವಂತೆ, ಕಲಬುರಗಿಯ ಖಡಕ್ ಜೋಳದ ರೊಟ್ಟಿ ಇದೀಗ ಜಾಗತಿಕ ವೇದಿಕೆಗೆ ಹೆಜ್ಜೆ ಇಡುತ್ತಿದೆ.

ದೇಶದ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮನ್ ಕೀ ಬಾತ್‌ನ 123ನೇ ಸಂಚಿಕೆಯಲ್ಲಿ ಕಲಬುರಗಿ ಮಹಿಳೆಯರ ಸ್ವಾವಲಂಬಿ ಬದುಕಿಗೆ ಉತ್ತೇಜನ ನೀಡುವ ಕಲಬುರಗಿ ರೊಟ್ಟಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ ಬಳಿಕ, ಇದರ ಖ್ಯಾತಿ ಮತ್ತಷ್ಟು ಹೆಚ್ಚಾಗಿದೆ.

ಸಾಂಪ್ರದಾಯಿಕ ರುಚಿ, ಪೌಷ್ಟಿಕತೆ ಮತ್ತು ಮಹಿಳಾ ಸಬಲೀಕರಣದ ಸಂಕೇತವಾದ ಕಲಬುರಗಿ ರೊಟ್ಟಿ ಇದೀಗ ಅಮೆರಿಕಾ, ಯುಕೆ ಮತ್ತು ಆಸ್ಟ್ರೇಲಿಯಾ ಸೇರಿದಂತೆ ವಿದೇಶಿ ರಾಷ್ಟ್ರಗಳಿಗೂ ಸರಬರಾಜಾಗಲು ಸಜ್ಜಾಗುತ್ತಿದೆ.



ಗ್ರಾಮೀಣ ಮಹಿಳೆಯರ ಕೈಚಳಕ ಮತ್ತು ಪರಿಶ್ರಮದ ಫಲವಾಗಿ ಬೆಳೆದ ಈ ಉತ್ಪನ್ನ, ಸ್ಥಳೀಯತೆ ಮೀರಿಸಿ ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಗುರುತನ್ನು ಮೂಡಿಸಲು ಸನ್ನದ್ಧವಾಗಿದ್ದು, ಕಲಬುರಗಿ ರೊಟ್ಟಿಯ ಈ ಸಾಧನೆ ಕೇವಲ ಆಹಾರ ಪದಾರ್ಥದ ಯಶಸ್ಸಲ್ಲ, ಮಹಿಳೆಯರ ಆತ್ಮನಿರ್ಭರತೆಗೆ ಹೊಸ ದಿಕ್ಕು ತೋರಿಸುವ ಪ್ರೇರಣಾದಾಯಿ ಹೆಜ್ಜೆಯಾಗಿದೆ.

ಅಮೆರಿಕಾದ 5 ಎಂಜಿನಿಯರ್ಸ್ ಒಪ್ಪಿಗೆ

ಅಮೆರಿಕಾದ ಐದು ಸಾಫ್ಟವೇರ್ ಎಂಜಿನಿಯರ್ಸ್ ಸದ್ಯಕ್ಕೆ ಬೆಂಗಳೂರಿನಲ್ಲಿದ್ದು, ಕಲಬುರಗಿ ರೊಟ್ಟಿ ಸ್ವಾದ ಚೆಕ್ ಮಾಡಲು ಈಗಾಗಲೇ ಅವರಿಗೆ ಕಲಬುರಗಿ ರೊಟ್ಟಿಯ ಐದು ಬಾಕ್ಸ್ ಕಳುಹಿಸಲಾಗಿದೆ. ರೊಟ್ಟಿಯ ಕುರಿತು ಒಪ್ಪಿಗೆ ಸೂಚಿಸಿದ್ದಾರೆ. ರೊಟ್ಟಿಯ ರುಚಿ ಚೆಕ್ ಮಾಡಿದ ಬಳಿಕ ಆರ್ಡರ್ ಪಕ್ಕಾವಾದಲ್ಲಿ ಕಂಪನಿ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು ಪ್ರೀಮಿಯಂ ದರದ ಬೇಡಿಕೆಯೊಂದಿಗೆ ಮುಂಬರುವ ದಿನಗಳಲ್ಲಿ ಆಯಾ ದೇಶಕ್ಕೆ 10 ಸಾವಿರ ರೊಟ್ಟಿಗಳ ಮೊದಲ ಕನ್ಸೈನಮೆಂಟ್ ಹೋಗಲಿದೆ. ಇದೀಗ ನಾವು 150 ರೂಪಾಯಿಗೆ ಒಂದು ಬಾಕ್ಸ್ ಮಾರಾಟ ಮಾಡುತ್ತಿದ್ದು, ಕೋಟನೂರ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕಲಬುರಗಿ ರೊಟ್ಟಿ ಪ್ಯಾಕಿಂಗ್ ಕೇಂದ್ರ ಮಾಡಲಾಗುತ್ತಿದೆ. ಸಿಎಸ್‌ಆರ್ ಅನುದಾನದಡಿ ಎಚ್‌ಡಿಎಫ್‌ಸಿ ಬ್ಯಾಂಕ್ 55 ಲಕ್ಷ ರೂ. ಮೌಲ್ಯದ ಯಂತ್ರ ಕೊಡುತ್ತಿದೆ. ನಮ್ಮಲ್ಲಿನ ಎಕ್ಸಿಸ್ಟಿಂಗ್ ಆಫೀಸ್ ಸೆಟ್ ಅಫ್ ರಿನ್ನೋವೇಷನ್‌ಗೆ 30 ಲಕ್ಷ ಖರ್ಚು ಮಾಡಲಾಗುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಹೊಸ ದಿಗಂತಕ್ಕೆ ತಿಳಿಸಿದರು.

ಆಸ್ಥಮ್ ಎಕ್ಸ್‌ಪೋರ್ಟ್ ಕಂಪನಿಯಿಂದ ಸರಕು: ವಿಶ್ವದ 25 ಕಡೆಗಳಲ್ಲಿ ತಮ್ಮ ಇಂಪೋರ್ಟ್ ಆ್ಯಂಡ್ ಎಕ್ಸ್‌ಪೋರ್ಟ್ ವ್ಯಾಪಾರ ಹೊಂದಿರುವ ಕಲಬುರಗಿ ಮೂಲದವರದೇ ಆಗಿರುವ ಆಸ್ಥಮ್ ಎಕ್ಸ್‌ಪೋರ್ಟ್ ಆ್ಯಂಡ್ ಇಂಪೋರ್ಟ್ ಕಂಪನಿಯವರು ಸದ್ಯಕ್ಕೆ ಭಾರತದಲ್ಲಿದ್ದು, ಅವರೊಂದಿಗೆ ಕಳೆದ ಮೂರು ತಿಂಗಳಿಂದ ಮಾತುಕತೆ ನಡೆಸಿ ಕಲಬುರಗಿಯ ಖಡಕ್ ರೊಟ್ಟಿಗೆ ವಿಶ್ವಮಟ್ಟದಲ್ಲಿ ಸರಕು ಮಾಡಬೇಕೆಂದು ಮಾತುಕತೆ ನಡೆದಿದೆ.

ಪ್ರಾರಂಭಿಕದಲ್ಲಿ ಮೂರು ರಾಷ್ಟ್ರಗಳಾದ ಯುಎಸ್‌ಎ, ಯುಕೆ ಹಾಗೂ ಆಸ್ಟ್ರೇಲಿಯಾಗೆ ರೊಟ್ಟಿಯ ಕ್ವಾಲಿಟಿ ಚೆಕ್ ಮಾಡಲು ತಲಾ 100 ರೊಟ್ಟಿ, 10 ಬಾಕ್ಸ್(ಒಂದು ಬಾಕ್ಸ್‌ನಲ್ಲಿ 10 ರೊಟ್ಟಿ) ಸ್ಯಾಂಪಲ್‌ನ್ನು ಮುಂದಿನ ವಾರ ಫ್ಲೈಟ್ ಮೂಲಕ ಕಳಿಹಿಸಲಾಗುತ್ತಿದೆ.



ಕಲಬುರಗಿ ರೊಟ್ಟಿ ಈಗಾಗಲೇ ಆನ್‌ಲೈನ್‌ನಲ್ಲಿ ಲಭ್ಯವಿದೆ. ಇದೀಗ ವಿದೇಶಕ್ಕೆ ಕಳಿಸಲು ಹೊಸ ಹೆಜ್ಜೆ ಇಡಲಾಗುತ್ತಿದ್ದು, ಅಮೆರಿಕಾ ಸೇರಿ 3 ರಾಷ್ಟ್ರಕ್ಕೆ 10 ಬಾಕ್ಸ್‌ಗಳಂತೆ 100 ರೊಟ್ಟಿ ಸ್ಯಾಂಪಲ್ ಕಳಿಸಲಾಗುತ್ತಿದೆ. ಬಳಿಕ ಆರ್ಡರ್ ಬಂದರೆ 10 ಸಾವಿರದ ಮೊದಲ ಕನ್ಸೈನಮೆಂಟ್ ಹೋಗಲಿದೆ. ವಿದೇಶದಿಂದ ಆರ್ಡರ್ ಬರುವ ವಿಶ್ವಾಸ ನಮಗಿದೆ.

■ **ಪ್ರಿಯಾಂಕ್ ಖರ್ಗೆ,** ಉಸ್ತುವಾರಿ ಸಚಿವ, ಕಲಬುರಗಿ

ಕಲಬುರಗಿ ರೊಟ್ಟಿ ನಿರೀಕ್ಷೆಗೂ ಮೀರಿ ಯಶಸ್ಸು ಕಾಣುತ್ತಿದೆ. ವೆಬ್‌ಸೈಟ್‌ನಲ್ಲಿ ಸಹ ಸಾಕಷ್ಟು ಜನರಿಂದ ಕರೆ ಬರುತ್ತಿದ್ದು, ನಾವು ಇದೀಗ ವಿದೇಶಕ್ಕೆ ಸರಕು ಮಾಡಲು ಎಕ್ಸ್‌ಪೋರ್ಟ್ ಪರವಾನಗಿಗಾಗಿ ಪ್ರಯತ್ನ ನಡೆಸಿದ್ದೇವೆ. ಪ್ರಧಾನಿ ಹಾಗೂ ಸಿಎಂ ಸಹ ಕಲಬುರಗಿ ರೊಟ್ಟಿ ಕುರಿತು ಪ್ರಶಂಸೆ ವ್ಯಕ್ತಪಡಿಸಿ, ಮಹಿಳೆಯರಿಗೆ ಉತ್ತೇಜನ ನೀಡಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಲಬುರಗಿ ರೊಟ್ಟಿ ಸದ್ದಾಗಿದ್ದು ಖುಷಿ ನೀಡುತ್ತಿದೆ.

■ **ಫೌಜಿಯಾ ತರನ್ನುಮ್,**
ಡಿಸಿ,ಕಲಬುರಗಿ



ಸಂಪಾದಕೀಯ

ಮಹಿಳಾ ಮೀಸಲು: ತಪ್ಪಿದ ಐತಿಹಾಸಿಕ ಅವಕಾಶ

ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ.33 ಮೀಸಲು ನೀಡುವ ಸಂವಿಧಾನ ತಿದ್ದುಪಡಿ ಮಸೂದೆ ಸೋಲು ಕಂಡಿರುವುದು ಕೇವಲ ಒಂದು ಶಾಸನಾತ್ಮಕ ಘಟನೆ ಮಾತ್ರವಲ್ಲ; ಅದು ದೇಶದ ರಾಜಕೀಯ ಮನೋಭಾವವನ್ನೇ ಪ್ರತಿಬಿಂಬಿಸುವ ಸಂಗತಿಯಾಗಿದೆ. ಮಹಿಳೆಯರ ರಾಜಕೀಯ ಪ್ರತಿನಿಧಿತ್ವವನ್ನು ಹೆಚ್ಚಿಸುವ ಮಹತ್ವದ ಅವಕಾಶವನ್ನು ವಿಪಕ್ಷಗಳು ಕೈಚೆಲ್ಲಿರುವುದು ದುಃಖಕರ ಮತ್ತು ಚಿಂತಾಜನಕ. ಭಾರತದ ಜನಸಂಖ್ಯೆಯ ಅರ್ಧ ಭಾಗ ಮಹಿಳೆಯರದ್ದಾಗಿದ್ದರೂ, ಅವರ ಪಾಲ್ಗೊಳ್ಳುವಿಕೆ ಶಾಸನಮಂಡಳಿಗಳಲ್ಲಿ ತೀರಾ ಕಡಿಮೆ. ಈ ಅಸಮತೋಲನವನ್ನು ಸರಿಪಡಿಸುವ ನಿಟ್ಟಿನಲ್ಲಿ ಮಹಿಳಾ ಮೀಸಲು ಮಸೂದೆ ಒಂದು ಐತಿಹಾಸಿಕ ಹೆಜ್ಜೆಯಾಗಬಹುದಿತ್ತು. ಆದರೆ, ರಾಜಕೀಯ ಲೆಕ್ಕಾಚಾರಗಳ ನಡುವೆ ಈ ಮಹತ್ವದ ಸುಧಾರಣೆ ತಡೆಯಲ್ಪಟ್ಟಿರುವುದು, ಮಹಿಳಾ ಸಬಲೀಕರಣದ ವಿಷಯದಲ್ಲಿ ವಿಪಕ್ಷಗಳ ನಿಷ್ಠೆಯ ಮೇಲೆ ಪ್ರಶ್ನೆಗಳನ್ನು ಎಬ್ಬಿಸುತ್ತದೆ.

ಮಹಿಳೆಯರಿಗೆ ರಾಜಕೀಯ ಅವಕಾಶ ಕಲ್ಪಿಸುವುದು ತಾತ್ವಿಕವಾಗಿ ಎಲ್ಲರೂ ಒಪ್ಪಿಕೊಂಡಿರುವ ವಿಷಯವಾಗಿದ್ದರೂ, ಅಂತಿಮ ಕ್ಷಣದಲ್ಲಿ ಅದಕ್ಕೆ ಬೆಂಬಲ ನೀಡದಿರುವುದು ದ್ವಂದ್ವ ನೀತಿಯನ್ನು ತೋರಿಸುತ್ತದೆ. 'ಮಹಿಳಾ ಹಕ್ಕುಗಳು' ಎಂಬ ಘೋಷಣೆಗಳು ಕೇವಲ ರಾಜಕೀಯ ಘೋಷಣೆಗಳಾಗಿಯೇ ಉಳಿಯಬಾರದು; ಅವು ಕಾರ್ಯರೂಪಕ್ಕೆ ಬರಬೇಕಾದ ಸಮಯ ಇದು. ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಿದರೆ ಆಡಳಿತ ವ್ಯವಸ್ಥೆಯಲ್ಲಿ ಗುಣಮಟ್ಟದ ಬದಲಾವಣೆ ಸಾಧ್ಯವಾಗುತ್ತದೆ ಎಂಬುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ. ಗ್ರಾಮ ಪಂಚಾಯಿತಿಗಳಿಂದ ಹಿಡಿದು ರಾಜ್ಯ ಮತ್ತು ರಾಷ್ಟ್ರ ಮಟ್ಟದವರೆಗೆ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ತೋರಿದ್ದಾರೆ. ಹೀಗಿರುವಾಗ, ಅವರಿಗೆ ಶಾಸನಮಂಡಳಿಗಳಲ್ಲಿ ಸಮರ್ಪಕ ಅವಕಾಶ ನೀಡುವುದು ನ್ಯಾಯಸಮ್ಮತವೂ ಅಗತ್ಯವೂ ಆಗಿದೆ.

ಈ ಹಿನ್ನೆಲೆಯಲ್ಲಿ, ಸರ್ಕಾರ ಮಹಿಳಾ ಮೀಸಲುಗಾಗಿ ತನ್ನ ಹೋರಾಟವನ್ನು ಮುಂದುವರಿಸುವ ನಿರ್ಧಾರ ಸ್ವಾಗತಾರ್ಹ. ಆದರೆ, ಇದೇ ಸಂದರ್ಭದಲ್ಲಿ ವಿಪಕ್ಷಗಳೂ ತಮ್ಮ ನಿಲುವನ್ನು ಮರುಪರಿಶೀಲಿಸಬೇಕು. ಮಹಿಳೆಯರ ಹಿತಾಸಕ್ತಿಯನ್ನು ರಾಜಕೀಯದ ಪೆಟ್ಟಿಗೆಯಲ್ಲಿ ಸೀಮಿತಗೊಳಿಸದೆ, ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ವಿಚಾರಿಸುವ ಅಗತ್ಯವಿದೆ. ಒಟ್ಟಾರೆಯಾಗಿ, ಮಹಿಳಾ ಮೀಸಲು ಮಸೂದೆ ಸೋಲು ಕಂಡಿರುವುದು ಒಂದು ಅವಕಾಶ ಕಳೆದುಕೊಂಡಂತೆ ಆಗಿದೆ. ಆದರೆ ಇದು ಅಂತಿಮವಾಗಬಾರದು. ದೇಶದ ರಾಜಕೀಯ ವ್ಯವಸ್ಥೆ ಮಹಿಳೆಯರಿಗೆ ನ್ಯಾಯ ಒದಗಿಸುವ ದಿಸೆಯಲ್ಲಿ ಮತ್ತೊಮ್ಮೆ ಒಗ್ಗೂಡಬೇಕು. ಮಹಿಳಾ ಸಬಲೀಕರಣವು ಮಾತಿನ ಮಟ್ಟದಲ್ಲಿ ಅಲ್ಲ, ಕಾರ್ಯರೂಪದಲ್ಲಿ ಸಾಧನೆಯಾಗಬೇಕಾದ ಕಾಲ ಇದು.

ಸೂರ್ಯ ರೇಖೆ ಮತ್ತು ಚಕ್ರಗಳು

ಪೂರ್ಣ ಪರಿಪೂರ್ಣ
ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಮೊದಲನೆಯದಾಗಿ ಸೂರ್ಯ ರೇಖೆ ಮತ್ತು ಚಕ್ರಗಳು ಈ ಎರಡೂ ಸಂಗತಿಗಳು ನಿಮ್ಮೊಳಗಿನ ಶಕ್ತಿಯನ್ನು ಉದ್ದೀಪನಗೊಳಿಸುತ್ತದೆ. ನಿಮಗೊಂದು ತೇಜಸ್ಸನ್ನು ನೀಡುತ್ತದೆ. ನಿಮ್ಮೊಳಗೆ ಸದಾ ಚೈತನ್ಯ ಹರಿಯುವಂತೆ ಮಾಡುತ್ತದೆ. ಒಮ್ಮೆ ಇವೆಲ್ಲಾ ಸಾಧ್ಯವಾದರೆ ಮುಂದೆಂದೂ ನೀವು ಹಿಂತಿರುಗಿ ನೋಡುವುದಿಲ್ಲ.

ಆತ್ಮವಿಶ್ವಾಸ ಮತ್ತು ಪ್ರಕಾಶಗೊಳ್ಳುವುದು

ನಿಮಗೆ ತುಂಬಾ ಆತ್ಮವಿಶ್ವಾಸ ಇದೆ, ಆದರೆ ಅದನ್ನು ವ್ಯಕ್ತಪಡಿಸುವ ಮಾರ್ಗ ತಿಳಿದಿಲ್ಲ. ಅದು ಪ್ರಕಾಶಗೊಳ್ಳಬೇಕು ಎಂದಾದರೆ ನಿಮ್ಮ ಕುಂಡಲಿನಿ ಜಾಗೃತವಾಗಬೇಕು. ಅದು ಜಾಗೃತವಾಗಿದೆ ಎನ್ನುವುದನ್ನು ನಿಮ್ಮ ಕೈಯಲ್ಲಿರುವ ಸೂರ್ಯ ರೇಖೆಯ ದಪ್ಪ, ಆಳ ಮತ್ತು ಸ್ಪಷ್ಟತೆ ತೋರಿಸುತ್ತದೆ. ಆದಕ್ಕಾಗಿ ನಿಮಗೆ ಕೇವಲ ಆತ್ಮವಿಶ್ವಾಸ ಇದ್ದರೆ ಅದನ್ನು ಧೈರ್ಯವಾಗಿ ಅಭಿವ್ಯಕ್ತಗೊಳಿಸುವ ಸಾಮರ್ಥ್ಯವನ್ನು ಪಡೆಯಬೇಕು. ಆದಕ್ಕಾಗಿ ಕುಂಡಲಿನಿ ಶಕ್ತಿಯನ್ನು ಗಳಿಸಲೇ ಬೇಕಾಗುತ್ತದೆ. ಯಾರ ಸೂರ್ಯ ರೇಖೆಯು ಹೆಚ್ಚು ಹೆಚ್ಚು ಉದ್ದವಾಗಿದೆಯೋ ಅವರಲ್ಲಿ ಇಂತಹಾ ಪರಿಣಾಮ ಸ್ಪಷ್ಟವಾಗಿ ಗೋಚರಿಸುತ್ತದೆ. ಅಂತಹಾ ವ್ಯಕ್ತಿಯನ್ನು ನೀವು ನೋಡಿದ ಕೂಡಲೇ ಅವರ ಪ್ರಭಾವಕ್ಕೆ ಬೀಳುತ್ತೀರಿ. ಅಂದರೆ ಅಷ್ಟು ಪ್ರಮಾಣದ ತೇಜಸ್ಸು ಅವರಲ್ಲಿ ಇರುತ್ತದೆ. ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಪಡೆಯುತ್ತಾರೆ. ಅವರನ್ನು ನೋಡಿದ ಕೂಡಲೇ ಒಂದು ರೀತಿಯ ತೇಜಸ್ಸು ಅವರಿಂದ ಹೊರಹೊಮ್ಮುವುದನ್ನು ನೀವು ಪ್ರಯತ್ನ ಮಾಡಿದರೆ ನೋಡಬಹುದು.

ಅನಾಹತ ಮತ್ತು ಆಜ್ಞಾ ಚಕ್ರಗಳ ಪ್ರಭಾವ

ಸಾಮಾನ್ಯವಾಗಿ ನಿಮ್ಮಲ್ಲಿ ಸೂರ್ಯ ರೇಖೆಯು ಹಸ್ತದ ಮಧ್ಯ ಭಾಗದಿಂದ ಅಥವಾ ಜೀವನ ರೇಖೆಯ ಪಕ್ಕದಲ್ಲಿ ಪ್ರಾರಂಭವಾಗಿ ಉಂಗುರ ಬೆರಳಿನ ಬುಡದವರೆಗೆ ಬಂದು ಕೊನೆಗೊಳ್ಳುತ್ತದೆ. ಹೀಗೆ ಸೂಕ್ತವಾದ ರೀತಿಯಲ್ಲಿ ಕೊನೆಗೊಂಡರೆ ಆಗ ನಿಮಗೆ ಹೆಚ್ಚು ಆತ್ಮವಿಶ್ವಾಸವಿದೆ ಎನ್ನುವುದು ಲೋಕಕ್ಕೇ ಗೋಚರವಾಗಿರುತ್ತದೆ.

ಹೀಗೆ ಸೂರ್ಯ ಚಕ್ರ ಚೆನ್ನಾಗಿ ಗೋಚರವಾಗಿ ಕಂಡರೆ ನಿಮ್ಮನ್ನು ಹಿಡಿಯಲು ಸಾಧ್ಯವೇ ಇಲ್ಲ. ನೀವು ಅಪಾರವಾದ ಜ್ಞಾನ ಪಿಪಾಸುಗಳಾಗುತ್ತೀರಿ. ಜ್ಞಾನ ಮಾರ್ಗದ ಎಲ್ಲಾ ಸಾಧ್ಯತೆಗಳನ್ನೂ ನೀವು ನಿಮ್ಮದಾಗಿಸಿಕೊಳ್ಳುತ್ತೀರಿ. ಆ ಮೂಲಕ ವಿಕಾಸದ ಹಾದಿಯಲ್ಲಿ ಸಾಗುತ್ತೀರಿ. ಸೃಜನಶೀಲತೆ ನಿಮ್ಮೊಳಗಿನಿಂದ ಪ್ರಭಾವಳಿಯ ರೀತಿ ಹೊರಹೊಮ್ಮುತ್ತದೆ. ನೀವು ಮೃದು ಮತ್ತು ಸೌಜನ್ಯದ ಮೂರ್ತಿಯಾಗುತ್ತೀರಿ. ಹೀಗೆ ಆದರೆ ನೀವೇ ಕುಂಡಲಿನಿ ದೇವಿಯು ಎಲ್ಲಿದ್ದಾಳೆಂದು ಅರಿಯುತ್ತೀರಿ. ಸೂರ್ಯ ರೇಖೆಯೂ ಸಹಾ ಅಪಾರವಾದ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಇಲ್ಲಿಂದ ಮುಂದೆ ನೀವು ಯಾರೊಂದಿಗೂ ಹೆಚ್ಚು ಮಾತನಾಡುವುದಿಲ್ಲ. ಹೆಚ್ಚು ಹತ್ತಿರ ತೆಗೆದುಕೊಳ್ಳುವುದೇ ಇಲ್ಲ. ಅವರು ಯಾರ ಬಗ್ಗೆಯೂ ಹೆಚ್ಚು ವಿಮರ್ಶೆ ಮಾಡುವುದು, ಬೈಯುವುದು, ದೂರು ನೀಡುವುದು, ಮಾಡುವುದಿಲ್ಲ. ಆದರೆ ಒಂದು ದಿನ ನಿಮ್ಮ ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಇವುಗಳೇ ಅಡ್ಡ ಬರುತ್ತವೆ. ಮತ್ತು ನೀವು ತಾನಾಗಿಯೇ ಅಂತಹಾ ಉತ್ಸವಗಳನ್ನು ಕೇಳಿ ಮಾಹಿತಿ ಪಡೆದುಕೊಂಡು ಅದರಿಂದ ದೂರವೇ ಇರುತ್ತೀರಿ.

ಕುಂಡಲಿನಿಯನ್ನು ನೀವೇ ಜೀವಿತಾವಧಿಯಲ್ಲಿ ಒಮ್ಮೆ ನೋಡುವ ಗ್ರಹಿಕೆಯ ಮೂಲಕ ಯಥೇಚ್ಛ ಮಾಹಿತಿಗಳನ್ನು, ಅಪಾರ ಪ್ರಮಾಣದ ವಸ್ತುಗಳನ್ನು ಪಡೆದುಕೊಳ್ಳಲು ಸಾಧ್ಯ. ಅಂದರೆ ಕುಂಡಲಿನಿಯು ಅಂತರಂಗದಲ್ಲಿ ಪ್ರವಹಿಸುತ್ತಾ ಇರುತ್ತದೆ. ಸೂರ್ಯ ರೇಖೆಯು ಬಹಿರಂಗದಲ್ಲಿ ಆಡ್ಡಾಡುತ್ತಾ ಇರುತ್ತದೆ.

ಕುಂಡಲಿನಿಯ ಶಕ್ತಿ ಜಾಗೃತವಾದಂತೆ ಸೂರ್ಯ ರೇಖೆಯ ಜಾಗೃತಿಯೂ ಅದೇ ಸಮಯದಲ್ಲಿ ಪ್ರಾರಂಭವಾಗುತ್ತದೆ. ಆಗ ಕುಂಡಲಿನಿಯ ಅನುಭವ ಮಾತ್ರ ಆಗುತ್ತದೆ. ಕಾಣಿಸುವುದಿಲ್ಲ. ನೀವು ಆಧ್ಯಾತ್ಮಿಕವಾಗಿ ಸಾಧನೆ ಮಾಡುತ್ತಾ ಹೋದಂತೆ ನಿಮ್ಮ ಶಕ್ತಿಯ ಅರಿವು ಆಗುತ್ತದೆ. ನಿಮ್ಮಲ್ಲಿ ಅಪಾರವಾದ ವಿಶೇಷ ಜ್ಞಾನ ಇರುತ್ತದೆ. ವಿಶೇಷ ಕೌಶಲ್ಯ ಇರುತ್ತದೆ. ಆದನ್ನೆಲ್ಲಾ ನಿಮ್ಮ ಸೂರ್ಯ ರೇಖೆಯು ತೋರಿಸಿದರೆ; ನಿಮ್ಮಲ್ಲೊಂದು ಅಯಸ್ಕಾಂತೀಯ ಆಕರ್ಷಣೆ ಉಂಟಾಗುತ್ತದೆ.

ಮೂಲಾಧಾರ ಮತ್ತು ಸೂರ್ಯರೇಖೆ

ನಿಮ್ಮ ಹಸ್ತದ ಮಣಿಕಟ್ಟಿನಿಂದ ಸೂರ್ಯ ರೇಖೆಯು ಪ್ರಾರಂಭವಾಗಿದ್ದರೆ; ಅಂತಹಾ ವ್ಯಕ್ತಿಯ ಮೂಲಾಧಾರ ಮೊದಲಿಗೇ ಜಾಗೃತವಾಗಿರುತ್ತದೆ. ಅಂದರೆ ಅವರು ಹುಟ್ಟಿನಿಂದ ಅದೃಷ್ಟವಂತರಾಗಿರುತ್ತಾರೆ. ಮತ್ತು ಮುಂದೆಯೂ ಸಾಧನೆ ಮಾಡಿದರೆ ಅವರ ಅದೃಷ್ಟ ಹಾಗೇ ಉಳಿಯುತ್ತದೆ. ಕುಂಡಲಿನಿಯು ಮೂಲಾಧಾರದಲ್ಲಿಯೇ ಜಾಗೃತವಾಗಿದ್ದರೆ, ಅಂತಹಾ ವ್ಯಕ್ತಿಗೆ ಆರ್ಥಿಕ ಭದ್ರತೆ ಮತ್ತು ಸಮಾಜದಲ್ಲಿ ಸ್ಥಾನಮಾನ ಸಿಕ್ಕು, ದೃಢವಾಗಿ ನಿಲ್ಲುವ ಆತ್ಮವಿಶ್ವಾಸವನ್ನು ಸೂರ್ಯ ರೇಖೆ ನೀಡುತ್ತದೆ.

ಸ್ವಾಧಿಷ್ಠಾನ ಮತ್ತು ಸೂರ್ಯರೇಖೆ

ಸ್ವಾಧಿಷ್ಠಾನ ಚಕ್ರವು ಜಾಗೃತವಾಗಿದ್ದರೆ, ನಿಮ್ಮ ಸೂರ್ಯ ರೇಖೆಯು ದಪ್ಪಗೆ, ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ವ್ಯಕ್ತಿಯು ಕಲೆಯನ್ನು ಆರಾಧಿಸಲು ತೊಡಗುತ್ತಾನೆ. ಚಿತ್ರಕಲೆ, ಸಂಗೀತ ಅಥವಾ ಸಾಹಿತ್ಯದ ಮೂಲಕ ಅವರ ಸಾಧನೆ ಹೆಚ್ಚಾಗಿಯೇ ಇರುತ್ತದೆ. ಕೊನೆಕೊನೆಗೆ ಅವರು ಅದಕ್ಕೇ ಮುಡಿಪಾಗುತ್ತಾರೆ. ಹೀಗೆ ಅವರು ಭಾವುಕರೂ, ಸೃಜನಶೀಲರೂ ಆಗಿರುತ್ತಾರೆ.

ಮಣಿಪುರ ಮತ್ತು ಸೂರ್ಯರೇಖೆ

ಸೂರ್ಯ ರೇಖೆಯು ನೇರವಾಗಿ ಮಣಿಪುರ ಚಕ್ರಕ್ಕೆ ಸಂಬಂಧಿಸಿದೆ. ನಿಮ್ಮ ಸಂಕಲ್ಪ ಶಕ್ತಿಯ ಪ್ರೇರೇಪಣಾ ತಾಣವಿದು. ಇಂಗ್ಲೀಶ್‌ನಲ್ಲಿ ಮಣಿಪುರ ಚಕ್ರವನ್ನು ಸೋಲಾರ್ ಪ್ಲೆಕ್ಸಸ್ ಎಂದೇ ಕರೆಯುತ್ತಾರೆ. ಒಮ್ಮೆ ಸಂಕಲ್ಪ ಮಾಡಿದರೆ ಅವರ ಗುರಿಯು ಎಂದೆಂದೂ ಬದಲಾಗದು. ಆದಕ್ಕಾಗಿಯೇ ಇಂತಹಾ ವ್ಯಕ್ತಿಗಳಲ್ಲಿ ಸೂರ್ಯ ರೇಖೆಯು ದಪ್ಪಗೆ, ಸ್ಪಷ್ಟವಾಗಿ, ಆಳವಾಗಿ ಇರುತ್ತದೆ. ಇದು ಅವರ ಅಧಿಕಾರದ ರೀತಿಯನ್ನು, ನಾಯಕತ್ವದ ಸ್ವಭಾವವನ್ನು ತೋರಿಸುತ್ತದೆ. ಇವರು ಗುಂಪಿನಲ್ಲಿ ಎಲ್ಲೇ ಇದ್ದರೂ ನಾಯಕರಾಗಿ ಆಯ್ಕೆಯಾಗುತ್ತಾರೆ. ಇವರ ಪ್ರಭಾವವು ಮಣಿಪುರ ಚಕ್ರ ಜಾಗೃತವಾದಷ್ಟೂ ಹೆಚ್ಚುತ್ತಾ ಹೋಗುತ್ತದೆ.

ಮಣಿಪುರ ಚಕ್ರವನ್ನು ನಾಭೀ ಚಕ್ರ ಎಂದೂ ಸಹಾ ಕರೆಯುತ್ತಾರೆ. ಅಂದರೆ ಇದು ದೇಹದ ಮಧ್ಯಭಾಗದಲ್ಲಿ ಇರುವ ಚಕ್ರ. ಸೂರ್ಯ ರೇಖೆಯು ಇಲ್ಲಿ ಪ್ರಬಲವಾಗಿದ್ದರೆ ವ್ಯಕ್ತಿಯು ಯಾವುದೇ ಕಾರಣಕ್ಕೂ ಯಾವುದೇ ರೋಗಗಳಿಗೂ ತುತ್ತಾಗುವುದಿಲ್ಲ. ಮನಸ್ಸಿನಿಂದ ತುಂಬಾ ಧೃಢವಾಗಿ ಇರುತ್ತಾರೆ. ನಿದ್ದೆ ಬೇಕೆಂದಾಗ ಬರುತ್ತದೆ. ಯಾವುದನ್ನೂ ತೀವ್ರವಾಗಿ ಹಚ್ಚಿಕೊಳ್ಳುವುದಿಲ್ಲ. ಮತ್ತು ತಮ್ಮದಾಗಿರುವುದನ್ನು ಯಾವತ್ತಿಗೂ ಬಿಟ್ಟುಕೊಡುವುದಿಲ್ಲ.

ಅನಾಹತ ಮತ್ತು ಸೂರ್ಯರೇಖೆ

ಇವರಲ್ಲಿ ಸೂರ್ಯ ರೇಖೆಯು ಹೃದಯ ರೇಖೆಯ ಬುಡದಿಂದ ಮೇಲೇರಿರುತ್ತದೆ. ಅಂದರೆ ಅನಾಹತ ಚಕ್ರವು ಇವರಲ್ಲಿ ಹೆಚ್ಚು ಕ್ರಿಯಾಶೀಲವಾಗಿದೆ ಎನ್ನಬಹುದು. ಇಂತಹಾ ವ್ಯಕ್ತಿಗಳಲ್ಲಿ ಯಾವಾಗಲೂ ಇನ್ನೊಬ್ಬರ ಒಳಿತನ್ನು ಬಯಸುವ ಗುಣ ಇರುತ್ತದೆ. ಇವರು ಎಲ್ಲಾ ತರಹದ ಜನರ ಪ್ರೀತಿಯನ್ನು ಗಳಿಸಬಲ್ಲರು. ಇವರೇ ಖುದ್ದಾಗಿ ಪ್ರೇಮಮಯಿಗಳು. ಮಾತಿನಲ್ಲಾಗಲೀ, ನಡೆನುಡಿಯಲ್ಲಾಗಲೀ ಯಾವಾಗಲೂ ಸಮತೋಲನವನ್ನು ಹೊಂದಿರುತ್ತಾರೆ. ಸದಾ ನಗುಮುಖದ ಇವರು ಶುದ್ಧ ಮನಸ್ಸಿನವರಾಗಿರುತ್ತಾರೆ. ಒಳಗೊಂದು ಹೊರಗೊಂದು ಎನ್ನುವ ಮನೋಭಾವ ಇವರಲ್ಲಿ ಇರುವುದಿಲ್ಲ. ನೇರ ಮತ್ತು ಸೃಜನಶೀಲತೆ ಇವರ ವ್ಯಕ್ತಿತ್ವ ಆಗಿರುತ್ತದೆ.ಇವರ ಹೆಂಡತಿ ಅಥವಾ ಗಂಡ ಮಾತ್ರ ಇವರನ್ನು ಅನುಮಾನದಿಂದ ನೋಡುತ್ತಾರೆ. ಕಾರಣ ಇವರ ಹೃದಯ ರೇಖೆಯನ್ನು ಸೂರ್ಯ ರೇಖೆಯು ತನ್ನ ಪ್ರಖರವಾದ ಶಕ್ತಿಯಿಂದ ಮರೆ ಮಾಡಿರುತ್ತದೆ. ಇದರಿಂದಾಗಿ ತಮಗೇನೋ ಅನ್ಯಾಯವಾಗಿದೆ ಎಂದು ಅವರು ಭಾವಿಸುತ್ತಾರೆ.

ವಿಶುದ್ಧ ಮತ್ತು ಸೂರ್ಯರೇಖೆ

ಸೂರ್ಯ ರೇಖೆಯು ನೇರವಾಗಿದ್ದರೆ, ಯಾವುದೇ ಕಾರಣಕ್ಕೂ ಬುಧ ಪರ್ವತದತ್ತ ವಾಲದೇ ಇದ್ದರೆ ಅದು ವಿಶುದ್ಧ ಚಕ್ರವು ಶುದ್ಧ ಮತ್ತು ಸಮತೋಲನದಲ್ಲಿ ಇದೆ ಎಂದು ಅರ್ಥ. ಇಂತಹಾ ವ್ಯಕ್ತಿಗಳು ಮಾತಿನಲ್ಲಿ ನೇರ ಮತ್ತು ನಿಷ್ಠುರರಾಗಿರುತ್ತಾರೆ. ಇವರು ಯಾವುದೇ ಸಂಗತಿಗಳನ್ನೂ ಸರಿಯಾದ ರೀತಿಯಲ್ಲಿ ಒಂದೇ ಅರ್ಥ ಬರುವಂತೆ ಸಂವಹನ ಮಾಡಬಲ್ಲರು. ಇವರು ಸಿಇಒ ಆಗಿದ್ದರೆ ಅಂತಹಾ ಕಂಪನಿಯು ಕೆಲವೇ ವರ್ಷಗಳಲ್ಲಿ ಅಪಾರವಾದ ಅಭಿವೃದ್ಧಿಯನ್ನು ಸಾಧಿಸುತ್ತದೆ. ಸಾರ್ವಜನಿಕ ಭಾಷಣದಲ್ಲಿ ಇವರು ಎತ್ತಿದ ಸ್ವರ ಗಾರುಡಿಗರು. ಜನರನ್ನು ಮಂತ್ರಮುಗ್ಧರನ್ನಾಗಿಸುವ ಮಾತು ಇವರದಾಗಿರುತ್ತದೆ. ಇವರು ತಮ್ಮ ಮಾತುಗಳಿಂದಲೇ ಕೀರ್ತಿಯನ್ನು ಗಳಿಸುತ್ತಾರೆ. ಇವರು ಸಾಮಾನ್ಯವಾಗಿ ಹಾಸ್ಯಗಾರರಾಗಿರುತ್ತಾರೆ. ಜನರನ್ನು ಬಲುಬೇಗ ನಗಿಸುತ್ತಾರೆ, ಆಲೋಚನೆಗೆ ಹಚ್ಚುತ್ತಾರೆ, ಚಿಂತಿಸುವಂತೆ ಮಾಡುತ್ತಾರೆ, ಮನಸ್ಸು ಹಗುರವಾಗುವಂತೆ ನೋಡಿಕೊಳ್ಳುತ್ತಾರೆ. ಉತ್ಸಾಹ ಮೂಡುವಂತೆ, ಪುಳಕಿತವಾಗುವಂತೆ, ಆತ್ಮವಿಮರ್ಶೆ ಮಾಡಿಕೊಳ್ಳುವಂತೆಯೂ ಮಾಡಬಲ್ಲರು.

ಆಜ್ಞಾ ಮತ್ತು ಸೂರ್ಯರೇಖೆ

ಇವರಲ್ಲಿ ಸೂರ್ಯ ರೇಖೆಯು ಹೆಡ್‌ಲೈನ್ ಅಂದರೆ ಮಿದುಳು ರೇಖೆ ಅಥವಾ ಬುದ್ಧಿ ರೇಖೆಯಿಂದ ಪ್ರಾರಂಭವಾಗಿರುತ್ತದೆ. ಇವರು ದೈಹಿಕ ಶ್ರಮಕ್ಕಿಂತಾ ಬುದ್ಧಿಯನ್ನು ಹೆಚ್ಚು ಬಳಸುತ್ತಾರೆ. ಇವರು ಪ್ರತ್ಯುತ್ಪನ್ನಮತಿಗಳು. ಅಂದರೆ ಯಾವುದೇ ಸಂಗತಿಯಾಗಿರಲೀ ತಕ್ಷಣದಲ್ಲಿ ಇವರಿಗೆ ಅದಕ್ಕೆ ಉತ್ತರ ಹೊಳೆಯುತ್ತದೆ. ಮತ್ತು ಪ್ರತಿಕ್ರಿಯೆಯನ್ನು, ಉತ್ತರವನ್ನು ನೀಡುತ್ತಾರೆ. ಅಪಾರವಾದ ದೂರದೃಷ್ಟಿ ಇವರಿಗೆ ಇರುತ್ತದೆ. ಆದಕ್ಕಾಗಿ ಇವರು ಮಾಡಿದ ಯಾವುದೇ ಕೆಲಸಗಳು ಎಂದಿಗೂ ವ್ಯರ್ಥವಾಗುವುದಿಲ್ಲ.

ಆದರೆ ಇವರು ತಮ್ಮ ಮಕ್ಕಳಿಗೆ ಮಾತ್ರ ಏನನ್ನೂ ಹೇಳುವುದಿಲ್ಲ!! ಮಕ್ಕಳ ಮೇಲೆ ಧೃತರಾಷ್ಟ್ರನ ಪ್ರೀತಿ ಇವರದು. ಅಕ್ಕಪಕ್ಕದವರಿಗೆ ಕಿರಿಕಿರಿ ಉಂಟು ಮಾಡುವುದು ಇವರ ಮೊದಲ ಕೆಲಸ. ಸದಾ ಕಾಲ ಜನರಿಂದ ಸುತ್ತುವರೆದಿರುವುದು ಇವರಿಗೆ ಇಷ್ಟ.

ವಿದ್ಯಾರ್ಥಿಗಳು ಸಂಕಷ್ಟದಲ್ಲಿ...

ಪತ್ರ ಮಿತ್ರ

ಸರಕಾರದ ವಿವೇಚನಾರಹಿತ, ಎಳ್ಳಷ್ಟೂ ಗಂಭೀರತೆ ಇಲ್ಲದ, ಬದ್ಧತೆಯೂ ಇಲ್ಲದ ನಿರ್ಧಾರದ ಪರಿಣಾಮವನ್ನು ಈ ಬಾರಿಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಎದುರಿಸುವಂತಾಗಿದೆ. ಅಕಾಡೆಮಿಕ್ ವರ್ಷ ಶುರುವಾಗಿ, ಎಲ್ಲ ವಿಷಯಗಳ ಬಗ್ಗೆ ತಯಾರಿ ಮಾಡಿಕೊಂಡು, ಇನ್ನೇನು ಪರೀಕ್ಷೆ ಬರೆಯಲು ಕೇವಲ ಎರಡು ದಿನ ಬಾಕಿ ಎನ್ನುವಾಗ, ಶಿಕ್ಷಣ ಸಚಿವರು ದಿಢೀರ್ ಪತ್ರಿಕಾಗೋಷ್ಠಿ ಕರೆದು ಈ ವರ್ಷದಿಂದ ಹಿಂದಿ ಪರೀಕ್ಷೆಯಲ್ಲಿ ಪಡೆದ ಅಂಕ ಲೆಕ್ಕಕ್ಕಿಲ್ಲ, ಹಿಂದಿಗೆ ಅಂಕಗಳ ಬದಲಿಗೆ ಗ್ರೇಡ್ ಮಾತ್ರ ನೀಡುವುದಾಗಿ ಘೋಷಿಸಿ ಬಿಟ್ಟರು ! ಕೆಲ ಪಾಲಕರು ಇದರ ವಿರುದ್ಧ ಕೋರ್ಟ್ ಮೊರೆ ಹೋದಾಗ, ಸೂಕ್ತ ಮಾಹಿತಿ ಕೊಡಲು ಅಶಕ್ಯರಾದ್ದರಿಂದ, ದಂಡ ಭರಿಸಬೇಕು ಎಂದು ಕೋರ್ಟ್ ಹೇಳಿತು. ಆದರೆ ಮತ್ತದೇ ಕೋರ್ಟಿನ ಮತ್ತಿಬ್ಬರು ನ್ಯಾಯಾಧೀಶರು ವ್ಯತಿರಿಕ್ತ ತೀರ್ಪು ನೀಡಿದ್ದಾರೆ. ಗ್ರೇಡ್ ಬದಲಾಗಿ ಅಂಕಗಳನ್ನೇ ನೀಡಬೇಕು ಎಂದು ಹೇಳಿದ್ದಾರೆ.

ಹೇಗೂ ಪರ್ಸೆಂಟೇಜಿಗೆ ತೆಗೆದುಕೊಳ್ಳುವುದಿಲ್ಲ ಅಂತ ಮಕ್ಕಳು ಹಿಂದಿ ಪರೀಕ್ಷೆಯನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಇನ್ನೂ ಕೆಲವರಂತೂ ಪರೀಕ್ಷೆಗೇ ಹಾಜರಾಗಲಿಲ್ಲ. ಈಗ ಅವರ ಸ್ಥಿತಿ ಹೇಗಾಗಿರಬೇಡ ? ಶಿಕ್ಷಣ ಸಚಿವರು ಪರೀಕ್ಷಾರ್ಥಿಗಳೊಡನೆ ಚೆಲ್ಲಾಟ ಆಡಿದಂತಾಗಿದೆ. ಇದರೊಟ್ಟಿಗೆ ಶಿಕ್ಷಣ ನೀತಿಯ ಜಿದ್ದಾಜಿದ್ದಿಯು ಒಕ್ಕೂಟ ವ್ಯವಸ್ಥೆಯನ್ನೇ ಹಾಳುಗೆಡವುತ್ತಿದೆ. NEP v/s SEP ಎಂಬಂತಾಗಿದೆ. ಇಲ್ಲೂ ಬೇಡವಾದ ಕಾರಣಕ್ಕೆ ಪೈಪೋಟಿ! ಕೇಂದ್ರದ ನಡೆಯನ್ನೆಲ್ಲ ತಿರಸ್ಕರಿಸಬೇಕು ಅನ್ನುವುದೆಷ್ಟು ಸರಿ. ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಸುತರಾಂ ಒಪ್ಪಿತವಲ್ಲ. ಶಿಕ್ಷಣ ಕ್ಷೇತ್ರವೂ ಕಲುಷಿತಗೊಳ್ಳುತ್ತಿದೆ. ದುರದೃಷ್ಟವೆಂದರೆ ಇದರ ನೇರ ಪರಿಣಾಮ ಬೀಳುವುದು ಯುವ ಪೀಳಿಗೆಯ ಮೇಲೆ. ಇಲ್ಲಿ, ಇನ್ನೂ ಒಂದು ಸಂಗತಿ ಮುಖ್ಯ. JEE, NEET ನಂತಹ ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳನ್ನು ಎದುರಿಸುವಂತೆ ಮಾಡುವಲ್ಲಿ , ರಾಜ್ಯ ಶಿಕ್ಷಣ ನೀತಿ ಸ್ಪರ್ಧಾತ್ಮಕತೆಗೆ ಪೂರಕವಾಗಿರಬೇಡವೆ ? ಉದ್ಯೋಗ ಮಾರುಕಟ್ಟೆಯಲ್ಲಿ, ಕೆಲ ವಿಶ್ವವಿದ್ಯಾಲಯದ ಪದವೀಧರರು ಅರ್ಜಿ ಸಲ್ಲಿಸುವ ಅವಶ್ಯಕತೆ ಇಲ್ಲ ಎಂಬುದನ್ನು ಜಾಹೀರಾತಿನಲ್ಲೇ ಪ್ರಕಟಿಸುವಂತಹ ಪರಿಸ್ಥಿತಿ ಏನನ್ನು ಸೂಚಿಸುತ್ತದೆ ?

ಈಗ ಹೊರಬಿದ್ದ ನ್ಯಾಯಾಲಯದ ತೀರ್ಪು, ಪರೀಕ್ಷೆ ಬರೆದವರ ಮೇಲೆ ಯಾವ ರೀತಿ ಪರಿಣಾಮ ಬೀರೀತು ಎಂಬುದನ್ನು ಕಾದು ನೋಡಬೇಕು.

-**ಶಂಕರನಾರಾಯಣ ಭಟ್**, ಮಾಡಗೇರಿ

ಲವ್‌ಜಿಹಾದ್‌ನ ವಿಸ್ತೃತ ರೂಪ

ಪ್ರತಿಷ್ಠಿತ ಟಿಸಿಎಸ್ ಕಂಪೆನಿಯಲ್ಲಿ ಮುಸ್ಲಿಂ ಮೇಲಧಿಕಾರಿಗಳಿಂದ ಕೆಳ ಉದ್ಯೋಗಿಗಳ ಮೇಲೆ ನಡೆದ ಲೈಂಗಿಕ ದೌರ್ಜನ್ಯ, ಬಲವಂತದ ಮತಾಂತರ ಕೃತ್ಯಗಳು ಆಘಾತಕಾರಿ ಬೆಳವಣಿಗೆ. ಹಿಂದು ಹುಡುಗಿಯರನ್ನೇ ಗುರಿಯಾಗಿಸಿಕೊಂಡು ನಡೆದ ಈ ಕೃತ್ಯಗಳು ಲವ್ ಜಿಹಾದ್‌ನ ಇನ್ನೊಂದು ರೂಪ. ವರುಷಗಳಿಂದಲೇ ನಡೆಯುತ್ತಿದ್ದ ಇಂತಹ ಬೆಳವಣಿಗೆಯು ಕಂಪೆನಿಯ ಮಾಲಕತ್ವದ ಗಮನಕ್ಕೆ ಬರದಿರುವುದು ಅಚ್ಚರಿಯೆ. ಇದು ವ್ಯವಸ್ಥಿತವಾಗಿ ನಡೆಯುತ್ತಿರುವ ಲವ್ ಜಿಹಾದ್ ಆಗಿರುವುದರಿಂದ ಹಾಗೂ ಹೊರಗಿನ ಬೆಂಬಲವೂ ಇರುವುದರಿಂದ ಅದೊಂದೇ ಕಂಪೆನಿಗೆ ಇದು ಖಂಡಿತಾ ಸೀಮಿತವಾಗಿರಲಾರದು. ಇನ್ನಿತರ ಹಲವಾರು ಕಂಪೆನಿಗಳಲ್ಲೂ ಇಂತಹ ಘಟನೆಗಳು ನಡೆದಿರುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲೂ ತನಿಖೆ ನಡೆಯಬೇಕಾಗಿದೆ.

-**ಆಶಾ ನಾಯಕ್**, ಮಣಿಪಾಲ

ಹದಿಹರೆಯದ ಸಮಸ್ಯೆಗಳು-ಅವುಗಳನ್ನು ನಿಭಾಯಿಸುವ ಬಗೆ

ಭಾರತೀಯರು ಮಾನವರನ್ನು 'ಅಮೃತಸ್ಯ ಪುತ್ರಾಃ' ಎಂಬ ಶ್ರೇಷ್ಠ ಭಾವನೆಯಿಂದ ಕಾಣುತ್ತಾರೆ.

ಒಳನೋಟ
ಕೆ.ಬಾ. ಮಲ್ಯ



ಪ್ರತಿಯೊಬ್ಬ ವ್ಯಕ್ತಿಯೂ ಹದಿಹರೆಯದ ಕಾಲಘಟ್ಟವನ್ನು ದಾಟಿಯೇ ತಾರುಣ್ಯಕ್ಕೆ ಕಾಲಿಡುತ್ತಾನೆ. ಇಂಗ್ಲಿಷಿನಲ್ಲಿ ಹದಿಮೂರರಿಂದ ಹತ್ತೊಂಬತ್ತನೇ ವಯಸ್ಸಿನ ವರೆಗೆ (Thirteen- Nineteen) ಟೀನ್ ಏಜ್ ಎನ್ನುತ್ತಾರೆ. ವಿದ್ಯಾರ್ಥಿಗಳು ಹೈಸ್ಕೂಲು ಮುಗಿಸಿ ಪಿ.ಯು. ಕಾಲೇಜಿಗೆ ಸೇರುವ ಅವಧಿ ಎನ್ನಬಹುದು. ಹದಿಹರೆಯದಲ್ಲಿ ಮಕ್ಕಳಲ್ಲಿ ಅನೇಕ ರೀತಿಯ ದೈಹಿಕ, ಮಾನಸಿಕ, ಬೌದ್ಧಿಕ ಬದಲಾವಣೆಗಳಾಗುತ್ತವೆ. ಮಕ್ಕಳ ಆದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳ ಅಂಗರಚನೆಯಲ್ಲಿ ಹಲವು ಬದಲಾವಣೆಗಳಾಗುತ್ತವೆ. ಆಗ ಅವರ ಬೆಳವಣಿಗೆಯ ವೇಗವೂ ಹೆಚ್ಚು. ಈ ಹೊಸ ಬೆಳವಣಿಗೆಯೊಂದಿಗೆ ಮಾನಸಿಕವಾಗಿ ಹೊಂದಿಕೊಳ್ಳಲು ಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ಹಿಂದೆ ಕೂಡು ಕುಟುಂಬಗಳಲ್ಲಿ ಈ ಜ್ಞಾನ ತನ್ನಿಂತಾನೇ ಸಿಗುತ್ತಿತ್ತು.

ಈ ವಯಸ್ಸಿನಲ್ಲಿ ಓದಿನ ಕಡೆಗೆ ಗಮನ ನೀಡಬೇಕಾಗುತ್ತದೆ. ಆದರೆ ಈ ವಯಸ್ಸಿನಲ್ಲಿ ಚಂಚಲತೆ ಕಾಡುತ್ತದೆ. ಹಲವು ವಿಧದ ಬಯಕೆಗಳು, ಅದರಲ್ಲೂ ಮುಖ್ಯವಾಗಿ ಲೈಂಗಿಕ ಬಯಕೆ ಕಾಡತೊಡಗುತ್ತದೆ. ಈ ವಯಸ್ಸಿನಲ್ಲಿ ಸಂತಾನೋತ್ಪತ್ತಿ ಅಂಗಗಳು ಬೆಳವಣಿಗೆ ಕಂಡಿರುತ್ತವೆ. ಸುಂದರ ಉಡುಗೆ, ಫ್ಯಾಷನ್, ಬೈಕ್, ಸಿನೆಮಾ, ಕ್ರಿಕೆಟ್ ಇತ್ಯಾದಿ ಬಯಕೆಗಳಿರುತ್ತವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಲೈಂಗಿಕ ಬಯಕೆ ತೀವ್ರವಾಗಿರುತ್ತದೆ. ಅದನ್ನು ಸ್ವಂತ ವಿವೇಕದಿಂದ, ಹಿರಿಯರ ಯೋಗ್ಯ ಮಾರ್ಗದರ್ಶನದಿಂದ ಹತೋಟಿಯಲ್ಲಿಡದಿದ್ದರೆ ಅನೇಕ ಸಮಸ್ಯೆಗಳು ನಿರ್ಮಾಣವಾಗುವ ಸಾಧ್ಯತೆ ಇದೆ. ಇಂದು ಸಮಾಜದಲ್ಲಿ ಕಂಡು ಬರುತ್ತಿರುವ ಅತ್ಯಾಚಾರ, ಲವ್ ಜಿಹಾದ್ ಪ್ರಕರಣಗಳಿಗೆ ಯೋಗ್ಯ ಮಾರ್ಗದರ್ಶನದ ಕೊರತೆ ಕಾರಣ. ಮಾದಕ ಜಾಹೀರಾತುಗಳು, ಯುವತಿಯರ ಮೈಮಾಟ ಪ್ರದರ್ಶನ, ತುಂಡುಡುಗೆಗಳು, ಪಬ್ ಸಂಸ್ಕೃತಿಗಳು ಇದಕ್ಕೆ ಕಾರಣ ಹಾಗೂ ಯುವಕರ ಮನಸ್ಸನ್ನು ಅಡ್ಡದಾರಿಗೆಳೆಯಲು ಕಾರಣ. ಲೈಂಗಿಕ ಭಾವನೆಯನ್ನೇ ಪ್ರೀತಿ-ಪ್ರೇಮ ಎಂಬ ತಪ್ಪು ಕಲ್ಪನೆಯನ್ನು ಮೂಡಿಸಲಾಗುತ್ತಿದೆ. ಹಿಂದೆ ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ಬ್ರಹ್ಮಚರ್ಯಕ್ಕೆ ಬಹಳ ಮಹತ್ವವಿರುತ್ತಿತ್ತು. ಯಮ-ನಿಯಮ-ಧ್ಯಾನ, ಪ್ರಾಣಾಯಾಮಗಳ ಸಾಧನೆ ನಡೆಯುತ್ತಿತ್ತು. ಇದರಿಂದ ಓದಿನಲ್ಲಿ ಏಕಾಗ್ರತೆ ಸಾಧಿಸಲು ಅನುಕೂಲವಾಗುತ್ತದೆ. ಮಹಾಪುರುಷರು ತಮ್ಮ ಜೀವನದಲ್ಲಿ ಬ್ರಹ್ಮಚರ್ಯವನ್ನು ಪಾಲಿಸಿದ ಬಗ್ಗೆ ಶಿಕ್ಷಣ ಸಂಸ್ಥೆಗಳಲ್ಲಿ ಉದಾಹರಣೆಗಳನ್ನು, ಕಥೆಗಳನ್ನು ಹೇಳಿದಾಗ ಎಳೆ ಮನಸ್ಸುಗಳು ಅದನ್ನು ಬೇಗನೇ ಗ್ರಹಿಸುತ್ತವೆ. ಪುರಾಣ, ಇತಿಹಾಸಗಳಲ್ಲಿ ಇಂಥ ಆದರ್ಶ ಪುರುಷರ ಹೇರಳ ಉದಾಹರಣೆಗಳು ಸಿಗುತ್ತವೆ. ಸ್ವಾಮಿ ವಿವೇಕಾನಂದರು ಅಮೆರಿಕಾ ದೇಶದ ಚಿಕಾಗೋದಲ್ಲಿ ಐತಿಹಾಸಿಕ ಭಾಷಣ ಮಾಡಿದ ನಂತರ ಜಗತ್ಪ್ರಸಿದ್ಧರಾಗುತ್ತಾರೆ. ಅನೇಕ ನಗರಗಳಿಂದ ಅವರಿಗೆ ಆಹ್ವಾನಗಳು ಬರುತ್ತವೆ. ಒಂದು ಕಡೆ ಪ್ರವಚನ ಮುಗಿಸಿದ ನಂತರ ಓರ್ವ ಮಹಿಳೆ ಅವರ ರೂಪಕ್ಕೆ ಮಾರುಹೋಗಿ "ನನಗೆ ನಿಮ್ಮಿಂದ ನಿಮ್ಮಂಥಹವನೇ ಓರ್ವ ಮಗನನ್ನು ಪಡೆಯಬೇಕೆಂಬ ಆಸೆ ಇದೆ" ಎಂದಳು. ಸಾಮಾನ್ಯ ವ್ಯಕ್ತಿಯಾದರೆ, ಮನಸ್ಸಿನ ಮೇಲೆ ಹತೋಟಿ ಇಲ್ಲದವನಾದರೆ ಈ ಆಹ್ವಾನವನ್ನು ಸ್ವೀಕರಿಸಿ ಬಿಡುತ್ತಿದ್ದನೇನೋ ಏನೋ. ಆದರೆ ಅವರು ವಿವೇಕಾನಂದರು. ಅವರು ತಕ್ಷಣ ಬಗ್ಗಿ ಆಕೆಯ ಕಾಲುಮುಟ್ಟಿ ನಮಸ್ಕರಿಸಿ "ಅಮ್ಮಾ, ನೀನು ಅಷ್ಟು ಸಮಯ ಕಾಯಬೇಕೇಕೆ? ಇದೋ ನಾನೇ ಎದುರಿಗೆ ಇರುವಾಗ ನನ್ನಂಥ ಇನ್ನೊಬ್ಬ ಮಗ ಏಕೆ. ನಾನೇ ನಿನ್ನ ಮಗನೆಂದು ತಿಳಿ" ಎಂದು ಬಿಟ್ಟರು. ಆಕೆ ಕಕ್ಕಾಬಿಕ್ಕಿ. ಅದು ಭಾರತದ ಮಣ್ಣಿನ ಸಂಸ್ಕೃತಿ, ಬ್ರಹ್ಮಚರ್ಯ, ಪ್ರಾಣಾಯಾಮ, ಧ್ಯಾನಗಳ ಪ್ರಭಾವ.

ಪ್ರಸಿದ್ಧ ಕ್ರಾಂತಿಕಾರಿ ಚಂದ್ರಶೇಖರ ಆಜಾದನ ಜೀವನ ರೋಮಾಂಚಕಾರಿಯಾದುದು. ಒಮ್ಮೆ ಒಂದು ಹಳ್ಳಿಗೆ ಹೋಗಿ ಬರುವಾಗ ರಾತ್ರಿಯಾದಾಗ ಪರಿಚಿತ ದೇಶಭಕ್ತರ ಮನೆಗೆ ಉಳಿಯಲು ಹೋಗುತ್ತಾನೆ. ಊಟದ ನಂತರ ಮೇಲ್ಛಾವಣಿಗೆ ಹತ್ತಿ ಹೋಗಿ ಚಿಮಿಣಿ ದೀಪದಲ್ಲಿ ಸಂಗ್ರಹವಾದ ಹಣದ ಲೆಕ್ಕಾಚಾರ ಬರೆಯಲಾರಂಭಿಸಿದ. ಕೂಡುಕುಟುಂಬದ ಆ ಮನೆಯಲ್ಲಿ ಹದಿಹರೆಯದ ವಿಧವೆ ಯುವತಿಯೊಬ್ಬಳು ಈ ತರುಣನ ಬಗ್ಗೆ ಆಕರ್ಷಿತಳಾಗಿ ಎಲ್ಲರೂ ಮಲಗಿದ ಮೇಲೆ ಛಾವಣಿ ಮೇಲೆ ಬಂದಳು. ಅವಳ ಕಣ್ಣಲ್ಲಿ ಬಯಕೆ ಇತ್ತು. ಇದನ್ನು ಗುರ್ತಿಸಿದ ಆಜಾದ್ ಆಕೆಗೆ ವಾಪಸ್ ಹೋಗಲು ಹೇಳಿದ. ಆಕೆ ಮುಂದುವರಿದು ಬಂದಾಗ ಹಣವನ್ನು ಚೀಲದಲ್ಲಿ ತುಂಬಿಸಿ ಚಿಮಿಣಿ ದೀಪ ಆರಿಸಿ ಹೆಚ್ಚು ಎತ್ತರವಿಲ್ಲದ ತಾರಸಿಯಿಂದ ಕೆಳಕ್ಕೆ ಧುಮುಕಿ ಕತ್ತಲಲ್ಲಿ ಮಾಯವಾದ. ಅಷ್ಟು ಬಲಿಷ್ಠವಾಗಿತ್ತು ಆಜಾದನ ಮನಸ್ಸು. ಆತನ ಮನಸ್ಸು ಒಂದಿಷ್ಟು ಚಂಚಲಗೊಂಡಿದ್ದರೂ ಅನಾಹುತವಾಗಿ ಹೋಗುತ್ತಿತ್ತು. ಏಕಾಂತದಲ್ಲಿ ಯಾರೂ ನೋಡದಿದ್ದಾಗಲೂ ಓರ್ವ ವ್ಯಕ್ತಿ ಹೇಗೆ ನಡೆದುಕೊಳ್ಳುತ್ತಾನೆ ಎಂಬುದರಲ್ಲಿ ಆತನ ನಿಜವಾದ ಆತ್ಮ ಸಂಯಮ ಎದ್ದು ಕಾಣುತ್ತದೆ.

ಬುದ್ಧನ ಶಿಷ್ಯರಲ್ಲಿ ಆನಂದ ಪ್ರಮುಖ. ಬುದ್ಧ ತನ್ನೆಲ್ಲ ಶಿಷ್ಯರನ್ನು ಭಿಕ್ಷೆಗೆ ಹಳ್ಳಿಗಳಿಗೆ ಕಳಿಸುತ್ತಿದ್ದ. - ಧರ್ಮ ಪ್ರಚಾರ ಹಾಗೂ ಶಿಷ್ಯರಿಗೆ ಲೋಕಜ್ಞಾನ ಬರಲಿ ಎಂಬ ಉದ್ದೇಶ. ಒಮ್ಮೆ ಧರ್ಮ ಪ್ರಚಾರ ಮುಗಿಸಿ ಆನಂದ ಹಾಗೂ ಶಿಷ್ಯರು ಆಶ್ರಮಕ್ಕೆ ಹಿಂತಿರುಗಿ ಬರುವಾಗ ಮುಸ್ಸಂಜೆಯಾಗಿಬಿಡುತ್ತದೆ. ಒಂದು ನದಿ ದಾಟಿ ಬರಬೇಕಾಗಿತ್ತು. ಅಂಬಿಗ ಹೊರಟು ಹೋಗಿ ಬಿಟ್ಟಿದ್ದ. ಅಷ್ಟರಲ್ಲಿ ಓರ್ವ ಪ್ರಾಯದ ಯುವತಿ ಬಂದಳು. ನದಿಯಲ್ಲಿ ಎದೆ ಮಟ್ಟ ನೀರಿತ್ತು. ಗಂಡಸರೇನೋ ದಾಟಬಹುದಿತ್ತು. ಆದರೆ ಸೀರೆ ಉಟ್ಟಿದ್ದ ಹರೆಯದ ಯುವತಿ ದಾಟುವುದು ಹೇಗೆ? ಆನಂದ ಆಕೆಯನ್ನು ತನ್ನ ಹೆಗಲ ಮೇಲೆ ಕೂರಿಸಿ, ನದಿ ದಾಟಿಸಿ, ಆಚೆ ದಡದಲ್ಲಿ ಇಳಿಸಿ, ಏನೂ ಆಗದವನಂತೆ ನಡೆದ. ಇತರ ಶಿಷ್ಯರಿಗೆ ಆತನ ಮೇಲೆ ಮತ್ಸರ. ತಾನಾದರೂ ಹೆಗಲ ಮೇಲೆ ಕೂರಿಸಿಕೊಂಡು ದಾಟಿಸುತ್ತಿದ್ದೆ ಎಂದು. ಆತನ ಬ್ರಹ್ಮಚರ್ಯ ವ್ರತ ನಷ್ಟವಾಯಿತೆಂದು ಮಾತಾಡಿಕೊಳ್ಳುತ್ತಾ ಗುರುಗಳ ಬಳಿ ರಾತ್ರಿ ದೂರು ನೀಡಿದರು. "ರಾತ್ರಿಯಾಯಿತು ಈಗ ಮಲಗಿ ನಾಳೆ ಬೆಳಗ್ಗೆ ನೋಡುವ" ಎಂದ ಬುದ್ಧ. ರಾತ್ರಿ ಇಡೀ ಶಿಷ್ಯರ ಬಾಯಲ್ಲಿ, ಮನಸ್ಸಿನಲ್ಲಿ ಆಕೆಯದೇ ಚಿತ್ರ, ಧ್ಯಾನ. ಬೆಳಗ್ಗೆ ಮತ್ತೆ ಶಿಷ್ಯರು ನೆನಪಿಸಿದಾಗ ಬುದ್ಧ ಆನಂದನನ್ನು ನಡೆದ ವಿಷಯದ ಬಗ್ಗೆ ಕೇಳಿದ. ಆನಂದ ನಿರ್ವಿಕಾರ ಮನಸ್ಸಿನಿಂದ "ನಾನೊಂದು ಮಾಂಸದ ಮೂಟೆಯನ್ನು ಹೊತ್ತು ತಂದು ಈಚೆ ದಡದಲ್ಲಿ ಬಿಟ್ಟು ಬಂದೆ. ಆಮೇಲೆ ಮರೆತು ಬಿಟ್ಟೆ" ಎಂದ. ಆಗ ಬುದ್ಧ ಶಿಷ್ಯರಿಗೆ ಹೇಳಿದ "ಆನಂದ ಅವಳನ್ನೊಂದು ಮಾಂಸದ ಮೂಟೆಯೆಂದಷ್ಟೇ ತಿಳಿದ. ಅದನ್ನು ಈಚೆ ದಡದಲ್ಲೇ ಬಿಟ್ಟು ಎಲ್ಲ ಮರೆತ. ನೀವಾದರೋ ಆಕೆಯ ರೂಪದ ನೆನಪನ್ನು ಮನಸ್ಸಿನಲ್ಲಿ ಹೊತ್ತುಕೊಂಡು ಆಶ್ರಮಕ್ಕೆ ತಂದು ರಾತ್ರಿಯಿಡೀ ಆಕೆಯ ಧ್ಯಾನದಲ್ಲೇ ಕಳೆದಿರಿ. ಇದು ಬ್ರಹ್ಮಚರ್ಯ ವ್ರತ ಪಾಲನೆಯ ಲಕ್ಷಣವಲ್ಲ. ಮನಸ್ಸಿನ ಒಳಗೂ ಹೊರಗೂ ಪರಿಶುದ್ಧನಾಗಿರುವುದೇ ಸಾಧನೆಯ ಲಕ್ಷಣ" ಎಂದು ಬುದ್ಧ ಹೇಳಿ ಏಕಾಗ್ರತೆಯಿಂದ ಕುಳಿತು ಮನಸ್ಸು ಚಂಚಲವಾಗದಂತೆ ನೋಡಿಕೊಳ್ಳಬೇಕು ಎಂದ. ಶಿಷ್ಯರು ನಾಚಿಕೆಯಿಂದ ತಲೆ ತಗ್ಗಿಸಿದರು.

ಆದರೆ ಈಗ ಆ ಶ್ರೇಷ್ಠ ಗುರುಕುಲ ಶಿಕ್ಷಣವಿಲ್ಲ. ಯಮ-ನಿಯಮ, ಬ್ರಹ್ಮಚರ್ಯ ಪಾಲನೆಯ ಬಗ್ಗೆ ಶಿಕ್ಷಣ ಇಲ್ಲ. ಪಾಶ್ಚಾತ್ಯರದು ಭೋಗಭೂಮಿ. ಅವರಿಗೆ ದುಡ್ಡು, ಹೆಣ್ಣು, ಹೆಂಡಗಳೇ ದೇವರು. ಭೌತಿಕ ಸುಖವೇ ಜೀವನ. ಭಾರತ ತ್ಯಾಗಭೂಮಿ. ಸಂಯಮ, ಸಹಿಷ್ಣುತೆಯ ಸಂಸ್ಕೃತಿ. ಈಗ ಮೆಕಾಲೆ ಶಿಕ್ಷಣದಿಂದ ಭಾರತೀಯರಲ್ಲಿ ಕೂಡಾ ಅನೇಕರು ಭೌತಿಕ ಜೀವನದತ್ತ ಆಕರ್ಷಿತರಾಗುತ್ತಿದ್ದಾರೆ. ಈ ಪ್ರವೃತ್ತಿ ಬದಲಾಗಬೇಕಾದರೆ ಮತ್ತೆ ಯಮ-ನಿಯಮ, ಬ್ರಹ್ಮಚರ್ಯ, ಪ್ರಾಣಾಯಾಮಗಳ ಶಿಕ್ಷಣ ನೀಡಬೇಕಾದ ಅಗತ್ಯವಿದೆ. ವಿಶೇಷವಾಗಿ ಬ್ರಹ್ಮಚರ್ಯ ಪಾಲನೆಯ ಬಗ್ಗೆ ಒತ್ತು ನೀಡಬೇಕಾಗಿದೆ. ಲೈಂಗಿಕತೆ ಬಗ್ಗೆ ಯುವಕಯುವತಿಯರಿಗೆ ಯೋಗ್ಯ ತಿಳಿವಳಿಕೆ ನೀಡುವ ಅಗತ್ಯವಿದೆ. ಲೈಂಗಿಕ ಭಾವನೆಯನ್ನು ಮಾನವ ಹಾಕಿಕೊಂಡದ್ದಲ್ಲ. ದೇವರೇ ಅಂದರೆ ಪ್ರಕೃತಿಯೇ ಮಾನವನಲ್ಲಿ ಹಾಕಿರುವುದು. ಸಂತತಿ ಮುಂದುವರಿಯಬೇಕೆಂಬುದೇ ಪ್ರಕೃತಿಯ ಉದ್ದೇಶ. ಆದ್ದರಿಂದ ಲೈಂಗಿಕತೆಯನ್ನು ಪವಿತ್ರ ಎಂದು ಭಾವಿಸಬೇಕು. ಪರಿಶುದ್ಧ ಮನಸ್ಸಿನಿಂದ ನೋಡಬೇಕು. ಈ ಸುಭಾಷಿತ ನೋಡಿ:-

"ಮಾತೃವತ್ ಪರದಾರೇಷು ಪರದ್ರವ್ಯೇಷು ಲೋಷ್ಟವತ್।
ಆತ್ಮವತ್ ಸರ್ವಭೂತೇಷು ಯಃ ಪಶ್ಯತಿ ಸಃ ಪಂಡಿತಃ॥

"ಸಂತಾನಕ್ಕಾಗಿ ಓರ್ವ ಯುವತಿಯೊಡನೆ ವಿವಾಹ. ಇತರ ಎಲ್ಲ ಸ್ತ್ರೀಯರನ್ನು ತಾಯಿಯಂತೆ ಕಾಣಬೇಕು. ಪರದ್ರವ್ಯ ಮಣ್ಣಿನ ಹೆಂಟೆಯಂತೆ. ಎಲ್ಲರನ್ನೂ ತನ್ನಂತೆಯೇ ಕಾಣುವವನೇ ಪಂಡಿತ" ಎಂದರ್ಥ. ಲೈಂಗಿಕತೆ ಪಾಪವಲ್ಲ. ಅನ್ಯ ಮತಗಳಲ್ಲಿ ಮನುಷ್ಯ ಪಾಪಿ ಎನ್ನಲಾಗಿದೆ. ಏಕೆಂದರೆ ಲೈಂಗಿಕ ಸಂಯೋಗ ಪಾಪ ಎಂಬ ಭಾವನೆ. ಭಾರತೀಯರು ಮಾನವರನ್ನು 'ಅಮೃತಸ್ಯ ಪುತ್ರಾಃ' ಎಂಬ ಶ್ರೇಷ್ಠ ಭಾವನೆಯಿಂದ ಕಾಣುತ್ತಾರೆ. ಪಾಪಿಗಳೆಂದಲ್ಲ. ಇಂದು ಹದಿಹರೆಯದವರಿಗೆ ಇಂಥ ಶ್ರೇಷ್ಠ ಶಿಕ್ಷಣದ ಆವಶ್ಯಕತೆ ಇದೆ. ಆಗಲೇ ಅತ್ಯಾಚಾರ, ಲವ್ ಜಿಹಾದ್ ಎಲ್ಲ ಕೊನೆಗೊಳ್ಳುತ್ತವೆ.

ನವ ಭಾರತದ ಉದ್ಯಮದಲ್ಲಿ ನಾರೀಶಕ್ತಿ

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವರು



ಪ್ರಧಾನಮಂತ್ರಿ ನರೇಂದ್ರ ಮೋದಿ ಲೋಕಸಭೆ ಮತ್ತು ರಾಜ್ಯಶಾಸಕಾಂಗಗಳಲ್ಲಿ 3ನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ 'ನಾರಿ ಶಕ್ತಿ ವಂದನ್ ಅಧಿನಿಯಮ'ವನ್ನು ಕಳೆದ ಸೆಪ್ಟೆಂಬರ್ ಸಂಸತ್‌ನಲ್ಲಿ ಪ್ರತಿಪಾದಿಸಿ ಮಹಿಳೆಯರು ಏಳಿಗೆಯಾಗದ ಹೊರತು ದೇಶದ ಏಳಿಗೆ ಅಸಾಧ್ಯ ಎಂಬ ದೃಢ ಸಂಕಲ್ಪವನ್ನು ವ್ಯಕ್ತಪಡಿಸಿದ್ದರು. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ(ಎಂಎಸ್ ಎಂಇ) ವಲಯದಲ್ಲಿ ಸರ್ಕಾರ ಮಾಡುತ್ತಿರುವ ಕೆಲಸಗಳಲ್ಲೂ ಅದೇ ಉದ್ದೇಶ ಪ್ರತಿಫಲಿಸುವುದನ್ನು ಪ್ರತಿದಿನವೂ ಕಾಣಬಹುದಾಗಿದೆ. 'ಎಂಎಸ್‌ಎಂಇ' ವಲಯವನ್ನು ಸಾಮಾನ್ಯವಾಗಿ ಭಾರತದ ಆರ್ಥಿಕತೆಯ ಬೆನ್ನೆಲುಬು ಎಂದು ಕರೆಯಲಾಗುತ್ತದೆ. ಆದರೆ ಹತ್ತಿರದಿಂದ ನೋಡಿದರೆ, ಅದರ ಹೃದಯದಲ್ಲಿ ಮಹಿಳಾ ಉದ್ಯಮಿಗಳ ಶಾಂತಶಕ್ತಿವನ್ನು ಕಾಣಬಹುದು. ಆ ಶಾಂತ ಶಕ್ತಿಯು ಅಂತಿಮವಾಗಿ ರಾಷ್ಟ್ರೀಯ ಮನ್ನಣೆ, ಸಾಂಸ್ಥಿಕ ಬೆಂಬಲ ಮತ್ತು ನೀತಿ ಬೆಂಬಲವನ್ನು ಪಡೆಯುತ್ತಿದೆ. ಇದೆಲ್ಲದಕ್ಕೂ ಆ ಶಾಂತ ಶಕ್ತಿ ಸದಾ ಅರ್ಹವಾದುದಷ್ಟೇ.

ಯಶೋಗಾಥೆ ಹೇಳುವ ಅಂಕಿ ಅಂಶಗಳು

ಭಾರತದ 'ಎಂಎಸ್‌ಎಂಇ' ಪರಿಸರ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವು ನಿರಂತರವಾಗಿ ಹೆಚ್ಚುತ್ತಿದೆ. 2026ರ ಆರಂಭದ ವೇಳೆಗೆ, 'ಉದ್ಯಮ್ ನೋಂದಣಿ ಪೋರ್ಟಲ್' ಮತ್ತು 'ಉದ್ಯಮ್ ಅಸಿಸ್ಟ್ ವೇದಿಕೆ'ಯಲ್ಲಿ 3.11 ಕೋಟಿಗೂ ಹೆಚ್ಚು ಮಹಿಳಾ ಉದ್ಯಮಗಳು ನೋಂದಾಯಿಸಲ್ಪಟ್ಟಿವೆ. ಈ ನೋಂದಣಿಗಳ ಪ್ರಕಾರ ದೇಶದ ಎಲ್ಲಾ ನೋಂದಾಯಿತ ಎಂಎಸ್‌ಎಂಇಗಳಲ್ಲಿ ಮಹಿಳಾ ಮಾಲೀಕತ್ವದ ಉದ್ಯಮಗಳು ಸುಮಾರು ಶೇ.40ರಷ್ಟು ಪಾಲನ್ನು ಹೊಂದಿವೆ. ಮಹಿಳಾ ಉದ್ಯಮಿಗಳಿಗೆ ಪರಿಣಾಮಕಾರಿಯಾದ ಸುಧಾರಣೆಗಳಲ್ಲಿ ಒಂದೆಂದರೆ ಅದು ಉದ್ಯಮ್ ನೋಂದಣಿ ಪೋರ್ಟಲ್. ಸಂಪೂರ್ಣವಾಗಿ ಆನ್‌ಲೈನ್ ಆಗಿರುವುದು ಅಧಿಕಾರಶಾಹಿಯ ಅಡತಡೆಯನ್ನು ನಿವಾರಿಸಿತು. ಜನವರಿ 2023ರಲ್ಲಿ ಪ್ರಾರಂಭಿಸಲಾದ ಉದ್ಯಮ್‌ಅಸಿಸ್ಟ್, 'ಪ್ಯಾನ್ '(PAN) ಅಥವಾ 'ಜಿಎಸ್‌ಟಿಐಎನ್' ಹೊಂದಿರದ ಅನೌಪಚಾರಿಕ ಆರ್ಥಿಕತೆಯ ಮಹಿಳೆಯರನ್ನು ತಲುಪಿತು. ಆ ಮೂಲಕ ಆದ್ಯತೆಯ ವಲಯದ ಸಾಲ ಮತ್ತು ಸರ್ಕಾರಿ ಯೋಜನೆಯ ಪ್ರಯೋಜನಗಳ ವ್ಯಾಪ್ತಿಗೆ ತಂದಿತು.

ಆರ್ಥಿಕ ಶಕ್ತಿಯಾಗಿ ನಾರೀಶಕ್ತಿ

ಮಹಿಳೆಯರ ಸಬಲೀಕರಣವು ರಾಷ್ಟ್ರೀಯ ಕಾರ್ಯತಂತ್ರ ಎಂದು ಪ್ರಧಾನಿ ಮೋದಿ ಒತ್ತಿ ಹೇಳುತ್ತಾ ಬಂದಿದ್ದಾರೆ. ಅವರ ಮಾತುಗಳಲ್ಲಿ ಹೇಳುವುದಾದರೆ, ಮಹಿಳೆಯರು ಸಬಲೀಕರಣಗೊಂಡಾಗ ಕುಟುಂಬಗಳು ಸಶಕ್ತವಾಗುತ್ತವೆ. ಕುಟುಂಬಗಳು ಸಶಕ್ತವಾದಾಗ, ರಾಷ್ಟ್ರದ ಬಲಿಷ್ಠ ಬೆಳವಣಿಗೆ ಸಾಧ್ಯವಾಗುತ್ತದೆ. ನಾರಿ ಶಕ್ತಿ ವಂದನ್ ಅಧಿನಿಯಮವು ರಾಜಕೀಯ ಕ್ಷೇತ್ರದಲ್ಲಿ ಈ ತತ್ವದ ಅತ್ಯಂತ ಸ್ಪಷ್ಟ ಅಭಿವ್ಯಕ್ತಿಯಾಗಿದೆ. ಆದರೆ ಆರ್ಥಿಕ ಕ್ಷೇತ್ರದಲ್ಲಿ ವಿಶೇಷವಾಗಿ ಎಂಎಸ್‌ಎಂಇ ವಲಯದಲ್ಲಿ ಮಹಿಳೆಯರ ಬಗ್ಗೆ ಸರ್ಕಾರದ ಬದ್ಧತೆಯನ್ನು ಸಮಗ್ರ ಮತ್ತು ಬಹುಮುಖಿ ನೀತಿಗಳಲ್ಲಿ ಕಾಣಬಹುದಾಗಿದೆ.

ಎಂಎಸ್‌ಎಂಇ ಸಚಿವಾಲಯದ ಕಾರ್ಯಕ್ರಮಗಳು ಪೂರೈಕೆ ಬದಿಯಲ್ಲಿ ಎಂಟು ಪ್ರಮುಖ ಮಧ್ಯಸ್ಥಿಕೆ ವಿಭಾಗಗಳ ಮೂಲಕ ಉದ್ಯಮಿಗಳನ್ನು ಬೆಂಬಲಿಸುತ್ತವೆ. ತಂತ್ರಜ್ಞಾನದ ಪ್ರವೇಶ, ಸಾಲ ಮತ್ತುಹಣಕಾಸಿನ ಲಭ್ಯತೆ, ಡಿಜಿಟಲೀಕರಣವನ್ನು ಉತ್ತೇಜಿಸುವುದು, ಮೂಲಸೌಕರ್ಯ ಬೆಂಬಲ, ಔಪಚಾರಿಕೀಕರಣ ಮತ್ತು ಸೇರ್ಪಡೆ, ಮಾರುಕಟ್ಟೆಗೆ ಪ್ರವೇಶ ಮತ್ತು ಉದ್ಯಮ-ದರ್ಜೆಯ ಕೌಶಲ್ಯ. 5 ವರ್ಷಗಳಲ್ಲಿ ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿಕಾರ್ಯಕ್ರಮದ ಅಡಿಯಲ್ಲಿ 3.2 ಲಕ್ಷಕ್ಕೂ ಹೆಚ್ಚು ಮಹಿಳಾ ಮಾಲೀಕತ್ವದ ಉದ್ಯಮಗಳಿಗೆ ಬೆಂಬಲ ನೀಡಲಾಗಿದೆ. ಇತ್ತೀಚಿನ ದತ್ತಾಂಶದ ಪ್ರಕಾರ, ಒಟ್ಟಾರೆ ಪಿಎಂಇಜಿಪಿ ಫಲಾನುಭವಿಗಳಲ್ಲಿ ಶೇ. 39ರಷ್ಟು ಮಹಿಳೆಯರೇ ಆಗಿದ್ದು, ಇದು ಉದ್ಯಮಿ ಮಹಿಳೆಯರ ಬೆಳವಣಿಗೆಯ ಹಸಿವು ಪ್ರತಿಬಿಂಬಿಸುತ್ತದೆ. 'ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗಾಗಿ ಸಾಲ ಖಾತರಿ ನಿಧಿ ಟ್ರಸ್ಟ್' ಮಹಿಳಾ ಸಾಲಗಾರರಿಗೆ ಖಾತರಿಯ ವ್ಯಾಪ್ತಿಯನ್ನು ಶೇಕಡಾ 90ರವರೆಗೆ ಹೆಚ್ಚಿಸಿದೆ.

'ಮಹಿಳಾ ನಾರು ಯೋಜನೆ'ಯು ಮಹಿಳಾ ಕುಶಲಕರ್ಮಿಗಳಿಗೆ ವಿಶೇಷ ಕೌಶಲ್ಯ ಅಭಿವೃದ್ಧಿ ಮತ್ತು ಆರ್ಥಿಕ ಬೆಂಬಲವನ್ನು ನೀಡುತ್ತದೆ. ಎಂಎಸ್ ಎಂಇ-ಟೀಮ್ (ಟ್ರೇಡ್‌ಎನೇಬಲ್‌ಮೆಂಟ್ ಅಂಡ್ ಮಾರ್ಕೆಟಿಂಗ್) ಮೂಲಕ ಮಾರುಕಟ್ಟೆ ಸನ್ನದ್ಧತೆಗಾಗಿ ಮಹಿಳೆಯರಿಗೆ ಬೆಂಬಲ ಒದಗಿಸಲು ಗಮನ ನೀಡಲಾಗುತ್ತಿದೆ. ಇದರ ಅಡಿಯಲ್ಲಿ ಯೋಜನೆಯ 5 ಲಕ್ಷಫಲಾನುಭವಿಗಳಲ್ಲಿ ಶೇ.50ರಷ್ಟು ಮಹಿಳೆಯರಾಗಿರುವಂತೆ ಖಾತರಿಪಡಿಸುವ ಗುರಿಯನ್ನು ಹೊಂದಲಾಗಿದೆ. 'ಯಶಸ್ವಿನಿ' ಅಭಿಯಾನವು ಎಂಎಸ್‌ಎಂಇ ಯೋಜನೆಗಳು ಮತ್ತು ನೋಂದಣಿ ಪ್ರಯೋಜನಗಳ ಬಗ್ಗೆ ಮಹಿಳೆಯರಿಗೆ ತಿಳಿಸಲು ಮೀಸಲಾದ ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನವಾಗಿದೆ.

ಕೌಶಲ್ಯ, ಆತ್ಮವಿಶ್ವಾಸ, ಸಮುದಾಯ

ಉದ್ಯಮಶೀಲತೆ ಎನ್ನುವುದು ಸಾಲ ಮತ್ತು ಮಾರುಕಟ್ಟೆಗಳನ್ನು ಮೀರಿ ಕೌಶಲ್ಯ ಮತ್ತು ಆತ್ಮವಿಶ್ವಾಸದ ವಿಷಯವಾಗಿದೆ. ಸಾಂಪ್ರದಾಯಿಕವಾಗಿ ಮಹಿಳೆಯರೇ ಸಮುದಾಯಗಳ ಆರ್ಥಿಕ ಬೆನ್ನೆಲುಬಾಗಿರುವ ಈಶಾನ್ಯ ಭಾರತದಲ್ಲಿ, ಉದ್ದೇಶಿತ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಬೇತಿ ಪಡೆದವರಲ್ಲಿ ಮಹಿಳೆಯರೇ ಗರಿಷ್ಠ ಪ್ರಮಾಣದಲ್ಲಿರುವುದನ್ನು ಖಾತರಿಪಡಿಸಲಾಗಿದೆ. ಸ್ವಸಹಾಯ ಗುಂಪುಗಳನ್ನು 'ಎಂಎಸ್‌ಎಂಇ' ಬೆಂಬಲ ಪರಿಸರ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗಿದೆ, ಪರಸ್ಪರ ಬೆಂಬಲಿಸುವ ಮಹಿಳಾ ಉದ್ಯಮಿಗಳ ಸಮುದಾಯಗಳನ್ನು ರಚಿಸಲಾಗಿದೆ. 'ನಾರಿ ಶಕ್ತಿ ವಂದನ್ ಅಧಿನಿಯಮ' ಭಾರತದ ಮಹಿಳೆಯರು ದೇಶದ ಸಂಸತ್ತಿಗೆ ಸೇರಿದವರು ಎಂದು ಜಗತ್ತಿಗೆ ತಿಳಿಸಿದೆ. ಭಾರತದ ಮಹಿಳೆಯರು ಇಲ್ಲಿನ ಮಾರುಕಟ್ಟೆಗಳು, ಇಲ್ಲಿನ ಉದ್ಯಮಗಳು, ಇಲ್ಲಿನ ರಫ್ತು ಸರಪಳಿಗಳು, ಇಲ್ಲಿನ ನಾವೀನ್ಯತೆ ಕೇಂದ್ರಗಳು ಮತ್ತು ಇಲ್ಲಿನ ಆಡಳಿತ ಮಂಡಳಿಗಳ ಭಾಗವಾಗಿದ್ದಾರೆ ಎಂದು ಎಂಎಸ್‌ಎಂಇ ನೀತಿಗಳು ಹೇಳುತ್ತಿವೆ.

ಮೋದಿ 2047ರ ವಿಕಸಿತ ಭಾರತಕ್ಕಾಗಿ ತಮ್ಮ ದೂರದೃಷ್ಟಿಗೆ ಅಡಿಪಾಯವೆಂದು ಪ್ರತಿಪಾದಿಸಿರುವ ಅದೇ ಸತ್ಯದ ಎರಡು ಅಭಿವ್ಯಕ್ತಿಗಳು ಇವಾಗಿವೆ. ಅಭಿವೃದ್ಧಿ ಹೊಂದಿದ ಭಾರತವು 3 ಕೋಟಿಗೂ ಅಧಿಕ (ಮತ್ತಷ್ಟು ಹೆಚ್ಚುತ್ತಿರುವ) ಮಹಿಳಾ ಉದ್ಯಮಿಗಳಿಂದಲೇ ಅಭಿವೃದ್ಧಿಯ ಎಂಜಿನ್ ಆಗಿರುವ ದೇಶವಾಗಿರಲಿದೆ. ಆದರೆ ನಾವು ಇನ್ನೂ ಅಲ್ಲಿಗೆ ತಲುಪಿಲ್ಲ. ಈ ಸರ್ಕಾರದ ಮೇಲ್ವಿಚಾರಣೆಯಲ್ಲಿ ಮತ್ತು ನಮ್ಮ ಪ್ರಧಾನಮಂತ್ರಿಯವರ ಬದ್ಧತೆಯೊಂದಿಗೆ ನಾವು ನಿಸ್ಸಂದೇಹವಾಗಿ ಉತ್ತಮ ಹಾದಿಯಲ್ಲಿದ್ದೇವೆ.

ಇಸ್ರೇಲ್–ಲೆಬನಾನ್ ಕದನ ವಿರಾಮ ಒಪ್ಪಂದ ಅನ್ವಯ ವಾಣಿಜ್ಯ ಹಡಗುಗಳು ಸಾಗಲು ಜಲಸಂಧಿ ತೆರೆದ ಇರಾನ್

ಹಾರ್ಮುಜ್: ಮುಕ್ತ ಸಂಚಾರಕ್ಕೆ ಅವಕಾಶ

» ಅಮೆರಿಕ-ಇರಾನ್ ಒಪ್ಪಂದಕ್ಕೆ ಬರುವವರೆಗೆ ಈ ನಿಲುವು

» ಇರಾನ್ ವಿದೇಶಾಂಗ ಸಚಿವ, ಅಧ್ಯಕ್ಷ ಟ್ರಂಪ್ ಘೋಷಣೆ



ಟೆಹ್ರಾನ್: ಇರಾನ್ ಮತ್ತು ಅಮೆರಿಕ ರಾಷ್ಟ್ರಗಳು ಮಧ್ಯಪ್ರಾಚ್ಯ ಯುದ್ಧ ಕೊನೆಗೊಳಿಸಲು ಒಪ್ಪಂದಕ್ಕೆ ಬರುವವರೆಗೆ ಇಸ್ರೇಲ್–ಲೆಬನಾನ್ ಯುದ್ಧ ಕದನ ವಿರಾಮ ಒಪ್ಪಂದದ ಆಧಾರದಲ್ಲಿ ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿಯನ್ನು ಇರಾನ್ ತೆರೆಯಲಿದೆ. ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿಯನ್ನು ಇರಾನ್ ಸಂಪೂರ್ಣ ತೆರೆಯಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಘೋಷಿಸಿದ್ದಲ್ಲದೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೂ ದೃಢೀಕರಿಸಿದ್ದಾರೆ. ಇಸ್ರೇಲ್–ಲೆಬನಾನ್ ನಡುವಿನ 10 ದಿನಗಳ ಕದನ ವಿರಾಮ ಒಪ್ಪಂದದಲ್ಲಿ ಉಳಿದಿರುವ ದಿನಗಳ ಕಾಲ ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ನೀಡಲಾಗುವುದು ಎಂದು ಅಬ್ಬಾಸ್ ಸ್ಪಷ್ಟಪಡಿಸಿದ್ದಾರೆ.

ಮ್ಯಾಕ್ರಾನ್, ಸ್ಟಾರ್ಮರ್ ಸ್ವಾಗತ

ಹಾರ್ಮುಜ್ ತಾತ್ಕಾಲಿಕವಾಗಿ ತೆರೆಯಲು ಇರಾನ್ ಒಪ್ಪಿಕೊಂಡಿರುವುದನ್ನು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಮತ್ತು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಶುಕ್ರವಾರ ಸ್ವಾಗತಿಸಿದ್ದಾರೆ. ಇರಾನ್ ನಿರ್ಧಾರವನ್ನು ಸ್ವಾಗತಿಸಿದ ಮ್ಯಾಕ್ರಾನ್, ಎಲ್ಲವೂ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ. ಹಾರ್ಮುಜ್‌ನಲ್ಲಿ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಮತ್ತು ಸಾಗರೋತ್ತರ ನಿಯಮಗಳ ಪಾಲನೆ ಆಗಬೇಕು. ಮುಂದಿನ ವಾರ ಲಂಡನ್‌ನಲ್ಲಿ ಹಾರ್ಮುಜ್ ಪರಿಸ್ಥಿತಿ ಅವಲೋಕನಕ್ಕಾಗಿ 40 ರಾಷ್ಟ್ರಗಳ ಸಭೆ ಕರೆದಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ಜನರಿಗೆ ಶಾಂತಿ ಮತ್ತು ಸ್ಥಿರತೆ ಬೇಕಾಗಿದೆ. ಅಂತಾರಾಷ್ಟ್ರೀಯ ನಾಯಕರೆಲ್ಲರೂ ಜತೆಯಾಗಿ ಇದನ್ನು ಪ್ರತಿಪಾದಿಸಿದ್ದರಿಂದ ಸಾಧ್ಯವಾಗಿದೆ ಎಂದು ಸ್ಟಾರ್ಮರ್ ಹೇಳಿದ್ದಾರೆ.



ಕಚ್ಚಾ ತೈಲ ಬೆಲೆ ಶೇ.11 ಇಳಿಕೆ

ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕೆ ಹಾರ್ಮುಜ್ ಜಲಸಂಧಿಯನ್ನು ಪೂರ್ಣ ಪ್ರಮಾಣದಲ್ಲಿ ತೆರೆಯುವುದಾಗಿ ಇರಾನ್ ವಿದೇಶಾಂಗ ಸಚಿವರು ಘೋಷಿಸಿದ ತಕ್ಷಣ ಶುಕ್ರವಾರ ರಾತ್ರಿ ಜಾಗತಿಕ ಕಚ್ಚಾ ತೈಲ ಬೆಲೆ ಶೇ.11ರಷ್ಟು ಇಳಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲ ಬೆಲೆ 11.12 ಡಾಲರ್ (ಶೇ.11.2ರಷ್ಟು) ಇಳಿಕೆಯಾಗಿದೆ. ಇದರಿಂದ ಪ್ರತಿ ಬ್ಯಾರೆಲ್ ಕಚ್ಚಾ ತೈಲ ಬೆಲೆ 88.27 ಡಾಲರ್ ಅನ್ನು ತಲುಪಿದೆ. ಅಮೆರಿಕದ ವೆಸ್ಟ್ ಟೆಕ್ಸಾಸ್ ಕಚ್ಚಾ ತೈಲ 11.4 ಡಾಲರ್‌ನಷ್ಟು (ಶೇ.12) ಇಳಿಕೆಯಾಗಿದ್ದು, ಇದರಿಂದ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ಬೆಲೆಯು 83.29 ಡಾಲರ್ ಅನ್ನು ತಲುಪಿದೆ.



ನೌಕಾ ದಿಗ್ಬಂಧನ ಇರಲಿದೆ: ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ಇರಾನ್ ತೆರೆದರೂ ಸಹ ಅಮೆರಿಕ-ಇರಾನ್ ನಡುವಿನ ಕದನ ವಿರಾಮ ಒಪ್ಪಂದ ಶೇ.100ರಷ್ಟು ಇತ್ಯರ್ಥ ಆಗುವವರೆಗೆ ಇರಾನ್ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ಮೇಲೆ ಅಮೆರಿಕ ಸೇನೆ ಹೇರಿದ್ದ ನೌಕಾ ದಿಗ್ಬಂಧನವು ಮುಂದುವರಿಯಲಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇಸ್ರೇಲ್‌ಗಿದೆ ಸ್ವಯಂ ರಕ್ಷಣೆ ಹಕ್ಕು: ಕದನ ವಿರಾಮ ಒಪ್ಪಂದ ಪ್ರಕಾರ, ದಕ್ಷಿಣ ಲೆಬನಾನ್ ಪ್ರದೇಶದಲ್ಲಿ ಹಿಜ್ಬೊಲ್ಲಾ ಉಗ್ರರು ಅಥವಾ ಲೆಬನಾನ್ ನಾಗರಿಕರ ಮೇಲೆ ಇಸ್ರೇಲ್ ಸೇನೆ ದಾಳಿ ನಡೆಸುವಂತಿಲ್ಲ. ಆದರೆ ಸ್ವಯಂ ರಕ್ಷಣೆಯ ಹಕ್ಕನ್ನು ಇಸ್ರೇಲ್ ಉಳಿಸಿಕೊಂಡಿದೆ. ಆದರೆ ಇಸ್ರೇಲ್ ಸೇನೆ ಬೈರೂತ್ ಮತ್ತು ದಕ್ಷಿಣ ಲೆಬನಾನ್‌ನಲ್ಲಿ ಕದನ ವಿರಾಮ ಉಲ್ಲಂಘಿಸಿ ದಾಳಿ ನಡೆಸಿರುವುದಾಗಿ ಲೆಬನಾನ್ ಆರೋಪಿಸಿದೆ.

ಮಧ್ಯಪ್ರಾಚ್ಯ ಸಂಘರ್ಷ: ಪಾಕ್ ತತ್ತರ, 7ಗಂಟೆ ವಿದ್ಯುತ್ ಕಡಿತ!

ಇಸ್ಲಾಮಾಬಾದ್: ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಪಾಕಿಸ್ತಾನ ತೀವ್ರವಾಗಿ ತತ್ತರಿಸಿದ್ದು, ಇಡಿ ದೇಶದಲ್ಲಿ ದಿನಕ್ಕೆ 6ರಿಂದ 7ಗಂಟೆ ಕಾಲ ವಿದ್ಯುತ್ ಕಡಿತ ಅನಿವಾರ್ಯವಾಗಿದೆ . ಇದು ಪಾಕಿಸ್ತಾನ ಸರಕಾರ ಹಿಂದೆ ಘೋಷಿಸಿದ್ದಕ್ಕಿಂತ ಮೂರು ಪಟ್ಟು ಹೆಚ್ಚಿನ ಕಡಿತವಾಗಿದೆ. ಹಾಗೆಯೇ ಎಲ್ ಎನ್‌ಜಿ ಬಿಕ್ಕಟ್ಟಿಗೆ ಮಧ್ಯಪ್ರಾಚ್ಯ ಯುದ್ಧವೇ ಕಾರಣವಾಗಿದೆ, ಹಾಗೆಯೇ ವಿದ್ಯುತ್ ಕೊರತೆಗೆ ಜಲವಿದ್ಯುತ್ ಉತ್ಪಾದನೆಯಲ್ಲಿ ಆಗಿರುವ ಕುಸಿತ ಕಾರಣ. ಪರಿಸ್ಥಿತಿಯ ಮೇಲೆ ಈಗ ನಮಗೆ ಯಾವುದೇ ನಿಯಂತ್ರಣ ಇಲ್ಲದಂತಾಗಿದೆ ಎಂದು ಅಲ್ಲಿನ ಇಂಧನ ಸಚಿವ ಅವೈಸ್ ಲೆಘಾರಿ ಹೇಳಿದ್ದಾರೆ. ರಾತ್ರಿ ವೇಳೆ ಮತ್ತು ಪೀಕ್ ಅವರ್‌ಗಳಲ್ಲಿ ನಮಗೆ ವಿದ್ಯುತ್ ಒದಗಿಸಲು ಸಾಧ್ಯವಾಗದೆ ಜನತೆಗೆ ಅನಾನುಕೂಲವಾಗುತ್ತಿದ್ದಲ್ಲಿ, ನಾನೇ ಇದಕ್ಕೆ ಉತ್ತರದಾಯಿ. ಇದಕ್ಕಾಗಿ ಕ್ಷಮೆ ಯಾಚಿಸುತ್ತೇನೆ. ಆದರೆ ಇಂತಹ ಸನ್ನಿವೇಶ ಯಾಕೆ ಉಂಟಾಗಿದೆ ಎಂದರೆ ಪರಿಸ್ಥಿತಿಯ ಮೇಲೆ ನಮ್ಮ ನಿಯಂತ್ರಣ ತಪ್ಪಿದೆ ಎಂದು ಅವರು ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಪಾಕಿಸ್ತಾನವೀಗ 3,400ಮೆ.ವಾ.ವಿದ್ಯುತ್ ಕೊರತೆ ಎದುರಿಸುತ್ತಿದೆ. ಜಲವಿದ್ಯುತ್ ಉತ್ಪಾದನೆಯಲ್ಲಿ ಆಗಿರುವ ಕುಸಿತ ಮತ್ತು ಎಲ್ ಎನ್‌ಜಿ ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಾಗಿರುವ ತೀವ್ರ ಕುಸಿತ ಕಾರಣವಾಗಿದೆ .6000ಮೆ.ವಾ.ಸಾಮರ್ಥ್ಯದ ವಿದ್ಯುತ್ ಸ್ಥಾವರದಲ್ಲಿ ಈಗ ಕೇವಲ 500ಮೆ.ವಾ.ವಿದ್ಯುತ್ ಮಾತ್ರವೇ ಉತ್ಪಾದನೆಯಾಗುತ್ತಿದೆ. ಇದಕ್ಕೆ ಖತಾರ್‌ನಿಂದ ಎಲ್‌ಎನ್‌ಜಿ ಆಮದಿನಲ್ಲಾಗಿರುವ ಅಡಚಣೆಯೇ ಕಾರಣ. ಇದರಿಂದಾಗಿ ನಾವು ಈಗ ದೇಶಾದ್ಯಂತ ವಿದ್ಯುತ್ ಕಡಿತ ಮಾಡುವುದು ಅನಿವಾರ್ಯವಾಗಿದೆ ಎಂದು ಅವರು ತಿಳಿಸಿದರು. ಪಾಕಿಸ್ತಾನದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳಲ್ಲೂ ಭಾರೀ ಏರಿಕೆ ಉಂಟಾಗಿದ್ದು, ಅಡುಗೆ ಅನಿಲ ಪೂರೈಕೆಯಲ್ಲೂ ಭಾರೀ ವ್ಯತ್ಯಯವುಂಟಾಗಿದೆ.

ಸ್ನೇಹಿತ ಪ್ರಧಾನಿ ಮೋದಿ ಜತೆ ಫಲಪ್ರದ ಮಾತುಕತೆ: ಟ್ರಂಪ್

ವಾಷಿಂಗ್ಟನ್: ಈ ವಾರದ ಆರಂಭದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಬಹಳ ಉತ್ತಮ ದೂರವಾಣಿ ಸಂಭಾಷಣೆ ನಡೆದಿತ್ತು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗುರುವಾರ ತಡರಾತ್ರಿ ಶ್ವೇತಭವನದಲ್ಲಿ ಹೇಳಿದರು.



ಮಂಗಳವಾರ 40 ನಿಮಿಷಗಳ ದೂರವಾಣಿ ಸಂಭಾಷಣೆ

ನಾನು ಅವರೊಂದಿಗೆ ಬಹಳ ಉತ್ತಮ ಮಾತುಕತೆ ನಡೆಸಿದ್ದೇನೆ. ಅವರು ನನ್ನ ಭಾರತದಲ್ಲಿನ ಸ್ನೇಹಿತರು ಮತ್ತು ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ನಮ್ಮ ಮಾತುಕತೆ ತುಂಬಾ ಉತ್ತಮವಾಗಿತ್ತು ಎಂದು ಎಎನ್‌ಐ ಕೇಳಿದ ಪ್ರಶ್ನೆಗೆ ಟ್ರಂಪ್ ಪ್ರತಿಕ್ರಿಯೆ ನೀಡಿದ್ದರು.

ಮಂಗಳವಾರ ಪ್ರಧಾನಿ ಮೋದಿಗೆ ದೂರವಾಣಿ ಕರೆ ಮಾಡಿದ ಕುರಿತು ಟ್ರಂಪ್ ತಡವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಆ ವೇಳೆ ಇಬ್ಬರು ನಾಯಕರು ದ್ವಿಪಕ್ಷೀಯ ಸಂಬಂಧ ಹಾಗೂ ಪಶ್ಚಿಮ ಏಷ್ಯಾ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ ತೆರೆಯುವ ಕುರಿತು ಪರಿಸ್ಥಿತಿ ಅವಲೋಕನ ನಡೆಸಿದ್ದರು.

ಸ್ನೇಹಿತ ಅಧ್ಯಕ್ಷ ಟ್ರಂಪ್‌ರಿಂದ ಕರೆ ಸ್ವೀಕರಿಸಿದೆ. ವಿವಿಧ ಕ್ಷೇತ್ರಗಳಲ್ಲಿ ನಮ್ಮ ದ್ವಿಪಕ್ಷೀಯ ಸಹಕಾರದಲ್ಲಿ ಸಾಧಿಸಿದ ಪ್ರಗತಿ ಪರಿಶೀಲಿಸಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಸಮಗ್ರ ಜಾಗತಿಕ ತಂತ್ರಜ್ಞಾನ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ. ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಕೂಡ ಚರ್ಚಿಸಿ, ಹಾರ್ಮುಜ್ ಜಲಸಂಧಿಯನ್ನು ತೆರೆಯುವ ಮತ್ತು ಸುರಕ್ಷಿತವಾಗಿ ಇರಿಸುವ ಮಹತ್ವವನ್ನು ಒತ್ತಿ ಹೇಳಿದ್ದೇವೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ಅಮೆರಿಕ-ಇರಾನ್ ಮಧ್ಯೆ ದ್ವಿತೀಯ ಹಂತದ ಚರ್ಚೆಗೆ ಪಾಕ್‌ನಲ್ಲಿ ಸಿದ್ಧತೆ

ಇಸ್ಲಾಮಾಬಾದ್: ಅಮೆರಿಕ-ಇರಾನ್ ಮಧ್ಯೆ ಮುಂದಿನ ವಾರ ನಡೆಯಲಿರುವ ದ್ವಿತೀಯ ಹಂತದ ಕದನ ವಿರಾಮ ಮಾತುಕತೆಗೆ ಪಾಕಿಸ್ತಾನ ಸಕಲ ಸಿದ್ಧತೆಗಳನ್ನು ಆರಂಭಿಸಿದೆ ಎಂದು ಶುಕ್ರವಾರ ಪಾಕ್ ಅಧಿಕಾರಿಗಳು ತಿಳಿಸಿದ್ದಾರೆ. ಏ.22ರಂದು ಅಮೆರಿಕ-ಇರಾನ್ ತಾತ್ಕಾಲಿಕ ಕದನ ವಿರಾಮ ಕೊನೆಗೊಳ್ಳಲಿದ್ದು, ದ್ವಿತೀಯ ಹಂತದ ಮಾತುಕತೆಗೆ ಪಾಕ್ ಸಿದ್ಧತೆ ನಡೆಸುತ್ತಿದೆ.

ಮಧ್ಯಪ್ರಾಚ್ಯ ಯುದ್ಧವು ಜಾಗತಿಕ ಇಂಧನ ಪೂರೈಕೆಯನ್ನು ಅಸ್ತವ್ಯಸ್ತಗೊಳಿಸಿದೆ. ಈ ಯುದ್ಧದಿಂದ ಪಾಕ್ ಆರ್ಥಿಕತೆ ಇನ್ನಷ್ಟು ಕುಸಿತವನ್ನು ಕಂಡಿದೆ. ಇದರಿಂದ ಮೊದಲ ಮಾತುಕತೆ ವಿಫಲವಾದ ಬಳಿಕ ದ್ವಿತೀಯ ಹಂತದ ಮಾತುಕತೆಗೆ ಇರಾನ್ ಮತ್ತು ಅಮೆರಿಕವನ್ನು ಪಾಕ್ ಮನವೊಲಿಸಿದೆ.

ಸುಮಾರು 45 ವರ್ಷಗಳ ಬಳಿಕ ಎರಡು ವಾರದೊಳಗೆ ಅಮೆರಿಕ ಮತ್ತು ಇರಾನ್ ಇದು ಎರಡನೇ ಬಾರಿಗೆ ನೇರ ಚರ್ಚೆ ನಡೆಸಲಿವೆ. ಕಳೆದ ವಾರಾಂತ್ಯದಲ್ಲಿ ಅಮೆರಿಕ ಮತ್ತು ಇರಾನ್ ನಾಲ್ಕು ದಶಕಗಳ ಬಳಿಕ ನೇರ ಮಾತುಕತೆ ನಡೆಸಿದ್ದರೂ, ಒಪ್ಪಂದಕ್ಕೆ ಬರದೇ ಮಾತುಕತೆಗಳು ಅಂತ್ಯ ಕಂಡಿದ್ದವು. ಎರಡೂ ರಾಷ್ಟ್ರಗಳ ನಾಯಕರನ್ನು ಇನ್ನೊಮ್ಮೆ ನೇರ ಮಾತುಕತೆಗೆ ಕರೆತರಲು ಪಾಕ್ ತೀವ್ರ ರಾಜತಾಂತ್ರಿಕ ಚಟುವಟಿಕೆಗಳನ್ನು ನಡೆಸಿದೆ. ತಾತ್ಕಾಲಿಕವಾಗಿ ಘೋಷಿಸಲಾದ ಎರಡು ವಾರಗಳ ಕದನ ವಿರಾಮವನ್ನು ಎರಡೂ ದೇಶಗಳು ಮುಂದುವರಿಸುವ ಕಾರಣದಿಂದ, ಪಾಕಿಸ್ತಾನಕ್ಕೆ ತನ್ನ ಮಧ್ಯಸ್ಥಿಕೆ ಪ್ರಯತ್ನವನ್ನು ಪುನರಾರಂಭಿಸಲು ಅವಕಾಶ ಸಿಕ್ಕಿದಂತಾಗಿದೆ. ಪಾಕ್ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಬುಧವಾರ ಟೆಹ್ರಾನ್‌ಗೆ ಭೇಟಿ ನೀಡಿದರೆ, ಪ್ರಧಾನಿ ಶೆಹಬಾಜ್ ಶರೀಫ್ ಇದೇ ಹಿನ್ನೆಲೆ ಮೂರು ರಾಷ್ಟ್ರಗಳ ಪ್ರವಾಸವನ್ನು ನಡೆಸುತ್ತಿದ್ದಾರೆ.

ಸೌದಿ ಅರೇಬಿಯಾ ಮತ್ತು ಕತಾರ್ ನಾಯಕರೊಂದಿಗೆ ಮಾತುಕತೆ ನಡೆಸಿದ ಬಳಿಕ ಪಾಕ್ ಪ್ರಧಾನಿ ಗುರುವಾರ ರಾತ್ರಿ ಟರ್ಕಿಗೆ ಆಗಮಿಸಿದರೆ, ಸೇನಾ ಮುಖ್ಯಸ್ಥ ಮುನೀರ್ ಇರಾನ್‌ನ ರಾಜಕೀಯ ಮತ್ತು ಸೇನಾಧಿಕಾರಿಗಳೊಂದಿಗೆ ಇಪ್ಪತ್ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ಸಭೆ ನಡೆಸಿದ್ದಾರೆ.

ಪರಮಾಣು ಯೋಜನೆ ಕೈಬಿಡಲು ಸಿದ್ಧವಿಲ್ಲ ಇರಾನ್: ಟೆಹ್ರಾನ್ ತನ್ನ ಪರಮಾಣು ಬಾಂಬ್ ತಯಾರಿಕಾ ಯೋಜನೆ ಯನ್ನು ಕೈಬಿಡಲು ನಿರಾಕರಿಸಿ ರುವುದೇ ಅಮೆರಿಕ- ಇರಾನ್ ಮಧ್ಯೆ ಮಾತುಕತೆ ಒಪ್ಪಂದಕ್ಕೆ ಬರದಿರಲು ಪ್ರಮುಖ ಕಾರಣಗಳಲ್ಲೊಂದು ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಹೇಳಿದ್ದಾರೆ.



ಭದ್ರತೆ ಹೆಚ್ಚಿಸಿದ ಪಾಕ್

ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿ ನಗರಗಳಲ್ಲಿ ಅಮೆರಿಕ-ಇರಾನ್ ನಡುವಿನ ದ್ವಿತೀಯ ಹಂತದ ಯುದ್ಧ ವಿರಾಮ ಒಪ್ಪಂದ ಮಾತುಕತೆಗಾಗಿ ಪೂರ್ವಸಿದ್ಧತೆಗಳು ಆರಂಭಗೊಂಡಿದ್ದು, ಇತರ ಪ್ರಾಂತ್ಯಗಳಿಂದ ಸಾವಿರಾರು ಪೊಲೀಸರು ಹಾಗೂ ಅರೆಸೈನಿಕ ಸಿಬ್ಬಂದಿ ಆಗಮಿಸುತ್ತಿದ್ದಾರೆ. ಸಾಮಾನ್ಯವಾಗಿ ದೊಡ್ಡ ಮಟ್ಟದ ಭದ್ರತಾ ವ್ಯವಸ್ಥೆ ಅಗತ್ಯವಿದ್ದಾಗ, ಇಸ್ಲಾಮಾಬಾದ್ ಆಡಳಿತವು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಇತರ ಪ್ರಾಂತ್ಯಗಳ ಸಹಾಯ ಪಡೆಯುತ್ತದೆ. ಮೊದಲ ಹಂತದ ಮಾತುಕತೆ ಸಂದರ್ಭ 10,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿ ನಗರಗಳಲ್ಲಿ ವಾಹನ ಸಂಚಾರಕ್ಕೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ಹೇರಲಾಗಿದೆ. ಶಾಲಾ-ಕಾಲೇಜುಗಳನ್ನು, ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಮಾರುಕಟ್ಟೆಗಳನ್ನೂ ಮುಚ್ಚುವ ಸಾಧ್ಯತೆಗಳಿವೆ.

ಶಾಂತಿ ಒಪ್ಪಂದ ಅಂತಿಮವಾದರೆ ಇಸ್ಲಾಮಾಬಾದ್‌ಗೆ ಭೇಟಿ: ಟ್ರಂಪ್

ಅಮೆರಿಕ-ಇರಾನ್ ನಡುವಿನ ಶಾಂತಿ ಮಾತುಕತೆ ಯಶಸ್ವಿಯಾಗಿ ಒಪ್ಪಂದಕ್ಕೆ ಸಹಿ ಹಾಕಿದರೆ ತಾನು ಇಸ್ಲಾಮಾಬಾದ್‌ಗೆ ಭೇಟಿ ನೀಡುವುದಾಗಿ ಗುರುವಾರ ತಡರಾತ್ರಿ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿಕೊಂಡಿದ್ದಾರೆ. ಇದುವರೆಗೆ ನಾವು ಉತ್ತಮ ಮಾತುಕತೆ ನಡೆಸಿದ್ದೇವೆ ಎಂದು ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಯುರೇನಿಯಂ ಹಸ್ತಾಂತರ ಅಲ್ಲಗಳೆದ ಇರಾನ್

ಸಮೃದ್ಧೀಕರಿಸಿದ ಯುರೇನಿಯಂ ಹಸ್ತಾಂತರಿಸಲು ಇರಾನ್ ಒಪ್ಪಿಕೊಂಡಿದೆ ಎಂದು ಹೇಳುವ ಮೂಲಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಪೇಚಿಗೆ ಸಿಲುಕಿದ್ದಾರೆ. ಇರಾನ್ ತನ್ನಲ್ಲಿರುವ ಸಮೃದ್ಧೀಕರಿಸಿದ ಯುರೇನಿಯಂ ಸಂಗ್ರಹವನ್ನು ಅಮೆರಿಕಕ್ಕೆ ಹಸ್ತಾಂತರಿಸುವ ಯಾವುದೇ ಒಪ್ಪಂದವನ್ನು ನಾವು ಮಾಡಿಕೊಂಡಿಲ್ಲ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗೇರ್ ಘಾಲಿಬಫ್ ಸ್ಪಷ್ಟಪಡಿಸಿದ್ದಾರೆ. ಟ್ರಂಪ್ ಸುಳ್ಳು ಹೇಳಿದ್ದಾರೆ. ಇಂತಹ ಯಾವ ಒಪ್ಪಂದವೂ ಅಮೆರಿಕ-ಇರಾನ್ ನಡುವೆ ನಡೆದಿಲ್ಲವೆಂದು ಕೆಲವು ಇರಾನ್ ಮೂಲಗಳು ತಿಳಿಸಿವೆ.

ಕಿರುಸುದ್ದಿ

ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್‌ಗೆ ಹೈ ಆದೇಶ

ಹೊಸದಿಲ್ಲಿ: ಅಲಹಾಬಾದ್ ಹೈಕೋರ್ಟ್ (ಲಕ್ನೋ ಪೀಠ) ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ವಿರುದ್ಧ ಎಫ್‌ಐಆರ್ ದಾಖಲಿಸಲು ಮತ್ತು ಅವರ ಬ್ರಿಟಿಷ್ ಪೌರತ್ವದ ಬಗ್ಗೆ ತನಿಖೆ ನಡೆಸಲು ನಿರ್ದೇಶಿಸಿದೆ. ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ಲಕ್ನೋದ ಜನಪ್ರತಿ ನಿಧಿಗಳ ನ್ಯಾಯಾಲಯ ಜ.28ರ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಕಾರ್ಯಕರ್ತ ಎಸ್. ವಿಘ್ನೇಶ್ ಶಿಶಿರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ ಅಲ್ಹಾಬಾದ್ ಹೈಕೋರ್ಟ್ ಈ ಪ್ರಮುಖ ಆದೇಶ ನೀಡಿದೆ.

ಮರಳು ಮಾಫಿಯಾ: ಸಿಸಿಟಿವಿ ಅಳವಡಿಸಿ

ಹೊಸದಿಲ್ಲಿ: ರಾಷ್ಟ್ರೀಯ ಚಂಬಲ್ ಘರಿಯಾಲ್ ಅಭಯಾರಣ್ಯದಲ್ಲಿ ಅಕ್ರಮ ಮರಳು ಮಾಫಿಯಾ ತಡೆಗಟ್ಟಲು ಅರಣ್ಯ ಪ್ರದೇಶದಲ್ಲಿ ಸಿಸಿಟಿವಿ ಅಳವಡಿಸಲು ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಜಾದೂಗಾರ ಹೇಳಿಕೆ: ರಾಗಾ ವಿರುದ್ಧ ಬಿಜೆಪಿ ಆಕ್ರೋಶ

ಹೊಸದಿಲ್ಲಿ : ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ವಿಪಕ್ಷ ನಾಯಕ ರಾಹುಲ್ ಮಾಡಿದ ಟೀಕೆ ಲೋಕಸಭೆಯಲ್ಲಿ ಶುಕ್ರವಾರ ಕಾವೇರಿದ ಚರ್ಚೆಗೆ ಹೇತುವಾಯಿತು. ಪ್ರಧಾನಿ ಮೋದಿ ಅವರೋರ್ವ ಜಾದೂಗಾರನೆಂಬ ರಾಹುಲ್ ಟೀಕೆಯಿಂದ ಆಕ್ರೋಶಿತ ಸಚಿವ ರಾಜನಾಥ ಸಿಂಗ್, ತಮ್ಮ ಆಸನದಿಂದ ಎದ್ದು ನಿಂತು, ಇಂತಹ ಕಮೆಂಟ್‌ಗಳನ್ನು ಖಂಡಿಸಿದಷ್ಟೂ ಸಾಲದು, ಈ ರೀತಿ ಅಸಂಬದ್ಧ ಟೀಕೆ ಮೂಲಕ ರಾಹುಲ್ ರಾಷ್ಟ್ರೀಯ ಭಾವನೆಗಳಿಗೆ ಘಾಸಿ ಮಾಡುತ್ತಿದ್ದಾರೆ ಮತ್ತು ಸಶಸ್ತ್ರಪಡೆಗಳ ತ್ಯಾಗ ಬಲಿದಾನಗಳನ್ನು ಅಪಮಾನಿಸುತ್ತಿದ್ದಾರೆಂದು ಗುಡುಗಿದರು.

ಆಪರೇಷನ್ ಸಿಂದೂರ್ ಮತ್ತು ಬಾಲಾಕೋಟ್‌ನ ಜಾದೂಗಾರ ಈಗ ಸಿಕ್ಕಿಬಿದ್ದಿದ್ದಾರೆ. ಜಾದೂಗಾರನಿಗೂ ಉದ್ಯಮಿಗಳಿಗೂ ನಂಟಿದೆ ಎಂಬುದು ಎಲ್ಲರಿಗೂ ಗೊತ್ತು ಎಂದು ರಾಹುಲ್ ಸದನದಲ್ಲಿ ತಮ್ಮ ನಾಲಗೆ ಹರಿಯಬಿಟ್ಟಿದ್ದರು. ರಾಹುಲ್‌ರ ಈ ಅಸಂಬದ್ಧ ಟೀಕೆಗಳಿಂದ ಕೋಪಗೊಂಡ ಸಚಿವ ರಾಜನಾಥ ಸಿಂಗ್, ಪ್ರಧಾನಿ ಮೋದಿ, ಸಶಸ್ತ್ರ ಪಡೆಗಳನ್ನು ಹೀನಾಯವಾಗಿ ಟೀಕಿಸುತ್ತಿರುವ ವಿಪಕ್ಷ ನಾಯಕನ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವರನ್ನು ಉಚ್ಚಾಟಿಸಬೇಕೆಂದು ಆಗ್ರಹಿಸಿದರು. ರಾಹುಲ್ ವ್ಯಂಗ್ಯವನ್ನು ಸಭಾಪತಿ ಓಂ ಬಿರ್ಲಾ ಕೂಡ ತೀಕ್ಷ್ಣವಾಗಿ ಖಂಡಿಸಿದರು. ಜಾದೂಗಾರ ಪದ ಬಳಕೆ ಅಸಾಂವಿಧಾನಿಕ ಎಂದು ರಾಹುಲ್‌ರನ್ನು ತರಾಟೆಗೆತ್ತಿಕೊಂಡರು.ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಮರುವಿಂಗಡಣೆ ಬಗ್ಗೆ ಚರ್ಚೆಗಾಗಿ ಆಯೋಜಿಸಲಾಗಿದ್ದ ವಿಶೇಷ ಅಧಿವೇಶನದಲ್ಲಿ ಈ ರೀತಿ ವಾಗ್ವಾದಗಳು ನಡೆದುವು. ಚರ್ಚೆಯಲ್ಲಿ ಪಾಲ್ಗೊಂಡಿದ್ದ ರಾಹುಲ್, ಮಸೂದೆಯು ಮಹಿಳಾ ಮೀಸಲಾತಿ ಪರ ಅತ್ಯಲ್ಪ ಕಾಳಜಿ ಹೊಂದಿದೆ ಆರೋಪಿಸಿದ್ದರು.

ಧಾರ್ಮಿಕ ಆಚರಣೆಗಳಿಗೆ ನ್ಯಾಯಾಂಗ ಪರಿಶೀಲನೆ?

ಹೊಸದಿಲ್ಲಿ : ಧಾರ್ಮಿಕ ಪಂಥಗಳ ಆಚರಣೆಗಳೂ ನ್ಯಾಯಾಂಗ ಪರಿಶೀಲನೆಗೆ ಒಳಪಡಬಹುದು ಎಂದು ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. ಶಬರಿಮಲೆ ದೇವಸ್ಥಾನದ ಮಹಿಳಾ ಪ್ರವೇಶ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ಭೇದಭಾವ ಕುರಿತ ಅರ್ಜಿಗಳ ವಿಚಾರಣೆಯ ವೇಳೆ ನ್ಯಾಯಾಲಯ ಈ ಅಭಿಪ್ರಾಯ ನೀಡಿದೆ.

ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ವಿಚಾರಣೆ ನಡೆಸುತ್ತಿರುವ ಈ ಪ್ರಕರಣದಲ್ಲಿ, ನ್ಯಾಯಮೂರ್ತಿಗಳು ವೈಯಕ್ತಿಕ ಧಾರ್ಮಿಕ ನಂಬಿಕೆಗಳನ್ನು ಮೀರಿ, ಮನಸ್ಸಿನ ಸ್ವಾತಂತ್ರ್ಯ ಮತ್ತು ಸಂವಿಧಾನದ ಮೌಲ್ಯಗಳ ಆಧಾರದಲ್ಲಿ ತೀರ್ಪು ನೀಡಬೇಕು ಎಂದು ಸೂಚಿಸಿದೆ.ವಿಚಾರಣೆಯ ವೇಳೆ ಹಿರಿಯ ವಕೀಲ ರಾಜೀವ್ ಧವನ್, ಈ ಪ್ರಕರಣವು ಕೇವಲ ಹಿಂದೂ ಧರ್ಮ ಅಥವಾ ಶಬರಿಮಲೆ ದೇವಸ್ಥಾನಕ್ಕೆ ಮಾತ್ರ ಸೀಮಿತವಲ್ಲ, ಬದಲಾಗಿ ಎಲ್ಲಾ ಧರ್ಮಗಳ ನಂಬಿಕೆ ಮತ್ತು ಸಂವಿಧಾನಾತ್ಮಕ ವ್ಯವಸ್ಥೆಗೆ ಸಂಬಂಧಿಸಿದೆ ಎಂದು ವಾದಿಸಿದರು.

'ಮನಸ್ಸಿನ ಸ್ವಾತಂತ್ರ್ಯವು ಅತ್ಯಂತ ವಿಶಾಲವಾದ ಹಕ್ಕು. ಇದು ವ್ಯಕ್ತಿಗೆ ಧರ್ಮವನ್ನೂ ಪ್ರಶ್ನಿಸುವ ಅವಕಾಶ ನೀಡುತ್ತದೆ, ಆದರೆ ಅದು ಗೌರವಪೂರ್ವಕವಾಗಿರಬೇಕು,' ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ನ್ಯಾ.ನಾಗರತ್ನ ಅವರು 'ಮನಸ್ಸಿನ ಸ್ವಾತಂತ್ರ್ಯ ಧರ್ಮಕ್ಕಿಂತ ದೊಡ್ಡದೇ?' ಎಂದು ಪ್ರಶ್ನಿಸಿದರು. ನ್ಯಾ. ಅಮಾನುಲ್ಲಾ ಕೂಡ ನ್ಯಾಯಮೂರ್ತಿಗಳು ತಮ್ಮ ವೈಯಕ್ತಿಕ ಧಾರ್ಮಿಕ ಭಾವನೆಗಳನ್ನು ಮೀರಿ ಸಂವಿಧಾನಾತ್ಮಕ ದೃಷ್ಟಿಕೋನದಿಂದ ವಿಚಾರಣೆ ನಡೆಸಬೇಕೆಂದು ಅಭಿಪ್ರಾಯಪಟ್ಟರು.

ರಾಮನಿಗೆ ಪ್ರಕಾಶ್ ರಾಜ್ ಅವಮಾನ, ಎಫ್‌ಐಆರ್

ಕೋಝಿಕೋಡ್: ಕೇರಳ ಸಾಹಿತ್ಯ ಸಮ್ಮೇಳನದಲ್ಲಿ, ಕೋಟ್ಯಂತರ ಭಕ್ತರ ಆರಾಧ್ಯದೇವ ಭಗವಾನ್ ಶ್ರೀರಾಮಚಂದ್ರ ಮತ್ತು ರಾಮಾಯಣ ವನ್ನು ಅಣಕಿಸಿರುವ ನಟ ಪ್ರಕಾಶ್‌ರಾಜ್ ವಿರುದ್ಧ ಕ್ರಿಮಿನಲ್ ದೂರು ದಾಖಲಾಗಿದೆ.

ಸಾಹಿತ್ಯ ಮೇಳದಲ್ಲಿ ಶ್ರೀರಾಮ ಮತ್ತು ರಾಮಾಯಣ ಸಹಿತ ಹಿಂದು ಧರ್ಮ-ದೇವರುಗಳನ್ನು ಪ್ರಕಾಶ್‌ರಾಜ್ ಉದ್ದೇಶಪೂರ್ವಕ ಅಣಕಿಸಿದ್ದಾರೆ. ಇವರ ಕುಚೋದ್ಯಗಳು ಲಕ್ಷಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಘಾಸಿ ಮಾಡಿದೆ. ಮುಕ್ತ ಭಾಷಣ ಮತ್ತು ಉದ್ದೇಶಪೂರ್ವಕ ಅವಮಾನಕ್ಕಿರುವ ವ್ಯತ್ಯಾಸದ ಮಿತಿಯನ್ನು ಮೀರಿ ಪ್ರಕಾಶ್ ರಾಜ್ ಹಿಂದು ಧರ್ಮವನ್ನು ಅವಮಾನಿಸಿದ್ದಾರೆಂದು ದೂರಿನಲ್ಲಿ ಆರೋಪಿಸಲಾಗಿದೆ. ಹಾಸ್ಯಾಸ್ಪದ ಜತೆ ವಿಡಂಬನಾತ್ಮಕವಾಗಿ ಪ್ರಕಾಶ್ ರಾಜ್ ಹಿಂದು ದೇವರುಗಳನ್ನು, ಧರ್ಮವನ್ನು ಟೀಕಿಸಿದ್ದು, ಇದಕ್ಕೆ ನೆರೆದವರ ಪೈಕಿ ಕೆಲವರಿಂದ ಚಪ್ಪಾಳೆ ವ್ಯಕ್ತವಾದರೆ, ಬಹುತೇಕರು ಸ್ಥಿರತೆ ಅಥವಾ ತಾಟಸ್ಥ್ಯಭಾವ ತಳೆದಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ. ಭಗವಾನ್ ಶ್ರೀರಾಮ, ರಾಮಾಯಣ ಸಹಿತ ಹಿಂದು ಧರ್ಮ -ಧರ್ಮೀಯರನ್ನು ಅವಮಾನಿಸಿ, ನೋಯಿಸಿದ್ದಕ್ಕಾಗಿ ಈ ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕಲಂ 299, 302, 196, 352, 353 ಕಲಂಗಳಲ್ಲಿ ಪ್ರಕರಣ ದಾಖಲಾಗಿದೆ. ಇವು ಅರಾಜಕತೆ, ವೈರತ್ವ ಹುಟ್ಟುಹಾಕುವುದು, ಸಾರ್ವಜನಿಕ ಸೌಹಾರ್ದತೆಗೆ ಭಂಗ ಇತ್ಯಾದಿಗಳಿಗೆ ದಂಡನೆ ನೀಡುವ ಕಲಂಗಳಾಗಿವೆ.

ರಾಜ್ಯಸಭೆಗೆ ಹರಿವಂಶ್ ಉಪಸಭಾಪತಿ

ಹೊಸದಿಲ್ಲಿ : ನಾಮನಿರ್ದೇಶಿತ ಸದಸ್ಯ ಹರಿವಂಶ್ ಅವರು ಸತತ ತೃತೀಯ ಬಾರಿಗೆ ರಾಜ್ಯಸಭೆಯ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಸದನದ ಉಪಾಧ್ಯಕ್ಷ ರಾಗಿ ಹರಿವಂಶ್ ಆಯ್ಕೆಗಾಗಿ ಸದನ ನಾಯಕ ಜೆ.ಪಿ.ನಡ್ಡಾ ಮಂಡಿಸಿದ ನಿರ್ಣಯವನ್ನು ಎಸ್ .ಫಂಗ್ನಾನ್ ಕೊನ್ಯಾಕ್ ಅನುಮೋದಿಸಿದ್ದರು. ಬಳಿಕ ಇದನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು. ಹರಿವಂಶ್ ಆಯ್ಕೆಯಾಗಿ ಇವರ ಪರ ಒಟ್ಟು 5 ನಿರ್ಣಯಗಳನ್ನು ಮಂಡಿಸಲಾಗಿತ್ತು.

ಹರಿವಂಶ್ ರಾಜ್ಯಸಭೆಯ ಉಪಾಧ್ಯಕ್ಷರಾಗಿ ಆಯ್ಕೆ ಯಾಗಿದ್ದಾರೆಂದು ತಾನು ಘೋಷಿಸು ವುದಾಗಿ ಸದನದ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ನಿರ್ಣಯ ಅಂಗೀಕಾರ ಬಳಿಕ ತಿಳಿಸಿದರು. ಇದೇ ಮೊದಲ ಬಾರಿಗೆ ನಾಮನಿರ್ದೇಶಿತ ಸದಸ್ಯರೊಬ್ಬರು ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ. ಇದು ಅವರ ಮೇಲೆ ಸದನದ ವಿಶ್ವಾಸಕ್ಕೆ ಸಾಕ್ಷಿ ಎಂದು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ.

ದಿಲ್ಲಿ ಕೆಂಪು ಕೋಟೆ ಸ್ಫೋಟ ಪ್ರಕರಣದಲ್ಲಿ ಆಘಾತಕಾರಿ ಮಾಹಿತಿ ಬಹಿರಂಗ


ದೇಶವ್ಯಾಪಿ ದಾಳಿಗೆ ನಡೆದಿತ್ತು ಸಂಚು

» ಜಮ್ಮು ಕಾಶ್ಮೀರ ಪೊಲೀಸರಿಂದ ಆರೋಪಪಟ್ಟಿ ಸಲ್ಲಿಕೆ

» ಉಗ್ರ ಜಾಲದಲ್ಲಿ ವೈದ್ಯರ ಸಂಪರ್ಕ ಬಯಲು

ಹೊಸದಿಲ್ಲಿ: ದಿಲ್ಲಿಯ ಕೆಂಪು ಕೋಟೆ ಸಮೀಪ ನಡೆದ ಸ್ಫೋಟ ಪ್ರಕರಣದ ತನಿಖೆಯಲ್ಲಿ ಕಾಶ್ಮೀರ ಮೂಲದ ಉಗ್ರ ಜಾಲದ ಹಿಂದೆ ವೈದ್ಯರು ಸೇರಿದಂತೆ ಉನ್ನತ ಶಿಕ್ಷಣ ಪಡೆದವರ ಪಾತ್ರವಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ರಾಜ್ಯ ತನಿಖಾ ಸಂಸ್ಥೆ (ಎಸ್ಐಎ) 4 ವೈದ್ಯರು ಸೇರಿ ಒಟ್ಟು 10 ಮಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ.

ತನಿಖೆ ಪ್ರಕಾರ, ಈ ಜಾಲವು ಕಾಶ್ಮೀರದಲ್ಲಿ ಕಾರ್ಯ ನಿರ್ವಹಿಸು ತ್ತಿದ್ದರೂ ದೇಶದ ಇತರ ಭಾಗಗಳಲ್ಲಿಯೂ ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸುತ್ತಿತ್ತು. ಪ್ರಮುಖ ಆರೋಪಿ ಉಮರ್ ಉನ್ ನಬಿ ನೇತೃತ್ವದಲ್ಲಿ ಕಾರ್ಯನಿರ್ವಹಿಸಿದ್ದ ಈ ಗುಂಪು, ಉಗ್ರ ಸಂಘಟನೆಗಳ ಸಿದ್ಧಾಂತಗಳನ್ನು ಯುವಕರಲ್ಲಿ ಹರಡುವುದು, ಅವರನ್ನು ನೇಮಕ ಮಾಡಿಕೊಳ್ಳುವುದು ಮತ್ತು ದಾಳಿಗಳಿಗೆ ಸಿದ್ಧಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿತ್ತು. ಆರೋಪ ಪಟ್ಟಿಯಲ್ಲಿ ಹೇಳಿರುವಂತೆ, ಈ ಜಾಲವು ಡಿಜಿಟಲ್ ವೇದಿಕೆಗಳ ಮೂಲಕ ರಹಸ್ಯ ಸಂವಹನ ನಡೆಸುತ್ತಿದ್ದು, ಸುರಕ್ಷಿತಾ ವ್ಯವಸ್ಥೆಗಳನ್ನು ತಪ್ಪಿಸಲು ವಿಶೇಷ ತಂತ್ರಗಳನ್ನು ಬಳಸುತ್ತಿತ್ತು. ದಿಲ್ಲಿಯ ರೆಡ್‌ಫೋರ್ಟ್ ಪ್ರದೇಶದಲ್ಲಿ ನಡೆದ ಕಾರು ಸ್ಫೋಟ ಪ್ರಕರಣವು ಇವರ ಕಾರ್ಯಚಟುವಟಿಕೆಗಳಿಗೆ ನೇರವಾಗಿ ಸಂಬಂಧಿಸಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.



ವೈದ್ಯರು ಸೇರಿದಂತೆ ಸಮಾಜದಲ್ಲಿ ಗೌರವಾನ್ವಿತ ವೃತ್ತಿಯವರೇ ಉಗ್ರ ಚಟುವಟಿಕೆಗಳಲ್ಲಿ ತೊಡಗಿರುವುದು ಭದ್ರತಾ ಸಂಸ್ಥೆಗಳಿಗೆ ಗಂಭೀರ ಆತಂಕ ಉಂಟುಮಾಡಿದೆ. ಇದು ಕೇವಲ ಭೌತಿಕ ದಾಳಿಗಳಷ್ಟೇ ಅಲ್ಲ, ಸಿದ್ಧಾಂತ ಮಟ್ಟದಲ್ಲಿಯೂ ಉಗ್ರವಾದ ವಿಸ್ತರಿಸುತ್ತಿರುವುದನ್ನು ಸೂಚಿಸುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇದೇ ವೇಳೆ, ಈ ಜಾಲವು ದೇಶದ ವಿವಿಧ ನಗರಗಳಲ್ಲಿ ದೊಡ್ಡ ಮಟ್ಟದ ದಾಳಿಗಳಿಗೆ ಸಂಚು ರೂಪಿಸಿದ್ದ ಸಾಧ್ಯತೆಗಳನ್ನೂ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ.

ಮುಖ್ಯಾಂಶಗಳು

» ಕೆಂಪುಕೋಟೆ ಸ್ಫೋಟ ಪ್ರಕರಣದಲ್ಲಿ ಹೊಸ ತಿರುವು

» 4 ವೈದ್ಯರು ಸೇರಿ 10 ಮಂದಿ ವಿರುದ್ಧ ಎಸ್‌ಐಎ ಚಾರ್ಜ್‌ಶೀಟ್

» ಉಮರ್ ಉನ್ ನಬಿ ನೇತೃತ್ವದ ಉಗ್ರ ಜಾಲ

» ಡಿಜಿಟಲ್ ಮೂಲಕ ನೇಮಕಾತಿ, ಉಗ್ರ ಸಿದ್ಧಾಂತ ಹರಡುವಿಕೆ

ಟಿಸಿಎಸ್ ಲವ್ ಜಿಹಾದ್ ಪ್ರಕರಣದ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವೀಸ್

ಸಂಪೂರ್ಣ ಮಾಡ್ಯೂಲ್ ಭೇದಿಸಲಿದ್ದೇವೆ

ಮುಂಬೈ: ಮಹಾರಾಷ್ಟ್ರದ ನಾಸಿಕ್ ನಲ್ಲಿರುವ ದೇಶದ ಪ್ರಮುಖ ಟೆಕ್ ದೈತ್ಯ ಟಿಸಿಎಸ್ ನಲ್ಲಿ ನಡೆದಿರುವ ಕಾರ್ಪೊರೇಟ್ ಜಿಹಾದ್ ಮತ್ತು ಲೈಂಗಿಕ ಕಿರುಕುಳ ಪ್ರಕರಣದ ಸಂಪೂರ್ಣ ಮಾಡ್ಯೂಲ್ ಅನ್ನು ಭೇದಿಸಲಿದ್ದೇವೆ ಎಂಬುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಶುಕ್ರವಾರ ಘೋಷಿಸಿದ್ದಾರೆ.

ಈ ಮೂಲಕ ಕಾರ್ಪೊರೇಟ್ ಜಿಹಾದ್ ಮತ್ತು ಲೈಂಗಿಕ ಕಿರುಕುಳದ ಆಘಾತಕಾರಿ ಕುಕೃತ್ಯದ ಹಿಂದಿರುವ ಷಡ್ಯಂತ್ರ ಬಗ್ಗೆ ಈಗ ಮಹಾರಾಷ್ಟ್ರ ಸರಕಾರವೂ ಗಂಭೀರ ನಿಲುವು ತಳೆದಿದೆ. ದೇಶದ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿ ಟಿಸಿಎಸ್ ಈ ವಿಷಯವನ್ನು ಗಂಭೀರವಾಗಿ ಗಮನಿಸಿದೆ. ಪ್ರಸ್ತುತ ನಡೆಯುತ್ತಿರುವ ತನಿಖೆಗೆ ಸಹಾಯ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಕಂಪನಿ ತೆಗೆದುಕೊಂಡಿರುವ ಕ್ರಮಗಳನ್ನು ಶ್ಲಾಘಿಸಿದರು. ಈ ಹೇಯ ಸಂಚಿನಲ್ಲಿ ಶಾಮೀಲಾದ ಯಾರನ್ನೂ ಬಿಡುವುದಿಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಇದು ಒಂದು ಮಾಡ್ಯೂಲ್‌ನಿಂದ ಹುಟ್ಟಿಕೊಟ್ಟ ಗಂಭೀರ ಸಮಸ್ಯೆಯಾಗಿದ್ದು, ಈ ಮಾಡ್ಯೂಲನ್ನು ನಾವು ಭೇದಿಸುತ್ತೇವೆ. ನಾವು ಕೇಂದ್ರ ಸಂಸ್ಥೆಗಳಿಂದಲೂ ಸಹಾಯ ಪಡೆಯುತ್ತಿದ್ದೇವೆ ಎಂದು ಅವರು ಮಾಹಿತಿ ನೀಡಿದರು. ಈ ಷಡ್ಯಂತ್ರದಲ್ಲಿ ಮಹಿಳಾ ಉದ್ಯೋಗಿಗಳನ್ನು ಗುರಿಯಾಗಿಸಲು ಏಳು ಪುರುಷ ಆರೋಪಿಗಳು ಸಂಘಟಿತ ಗ್ಯಾಂಗ್‌ನಂತೆ ಕಾರ್ಯನಿರ್ವಹಿಸುತ್ತಿದ್ದ ಅಂಶವನು ಪೊಲೀಸ್ ತನಿಖೆಯು ಬಯಲಿಗೆಳೆದಿದ್ದು, ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು 9 ಪ್ರಕರಣಗಳನ್ನು ದಾಖಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಏ.9ರಂದೇ ನಿದಾ ಖಾನ್ ಅಮಾನತು

ಹೊಸದಿಲ್ಲಿ: ಮಹಾರಾಷ್ಟ್ರದ ನಾಸಿಕ್‌ನಲ್ಲಿ ಟಿಸಿಎಸ್ ಬಿಪಿಒ ಘಟಕದಲ್ಲಿ ನಡೆದ ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಬಲವಂತದ ಮತಾಂತರಕ್ಕೆ ಪ್ರಯತ್ನಿಸಿದ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್‌ಳನ್ನು ಏ.9ರಂದು ಕೆಲಸದಿಂದ ಅಮಾನತುಗೊಳಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ. ನಿದಾ ಖಾನ್ ಮೇಲಿನ ಗಂಭೀರ ಆರೋಪ ಮತ್ತು ಪೊಲೀಸ್ ತನಿಖೆಯ ಹಿನ್ನೆಲೆ ಟಿಸಿಎಸ್ ನಿದಾಳನ್ನು ಉದ್ಯೋಗದಿಂದ ಅಮಾನತುಗೊಳಿಸಿದೆ. ನ್ಯಾಯಾಂಗ ಅಥವಾ ಪೊಲೀಸ್ ಕಸ್ಟಡಿಯಲ್ಲಿ ಸಿಲುಕಿರುವ ನಿಮ್ಮ ಮೇಲಿನ ಗಂಭೀರ ಆರೋಪದ ಕುರಿತು ಕಂಪನಿಗೆ ತಿಳಿದುಬಂದಿದ್ದು, ಗಂಭೀರತೆಯನ್ನು ಅರ್ಥೈಸಿಕೊಂಡು ನೀವು ಉದ್ಯೋಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲದ ಕಾರಣ ಮ್ಯಾನೇಜ್ ಮೆಂಟ್‌ನ ಮುಂದಿನ ನಿರ್ಧಾರದವರೆಗೆ ನಿಮ್ಮನ್ನು ಅಮಾನತಿನಲ್ಲಿಡುವ ತೀರ್ಮಾನಕ್ಕೆ ಬಂದಿದೆ ಎಂದು ಉಲ್ಲೇಖಿಸಿದ್ದಾರೆ.

ಗರ್ಭಿಣಿ ಎಂದು ನಿರೀಕ್ಷಣಾ ಜಾಮೀನಿಗೆ ಅರ್ಜಿ?: ನಿದಾ ಪ್ರಸ್ತುತ ಮುಂಬೈನಲ್ಲಿದ್ದು, ಮೊದಲ ಮಗುವಿನ ನಿರೀಕ್ಷೆಯಲ್ಲಿ ಇರುವುದಾಗಿ ಹೇಳಿಕೊಂಡಿದ್ದಾಳೆ. ಪೊಲೀಸರ ಕೈಗೆ ಸಿಗದೆ ತಲೆಮರೆಸಿರುವ ನಿದಾ ತನ್ನ ಆರೋಗ್ಯ ಪರಿಸ್ಥಿತಿಯನ್ನೇ ಬಳಸಿಕೊಂಡು ನಾಸಿಕ್ ಸ್ಥಳೀಯ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

17-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 480	ಹಳೆ ಕರಿಗೋಟು	235 - 265
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 100
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 310
ಹೊಸ ಪಠೋರ	350 - 400	**ಕಾಳುಮೆಣಸು ಧಾರಣೆ**	
ಹಳೆ ಪಠೋರ	375 - 405	ಕಾಳುಮೆಣಸು	450 - 680
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	110 - 290	ಆರ್‌ಎಸ್‌ಎಸ್ 1	227.50
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	196.00
ಹಳೆ ಕೋಕಾ	325 - 345	ಸ್ಕ್ರಾಪ್ 1	138.50
ಹೊಸ ಕರಿಗೋಟು	235 - 265	ಸ್ಕ್ರಾಪ್ 2	125.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-49) ಡ್ರಾ ಏಪ್ರಿಲ್ 17ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RK 632730 (IDUKKI)

Consolation Prize Rs.5,000/-
RA 632730 RB 632730 RC 632730 RD 632730
RE 632730 RF 632730 RG 632730 RH 632730
RJ 632730 RL 632730 RM 632730

2nd Prize Rs.30,00,000/- [30 Lakhs]
RD 275085 (ADOOR)

3rd Prize Rs.5,00,000/- [5 Lakhs]
RH 636090 (KASARAGOD)

FOR THE TICKETS ENDING WITH THE FOLLOWING NUMBERS

4th Prize Rs.5,000/-
1599 1612 1732 2005 3136 3823 4047 5831 6313 6596 6883 7245 7713 8388 8412 8871 9025 9313 9396

5th Prize Rs.2,000/-
0242 1213 2409 2704 4077 8775

6th Prize Rs.1,000/-
0336 0705 2333 2357 2584 3147 3640 3669 3715 3789 4190 4242 4374 5614 6032 6277 7263 7506 7674 7897 8171 8423 8903 9355 9777

7th Prize Rs.500/-
0030 0272 0573 0744 0777 0952 1389 1553 1588 2020 2042 2209 2224 2310 2498 2605 2730 2919 2944 3075 3236 3279 3356 3393 3700 3842 3947 3984 3985 4105 4159 4236 4311 4379 4426 4691 4857 4901 4956 5401 5839 5910 6533 6647 6680 6717 6807 6832 7125 7167 7259 7266 7390 7399 7617 7633 7642 7677 7904 7963 8040 8240 8290 8335 8447 8571 8639 8805 8842 9108 9132 9262 9266 9552 9699 9771

8th Prize Rs.200/-
0091 0241 0315 0524 0606 0628 0694 0732 0779 0993 1026 1459 1514 1604 1672 1678 1854 1878 1883 1913 2223 2337 2438 2442 2616 2822 3050 3072 3142 3651 3681 3738 3828 3871 4079 4107 4466 4560 4561 4790 4858 5049 5071 5072 5212 5278 5288 5384 5529 5630 5699 5725 5783 5804 5851 5882 6093 6139 6195 6247 6502 6603 6656 6728 6730 6766 6820 6891 6955 7327 7483 7549 7622 7717 7745 7781 8001 8099 8101 8154 8234 8246 8484 8569 8598 8712 9155 9236 9423 9566 9605 9868

9th Prize Rs.100/-
0021 0352 0355 0361 0467 0496 0639 0647 0728 0775 0971 1239 1349 1353 1418 1432 1598 1750 1765 1786 1787 1934 1946 2028 2080 2114 2245 2537 2590 2752 2906 2957 3250 3252 3269 3380 3463 3708 3736 3745 3838 3878 3899 3987 4166 4184 4189 4357 4383 4410 4411 4414 4493 4563 4701 4753 4814 4882 4900 4935 5068 5080 5194 5231 5260 5277 5283 5312 5632 5644 5693 5719 5836 5847 5950 6036 6110 6219 6286 6432 6438 6475 6519 6589 6628 6696 6715 6741 6823 6829 6837 6858 6875 6882 6966 7026 7222 7312 7331 7412 7564 7796 7828 7987 8009 8029 8033 8037 8108 8142 8227 8300 8329 8434 8507 8542 8597 8744 8759 8832 8846 8947 9014 9039 9122 9128 9149 9197 9248 9335 9353 9354 9364 9376 9427 9473 9628 9727 9728 9730 9847 9877 9937 9958

ದಾಖಲಾತಿ ಕಳೆದು ಹೋಗಿದೆ

ಕ್ರಯಪತ್ರ (MGT-1-07140-2025-26)ವು ಮಂಗಳೂರು ನಗರದ 313 ಏರ್‌ಪೋರ್ಟ್ ಏರ್‌ಪೋರ್ಟ್ ವ್ಯೂ ರಸ್ತೆಯ ಫ್ಲ್ಯಾಟ್ ನಂ. 308, ಏರ್‌ಪೋರ್ಟ್ ರಸ್ತೆ, ಕೆಂಜಾರಿನಲ್ಲಿ ವಾಸ್ತವ್ಯವಿರುವ ಶಹನಾಝ್ ಬಾನು, ನನ್ನಿಂದ ಕಳೆದು ಹೋಗಿರುತ್ತದೆ. ಸಿಕ್ಕಿದವರು ಮೇಲಿನ ವಿಳಾಸಕ್ಕೆ ಅಥವಾ 9740111083ಗೆ ಸಂಪರ್ಕಿಸಿ ತಲುಪಿಸಿದಲ್ಲಿ ಸೂಕ್ತ ಬಹುಮಾನ ನೀಡಲಾಗುವುದು.

ಸಾರ್ವಜನಿಕ ಪ್ರಕಟಣೆ

ಮಡಿಕೇರಿ ತಾಲೂಕು, ಮದೆ ಗ್ರಾಮದಲ್ಲಿ ವಾಸವಿರುವ ಪೌತಿ ಶ್ರೀ ರಾಜು ಜಿ. ಮತ್ತು ಶ್ರೀಮತಿ ಮೇರಿರವರ ಮಗನಾದ **ರೋಹಿ ವರ್ಗೀಸ್ ಆರ್.**, ಪ್ರಾಯ 40 ವರ್ಷಗಳು, ಆದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಶೈಕ್ಷಣಿಕ ಹಾಗೂ ಇತರೆ ದಾಖಲೆಗಳಲ್ಲಿ ನನ್ನ ಹೆಸರು **ರೋಹಿ ವರ್ಗೀಸ್ ಆರ್.** ಎಂಬುದಾಗಿ ದಾಖಲಾಗಿರುತ್ತದೆ. ನನ್ನ ಧರ್ಮದ ದಾಖಲಾತಿಯಲ್ಲಿ **ಗೀವರ್ಗೀಸ್** ಎಂಬುದಾಗಿ ನಮೂದಿಸಲಾಗಿದೆ. ಆದ್ದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ **ಗೀವರ್ಗೀಸ್** ಎಂಬುದರ ಬದಲಿಗೆ **ರೋಹಿ ವರ್ಗೀಸ್ ಆರ್.** ಎಂಬುದಾಗಿ ತಿದ್ದುಪಡಿ ಮಾಡಿಕೊಡಬೇಕಾಗಿ ಕೇಳಿಕೊಂಡು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿರುತ್ತೇನೆ.

ಸಹಿ/- ರೋಹಿ ವರ್ಗೀಸ್

ಮಡಿಕೇರಿ
17.04.2026

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ., ಚಿತ್ರದುರ್ಗ (ಜಿ)

ಸಂ.ತಾ.ಸಾ.ಆ.(ಚ) ನಾ.ಕ್ಲಿ.ಟೆಂ/ಟೆಂಡರ್/1/2025-26/21 ದಿನಾಂಕ: 15.04.2026

ಇ-ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿಯಲ್ಲಿ)

2026-27ರ ಸಾಲಿಗಾಗಿ ನಾನ್ ಕ್ಲಿನಿಕಲ್ ಮತ್ತು ಗ್ರೂಪ್ ಡಿ ಸೇವೆ ನಿರ್ವಹಿಸಲು ಮುಖ್ಯ ವೈದ್ಯಾಧಿಕಾರಿಗಳು, ತಾ.ಸಾ.ಆಸ್ಪತ್ರೆ, ಚಳ್ಳಕೆರೆ ಇವರ ಹೆಸರಿನಲ್ಲಿ ಪ್ರತಿಷ್ಠಿತ ನೊಂದಾಯಿತ ಸಂಸ್ಥೆಯವರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್‌ನ್ನು ಕರೆಯಲಾಗಿದ್ದು, ಇ-ಟೆಂಡರ್ ನಮೂನೆಗಳನ್ನು http://kppp.karnataka.gov.in ರಲ್ಲಿ ಅಂತರ್ ಜಾಲದಲ್ಲಿ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ::15.04.2026 ರಿಂದ 14.05.2026 ರ ವರೆಗೆ ಮತ್ತು ಅಂತರ್ ಜಾಲದಲ್ಲಿ ಭರ್ತಿ ಮಾಡಲು ಕೊನೆಯ ದಿನಾಂಕ:14.05.2026 ರ ಅಪರಾಹ್ನ 5.00ಗಂಟೆಯ ವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 16.05.2026 ರ ಬೆಳಿಗ್ಗೆ 11 ಗಂಟೆಗೆ. ಕಾರಣಾಂತರದಿಂದ ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡುವ, ಡೌನ್ ಲೋಡ್ ಮಾಡುವ ಹಾಗೂ ತೆರೆಯುವ ದಿನಾಂಕಗಳಂದು ಸರ್ಕಾರಿ ರಜೆ ಘೋಷಿಸಿದಲ್ಲಿ ಅದರ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://kppp.karnataka.gov.in ರಲ್ಲಿ ಪಡೆಯಬಹುದು.

DIPR/CTA/KSMCA/45/2026-27

ಸಹಿ/- ಮುಖ್ಯ ವೈದ್ಯಾಧಿಕಾರಿಗಳು
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ.

ಬಜಪೆ ಪಟ್ಟಣ ಪಂಚಾಯತ್

ಅಂಚೆ: ಬಜಪೆ, ಮಂಗಳೂರು ತಾಲೂಕು, ದ.ಕ. ಜಿಲ್ಲೆ - 574142
ದೂರವಾಣಿ ಸಂಖ್ಯೆ: 0824-2252418 Email: cobajpetp@gmail.com

ಸಂ: ಬಪಪಂ/ಜೆಇ/ಟೆಂಡರ್/02/2026-27 ದಿನಾಂಕ: 17.04.2026

ಟೆಂಡರ್ ಪ್ರಕಟಣೆ (ಇ-ಟೆಂಡರಿಂಗ್ ಮುಖಾಂತರ)

ಬಜಪೆ ಪಟ್ಟಣ ಪಂಚಾಯತ್‌ನ 2026-27ನೇ ಸಾಲಿನ ಪಟ್ಟಣ ಪಂಚಾಯತ್ ನಿಧಿ ಅನುದಾನದಡಿ ವಾರ್ಷಿಕ ನಿರ್ವಹಣೆಯ 03 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರು ದಸ್ತಾವೇಜಿನಲ್ಲಿ (Standard tender document) ಇ-ಟೆಂಡರಿಂಗ್ ಮುಖಾಂತರ ಐಟಂವಾರು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಬಹುದು/ಪಡೆಯಬಹುದು.

Indent No.:
DMA/2026-27/SE7693
DMA/2026-27/SE7704
DMA/2026-27/SE7703

1) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 17.04.2026
2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 02.05.2026 ಸಂಜೆ 04:00 ಗಂಟೆಗೆ
3) ಸ್ವೀಕೃತವಾದ ಟೆಂಡರು ತೆರೆಯುವ ದಿನಾಂಕ ಮತ್ತು ವೇಳೆ : 04.05.2026 ಸಂಜೆ 5:00 ಗಂಟೆಗೆ

ಸಹಿ/- ಅಧ್ಯಕ್ಷರು, ಬಜಪೆ ಪಟ್ಟಣ ಪಂಚಾಯತ್
ಸಹಿ/- ಮುಖ್ಯಾಧಿಕಾರಿ, ಬಜಪೆ ಪಟ್ಟಣ ಪಂಚಾಯತ್

DIPR/DK/MPL/87/26-27

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.

ಸಂಖ್ಯೆ:ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್-01/2026-27-2. ದಿ:16-04-2026.

(ಇ-ಪ್ರೊಕ್ಯೂರ್ ಮೆಂಟ್ ಪೋರ್ಟ್‌ಲ್ ಮೂಲಕ)

2026-27ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗ ವ್ಯಾಪ್ತಿಯ ವಿವಿಧ ವಲಯದಲ್ಲಿ ಆನೆ ನಿರೋಧಕ ಕಂದಕ ನಿರ್ಮಾಣ, ನಿರ್ವಹಣೆ ಮತ್ತು ಆನೆ ನಿರೋಧಕ ಕಂದಕದಲ್ಲಿಯ ಮೆದು ಮತ್ತು ಗಟ್ಟಿ ಬಂಡೆ ಕಲ್ಲುಗಳನ್ನು ಪಡೆಯುವ ಕಾಮಗಾರಿಗಳಿಗೆ ಸಂಬಂಧಪಟ್ಟ ಅರ್ಹ ಗುತ್ತಿಗೆದಾರರಿಂದ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ: 02-05-2026ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕಾಮಗಾರಿಯ ಅಂದಾಜು ಮೊತ್ತ:-46.75520 ಲಕ್ಷಗಳು

1. ಆನೆ ನಿರೋಧಕ ಕಂದಕ ನಿರ್ಮಾಣ, ನಿರ್ವಹಣೆ ಮತ್ತು ಆನೆ ನಿರೋಧಕ ಕಂದಕದಲ್ಲಿಯ ಮೆದು ಮತ್ತು ಗಟ್ಟಿ ಬಂಡೆ ಕಲ್ಲುಗಳನ್ನು ಪಡೆಯುವ ಕಾಮಗಾರಿಗಳಿಗೆ
*) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02-05-2026.
*) ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 04-05-2026 17.00.
*) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ : 04-05-2026 17:30.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/93/04/103

ಕರ್ನಾಟಕ ಸರಕಾರ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಬಾಳ ಗ್ರಾಮ ಪಂಚಾಯತ್

ಮಂಗಳೂರು ತಾಲೂಕು, ದ.ಕ. ಜಿಲ್ಲೆ, ದೂರವಾಣಿ:- 9480862496

ಬಾ.ಗ್ರಾ.ಪಂ.ಕ್ರ.ಸಂ.:10/ 2026-27 ದಿನಾಂಕ: 15.04.2026

ಏಲಂ ಪ್ರಕಟಣೆ

ಬಾಳ ಗ್ರಾಮ ಪಂಚಾಯತ್ ಸುಪರ್ದಿಗೆ ಒಳಪಟ್ಟ ಅಂಗಡಿ ಕೋಣೆಯನ್ನು ದಿನಾಂಕ: 27.04.2026 ರಂದು ಸೋಮವಾರ ಅಪರಾಹ್ನ 2.30ಕ್ಕೆ ಸರಿಯಾಗಿ ಪಂಚಾಯತ್ ಸಭಾಭವನದಲ್ಲಿ ಬಹಿರಂಗ ಏಲಂ ಮಾಡಲಾಗುವುದು.

ಕ್ರ. ಸಂ.	ಬಾಡಿಗೆ ಅಂಗಡಿ ಕೋಣೆ ಸಂಖ್ಯೆ	ಏಲಂ ಅವಧಿ	ಏಲಂನಲ್ಲಿ ಭಾಗವಹಿಸುವವರು ತೆರಬೇಕಾದ ಏಲಂ ಠೇವಣಿ	ಷರಾ
1	ಬಾಳ ಸಮುದಾಯ ಭವನದ ಬಳಿಯ ವಾಣಿಜ್ಯ ಸಂಕೀರ್ಣದ ಅಂ. ಕೋ. ಸಂ 15, 16, 17 ಮತ್ತು 18	01-05-2026 ರಿಂದ 30-04-2029 (36 ತಿಂಗಳು)	5000.00	ಏಲಂ ಖಾಯಂ ಆದ ಮುಂದಿನ 11 ಗಂಟೆಯೊಳಗೆ 6 ತಿಂಗಳ ಬಾಡಿಗೆ ಮೊತ್ತವನ್ನು ಮುಂಗಡವಾಗಿ ಗ್ರಾಮ ಪಂಚಾಯತಿಗೆ ಪಾವತಿಸತಕ್ಕದ್ದು

ಷರಾ:- ಏಲಂ ಶರ್ತಗಳನ್ನು ಕಚೇರಿ ಸಮಯದಲ್ಲಿ ತಿಳಿದುಕೊಳ್ಳಬಹುದು.

ವಿ. ಸೂ.:- ಅಂಗಡಿ ಕೋಣೆ ಸಂಖ್ಯೆ 15 ನ್ನು ಕಡ್ಡಾಯವಾಗಿ ಬಾಳ ಗ್ರಾಮ ಪಂಚಾಯತಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗೆ ನಿಯಮಾನುಸಾರ ಮೀಸಲಿರಿಸಿದೆ. ಏಲಂನಲ್ಲಿ ಪ. ಜಾತಿ / ಪ.ಪಂ ದವರು ಭಾಗವಹಿಸದಿದ್ದಲ್ಲಿ ಏಲಂ ಪ್ರಕ್ರಿಯೆಯಂತೆ ಇತರ ಸಾಮಾನ್ಯ ವರ್ಗದವರಿಗೆ ನೀಡಲಾಗುವುದು.

ಸಹಿ/-
ಆಡಳಿತಾಧಿಕಾರಿ / ಪಂ. ಅಭಿವೃದ್ಧಿ ಅಧಿಕಾರಿ
ಬಾಳ ಗ್ರಾಮ ಪಂಚಾಯತ್

DIPR/DK/MPL/86/26-27

ಕರ್ನಾಟಕ ಗೃಹ ಮಂಡಳಿ

Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: CE/KHB/2026-27/SE0379 Date: 16.04.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕುಂದಾಣ ಗ್ರಾಮದ ಸರ್ವೆ ನಂ. 138 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 30.04.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/233/ಆಕಾರ್/2026-27

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ

ನಂ2 ಕಟ್ಟಡ್‌ಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560 001. ದೂರವಾಣಿ: 080-22220227
ವೆಬ್‌ಸೈಟ್: www.kpwd.gov.in

ಸಂಖ್ಯೆ: ಕಾನಿಇಂ/ಕವಿ2/ಸಇ-1,2,3/2026-27 ದಿನಾಂಕ: 13.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27

ಕಾರ್ಯಪಾಲಕ ಅಭಿಯಂತರರು, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ-2000ರನ್ವಯ ಕೆಡಬ್ಲ್ಯೂ-1 ಕೆಡಬ್ಲ್ಯೂ-2 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.

(1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು **ದಿನಾಂಕ: 16.04.2026 ರಿಂದ 24.04.2026 ಸಂಜೆ 5.30 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 24.04.2026 ಸಂಜೆ 5.30 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ **ದಿನಾಂಕ: 27.04.2026 ರಂದು ಬೆಳಗ್ಗೆ 10.30 ಕ್ಕೆ** ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ಉನಿ-ಸಿ.ಪಿ/220/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ-577222

ನಂಭಕಾಶಿ/ಇಂ.ವಿಭಾಗ/ತಾಂಶಾಖೆ/ಮರು ಟೆಂಡರ್/2026-27/19
ದಿನಾಂಕ: 15.04.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (IFT - 02/2026-27)

Head of Account :- 2705-115

ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ-1999, ನಿಯಮಗಳು-2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ 2026-27 (ದಿನಾಂಕ: 01.04.2026 ರಿಂದ 31.03.2027 ರವರೆಗೆ) ನೇ ಸಾಲಿಗೆ ಆಡಳಿತಾಧಿಕಾರಿಗಳು, ಭದ್ರಾ ಕಾಡಾ, ಶಿವಮೊಗ್ಗ, ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರ್ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಸಿದ್ಲಾಪುರ ಮತ್ತು ಕೃಷಿ ಮತ್ತು ಸಹಕಾರ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಅಧ್ಯಕ್ಷರ ಆಪ್ತ ಶಾಖೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಕೆಲವೊಂದು ಹುದ್ದೆಗಳಿಗೆ ಕೊರತೆಯಿರುವ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಮಾನವ ಶಕ್ತಿ ಸಂಸ್ಥೆಯಿಂದ ನೇಮಿಸಿಕೊಳ್ಳುವಲ್ಲಿ ವಿವರವಾದ ಸ್ಪರ್ಧಾತ್ಮಕ ಅಲ್ಪಾವಧಿ ಮರು ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ-ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆ.ಪಿಪಿಪಿ-ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 15.04.2026 ರಿಂದ ದಿ: 24.04.2026 ರವರೆಗೆ. **2**. ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 24.04.2026 ಸಂಜೆ 04.30 ಗಂಟೆವರೆಗೆ **3**. ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 27.04.2026 ಬೆಳಿಗ್ಗೆ 11.30 ಗಂಟೆಗೆ **4**. ಆರ್ಥಿಕ ಬಿಡ್ ತೆರೆಯುವ ದಿ: 28.04.2026 ಮಧ್ಯಾಹ್ನ 12.30 ಗಂಟೆಯ ನಂತರ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.karnataka.gov.in ನಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/88/04/99

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ನಂ. PCB 280 INFRA EPH 2025/169 ದಿನಾಂಕ: 16.04.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಜೆ.ಐ ಅಗ್ರಹಾರ ಗ್ರಾಮದ ಸರ್ವೆ ನಂ. 1 ರಿಂದ 8, ತರಬನಹಳ್ಳಿ ಗ್ರಾಮದ ಸರ್ವೆ ನಂ.12, 14 ರಿಂದ 49 ಹಾಗೂ 66 ರಿಂದ 72 ಮತ್ತು ಹುಲಿಕುಂಟೆ ಗ್ರಾಮದ 139, 145 ರಿಂದ 160, 163 ರಿಂದ 166, 168 ರಿಂದ 183, 232 ರಿಂದ 252, 262 ರಿಂದ 293 ಹಾಗೂ 295 ರಿಂದ 306 ಗಳಲ್ಲಿ ಒಟ್ಟು 1051.01 ಎಕರೆ (425.33 ಹೆಕ್ಟೇರ್) ಪ್ರದೇಶದಲ್ಲಿ ನಾಲೆಡ್ಜ್, ವೆಲ್ಬಿಂಗ್ ಮತ್ತು ಇನೊವೇಟಿವ್ ಸಿಟಿ 3ನೇ ಹಂತ (KWIN CITY -Phase-3) ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ-ಕರ್ನಾಟಕ ಇವರಿಂದ ಯೋಜನಾದಾರರು ಉಲ್ಲೇಖದ ನಿಯಮಗಳನ್ನು (Terms of Reference, TOR) ಪತ್ರ ದಿನಾಂಕ: 28.01.2026 ಕಡತ ಸಂಖ್ಯೆ: SEIAA 29 IND 2025, ಪ್ರಸ್ತಾವನೆ ಸಂಖ್ಯೆ: SIA/KA/INFRA1/558538/2025 ಹಾಗೂ ದಿನಾಂಕ: 27.11.2025 ಮತ್ತು TOR Identification No: TO25B3102KA5683816N ರಂತೆ ಪಡೆದಿರುತ್ತಾರೆ. ಪ್ರವರ್ತಕರ ಪತ್ರ ಸಂಖ್ಯೆ. KIADB/EE-3/3050/2025-26, ದಿನಾಂಕ: 03.02.2026 ರ ಕೋರಿಕೆಯಂತೆ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ: ಕರಾಮಾನಿಮಂ/ಪ್ರಾ.ಕ(ದೊಡ್ಡಬಳ್ಳಾಪುರ)/ಪಸಾಸ/2025-26/1258, ದಿನಾಂಕ: 27.03.2026 ರಲ್ಲಿ ತಿಳಿಸಿರುವಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ದೊಡ್ಡಬಳ್ಳಾಪುರ ಜಿಲ್ಲೆ ರವರು ದಿನಾಂಕ: **20ನೇ ಮೇ 2026 ರಂದು ಬುಧವಾರ ಬೆಳಗ್ಗೆ 11.00 ಗಂಟೆಗೆ** ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. ಸಂಸ್ಥೆಯ ಹೆಸರು ಮತ್ತು ವಿಳಾಸ : ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ವಲಯ ಕಛೇರಿ, ಬೆಂಗಳೂರು, #14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು-560001.

2. ಉದ್ದೇಶಿತ ಯೋಜನೆಯ ಸ್ಥಳ : ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಜೆ.ಐ ಜೆ.ಐ ಅಗ್ರಹಾರ ಗ್ರಾಮದ ಸರ್ವೆ ನಂ. 1 ರಿಂದ 8, ತರಬನಹಳ್ಳಿ ಗ್ರಾಮದ ಸರ್ವೆ ನಂ.12, 14 ರಿಂದ 49 ಹಾಗೂ 66 ರಿಂದ 72 ಮತ್ತು ಹುಲಿಕುಂಟೆ ಗ್ರಾಮದ 139, 145 ರಿಂದ 160, 163 ರಿಂದ 166, 168 ರಿಂದ 183, 232 ರಿಂದ 252, 262 ರಿಂದ 293 ಹಾಗೂ 295 ರಿಂದ 306 ಗಳಲ್ಲಿ ಒಟ್ಟು 1051.01 ಎಕರೆ (425.33 ಹೆಕ್ಟೇರ್) ಪ್ರದೇಶ.

3. ಯೋಜನೆಯ ಕಾರ್ಯಚಟುವಟಿಕೆ : ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಜೆ.ಐ ಅಗ್ರಹಾರ ಗ್ರಾಮದ ಸರ್ವೆ ನಂ. 1 ರಿಂದ 8, ತರಬನಹಳ್ಳಿ ಗ್ರಾಮದ ಸರ್ವೆ ನಂ.12, 14 ರಿಂದ 49 ಹಾಗೂ 66 ರಿಂದ 72 ಮತ್ತು ಹುಲಿಕುಂಟೆ ಗ್ರಮದ 139, 145 ರಿಂದ 160, 163 ರಿಂದ 166, 168 ರಿಂದ 183, 232 ರಿಂದ 252, 262 ರಿಂದ 293 ಹಾಗೂ 295 ರಿಂದ 306 ಗಳಲ್ಲಿ ಒಟ್ಟು 1051.01 ಎಕರೆ (425.33 ಹೆಕ್ಟೇರ್) ಪ್ರದೇಶದಲ್ಲಿ ನಾಲೆಡ್ಜ್, ವೆಲ್ಬಿಂಗ್ ಮತ್ತು ಇನೊವೇಟಿವ್ ಸಿಟಿ 3ನೇ ಹಂತ (KWIN CITY -Phase 3) ಅಭಿವೃದ್ಧಿ ಪಡಿಸುವ ಕುರಿತು.

4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ: 20ನೇ ಮೇ 2026 ರಂದು ಬುಧವಾರ, ಸಮಯ: ಬೆಳಗ್ಗೆ 11.00 ಗಂಟೆಗೆ, ಸ್ಥಳ : ಉದ್ದೇಶಿತ ಸ್ಥಳ, ಜೆ.ಐ.ಅಗ್ರಹಾರ ಗ್ರಾಮದ ಸರ್ವೆ ನಂ.8, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

5. ಯೋಜನೆಯ ವೆಚ್ಚ : ರೂ. 2263.38 ಕೋಟಿ (ಯೋಜನಾ ಮೊತ್ತ).

6. ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ : **(1)** ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಕಛೇರಿ ಸಂಕೀರ್ಣ, ಭೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(2)** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಛೇರಿ ಸಂಕೀರ್ಣ, ಭೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(3)** ಜಿಲ್ಲಾ ಕೈಗಾರಿಕಾ ಕೇಂದ್ರ, ಜಿಲ್ಲಾ ಕಛೇರಿ ಸಂಕೀರ್ಣ, ಭೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(4)** ತಹಶೀಲ್ದಾರ ಕಾರ್ಯಾಲಯ, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(5)** ಗ್ರಾಮ ಪಂಚಾಯಿತಿ ಕಾರ್ಯಾಲಯ, ಹುಲಿಕುಂಟೆ ಗ್ರಾಮ ಪಂಚಾಯಿತಿ, ಹುಲಿಕುಂಟೆ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(6)** ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ-ಬೆಂಗಳೂರು ಉತ್ತರ ಅರ್ಬನ್ ಇಕೋ ಪಾರ್ಕ್, 1ನೇ ಮಹಡಿ, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕ ಪ್ರದೇಶ, ಬೆಂಗಳೂರು-560058. **(7)** ಪ್ರಾದೇಶಿಕ ಕಛೇರಿ-ದೊಡ್ಡಬಳ್ಳಾಪುರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಟಿ.ಬಿ. ಸರ್ಕಲ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-561203. **(8)** ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034. **(9)** ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ-ಕರ್ನಾಟಕ, 4ನೇ ಗೇಟ್, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001. **(10)** ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ : ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ **(ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ)** ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ: https://kspcb.karnataka.gov.in ನಲ್ಲಿ ಪಡೆಯಬಹುದು.**

ಸಹಿ/-
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಮಂಗಳೂರು ಮಹಾನಗರಪಾಲಿಕೆ

ಮನಪಾ/ನಯೋವಿ/ಟಿ.ಡಿ.ಆರ್/ಸಿಆರ್ - 113/2025-26 ದಿನಾಂಕ: 05.02.2026

ಫಾರಂ - 1 (ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14 ಬಿ ಪ್ರಕಾರ ಎಂಸಿಸಿ ಅಳವಡಿಸಿಕೊಂಡ ಕಾರ್ಯವಿಧಾನ)

ಅಧಿಸೂಚನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-ಬಿ ಅವಕಾಶಗಳನ್ವಯ ಈ ಕೆಳಗಿನ ಅನುಸೂಚಿಯಲ್ಲಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಮಂಗಳೂರು ಮಹಾನಗರಪಾಲಿಕೆಗೆ ಸ್ಥಳೀಯ ಸಂಸ್ಥೆಯ ಪ್ರಸ್ತಾವನೆಯನ್ವಯ **ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸುರತ್ಕಲ್ ಸೆಕ್ರೇಡ್ ಹಾರ್ಟ್ ಶಾಲೆಯ ದ್ವಾರದಿಂದ ಗೋವಿಂದದಾಸ ಕಾಲೇಜು ಹಿಂಭಾಗದಿಂದ ಮುಂದುವರೆದು ಗೋವಿಂದದಾಸ ಕಾಲೇಜು ಮಹಿಳಾ ಹಾಸ್ಟೇಲ್ ವರೆಗಿನ ರಸ್ತೆ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಜಮೀನನ್ನು** KTCP ಕಾಯ್ದೆಯಂತೆ ಸ್ವಾಧೀನಪಡಿಸಲು ಅವಶ್ಯಕವಾಗಿರುತ್ತದೆ. ಸದರಿ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಬಿಟ್ಟುಕೊಡುವ ಭೂಮಾಲಿಕರುಗಳು ಮತ್ತು ಹಿತಾಸಕ್ತಿದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಯೋಜನೆಯ ವ್ಯಾಪ್ತಿಯಲ್ಲಿನ ಜಮೀನಿಗೆ ಸಂಬಂಧಪಟ್ಟವರು ಸಂಬಂಧಿಸಿದ ದಾಖಲಾತಿಗಳಾದ (1) ಶೀರ್ಷಿಕೆಯ ಪತ್ರ/ ಋಣಭಾರ ಪತ್ರ (2) ಇತ್ತೀಚಿನ ಪಹಣಿ ಪತ್ರ/ಖಾತಾ ಪತ್ರ (3) ಮ್ಯುಟೇಶನ್ ಪ್ರತಿ (4) ತೆರಿಗೆ ಪಾವತಿಸಿದ ರಶೀದಿಗಳು (5) ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿದ ಆದೇಶ ಪ್ರತಿ (6) ರೆವೆನ್ಯೂ ನಕ್ಷೆ ಪ್ರತಿ (7) ಆಕಾರ್ ಬಂದ್ ಇತ್ಯಾದಿಗಳೊಂದಿಗೆ ತಾವು ಖುದ್ದಾಗಿ ಹಾಜರಾಗಿ ಅಭಿವೃದ್ಧಿ ಹಕ್ಕುಗಳಿಗೆ ಭೂಮಿಯನ್ನು ಬಿಟ್ಟುಕೊಡುವ ಸಂಬಂಧ ತಮ್ಮ ಹಿತಾಸಕ್ತಿ/ಆಕ್ಷೇಪಣೆ/ಸಲಹೆಯನ್ನು ನಗರಯೋಜನೆಯ ಟಿ.ಡಿ.ಆರ್. ವಿಭಾಗ, ಮಂಗಳೂರು ಮಹಾನಗರ ಪಾಲಿಕೆಗೆ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಭೂಮಾಲಿಕರು ಹಣಕಾಸು ಪರಿಹಾರ ರಹಿತವಾಗಿ ಬಿಟ್ಟುಕೊಟ್ಟ ಭೂಪ್ರದೇಶದ ವಿಸ್ತೀರ್ಣಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿಯನ್ನು) ಪಡೆಯುತ್ತಾರೆ ಮತ್ತು ಬಿಟ್ಟುಕೊಟ್ಟ ಕಟ್ಟಡ ಪ್ರದೇಶದ ಮೌಲ್ಯಕ್ಕೆ ಆ ಕಟ್ಟಡ ಇರುವ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ, ಬಿಟ್ಟುಕೊಟ್ಟ ಕಟ್ಟಡಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿ) ಪಡೆಯಲು ಅವರು ಅರ್ಹರು ಬಿಟ್ಟುಕೊಟ್ಟ ಜಮೀನಿನ ಮೌಲ್ಯಕ್ಕೆ ಬಳಸುವ ನಿವೇಶನದ ಮೌಲ್ಯದಿಂದ ಭಾಗಿಸಿಕೊಂಡು, ಅಪವರ್ತನಗೊಳಿಸಿ ಕಾಲ್ಪನಿಕ ಭೂಮಿಯನ್ನು ಉಪಯೋಗಿಸಬಹುದಾಗಿದೆ. ಕಾಲ್ಪನಿಕ ಭೂಮಿಯು ಎಫ್.ಎ.ಆರ್.ಗೆ ಅರ್ಹವಾಗಿರುತ್ತದೆ ಮತ್ತು ಅದನ್ನು ಪಡೆಯುವ ನಿವೇಶನದಲ್ಲಿ ನಿಯಮಗಳಡಿಯಲ್ಲಿ ಸೂಚಿಸಲಾದ ನಿಬಂಧನೆಗಳು ಹಾಗೂ ಶರತ್ತುಗಳ ಅಡಿಯಲ್ಲಿ ಹೆಚ್ಚುವರಿ ನಿರ್ಮಾಣಕ್ಕೆ ಬಳಸಬಹುದು.

ಅನುಸೂಚಿ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸುರತ್ಕಲ್ ಸೆಕ್ರೇಡ್ ಹಾರ್ಟ್ ಶಾಲೆಯ ದ್ವಾರದಿಂದ ಗೋವಿಂದದಾಸ ಕಾಲೇಜು ಹಿಂಭಾಗದಿಂದ ಮುಂದುವರೆದು ಗೋವಿಂದದಾಸ ಕಾಲೇಜು ಮಹಿಳಾ ಹಾಸ್ಟೇಲ್ ವರೆಗಿನ ರಸ್ತೆ ಅಭಿವೃದ್ಧಿಪಡಿಸಲು ಅವಶ್ಯವಾಗಿರುವ ಜಮೀನನ್ನು ಭೂಸ್ವಾಧೀನ/ಟಿ.ಡಿ.ಆರ್. ಮೂಲಕ ಸ್ವಾಧೀನಪಡಿಸಿಕೊಳ್ಳಲು ಮಂಗಳೂರು ಮಹಾನಗರಪಾಲಿಕೆ ಪರಿಷತ್ ಠರಾವು ಸಂಖ್ಯೆ: 206/2024-25 ದಿನಾಂಕ: 30.01.2025ರಂತೆ ನಿರ್ಣಯಿಸಲ್ಪಟ್ಟಿದೆ.

ಕ್ರ. ಸಂ.	ಸ.ನಂ/ಟಿ.ಎಸ್ ನಂಬ್ರ	ಜಮೀನಿನ ಮಾದರಿ	ಜಮೀನಿನ ಸ್ವಭಾವ	ಅಗತ್ಯವಿರುವ ಭೂಮಿಯ ವಿಸ್ತೀರ್ಣ ಚ.ಮೀಗಳಲ್ಲಿ	ಭೂಮಾಲಿಕರ/ಹಿತಾಸಕ್ತಿದಾರರ ಹೆಸರು ಮತ್ತು ವಿಳಾಸ
ಸುರತ್ಕಲ್ ಸೆಕ್ರೇಡ್ ಹಾರ್ಟ್ ಶಾಲೆಯ ದ್ವಾರದಿಂದ ಗೋವಿಂದದಾಸ ಕಾಲೇಜು ಹಿಂಭಾಗದಿಂದ ಮುಂದುವರೆದು ಗೋವಿಂದದಾಸ ಕಾಲೇಜು ಮಹಿಳಾ ಹಾಸ್ಟೇಲ್ ವರೆಗಿನ ರಸ್ತೆ					ಗ್ರಾಮ: ಇಡ್ಯಾ
1	ಸರ್ವೆನಂಬ್ರ: 164-3ಎ1(ಪಿ)	ಪರಿವರ್ತಿತ	ಖಾಸಗಿ	420.60 ಚ.ಮೀ	ಕಾರ್ಯದರ್ಶಿಗಳು, ಹಿಂದೂ ವಿದ್ಯಾದಾಯಿನಿ ಸಂಘ, ಇಡ್ಯಾ ಸುರತ್ಕಲ್ ಮಂಗಳೂರು.
2	ಸರ್ವೆನಂಬ್ರ: 164-3ಬಿ(ಪಿ)	ಪರಿವರ್ತಿತ	ಖಾಸಗಿ	120.15 ಚ.ಮೀ	ಕಾರ್ಯದರ್ಶಿಗಳು, ಹಿಂದೂ ವಿದ್ಯಾದಾಯಿನಿ ಸಂಘ, ಇಡ್ಯಾ ಸುರತ್ಕಲ್ ಮಂಗಳೂರು.
3	ಸರ್ವೆನಂಬ್ರ: 53-2ಎ1(ಪಿ)	ಪರಿವರ್ತಿತ	ಖಾಸಗಿ	120.00 ಚ.ಮೀ	ಕಾರ್ಯದರ್ಶಿಗಳು, ಹಿಂದೂ ವಿದ್ಯಾದಾಯಿನಿ ಸಂಘ, ಇಡ್ಯಾ ಸುರತ್ಕಲ್ ಮಂಗಳೂರು.

ಸಹಿ/- ಆಯುಕ್ತರ ಪರವಾಗಿ
ಮಹಾನಗರಪಾಲಿಕೆ, ಮಂಗಳೂರು

DIPR/DK/MPL/92/26-27

ಕರ್ನಾಟಕ ಸರ್ಕಾರ – ಲೋಕೋಪಯೋಗಿ ಇಲಾಖೆ

ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ : 0836- 2747944(ಕ) Fax No.: 0836-2741209 E-mail: eepwddha@gmail.com

ಕ್ರಸಂಃಕಾನಿಇಂ/ಧಾವಿ/ಗುತ್ತಿಗೆ/ಪಿ.ಬಿ.1,2,3,4,5/2026-27/246 ದಿನಾಂಕ: 17-04-2026

ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆಡಬ್ಲೂ-1,2,3,4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. **(kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಏಕ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಲೆಕ್ಕ ಶೀರ್ಷಿಕೆ:- 2025-26ನೇ ಸಾಲಿನ CMIDP 4059-80-051-0-60-132 ಅಡಿ, 3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ, 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ, 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ, 4059-80-051-0-32-86 ನ್ಯಾಯಾಲಯ ಕಟ್ಟಡ ನಿರ್ಮಾಣ, ಯೋಜನೆಯಡಿ, 4059-80-051-0-60-423 ಟಿ.ಎಸ್.ಪಿ.(CMIDP) 4059-80-051-0-29-386, 4059-80-051-0-60-422 SCP, 8443 Deposit ಅಡಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಸಾಮಾನ್ಯ:- **(1)** PWD/2025-26/RD/WORK_INDENT34312 **(2)** PWD/2025-26/RD/WORK_INDENT31530 **(3)** PWD/2025-26/RD/WORK_INDENT30736/CALL-3 **(4)** PWD/2025-26/RD/WORK_INDENT22734 **(5)** PWD/2025-26/BD/WORK_INDENT34272 (Extension) **(6)** PWD/2025-26/BD/WORK_INDENT34799 (Extension) **(7)** PWD/2025-26/BD/WORK_INDENT34409 **(8)** PWD/2025-26/RD/WORK_INDENT34280 **(9)** PWD/2025-26/RD/WORK_INDENT35212 **(10)** PWD/2025-26/RD/WORK_INDENT33461 **(11)** PWD/2024-25/SE0244/CALL-2 **(12)** PWD/2026-27/RD/WORK_INDENT35487 **(13)** PWD/2025-26/BD/WORK_INDENT29190/CALL-3 **(14)** PWD/2026-27/RD/WORK_INDENT35686 **(15)** PWD/2026-27/BD/WORK_INDENT35481 (Single Cover) **(16)** PWD/2026-27/BD/WORK_INDENT35483 (Single Cover) **(17)** PWD/2025-26/BD/WORK_INDENT35539 (Single Cover) **(18)** PWD/2025-26/BD/WORK_INDENT35769 (Single Cover) ಪರಿಶಿಷ್ಟ ಜಾತಿ:- (19) PWD/2025-26/BD/WORK_INDENT35166 **(20)** PWD/2026-27/RD/WORK_ INDENT35383 **(21)** PWD/2026-27/RD/WORK_INDENT35684 ಪರಿಶಿಷ್ಟ ಪಂಗಡ:- (22) PWD/2025-26/RD/WORK_INDENT35106 **(23)** PWD/2026-27/RD/ WORK_INDENT35384 ಪ್ರವರ್ಗ-2ಎ:- **(24)** PWD/2025-26/RD/WORK_INDENT33456 **(25)** PWD/2026- 27/RD/WORK_ INDENT35687 **(26)** PWD/2026-27/RD/WORK_INDENT35382 ಪ್ರವರ್ಗ-1:- **(27)** PWD/2025-26/RD/WORK_INDENT33455

Calander of Events:

(1) ಪ್ರಿಬಿಡ್/ಆಕ್ಷೇಪಣೆಯನ್ನು/ಸಲ್ಲಿಸುವ ಕೊನೆಯ **ದಿನಾಂಕ: 24-04-2026 (ಬೆಳಿಗ್ಗೆ 12:30 ಗಂಟೆಯವರೆಗೆ)**. (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 27-04-2026 (ಸಾಯಂಕಾಲ 04:00 ಗಂಟೆಯವರೆಗೆ)**. (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28-04-2026 (ಸಾಯಂಕಾಲ 04:30 ಗಂಟೆಯ ನಂತರ)**. (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 29-04-2026 (ಸಾಯಂಕಾಲ 04:30 ಗಂಟೆಯ ನಂತರ)**. ಸಾಮಾನ್ಯ:- **(28)** PWD/2025-26/BD/WORK_INDENT31543 **(29)** PWD/2025-26/RD/WORK_ INDENT31544/CALL-3 **(30)** PWD/2025- 26/RD/WORK_INDENT27826/Call-3 **(31)** PWD/2025-26/SE1108 **(32)** PWD/2026-27/BD/WORK_INDENT35679

Calander of Events: 2)

(1) ಪ್ರಿಬಿಡ್/ಆಕ್ಷೇಪಣೆಯನ್ನು/ಸಲ್ಲಿಸುವ ಕೊನೆಯ **ದಿನಾಂಕ: 05-05-2026 (ಬೆಳಿಗ್ಗೆ 12:30 ಗಂಟೆಯವರೆಗೆ)**. (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 06-05-2026 (ಸಾಯಂಕಾಲ 04:00 ಗಂಟೆಯವರೆಗೆ)**. (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 07-05-2026 (ಸಾಯಂಕಾಲ 04:30 ಗಂಟೆಯ ನಂತರ)**. (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 08-05-2026 (ಸಾಯಂಕಾಲ 04:30 ಗಂಟೆಯ ನಂತರ)**.

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka,gov.in** ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/69/2026-27/ದೇಶಪಾಂಡೆಪಬ್ಲಿಸಿಟಿ

ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜು ಆಸ್ಪತ್ರೆ ಪರಿಣಿತ ವೈದ್ಯರ ತಂಡದ ಸಾಧನೆ

ವಿನೂತನ ಶೈಲಿಯ ಚಿಕಿತ್ಸೆಯಿಂದ ಮಹಿಳಾ ಹೃದ್ರೋಗಿಗೆ ಜೀವದಾನ

ಮಂಗಳೂರು: ಕಾಸರಗೋಡು ಮೂಲದ 46 ವಯಸ್ಸಿನ ಸಾವು ಬದುಕಿನ ಹೋರಾಟದಲ್ಲಿದ್ದ ಮತ್ತು ಹೃದ್ರೋಗ ಸಂಬಂಧಿ ತೀವ್ರ ಕಾಯಿಲೆಯಿಂದ ಬಳಲುತ್ತಿದ್ದ ಮಹಿಳಾ ಹೃದ್ರೋಗಿಗೆ ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಪರಿಣಿತ ವೈದ್ಯರ ತಂಡವು ವಿನೂತನ ಶೈಲಿಯ ಅಪಾಯಕಾರಿ, ಜೀವರಕ್ಷಕಾ ಹೃದ್ರೋಗ ಚಿಕಿತ್ಸೆಯನ್ನು, ಆಧುನಿಕ ತಂತ್ರಜ್ಞಾನವನ್ನು ಬಳಸಿ, ಯಶಸ್ವಿಯಾಗಿ ನಿರ್ವಹಿಸಿ, ರೋಗಿಗೆ ಜೀವದಾನ ನೀಡಿ ಆರೋಗ್ಯ ಕ್ಷೇತ್ರದಲ್ಲಿ ಒಂದು ಸಾಧನೆ ಮಾಡಿ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ.

ರೋಗಿಯು ದೀರ್ಘ ಕಾಲದ ತೀವ್ರ ಉಸಿರಾಟದ ಸಮಸ್ಯೆ, ತೀವ್ರ ಎದೆ ನೋವು, ನಿಶ್ಯಕ್ತಿ, ದಣಿವು, ದೌರ್ಬಲ್ಯ, ರಕ್ತ ಚಲನವಲನ ಸಮಸ್ಯೆಯಿಂದ ಬಳಲುತಿದ್ದು, ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಲು ಅಸಮರ್ಥಳಾಗಿದ್ದರು. ನಗರದ ಫಾದರ್ ಮುಲ್ಲರ್ ಆಸ್ಪತ್ರೆಯ ಮುಖ್ಯ ಹೃದ್ರೋಗ ಶಾಸ್ತ್ರ ತಜ್ಞ ಡಾ.ಎಚ್. ಪ್ರಭಾಕರ್ ಅವರನ್ನು ಭೇಟಿ ಮಾಡಿ ತಮ್ಮ ತೀವ್ರ ಮತ್ತು ವಿವಿಧ ಮಾರಣಾಂತಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು.

ವೈದ್ಯರು ರೋಗಿಯನ್ನು ಸಮಗ್ರ ಆರೋಗ್ಯ



ತಪಾಸಣೆ ಒಳಪಡಿಸಿದಾಗ ರೋಗಿಯು ತೀವ್ರ ಹೃದ್ರೋಗಿ ಸಂಬಂಧಿ ಅಪರೂಪದ 'ತಕಯಾಸು' ಕಾಯಿಲೆಯಿಂದ ಬಳಲುತಿದ್ದು ಕಂಡುಬಂತು. ಹೃದಯದ ರಕ್ತನಾಳದಲ್ಲಿ ರಕ್ತ ಚಲನವಲನದ ಅಡ್ಡಿಯಾಗುತ್ತಿದ್ದು, ಹೃದಯದ ಕಾರ್ಯಕ್ಷಮತೆ ಕುಂಠಿತವಾಗುತ್ತಿತ್ತು. ರೋಗಿಯ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು ಮತ್ತು ಶಸ್ತ್ರಚಿಕಿತ್ಸೆಯ ಅಪಾಯ ಅತ್ಯಂತ ಗಂಭೀರವಾಗಿತ್ತು. ಈ ಸಮಸ್ಯೆಯನ್ನು ಪರಿಗಣಿಸಿ ಈ ಗಂಭೀರ ಕಾಯಿಲೆ ಹೃದಯ ವೈಫಲ್ಯಕ್ಕೆ ಕಾರಣವಾಗಬಹುದು ಎಂದು ಅರಿತು ತಕ್ಷಣ ವೈದ್ಯರು ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ, ವೈದ್ಯರು ಗಂಭೀರ ಹೃದ್ರೋಗ ಜೀವಕ್ಕೆ ಅಪಾಯವಾಗುವ ಸವಾಲನ್ನು ಸ್ವೀಕರಿಸಿದರು. ಒಂದು ಪರಿಣಿತ ವೈದ್ಯರ ತಂಡವನ್ನು ರಚಿಸಿ, 2 ವಿಭಿನ್ನ ದಿನಗಳ ಅವಧಿಯ 2 ಪ್ರತ್ಯೇಕ ಹಂತದಲ್ಲಿ ವಿನೂತನ ಶೈಲಿಯ ಜೀವ ಅಪಾಯಕಾರಿ ಕ್ಲಿಷ್ಟಕರ 'ಆಂಜಿಯೋಪ್ಲಾಸ್ಟಿ' ಚಿಕಿತ್ಸೆಯನ್ನು ನೆರವೇರಿಸಿ ಸಾಮಾನ್ಯ ರಕ್ತ ಚಲನವಲನಕ್ಕೆ ಅನುವು ಮಾಡಿಕೊಟ್ಟರು. ರೋಗಿಯ ತೊಡೆಯಲ್ಲಿ ಸೂಕ್ಷ್ಮ ರಂಧ್ರವನ್ನು ಕೊರೆದು ಅತ್ಯಾಧುನಿಕ ಇಮೇಜಿಂಗ್ ತಂತ್ರಜ್ಞಾನವನ್ನು ಬಳಸಿ, ಅದರ ಮೂಲಕ ವಿಶೇಷ ಕ್ಯಾಮರಾ ಮತ್ತು ಬೆಲೂನನ್ನು ಅಳವಡಿಸಿ, ಈ ಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು. ಈ ಅಪರೂಪದ ಚಿಕಿತ್ಸೆಯಲ್ಲಿ ಹೃದ್ರೋಗ ಶಾಸ್ತ್ರ ತಜ್ಞರಾದ ಡಾ. ಪ್ರದೀಪ್ ಪಿರೇರಾ, ಡಾ. ಜೋಸ್ವಲ್ ಪಿಂಟೊ ಮತ್ತು ಡಾ. ಅಶೋಕ ಸಹಕರಿಸಿದ್ದರು. ರೋಗಿಯು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿ ಸಂಪೂರ್ಣವಾಗಿ ಚೇತರಿಸಿಕೊಂಡು, ಆಸ್ಪತ್ರೆಯಿಂದ ಬಿಡುಗಡೆಗೊಂಡು ತಮ್ಮ ನಿವಾಸದಲ್ಲಿ ಸಹಜ ಆರೋಗ್ಯ ಜೀವನ ನಡೆಸುತಿದ್ದಾರೆ.

ಡಾ.ಎಚ್. ಪ್ರಭಾಕರ್ ಅವರು ಯಶಸ್ವಿ ಶಸ್ತ್ರ ಚಿಕಿತ್ಸೆ ಬಳಿಕ ಈ ಕ್ಲಿಷ್ಟಕರ ಶಸ್ತ್ರ ಚಿಕಿತ್ಸೆಯಲ್ಲಿ ಉತ್ತಮ ದರ್ಜೆಯ ಚಿಕಿತ್ಸೆ ನೀಡಿದ್ದು, ಮತ್ತು ಮಾರಣಾಂತಿಕ ಸಮಸ್ಯೆಯನ್ನು ಹೊಂದಿರುವ ರೋಗಿಗೆ ಅತ್ಯಾಧುನಿಕ ತಂತ್ರಜ್ಞಾನದ ಚಿಕಿತ್ಸಾ ವಿಧಾನಗಳಿಂದ ಸಂಪೂರ್ಣ ಗುಣಮುಖರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಫಾದರ್ ಮುಲ್ಲರ್ ಸಮೂಹ ಸಂಸ್ಥೆಗಳ ನಿರ್ದೇಶಕರಾದ ವಂದನೀಯ ಫೋಸಿನ್ ಲೂಕಸ್ ಲೋಬೊ ಅವರು ವೈದ್ಯಕೀಯ ತಂಡದ ಗಮನಾರ್ಹ ಸಾಧನೆಯನ್ನು ಅಭಿನಂದಿಸಿದ್ದಾರೆ.

ಶಕ್ತಿನಗರದ ಮನೆಯಲ್ಲಿ ಬೆಂಕಿ ಅವಘಡ

ಶಮನಗೊಳಿಸಿದ ಶಕ್ತಿ ವಿದ್ಯಾಸಂಸ್ಥೆಯ ಸಿಬ್ಬಂದಿಗಳು

ಮಂಗಳೂರು: ಶಕ್ತಿನಗರದ ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ಮುಂಭಾಗದಲ್ಲಿ ಹೇಮಂತ್ ಚಮಗಾರರಿಗೆ ಸೇರಿದ ಮನೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದನ್ನು ಶಕ್ತಿ ವಿದ್ಯಾಸಂಸ್ಥೆಯ ಸಿಬ್ಬಂದಿಗಳು ನೋಡಿ ಬೆಂಕಿ ನಂದಿಸಿದ್ದಾರೆ. ಶಕ್ತಿ ವಿದ್ಯಾ ಸಂಸ್ಥೆಯ ಫೈಯರ್ ಜೆಟ್ಟನ್ನು ಬಳಸಿ ಬೆಂಕಿ ನಂದಿಸುವ ಕಾರ್ಯದಲ್ಲಿ ಕಾರ್ಯ ಪ್ರವೃತ್ತರಾದರು. ಮನೆಯಲ್ಲಿ ಯಾರೂ ಇಲ್ಲದೆ ಇದ್ದಂತಹ ಸಂದರ್ಭದಲ್ಲಿ ಈ ಅವಘಡವು ಸಂಭವಿಸಿತ್ತು.

ಶಾಲೆಯ ಸುಮಾರು 50ಕ್ಕೂ ಹೆಚ್ಚಿನ ಸಿಬ್ಬಂದಿ ವರ್ಗದವರು ಈ ಕಾರ್ಯದಲ್ಲಿ ತೊಡಗಿ ಬೆಂಕಿ ನಂದಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಕಿ ಆಕಸ್ಮಿಕ ಉಂಟಾದ ತಕ್ಷಣ ವಿದ್ಯಾಸಂಸ್ಥೆಯ ಮುಖ್ಯಸ್ಥ ಡಾ. ಕೆ.ಸಿ. ನ್ಾಯಕ್ ತಕ್ಷಣ ಕಾರ್ಯ ಪ್ರವೃತ್ತರಾಗುವಂತೆ ಸಿಬ್ಬಂದಿ ವರ್ಗದವರಿಗೆ ಮಾರ್ಗದರ್ಶನವನ್ನು ಮಾಡಿ ದ್ದರು. ಈ ಕಾರ್ಯಕ್ಕೆ ಶಕ್ತಿನಗರದ ನಿವಾಸಿಗಳು ಶ್ಲಾಘನೆಯನ್ನು ವ್ಯಕ್ತ ಪಡಿಸಿದ್ದಾರೆ.





ಮನೆಯಲ್ಲೇ ಗಾಂಜಾ ಬೆಳೆದಾತನ ಸೆರೆ



ಮಡಿಕೇರಿ: ಮನೆಯ ಹಿತ್ತಲಿನಲ್ಲಿ ಗಾಂಜಾ ಬೆಳೆದ ವ್ಯಕ್ತಿಯನ್ನು ಗೋಣಿಕೊಪ್ಪ ಪೊಲೀಸರು ಬಂಧಿಸಿದಾರೆ. ಜೇನು ಕುರುಬರ ಬಸವ (69) ಬಂಧಿತ ವ್ಯಕ್ತಿ.

ತಿತಿಮತಿ ಗ್ರಾಮ ಪಂಚಾಯತ್ ವ್ಯಾಪ್ತಿಯ ದೊಡ್ಡ ರೇಷ್ಮೆ ಹಾಡಿಯಲ್ಲಿ ವಾಸವಿದ್ದ ಬಸವ ತನ್ನ ಗುಡಿಸಲಿನ ಹಿತ್ತಲಿನಲ್ಲಿ ಗಾಂಜಾ ಗಿಡವನ್ನು ಬೆಳೆಸಿಕೊಂಡಿದ್ದನೆನ್ನಲಾಗಿದೆ. ಖಚಿತ ಮಾಹಿತಿ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು ಮೂರು ಗಾಂಜಾ ಗಿಡಗಳು ಪತ್ತೆ ಮಾಡಿ ಸುಮಾರು 2 ಕೆ.ಜಿ. ತೂಕದ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಗೋಣಿಕೊಪ್ಪ ಪೊಲೀಸ್ ಠಾಣಾಧಿಕಾರಿ ಬಿ.ಕೆ ಪ್ರದೀಪ್ ಅವರ ನೇತೃತ್ವದಲ್ಲಿ ಎಸ್ಐ ಶ್ರೀನಿವಾಸ್ ಸಿಬ್ಬಂದಿಗಳಾದ ಭರತ್, ಯೋಗೇಶ್, ಲೋಕೇಶ್, ಪ್ರವೀಣ್, ಮಹೇಂದ್ರ, ನೆಹರು, ಸುಬ್ಬಮ್ಮ, ಗಿರಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಗಾಂಜಾ ವ್ಯಸನಿಯಾಗಿರುವ ಬಸವ ತನ್ನ ಸ್ವಂತ ಬಳಕೆಗಾಗಿ ಗಿಡವನ್ನು ಬೆಳೆಸಿಕೊಂಡಿದ್ದ ಎಂದು ತಿಳಿದು ಬಂದಿದೆ.

ಜಾತ್ರೆಗೆ ತೆರಳಿದ್ದ ಅಪ್ರಾಪ್ತ ಬಾಲಕಿ ನಾಪತ್ತೆ

ಕೊಣಾಜೆ: ಉಳ್ಳಾಲ ತಾಲೂಕಿನ ಪಜೀರು ಗ್ರಾಮದ ಅಡ್ಕ ಎಂಬಲ್ಲಿಯ ತನ್ನ ಮನೆಯಿಂದ ಗೆಳೆಯರೊಂದಿಗೆ ಜಾತ್ರೆಗೆಂದು ತೆರಳಿದ್ದ ಅಪ್ರಾಪ್ತ ಬಾಲಕಿಯೊರ್ವಳು ನಾಪತ್ತೆಯಾಗಿದ್ದು, ಈ ಬಗ್ಗೆ ಕೊಣಾಜೆ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಲುಕ್ ಔಟ್ ನೋಟಿಸ್ ಜಾರಿ ಮಾಡಿದ್ದಾರೆ. ಪಜೀರು ಅಡ್ಕದ ಜಗದೀಶ್ ಎಂಬವರ ಪುತ್ರಿ ಚೈತನ್ಯ (16) ಎಂಬಾಕೆಯೇ ನಾಪತ್ತೆಯಾದ ಬಾಲಕಿಯಾಗಿದ್ದಾಳೆ.



ಈಕೆ ಹರೇಕಳ ರಾಮಕೃಷ್ಣ ಹೈಸ್ಕೂಲ್‌ನಲ್ಲಿ 10 ನೇ ತರಗತಿಯಲ್ಲಿ ಓದುತ್ತಿದ್ದು, ಪರೀಕ್ಷೆ ಮುಗಿಸಿ ಮನೆಯಲ್ಲಿ ಇದ್ದಳು. ಏ.12 ರಂದು ಬೆಳಿಗ್ಗೆ ಮನೆಯಲ್ಲಿ ಗೆಳೆಯರೊಂದಿಗೆ ಪೊಳಲಿ ಜಾತ್ರೆಗೆಂದು ತೆರಳಿದ್ದು, ಬಳಿಕ ರಾತ್ರಿಯವರೆಗೂ ಮನೆಗೆ ವಾಪಸ್ಸಾಗದೇ ಇದ್ದುದರಿಂದ ಮನೆಯವರು ಆತಂಕಗೊಂಡು ಗೆಳೆಯರು ಹಾಗೂ ಸಂಬಂಧಿಕರ ಮನೆಯಲ್ಲಿ ಹುಡುಕಾಡಿದರೂ ಬಾಲಕಿ ಪತ್ತೆಯಾಗಿರಲಿಲ್ಲ. ಬಳಿಕ ಮನೆಯವರು ಕೊಣಾಜೆ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ.

ಬೈಕ್-ಕಾರು ಡಿಕ್ಕಿ : ಸವಾರ ಸಾವು

ಮಡಿಕೇರಿ: ಬೈಕ್ ಮತ್ತು ಕಾರಿನ ನಡುವೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಸುಂಟಿಕೊಪ್ಪ– ಚೆಟ್ಟಳ್ಳಿ ರಸ್ತೆಯ ಭೂತನಕಾಡು ಎಂಬಲ್ಲಿ ನಡೆದಿದೆ. ಸುಂಟಿಕೊಪ್ಪ ಸಮೀಪದ ಕಾನ್ಬೈಲ್–ಬೈಚನಹಳ್ಳಿ ಗ್ರಾಮದ ಪಡ್ಡಂಬೈಲು ಧನಂಜಯ ಎಂಬವರೇ ಮೃತರಾದವರು. ಗುರುವಾರ ನಡೆದ ಅಪಘಾತದಿಂದ ಗಂಭೀರವಾಗಿ ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಧನಂಜಯ ಅವರನ್ನು ಮಡಿಕೇರಿಯ ಆಸ್ಪತ್ರೆಗೆ ಸಾಗಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ನಂತರ ಮಂಗಳೂರಿನ ಆಸ್ಪತ್ರೆಗೆ ಸಾಗಿಸಲಾಗುತ್ತಿತು. ಈ ಸಂದರ್ಭ ರಾತ್ರಿ ಸುಳ್ಯ ಬಳಿ ಅವರು ಕೊನೆಯುಸಿರೆಳೆದಿದ್ದಾರೆ.ಮೃತರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಬೈಕ್ ಡಿಕ್ಕಿ: ರಸ್ತೆ ದಾಟುತ್ತಿದ್ದ ಮಹಿಳೆ ಸಾವು

ಮೂಡುಬಿದಿರೆ: ಪಾಲಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ವರ್ಣಬೆಟ್ಟು ಮಾಗಂದಡಿಯಲ್ಲಿ ಶುಕ್ರವಾರ ಸಂಭವಿಸಿದ ಬೈಕ್ ಅಪಘಾತದಲ್ಲಿ ರಸ್ತೆ ದಾಟುತ್ತಿದ್ದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಪಾಲಡ್ಕ ಗ್ರಾಮದ ತಾಳಿದಡಿ ನಿವಾಸಿ ಸುಮಿತ್ರಾ ಮೃತಪಟ್ಟವರು. ಕೇಪ್ಲಾಜೆಯ ಸುಪ್ರೇಶ್ ಎಂಬವರು ತಮ್ಮ ಬೈಕಿನಲ್ಲಿ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಮಾಗಂದಡಿ ಎಂಬಲ್ಲಿ ರಸ್ತೆ ದಾಟುತ್ತಿದ್ದ ಸುಮಿತ್ರಾ ಅವರಿಗೆ ಬೈಕ್ ಡಿಕ್ಕಿಯಾಗಿದೆ. ಅಪಘಾತದ ತೀವ್ರತೆಗೆ ಸುಮಿತ್ರಾ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಮೂಡುಬಿದಿರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆಗೆ ಸ್ಪಂದಿಸದೆ ಸುಮಿತ್ರಾ ಮೃತಪಟ್ಟಿದ್ದಾರೆ.

ಮೂಡುಬಿದಿರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿಗಿಂತ ಕರಾವಳಿ ತಂಪು; ಆದರೆ ಬೆವರಿನ ಕಾಟವೇ ಹೆಚ್ಚು!

ಉಡುಪಿ: ರಾಜಧಾನಿ ಬೆಂಗಳೂರಿನಲ್ಲಿ ತಾಪಮಾನವು 37 ಡಿಗ್ರಿ ಸೆಲ್ಸಿಯಸ್ ದಾಟಿದ್ದರೂ, ಕರಾವಳಿಯ ಮಂಗಳೂರಿನಲ್ಲಿ 31 ಡಿಗ್ರಿ ಹಾಗೂ ಉಡುಪಿಯಲ್ಲಿ 32 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ. ಮೇಲ್ನೋಟಕ್ಕೆ ಬೆಂಗಳೂರಿಗಿಂತ ಕರಾವಳಿ ತಂಪಾಗಿದೆ ಎಂದು ಅನ್ನಿಸಿದರೂ, ಇಲ್ಲಿನ ಜನರಿಗೆ ಅನುಭವಕ್ಕೆ ಬರುವ 'ಸೆಖೆ' ಮಾತ್ರ ಅಸಹನೀಯವಾಗಿದೆ. ಇದಕ್ಕೆ ಮುಖ್ಯ ಕಾರಣ ಗಾಳಿಯಲ್ಲಿನ ಆರ್ದ್ರತೆ ಅಥವಾ ತೇವಾಂಶ

ತಾಪಮಾನ ಮತ್ತು ಸೆಖೆಯ ನಡುವಿನ ವ್ಯತ್ಯಾಸವೇನು?: ನಮಗೆ ಪತ್ರಿಕೆ ಅಥವಾ ಮೊಬೈಲ್‌ನಲ್ಲಿ ಕಾಣಿಸುವ ತಾಪಮಾನವು ಗಾಳಿಯ ನಿಜವಾದ ಶಾಖವನ್ನು ಸೂಚಿಸುತ್ತದೆ. ಆದರೆ, ನಮಗೆ ಅನುಭವಕ್ಕೆ ಬರುವ ಸೆಖೆಯನ್ನು 'ಹೀಟ್ ಇಂಡೆಕ್ಸ್'ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ತಾಪಮಾನವು ಕೇವಲ 34 ಡಿಗ್ರಿ ಇದ್ದರೂ, ಅಲ್ಲಿ ಶೇ. 70 ರಿಂದ 80 ರಷ್ಟು ಆರ್ದ್ರತೆ ಇದ್ದರೆ, ಅದು ನಮ್ಮ ದೇಹಕ್ಕೆ 40 ಡಿಗ್ರಿ ಅಥವಾ ಅದಕ್ಕಿಂತ ಹೆಚ್ಚಿನ ಶಾಖದ ಅನುಭವ ನೀಡುತ್ತದೆ.

ತಾಪಮಾನ ಕಡಿಮೆ ಇದ್ದರೂ ಸೆಖೆ ಜಾಸ್ತಿ ಯಾಕೆ?: ನಮ್ಮ ದೇಹವು ಅತಿಯಾದ ಶಾಖವನ್ನು ಹೊರಹಾಕಲು 'ಬೆವರುವಿಕೆ'ಯನ್ನು ಅವಲಂಬಿಸಿದೆ. ಬೆವರು ಚರ್ಮದ ಮೇಲೆ ಬಂದಾಗ ಅದು ಆವಿಯಾದರೆ ಮಾತ್ರ ನಮ್ಮ ದೇಹ ತಂಪಾಗುತ್ತದೆ. ಆದರೆ ಕರಾವಳಿ ಭಾಗದಲ್ಲಿ ಗಾಳಿಯಲ್ಲಿ ಈಗಾಗಲೇ ಅತಿಯಾದ ತೇವಾಂಶ ಇರುತ್ತದೆ. ಗಾಳಿಯಲ್ಲಿ ತೇವಾಂಶ ಹೆಚ್ಚಿದ್ದಾಗ, ನಮ್ಮ ದೇಹದ ಬೆವರು ಆವಿಯಾಗಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಶಾಖವು ದೇಹದ ಮೇಲೆಯೇ ಉಳಿದುಬಿಡುತ್ತದೆ. ಇದು ಅತಿಯಾದ ಸೆಖೆ, ಉಸಿರುಗಟ್ಟುವಿಕೆ ಮತ್ತು ಅಸ್ವಸ್ಥತೆಗೆ ಕಾರಣವಾಗುತ್ತದೆ.

> ಬೆಂಗಳೂರಿನಲ್ಲಿ ತಾಪಮಾನ ಹೆಚ್ಚಿದ್ದರೂ ಗಾಳಿ ಒಣಗಿರುತ್ತದೆ, ಹಾಗಾಗಿ ಬೆವರು ತಕ್ಷಣ ಆವಿಯಾಗಿ ದೇಹಕ್ಕೆ ಇಷ್ಟೊಂದು ಕಿರಿಕಿರಿ ಉಂಟುಮಾಡುವುದಿಲ್ಲ. ಆದರೆ ಮಂಗಳೂರು ಮತ್ತು ಉಡುಪಿಯಲ್ಲಿ ಶೇ. 80 ರಷ್ಟು ಆರ್ದ್ರತೆ ಇರುವುದರಿಂದ ಜನ ಬೆವರಿನಲ್ಲಿ ಅಕ್ಷರಶಃ ಮಿಂದೇಳುತ್ತಿದ್ದಾರೆ.

ಯಾವ ಸೆಕ್ಷನ್‌ಗೆ ಯಾವ ಶಿಕ್ಷೆ ಮತ್ತು ದಂಡ?

- ಐಪಿಸಿ ಸೆಕ್ಷನ್ 302 (ಕೊಲೆ) ಜತೆಗೆ 120–ಬಿ (ಎ–2 ಯಿಂದ ಎ–16ಮತ್ತು ಎ18)–ಜೀವಾವಧಿ ಶಿಕ್ಷೆ ಮತ್ತು ಪ್ರತಿಯೊಬ್ಬರಿಗೂ 30 ಸಾವಿರ ದಂಡ. ಇದನ್ನು ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ ಮೂರು ತಿಂಗಳು ಜೈಲು ಶಿಕ್ಷೆ.
- ಐಪಿಸಿ ಸೆಕ್ಷನ್ 201(ಸಾಕ್ಷ್ಯ ನಾಶ) ಜತೆಗೆ 120 ಬಿ ಜತೆಗೆ 149 (ಏಕ ಉದ್ದೇಶದಿಂದ ಎಲ್ಲರೂ ಒಗ್ಗೂಡುವುದು) (ಎ–2 ಯಿಂದ ಎ–16, ಎ 18ಮತ್ತು ಎ–19 ಚನ್ನಕೇಶವ ಟಿಂಗರಿಕರ್)– ಏಳು ವರ್ಷಗಳ ಕಠಿಣ ಶಿಕ್ಷೆ ಮತ್ತು ತಲಾ 30 ಸಾವಿರ ದಂಡ.
- ಐಪಿಸಿ ಸೆಕ್ಷನ್ 218 (ಸರ್ಕಾರಿ ಅಧಿಕಾರಿ ಆರೋಪಿಗಳಿಗೆ ನೆರವಾಗಲು ಸಾಕ್ಷ್ಯ ನಾಶಪಡಿಸುವುದು) ಜತೆಗೆ 120–ಬಿ, 149 (ಎ–2 ಯಿಂದ ಎ–16, ಎ–18 ಎ–19)– ಏಳು ವರ್ಷ ಜೈಲು ಮತ್ತು ತಲಾ 20 ಸಾವಿರ ರೂ., ದಂಡ. ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಒಂದು ತಿಂಗಳು ಹೆಚ್ಚುವರಿಯಾಗಿ ಜೈಲು ವಾಸ.
- ಐಪಿಸಿ ಸೆಕ್ಷನ್ 143 ಜತೆಗೆ 120ಬಿ ಆರು ತಿಂಗಳ ಸಾಮಾನ್ಯ ಜೈಲು ಶಿಕ್ಷೆ ಮತ್ತು ತಲಾ 2,000 ರೂ.ದಂಡ. ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಒಂದು ತಿಂಗಳು ಸಾಮಾನ್ಯ ಹೆಚ್ಚುವರಿ ಜೈಲು ಶಿಕ್ಷೆ.
- ಐಪಿಸಿ ಸೆಕ್ಷನ್ 147 ಜತೆಗೆ 120–ಬಿ ಒಂದು ವರ್ಷದ ಕಠಿಣ ಕಾರಾಗೃಹ ಶಿಕ್ಷೆ ಜೊತೆಗೆ ತಲಾ 2,000 ರೂ.ಜುಲ್ಮಾನೆ. ದಂಡ ಪಾವತಿಸಲು ವಿಫಲರಾದರೆ ಒಂದು ತಿಂಗಳ ಸಾಮಾನ್ಯ ಜೈಲು ಶಿಕ್ಷೆ.
- ಐಪಿಸಿ ಸೆಕ್ಷನ್ 148 ಜತೆಗೆ 120–ಬಿ ಒಂದು ವರ್ಷದ ಕಠಿಣ ಕಾರಾಗೃಹ ಶಿಕ್ಷೆ ಜತೆಗೆ ತಲಾ 2,000 ರೂ. ಜುಲ್ಮಾನೆ. ದಂಡ ಪಾವತಿಸಲು ವಿಫಲರಾದರೆ ಒಂದು ತಿಂಗಳ ಸಾಮಾನ್ಯ ಜೈಲು ಶಿಕ್ಷೆ.
- ಐಪಿಸಿ 120ಬಿ ಜೀವಾವಧಿ ಶಿಕ್ಷೆ ಮತ್ತು ತಲಾ 30 ಸಾವಿರ ರೂ. ದಂಡ. ಜುಲ್ಮಾನೆ ಪಾವತಿಸಲು ವಿಫಲರಾದರೆ ಹೆಚ್ಚುವರಿಯಾಗಿ ಮೂರು ತಿಂಗಳು ಜೈಲು ಶಿಕ್ಷೆ.
- **ಪ್ರಕರಣದ ಇತಿಹಾಸ :** 2016ರ ಜೂನ್ 15ರಂದು ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಯೋಗೀಶ್ ಗೌಡ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್120(ಬಿ) ಜತೆಗೆ 302, 217, 201, 143, 147, 148 ಹಾಗೂ 149, ಶಸ್ತ್ರಾಸ್ತ್ರ ಕಾಯ್ದೆ ಸೆಕ್ಷನ್ 25 ಜತೆಗೆ 3,5,8,29 ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಸೆಕ್ಷನ್ 13(2), 13(1)(ಡಿ) ಅಡಿ ಆರೋಪ ಪಟ್ಟಿ ಸಲ್ಲಿಸಿತ್ತು.

ಕೈ ನಾಯಕನ ಕುಕೃತ್ಯದ ಕತ್ತಲ ಲೋಕ



2000ನೇ ಇಸ್ವಿಯಲ್ಲಿ ವಿನಯ ಕುಲಕರ್ಣಿ ಧಾರವಾಡ ಜಿಲ್ಲೆ ನಿಗದಿ ಕ್ಷೇತ್ರದಿಂದ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಮೂಲಕ ನಿಗದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದರು. ಜಿಪಂ ಸದಸ್ಯರಾಗಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ 2004ರಲ್ಲಿ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಜೊತೆ ಜಯಗಳಿಸಿ, ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು.

1 ಮೊದಲ ಬಾರಿ ಬಂಧನ–ಜೈಲು ವಾಸ (2020–2021)

ಬಂಧನ: ನವೆಂಬರ್ 5, 2020ರಂದು ಸಿಬಿಐ ಅಧಿಕಾರಿಗಳು ವಿನಯ ಕುಲಕರ್ಣಿ ಅವರನ್ನು ಧಾರವಾಡದಲ್ಲಿ ಬಂಧಿಸಿದರು.

ಜೈಲು: ಸುದೀರ್ಘ ವಿಚಾರಣೆಯ ನಂತರ ಅವರನ್ನು ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು.

ಬಿಡುಗಡೆ (ಜಾಮೀನು): ಸುಮಾರು 9 ತಿಂಗಳ ಸೆರೆವಾಸದ ನಂತರ, ಆಗಸ್ಟ್ 11, 2021 ರಂದು ಸುಪ್ರೀಂಕೋರ್ಟ್ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು. ಆಗಸ್ಟ್ 20ರ ಸುಮಾರಿಗೆ ಅವರು ಜೈಲಿನಿಂದ ಹೊರಬಂದರು. (ಆದರೆ ಧಾರವಾಡ ಜಿಲ್ಲೆ ಪ್ರವೇಶಿಸಲು ಅವರಿಗೆ ನಿಷೇಧವಿತ್ತು).

2 ಎರಡನೇ ಬಾರಿ ಜೈಲು ವಾಸ (2025)

ಜಾಮೀನು ರದ್ದು: ಸಾಕ್ಷ್ಯ ನಾಶಪಡಿಸಲು ಯತ್ನಿಸಿದ ಮತ್ತು ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪದ ಹಿನ್ನೆಲೆಯಲ್ಲಿ, ಜೂನ್ 6, 2025ರಂದು ಸುಪ್ರೀಂ ಕೋರ್ಟ್ ಅವರ ಜಾಮೀನನ್ನು ರದ್ದುಗೊಳಿಸಿತು.

ಶರಣಾಗತಿ: ನ್ಯಾಯಾಲಯದ ಆದೇಶದಂತೆ ಅವರು ಜೂನ್ 13, 2025ಕ್ಕೆ ಮತ್ತೆ ನ್ಯಾಯಾಂಗ ಬಂಧನಕ್ಕೆ ಒಳಗಾದರು.

ಮತ್ತೆ ಬಿಡುಗಡೆ: ಸಾಕ್ಷಿಗಳ ವಿಚಾರಣೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಫೆಬ್ರವರಿ 27, 2026ರಂದು ಸುಪ್ರೀಂ ಕೋರ್ಟ್ ಅವರಿಗೆ ಪುನಃ ಜಾಮೀನು ನೀಡಿತು.

3 ಪ್ರಸ್ತುತ ಸ್ಥಿತಿ (ಏಪ್ರಿಲ್ 2026)

ದೋಷಿ ಎಂದು ಘೋಷಣೆ: ಏಪ್ರಿಲ್ 15, 2026 ರಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಅವರನ್ನು ಕೊಲೆ ಪ್ರಕರಣದಲ್ಲಿ ದೋಷಿ ಎಂದು ಘೋಷಿಸಿತು.

ಶಿಕ್ಷೆ ಪ್ರಕಟ: ಏಪ್ರಿಲ್ 17, 2026 ನ್ಯಾಯಾಲಯವು ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ಅವರು ಈಗ ಮತ್ತೆ ಜೈಲು ಸೇರಿದ್ದಾರೆ.

» ಮಹಾಂತೇಶ ಕಣವಿ

ಧಾರವಾಡ: ರಾಜ್ಯದ ಗಮನ ಸೆಳೆದಿದ್ದ ಬಿಜೆಪಿ ಮುಖಂಡ ಹಾಗೂ ಜಿಪಂ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ವಿನಯ ಕುಲಕರ್ಣಿ ಸೇರಿ 17 ಜನ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸುವ ಮೂಲಕ ನ್ಯಾಯಾಲಯ ಕೊನೆಗೂ ಇತಿಶ್ರೀ ಹಾಡಿದೆ.

ಬದುಕಿನ ಹಿನ್ನೆಲೆ: ಪ್ರಭಾವಿ ರಾಜಕಾರಣಿಯಾದ ವಿನಯ ಕುಲಕರ್ಣಿ ರಾಜಕೀಯ ಜೀವನ ಹಲವು ಏರಿಳಿತಗಳಿಂದ ಕೂಡಿದೆ. ಮೂಲತಃ ಕೃಷಿ ಕುಟುಂಬದಿಂದ ಬಂದ ಅವರು, ಕೃಷಿ ಪದವೀಧರರೂ ಹೌದು. ಡೈರಿ ಫಾರ್ಮಿಂಗ್ ಕೂಡ ತೆರೆದು, ಸಾವಿರಾರು ಹಸು ಸಾಕಾಣೆ ಮಾಡಿದ್ದರು. ಕಾಲೇಜು ದಿನಗಳಿಂದಲೂ ಕೂಡ ತಮ್ಮ ಆಕ್ರಮಣಕಾರಿ ನಾಯಕತ್ವ ಹಾಗೂ ಸಂಘಟನಾ ಶಕ್ತಿಯಿಂದ ಉತ್ತರ ಕರ್ನಾಟಕದ ಲಿಂಗಾಯತ ಪಂಚಮಸಾಲಿ ಸಮುದಾಯದ ಪ್ರಬಲ ನಾಯಕರಾಗಿಯೂ ಗುರುಸಿಕೊಂಡಿದ್ದರು.

ರಾಜಕೀಯ ಪ್ರವೇಶ: 2000ನೇ ಇಸ್ವಿಯಲ್ಲಿ ವಿನಯ ಕುಲಕರ್ಣಿ ಧಾರವಾಡ ಜಿಲ್ಲೆ ನಿಗದಿ ಕ್ಷೇತ್ರದಿಂದ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಮೂಲಕ ನಿಗದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದರು. ಜಿಪಂ ಸದಸ್ಯರಾಗಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ 2004ರಲ್ಲಿ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಜೊತೆ ಜಯಗಳಿಸಿ, ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ಆಯ್ಕೆಯಾದ ನಂತರ ವಿನಯ ಕುಲಕರ್ಣಿ ಕಾಂಗ್ರೆಸ್ ಪಕ್ಷ ಸೇರಿದರು.

2013ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಎಡರನೇ ಬಾರಿಗೆ ಶಾಸಕರಾದ ನಂತರ ಸಿದ್ದರಾಮಯ್ಯ ಸಂಪುಟದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರಾಗಿ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಗ್ರಾಮ ಮಟ್ಟದಿಂದ ರಾಜಕೀಯ ಆರಂಭಿಸಿದ ಇವರು ರಾಜ್ಯದ ಗಮನ ಸೆಳೆದರು. ಅಲ್ಲದೇ, 2014ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದಿಂದ ಬಿಜೆಪಿಯ ಪ್ರಹ್ಲಾದ ಜೋಶಿ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಸೋಲು ಕೂಡ ಅನುಭವಿಸಿದರು.

ಲಿಂಗಾಯತ ಚಳವಳಿ: 2015ರಿಂದ 2018ರವರೆಗೂ ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿ ಪ್ರಭಾವಿ ಖಾತೆಗಳು ನಿಭಾಯಿಸಿದ್ದರು. ಅಲ್ಲದೇ, ಪ್ರತ್ಯೇಕ ಲಿಂಗಾಯತ ಧರ್ಮದ ಮಾನ್ಯತೆಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು, ಇದು ಆಗಿನ ಕಾಲದಲ್ಲಿ ಸಾಕಷ್ಟು ಚರ್ಚೆಗೂ ಕೂಡ ಗ್ರಾಸವಾಗಿದ್ದು ಇದೀಗ ಇತಿಹಾಸ. 2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಅಮೃತ ದೇಸಾಯಿ ಅವರ ವಿರುದ್ಧ ಸೋಲು ಕಂಡರು.

ಯೋಗೀಶಗೌಡರ ಕೊಲೆ: ರಾಜಕೀಯ ದುರುದ್ದೇಶದಿಂದ ಬರೋಬ್ಬರಿ 10 ವರ್ಷಗಳ ಹಿಂದೆ 2016 ಜೂನ್ 15ರಂದು ಧಾರವಾಡ ಸಪ್ತಾಪುರ ಉದಯ ಜೀಮ್‌ನಲ್ಲಿ ಬಿಜೆಪಿ ಮುಖಂಡ ಹಾಗೂ ಜಿಪಂ ಸದಸ್ಯ ಯೋಗೀಶಗೌಡ ಗೌಡರ ಕೊಲೆ ನಡೆದಿತ್ತು. ಈ ಕುರಿತು ಉಪನಗರ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿತ್ತು. ಕೊಲೆ ನಡೆದ 48 ಗಂಟೆಯಲ್ಲಿ ಆರು ಜನ ಆರೋಪಿಗಳು ಶರಣಾಗಿದ್ದರು. ಆರಂಭದಲ್ಲಿ ಒದೊಂದು ರಿಯಲ್ ಎಸ್ಟೇಟ್‌ಗೆ ನಡೆದ ಕೊಲೆ ಎಂದು ಬಿಂಬಿಸಿತ್ತು. ತನಿಖೆ ನಡೆಸಿದ ಉಪನಗರ ಠಾಣೆ ಪೊಲೀಸರು, ಕಾಟಾಚಾರದ ತನಿಖೆ ನಡೆಸುವ ಜೊತೆಗೆ ನೈಜ ಆರೋಪಿಗಳ ಹೆಸರು ಕೈಬಿಟ್ಟು ಮತ್ತು ವಿನಯ ಕುಲಕರ್ಣಿ ಅವರ ಹೆಸರು ಕೂಡ ಪ್ರಸ್ತಾಪಿಸಿದೆ, 2016ರ ಸೆ.9ರಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಹೈಕೋರ್ಟ್‌ಗೆ ರಿಟ್ ಅರ್ಜಿ: 2017ರ ಡಿ.20ರಂದು ಕೊಲೆಯಾದ ಯೋಗೀಶಗೌಡರ ತಾಯಿ ತುಂಗಮ್ಮ ಮತ್ತು ಸಹೋದರ ಗುರುನಾಥ ಗೌಡರ ತಮ್ಮ ಮಗನ ಕೊಲೆ ಪ್ರಕರಣ ತನಿಖೆ ಸಮರ್ಪಕವಾಗಿಲ್ಲ. ಪೊಲೀಸರು ಶಾಸಕ ವಿನಯ ಅವರ ಆಣತಿಯಂತೆ ಕೆಲಸ ಮಾಡಿದ್ದಾರೆ. ಹೀಗಾಗಿ ಪ್ರಕರಣದ ತನಿಖೆ ಸಿಬಿಗೆ ವಹಿಸುವಂತೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. 2019 ಮಾ.1ರಂದು ವಿಚಾರಣೆ ನಡೆಸಿದ ಹೈಕೋರ್ಟ್ ರಿಟ್ ಅರ್ಜಿ ವಜಾಗೊಳಿಸಿತ್ತು. ಅಲ್ಲದೇ, ಸಾಕ್ಷನಾಶಕ್ಕೆ ಯತ್ನಿಸಿದ ವಿನಯ ಮತ್ತು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆಗೆ ಸೂಚಿಸಿತ್ತು.

ಸುಪ್ರೀಂಕೋರ್ಟ್ ಮೊರೆ: ಧಾರವಾಡ ಸೆಷನ್ಸ್ ಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ, ಹೈಕೋರ್ಟ್ ಆದೇಶ ಪ್ರಶ್ನಿಸಿ ಯೋಗೀಶಗೌಡರ ತಾಯಿ ಮತ್ತು ಸಹೋದರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಕೊಲೆ ಪ್ರಕರಣದ ಮಹತ್ವದ ಸಾಕ್ಷಿ ಬಿಟ್ಟು ತನಿಖೆ ನಡೆಸಿದ್ದಾರೆ. ಪ್ರಕರಣ ಸಿಬಿಐ ವಹಿಸಲು ಕೋರಿದ್ದರು. ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ 2019ರ ಜು.22ರಂದು ಅರ್ಜಿ ವಜಾಗೊಳಿಸಿತ್ತು.

ಪ್ರಕರಣದಲ್ಲಿ ಸಿಬಿಐ ಎಂಟ್ರಿ:

ಅಂದಿನ ಬಿಜೆಪಿ ಸರ್ಕಾರ 2019 ಸೆ.6ರಂದು ಪ್ರಕರಣ ಸಿಬಿಗೆ ವಹಿಸಿತು. ಸೆ.24 2019ರಂದು ಪ್ರಕರಣ ದಾಖಲಿಸಿಕೊಂಡ ಸಿಬಿಐ 2019ರ ನ.20ರಂದು ಏಳು ಜನ ಆರೋಪಿಗಳನ್ನು ಬಂಧಿಸಿತ್ತು. ಸಿಬಿಐ ತನಿಖೆಗೆ 2019ರ ನ.21ರಂದು ಹೈಕೋರ್ಟ್ ನೀಡಿದ ಮಧ್ಯಂತರ ತಡೆಯಾಜ್ಞೆಯನ್ನು ಸುಪ್ರೀಂಕೋರ್ಟ್ ತೆರವುಗೊಳಿಸಿತ್ತು.

ವಿನಯ ಕುಲಕರ್ಣಿ ಬಂಧನ: 2020ರ ಫೆ.29ರಂದು ಮೊದಲು ಬಂಧಿಸಿದ ಆರೋಪಿಗಳನ್ನು ಹೊರತು ಪಡಿಸಿ, ನೈಜ ಹಾಗೂ ಸುಫಾರಿ ಕಿಲ್ಲರ್ಸ್ ಆರು ಜನರನ್ನು ಸಿಬಿಐ ಬಂದಿಸಿತ್ತು. ಮಾ.13ಕ್ಕೆ ಮತ್ತೊಬ್ಬ ಆರೋಪಿ ಬಂಧಿಸಿತ್ತು. 2020 ಮೇ 20ರಂದು ಸಿಬಿಐ ಮೊದಲ ಸಲ ದೋಷಾರೋಪಟ್ಟಿ ಸಲ್ಲಿಸಿತ್ತು. ಬಳಿಕ 2020ರ ನ.5ರಂದು ಮಾಜಿ ಸಚಿವ ವಿನಯ ಕುಲಕರ್ಣಿ ಅವರನ್ನು ಅವರ ಮನೆಯಿಂದ ಬಂಧಿಸಿ, ಮೂರು ದಿನ ವಿಚಾರಣೆ ನಡೆಸಿತ್ತು.

ಯೋಗೀಶಗೌಡ ಹತ್ಯೆಗೆ ಭೀಮಾ ತೀರದ ಹಂತಕರಿಂದ ತರಿಸಲಾಗಿದ್ದ ಮೂರು ಪಿಸ್ತೂಲ್ 2020ರ ಮೇ 8ರಂದು ಆರೋಪಿ ಬಸವರಾಜ ಮುತ್ತಗಿ ಕಡೆಯಿಂದ ಜಪ್ತಿ ಮಾಡಿತ್ತು. ಈ ಪ್ರಕರಣವನ್ನು 2020ರ ಏ.14ರಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾವಾಣೆ ಮಾಡಿತ್ತು. 2020ರ ಡಿ.13ರಂದು ವಿನಯ ಮಾವ ಚಂದ್ರಶೇಖರ ಇಂಡಿ ಅವರನ್ನು ಬಂಧಿಸಲಾಯಿತು.

ವಿನಯಗೆ ಜಾಮೀನು ಮಂಜೂರು: 2021ರ ಜ.30ರಂದು ಸಿಬಿಐ ಎಡರನೇ ದೋಷಾರೋಪ ಪಟ್ಟಿ ಸಲ್ಲಿಸಿತು. ಈ ನಡುವೆ 2021ರ ಆ.11ರಂದು ಷರತ್ತುಬದ್ಧ ನಿರ್ಬಂಧ ವಿಧಿಸಿ ಸುಪ್ರೀಂಕೋರ್ಟ್ ವಿನಯ ಕುಲಕರ್ಣಿಗೆ ಜಾಮೀನು ಮಂಜೂರು ಮಾಡಿತ್ತು. 2021ರ ಸೆ.15ಕ್ಕೆ ಸಿಬಿಐ ಮೂರನೇ ಹಾಗೂ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಆದರೆ, ಸಿಬಿಐಗೆ ವಹಿಸಿದ್ದು, ಎಫ್‌ಐಆರ್ ರದ್ದು ಕೋರಿ ವಿನಯ ಕುಲಕರ್ಣಿ ಹಾಗೂ ಇತರೆ ಆರೋಪಿಗಳ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಗಳನ್ನು ಕೂಡ ವಜಾ ಮಾಡಿತ್ತು.

ಸುದೀರ್ಘ ವಿಚಾರಣೆ ಬಳಿಕ ಸುಪ್ರೀಂ ಕೋರ್ಟ್ ನೀಡಿದ್ದ ಜಾಮೀನು ರದ್ಧತಿಯೂ ಆಗಿತ್ತು. ಬಳಿಕ ವಿನಯ ಕುಲಕರ್ಣಿ ಜೈಲು ಸೇರಿದರು. ಆದರೆ, ಜನಪ್ರತಿನಿಧಿಗಳ ಕೋರ್ಟ್ ಸಾಕ್ಷಿ ವಿಚಾರಣೆ ಮುಗಿಸಿದ ಬಳಿಕ ಜಾಮೀನು ನೀಡುವಂತೆ ವಿನಯ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಕೋರ್ಟ್ 2026ರ ಫೆ.26ರಂದು ಷರತ್ತು ಬದ್ಧ ಜಾಮೀನು ನೀಡಿತ್ತು.

ಒಟ್ಟು ಮೂರು ಬಾರಿ ಶಾಸಕರಾದ ವಿನಯ ಕುಲಕರ್ಣಿ 2013ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ನ್ಯಾಯಾಲಯದ ಆದೇಶದಂತೆ ಜಿಲ್ಲಾ ಪ್ರವೇಶಕ್ಕೆ ನಿಷೇಧವಿದ್ದರೂ ಸಹ ಅವರ ಅನುಪಸ್ಥಿತಿಯಲ್ಲಿ ಕುಟುಂಬಸ್ಥರು ಹಾಗೂ ಬೆಂಬಲಿಗರು ನಡೆಸಿದ ಪ್ರಚಾರದಿಂದ ಅವರು ಜಯಗಳಿಸಿದ್ದರು. ಬಿಜೆಪಿ ಮುಖಂಡ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ಏಪ್ರೀಲ್ 15, 2026ಕ್ಕೆ ಬೆಂಗಳೂರಿನ ಜನಪ್ರತಿನಿಧಿಗಳು ವಿಶೇಷ ನ್ಯಾಯಾಲಯ ದೋಷಿ ಎಂದು ತೀರ್ಮ ನೀಡಿ, ಏಪ್ರಿಲ್ 17ಕ್ಕೆ ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

ಪ್ರಭಾವಿ ನಾಯಕನಾಗಿದ್ದ ಯೋಗೀಶಗೌಡ

ಧಾರವಾಡ: ತಾಲೂಕಿನ ಗೋವನಕೊಪ್ಪ ಗ್ರಾಮದ ಯೋಗೀಶಗೌಡ ಗೌಡರ ರಾಜಕಾರಣದಲ್ಲಿ ಉದಯೋನ್ಮುಖ ನಾಯಕರಾಗಿ ಬೆಳೆಯುತ್ತಿದ್ದಾಗಲೇ ಕೊಲೆಯಾಗಿರುವುದು ರಾಜ್ಯದಲ್ಲಿ ಸಂಚಲನ ಮೂಡಿಸಿತ್ತು. ಮೂಲತಃ ಕೃಷಿ ಕುಟುಂಬದ ಯೋಗೀಶಗೌಡ ಓರ್ವ ಪ್ರಭಾವಿ ಯುವ ನಾಯಕನಾಗಿ ರಾಜಕೀಯದಲ್ಲಿ ಗುರುತಿಕೊಂಡಿದ್ದರು.

ಆರಂಭಿಕ ಹಂತ–ಕುಟುಂಬ: ಧಾರವಾಡ ಜಿಲ್ಲೆ ಪ್ರಬಲ ಲಿಂಗಾಯತ ಸಮುದಾಯಕ್ಕೆ ಸೇರಿದ ಯೋಗೀಶಗೌಡ ಗೌಡರ ತಮ್ಮ ಆಕ್ರಮಣಕಾರಿ ಸಂಘಟನಾ ಚಾತುರ್ಯದಿಂದ ಯುವಕರ ನಡುವೆ ಅತ್ಯಂತ ಜನಪ್ರಿಯರಾಗಿದ್ದರು. ಅವರ ಸಹೋದರ ಗುರುನಾಥಗೌಡ ಗೌಡರ ಕೂಡ ರಾಜಕೀಯದಲ್ಲಿ ಸಕ್ರಿಯರಾಗಿದ್ದರು. 2010ರಲ್ಲಿ ಧಾರವಾಡ ತಾಲೂಕು ಪಂಚಾಯತಿ ಮಾರಡಗಿ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿದ್ದರು.



ರಾಜಕೀಯ ಬೆಳವಣಿಗೆ: 2016ರಲ್ಲಿ ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯತಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಯೋಗೀಶಗೌಡ ಗೌಡರ ಅವರನ್ನು ರಾಜಕೀಯ ಪಿತೂರಿಯಿಂದ ಬಂಧಿಸಿ, ಜೈಲಿನಲ್ಲಿ ಇರಿಸಿತ್ತು. ಜೈಲಿನಲ್ಲಿ ಇದ್ದುಕೊಂಡೇ ಅವರು ಗೆಲುವು ಸಾಧಿಸಿ ಗಮನ ಸೆಳೆದರು. ಜಿಪಂ ಸದಸ್ಯರಾದ ಮೇಲೆ ಧಾರವಾಡದ ಗ್ರಾಮಾಂತರ ಕ್ಷೇತ್ರದಲ್ಲಿ ಪಕ್ಷದ ಬಲವರ್ಧನೆಗೆ ಶ್ರಮಿಸಿದರು. ಅಲ್ಪ ಕಾಲದಲ್ಲಿಯೇ ಈ ಭಾಗದ 'ಮಾಸ್ ಲೀಡರ್' ಆಗಿಯೂ ಹೊರಹೊಮ್ಮಿದ್ದರು.

ವಿನಯ ಅವರೊಂದಿಗೆ ಸಂಘರ್ಷ: ಧಾರವಾಡ ಗ್ರಾಮಾಂತರ ಕ್ಷೇತ್ರದಲ್ಲಿ ಪ್ರಭಾವಿ ಸಚಿವರಾಗಿದ್ದ ವಿನಯ ಕುಲಕರ್ಣಿ ಅವರಿಗೆ ಯೋಗೀಶ್‌ಗೌಡ ಅವರು ನೇರ ಸವಾಲಾಗಿದ್ದರು. ಕ್ಷೇತ್ರದಲ್ಲಿ ವಿನಯ ಕುಲಕರ್ಣಿ ವರ್ಚಸ್ಸನ್ನು ಕುಗ್ಗಿಸಲು ಯೋಗೀಶಗೌಡ ಮಾಡಿದ ಹೋರಾಟಗಳು ಮತ್ತು ಸಂಘಟನೆಗಳು ಈ ಇಬ್ಬರು ನಾಯಕರ ನಡುವೆ ರಾಜಕೀಯ ವೈಷಮ್ಯಕ್ಕೆ ಕಾರಣವಾಯಿತು. 2018ರ ವಿಧಾನಸಭಾ ಚುನಾವಣೆಯಲ್ಲಿ ಯೋಗೀಶಗೌಡ ಬಿಜೆಪಿ ಪ್ರಬಲ ಆಕಾಂಕ್ಷಿಯಾಗಿದ್ದರು.

ಭೀಕರ ಹತ್ಯೆ (ಜೂನ್ 15, 2016): ಜೂನ್ 15, 2016ರಂದು ಬೆಳಗ್ಗೆ ಧಾರವಾಡದ ಸಪ್ತಾಪುರದಲ್ಲಿರುವ ತಮ್ಮದೇ ಒಡೆತನದ ಉದಯ್ ಜಿಮ್‌ನಲ್ಲಿ ಯೋಗೀಶಗೌಡ ಅವರನ್ನು ದುಷ್ಕರ್ಮಿಗಳು ಭೀಕರವಾಗಿ ಕೊಲೆ ಮಾಡಿದರು. ಈ ಕೊಲೆ ಪ್ರಕರಣವು ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಆರಂಭದಲ್ಲಿ ಇದೊಂದು ಆಸ್ತಿ ವಿಚಾರ ಅಥವಾ ವೈಯಕ್ತಿಕ ದ್ವೇಷದ ಕೊಲೆ ಎಂದು ಬಿಂಬಿಸಲಾಗಿತ್ತು.

ಕಾನೂನು ಹೋರಾಟ ಮತ್ತು ಸಿಬಿಐ ತನಿಖೆ: ಯೋಗೀಶಗೌಡರ ಕುಟುಂಬದವರು ಮತ್ತು ಬಿಜೆಪಿ ನಾಯಕರು ಈ ಕೊಲೆಯ ಹಿಂದೆ ರಾಜಕೀಯ ಪಿತೂರಿ ಇದೆ ಎಂದು ಆರೋಪಿಸಿ, ಪ್ರಕರಣ ಸಿಬಿಐ ತನಿಖೆಗೆ ನೀಡಲು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಈ ಪ್ರಕರಣ ಸಿಬಿಐಗೆ ವಹಿಸಲಾಯಿತು. ಸಿಬಿಐ ತನಿಖೆಯಲ್ಲಿ ಮಾಜಿ ಸಚಿವ ವಿನಯ ಕುಲಕರ್ಣಿ ಕೈವಾಡವಿರುವುದು ಸಾಬೀತಾಗಿ, ಇಂದು ಅವರಿಗೆ ಜೀವಾವಧಿ ಶಿಕ್ಷೆ ಪ್ರಕಟವಾಗಿದೆ.


ಪ್ರಮುಖಾಂಶ: ಯೋಗೀಶಗೌಡ ಗೌಡರ್ ಅವರು ಬದುಕಿದ್ದರೆ ಧಾರವಾಡ ಗ್ರಾಮಾಂತರ ಕ್ಷೇತ್ರದ ಪ್ರಬಲ ಶಾಸಕನಾಗಿ ಬೆಳೆಯುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರು. ಅವರ ಹತ್ಯೆಯು ಇಂದು ಧಾರವಾಡದ ರಾಜಕೀಯ ಸಮೀಕರಣವನ್ನೇ ಬದಲಿಸಿಬಿಟ್ಟಿತು.

> **ನನ್ನ ತಮ್ಮನನ್ನು ಕಳೆದುಕೊಂಡ ನೋವು ಎಂದಿಗೂ ಮಾಸದು. ಆದರೆ, ಅವನನ್ನು ಕೊಂದವರಿಗೆ ಶಿಕ್ಷೆಯಾಗಿದೆ ಎಂಬ ಸುದ್ದಿ ಇಂದು ಅವನ ಆತ್ಮಕ್ಕೆ ನಿಜವಾದ ಶಾಂತಿ ಸಿಕ್ಕಂತಾಗಿದೆ.**
>
> ■ ಅಕ್ಕಮಹಾದೇವಿ, ಯೋಗೀಶಗೌಡರ ಸಹೋದರಿ

ಪಟಾಕಿ ಸಿಡಿಸಿ ಸಹೋದರಿ ಸಂಭ್ರಮ

ಧಾರವಾಡ: ಹತ್ತು ವರ್ಷಗಳ ಸುದೀರ್ಘ ಹೋರಾಟದ ನಂತರ ನನ್ನ ತಮ್ಮನ ಸಾವಿಗೆ ನ್ಯಾಯ ಸಿಕ್ಕಿದೆ. ಅಧರ್ಮಕ್ಕೆ ಸೋಲಾಗಿದೆ, ಧರ್ಮಕ್ಕೆ ಜಯ ಸಿಕ್ಕಿದೆ ಎಂದು ಹತ್ಯೆಗೀಡಾದ ಯೋಗೀಶಗೌಡರ ಸಹೋದರಿ ಅಕ್ಕಮಹಾದೇವಿ ಭಾವುಕರಾಗಿ ನುಡಿದರು.

ಪಟಾಕಿ ಸಿಡಿಸಿ ಹರ್ಷ: ತೀರ್ಪು ಪ್ರಕಟವಾಗುತ್ತಿದ್ದಂತೆ ಯೋಗೀಶಗೌಡ ಅವರ ಸಹೋದರಿ ಮತ್ತು ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.'ಯೋಗೀಶಗೌಡ ಗೌಡರ ಅಮರರಾಗಲಿ' ಎಂಬ ಘೋಷಣೆಗಳು ಮೊಳಗಿದವು.



ನ್ಯಾಯಾಂಗಕ್ಕೆ ಧನ್ಯವಾದ: ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಮ್ಮ ಕುಟುಂಬದ ಮೇಲೆ ಎಷ್ಟೇ ಒತ್ತಡಗಳು ಬಂದರೂ, ಪ್ರಾಣದ ಹಂಗು ತೊರೆದು ನ್ಯಾಯಕ್ಕಾಗಿ ಕಾಯುತ್ತಿದ್ದೆವು. ಇಂದು ನ್ಯಾಯಾಲಯದ ತೀರ್ಪಿನಿಂದ ಸತ್ಯಕ್ಕೆ ಸಂದ ಜಯ ಎಂದು ಕಣ್ಣೀರು ಹಾಕಿದರು. ಹೋರಾಟಕ್ಕೆ ಸಂದ ಜಯ: ಪ್ರಕರಣವನ್ನು ಸಿಬಿಐಗೆ ವಹಿಸಲು ನಾವು ಪಟ್ಟ ಶ್ರಮ ಸಾರ್ಥಕವಾಗಿದೆ. ಅಧಿಕಾರ ಮತ್ತು ಹಣದ ಬಲದ ಮುಂದೆ ನ್ಯಾಯ ಸೋಲುವುದಿಲ್ಲ ಎಂಬುದು ಇಂದಿನ ತೀರ್ಪಿನಿಂದ ಸಾಬೀತಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕುಟುಂಬದ ದಶಕದ ನೋವು: 2016ರಲ್ಲಿ ತಮ್ಮ ಜಿಮ್‌ನಲ್ಲಿ ಹತ್ಯೆಗೀಡಾಗಿದ್ದ ಯೋಗೀಶಗೌಡರ ಕುಟುಂಬ ಅಂದಿನಿಂದಲೂ ಕಾನೂನು ಹೋರಾಟ ನಡೆಸುತ್ತ ಬಂದಿತ್ತು. ಸಿಬಿಐ ತನಿಖೆಯ ನಂತರ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿ, ಇಂದು ಅಂತಿಮ ತೀರ್ಪು ಹೊರ ಬಿದ್ದಿದೆ. ಈ ತೀರ್ಪು ಧಾರವಾಡದ ಜನತೆ ಮತ್ತು ಕಾನೂನಿನ ಮೇಲೆ ನಂಬಿಕೆ ಇಟ್ಟವರಿಗೆ ದೊಡ್ಡ ಭರವಸೆ ನೀಡಿದೆ.

ವಿನಯ್‌ಗೆ ಶಾಸಕ ಸ್ಥಾನ ಅನರ್ಹ ಭೀತಿ

ಬೆಂಗಳೂರು: ಯೋಗೀಶ್ ಗೌಡ ಕೊಲೆ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯವು ಶುಕ್ರವಾರ ಜೀವಾವಧಿ ಶಿಕ್ಷೆ ವಿಧಿಸಿ ಮಹತ್ವದ ತೀರ್ಪ ನೀಡಿದೆ. ಜನಪ್ರತಿನಿಧಿಗಳ ಕಾಯ್ದೆ 1951ರ ಅನ್ವಯ, ಶಿಕ್ಷೆ ಪ್ರಕಟವಾದ ಕ್ಷಣದಿಂದಲೇ ವಿನಯ್ ಕುಲಕರ್ಣಿ ಅವರು ತಮ್ಮ ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಜೈಲು ಶಿಕ್ಷೆಯ ಜತೆಗೆ ಮುಂದಿನ 6 ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧ ಹೇರಲಾಗಿದೆ.

ಜನಪ್ರತಿನಿಧಿ ಬಗ್ಗೆ ಕಾನೂನು ಏನು ಹೇಳುತ್ತೆ?: ಕಾನೂನು ಪ್ರಕಾರ ಶಿಕ್ಷೆ ಪ್ರಕಟವಾದ ದಿನದಿಂದಲೇ ಶಾಸಕ ಸ್ಥಾನದಿಂದ ತಕ್ಷಣವೇ ಅನರ್ಹವಾಗುತ್ತೆ. ಜನಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 8(3) ರ ಪ್ರಕಾರ, ಯಾವುದೇ ಶಾಸಕರು 2 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಶಿಕ್ಷೆಗೆ ಗುರಿಯಾದರೆ ಅವರು ತಕ್ಷಣವೇ ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ. 2013ರ ಲಿಲಿ ಥಾಮಸ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು, ಈ ತೀರ್ಪಿನ ಪ್ರಕಾರ ಮೇಲ್ಮನವಿ ಸಲ್ಲಿಸಲು ನೀಡಲಾಗುತ್ತಿದ್ದ 3 ತಿಂಗಳ ಕಾಲಾವಕಾಶವನ್ನು ರದ್ದುಪಡಿಸಲಾಗಿದೆ. ಹಾಗಾಗಿ, ಶಿಕ್ಷೆಯಾದ ತಕ್ಷಣ ಅನರ್ಹತೆ ಅನ್ವಯವಾಗುತ್ತದೆ.

ಚುನಾವಣೆಗೆ ಸ್ಪರ್ಧಿಸಲು ನಿಷೇಧ: ಇನ್ನು ಜೈಲು ಶಿಕ್ಷೆಯ ಅವಧಿಯನ್ನು ಪೂರೈಸಿದ ನಂತರವೂ ಮುಂದಿನ 6 ವರ್ಷಗಳ ಕಾಲ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅವರಿಗೆ ಅವಕಾಶವಿರುವುದಿಲ್ಲ. ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆಯಾದ ಕಾರಣ, ಉನ್ನತ ನ್ಯಾಯಾಲಯವು ಶಿಕ್ಷೆಯನ್ನು ರದ್ದುಗೊಳಿಸದ ಹೊರತು ಮತ್ತೊಮ್ಮೆ ಚುನಾವಣೆಗೆ ಸ್ಪರ್ಧಿಸುವುದು ಅಸಾಧ್ಯ. ಇನ್ನು ಶಾಸಕತ್ವ ಅಧಿಕೃತವಾಗಿ ಅನರ್ಹಗೊಂಡ ತಕ್ಷಣ ಕ್ಷೇತ್ರ ಖಾಲಿಯಾಗಲಿದೆ. ವಿಧಾನಸಭಾ ಸಚಿವಾಲಯದಿಂದ ಕ್ಷೇತ್ರ ಖಾಲಿ ಇದೆ ಎಂದು ಘೋಷಣೆಯಾಗಲಿದ್ದು, ಬಳಿಕ ಚುನಾವಣಾ ಆಯೋಗ 6 ತಿಂಗಳ ಒಳಗೆ ಉಪಚುನಾವಣೆಯನ್ನು ನಡೆಸಲಿದೆ.

ವಕೀಲರು ಹೇಳಿದ್ದೇನು?: ಕೊಲೆ ಪ್ರಕರಣದಲ್ಲಿ ಸ್ಥಳೀಯ ಪೊಲೀಸರು 6 ಜನರನ್ನು ಬಂಧಿಸಿ ರಿಯಲ್ ಎಸ್ಟೇಟ್ ಜಗಳ ಎಂಬಂತೆ ಬಿಂಬಿಸಿದ್ದರು. ತನಿಖಾಧಿಕಾರಿ ರಾಕೇಶ್ ರಂಜನ್ ಅವರ ತಂಡವು ತನಿಖೆ ನಡೆಸಿ ಶಾಸಕ ವಿನಯ್ ಕುಲಕರ್ಣಿ ಹತ್ಯೆ ಮಾಡಿಸಿದ್ದನ್ನು ಪತ್ತೆ ಮಾಡಿ, ಆರೋಪಪಟ್ಟಿ ಸಲ್ಲಿಸಿದ್ದರು. ಇದಕ್ಕೆ ಕೊಲೆಯಾದ ದಿನದ ಧಾರವಾಡ ಅಂಚೇ ಕಚೇರಿ ಹತ್ತಿರದ ಸಿಸಿಟಿವಿ ಫೂಟೇಜ್ ಮಹತ್ವದ ತಿರುವು ನೀಡಿತು. ಜೊತೆಗೆ ಟವರ್ ಲೊಕೇಶನ್, ಸಿಡಿಆರ್, ಪ್ರತ್ಯಕ್ಷ ಸಾಕ್ಷಿ ಸೇರಿದಂತೆ ಮಹತ್ವದ ಸಾಕ್ಷ್ಯಗಳನ್ನು ಕಲೆ ಹಾಕಿತ್ತು. ಮೊದಲ ಆರೋಪಿ ಬಸವರಾಜ ಮುತ್ತಗಿ ಮತ್ತು ಶಾಸಕ ವಿನಯ್ ಕುಲಕರ್ಣಿ ಭೇಟಿ ಮಾಡಿದ ಬಗೆಗೂ ಸಾಕ್ಷಿ ಸಿಕ್ಕಿವೆ. ಪರಿಣಾಮ ಆರೋಪಿಗಳಿಗೆ ನ್ಯಾಯಾಲಯ ಡಬಲ್ ಜೀವಾವಧಿ ಶಿಕ್ಷೆ ನೀಡಿದೆ ಎಂದು ಸಿಬಿಐ ಪರ ವಕೀಲ ಶಿವಾನಂದ ಪೆರ್ಲ ಪ್ರತಿಕ್ರಿಯೆ ನೀಡಿದರು.

ವಿನಯ್ ಉ.ಕ.ದ ದೊಡ್ಡ ನಾಯಕ :ಡಿಸಿಎಂ ಹೇಳಿಕೆ: ರಾಜಕೀಯವಾಗಿ ಉತ್ತರ ಕರ್ನಾಟಕದಲ್ಲಿ ವಿನಯ್ ಕುಲಕರ್ಣಿ ದೊಡ್ಡ ಶಕ್ತಿಯಾಗಿ ಬೆಳೆಯುತ್ತಾನೆ ಎಂಬ ಕಾರಣಕ್ಕೆ ಷಡ್ಯಂತ್ರ ನಡೆದಿದೆ. ಪ್ರಕರಣ ಸಿಬಿಐಗೆ ಕೊಟ್ಟಾಗಲೇ ಯಡಿಯೂರಪ್ಪ ಹೇಳಿದ್ದರು. ಅದು ಹೇಗೆ ಮುಂಚೆಯೇ ಶಿಕ್ಷೆ ಕೊಡಿಸುವೆ ಎಂದು ಹೇಳಲು ಸಾಧ್ಯ? ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರಿಂದ ಸ್ಪಷ್ಟವಾಗಿ ರಾಜಕೀಯ ದ್ವೇಷ ಇರುವುದು ಸ್ಪಷ್ಟವಾಗುತ್ತದೆ. ಇದನ್ನು ಎದುರಿಸುತ್ತೇವೆ. ಸಮಯ ಬಂದಾಗ ಷಡ್ಯಂತ್ರ ಯಾರದು ಎಂಬುದು ಗೊತ್ತಾಗುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಚನ್ನಕೇಶವ ಟೆಂಗರಿಕರ್‌ಗೆ ಏಳು ವರ್ಷ ಸಜೆ

ಬೆಂಗಳೂರು : ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ರಾಜಕಾರಣಿಗಳಷ್ಟೇ ಅಲ್ಲದೆ, ಚನ್ನಕೇಶವ ಟೆಂಗರಿಕರ್ ಎಂಬ ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರವೂ ಬಹಳ ದೊಡ್ಡದಿದೆ. ಅಂದಿನ ಧಾರವಾಡ ಉಪನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ಚನ್ನಕೇಶವ ಟೆಂಗರಿಕರ್ ಅವರ ಪಾತ್ರ ತನಿಖಾ ಸಂಸ್ಥೆಗಳ ನಿದ್ದೆಗೆಡಿಸಿತ್ತು. ಹತ್ಯೆ ನಡೆದ ಸಮಯದಲ್ಲಿ ಇವರು ಅದೇ ಠಾಣೆಯ ಅಧಿಕಾರಿಯಾಗಿದ್ದು, ಪ್ರಕರಣದ ತನಿಖೆಯ ಹಾದಿ ತಪ್ಪಿಸಲು ಇವರು ವಿನಯ್ ಕುಲಕರ್ಣಿ ಅವರ ಸೂಚನೆಯಂತೆ ಕೆಲಸ ಮಾಡಿದ್ದಾರೆ ಎಂಬುದು ಸಿಬಿಐ ತನಿಖೆ ವೇಳೆ ಬಯಲಾಗಿತ್ತು.

ತನಿಖೆಯ ಹಾದಿ ತಪ್ಪಿಸಿದ ಆರೋಪ: ಯೋಗೀಶ್ ಗೌಡ ಅವರ ಹತ್ಯೆ ನಡೆದ ತಕ್ಷಣವೇ ಅದನ್ನು ಕೇವಲ ಆಸ್ತಿ ವಿಚಾರ ಅಥವಾ ವೈಯಕ್ತಿಕ ದ್ವೇಷದ ಕೊಲೆ ಎಂಬಂತೆ ಚಿತ್ರಿಸಲು ತಿಂಗರಿಕರ್ ಮುಂದಾಗಿದ್ದರು ಎನ್ನಲಾಗಿದೆ. ನೈಜ ಆರೋಪಿಗಳನ್ನು ಬಿಟ್ಟು, ಈ ಮೊದಲೇ ಸಿದ್ಧಪಡಿಸಿದಂತೆ ನಕಲಿ ಆರೋಪಿಗಳನ್ನು ಶರಣಾಗುವಂತೆ ಮಾಡಿ, ಪ್ರಕರಣವನ್ನು ಮುಚ್ಚಿ ಹಾಕಲು ಇವರು ಮಾಸ್ಟರ್ ಪ್ಲಾನ್ ರೂಪಿಸಿದ್ದರು ಎಂಬ ಆರೋಪ ಇವರ ಮೇಲಿದೆ. ಕೊಲೆಯಾದ ಜಾಗದ ಮಹಜರು ಮತ್ತು ಸಾಕ್ಷ್ಯ ಸಂಗ್ರಹದ ವೇಳೆಯೂ ಇವರು ವಿನಯ್ ಕುಲಕರ್ಣಿ ಅವರ ಹಿತಾಸಕ್ತಿಗೆ ಅನುಗುಣವಾಗಿ ದಾಖಲೆಗಳನ್ನು ಸೃಷ್ಟಿಸಿದ್ದರು ಎನ್ನಲಾಗಿದೆ.

ಪ್ರಕರಣಕ್ಕೆ ಹೊಸ ತಿರುವು ನೀಡಿದ ಸಿಬಿಐ ಅಧಿಕಾರಿ ರಾಕೇಶ್ ರಂಜನ್

ಬೆಂಗಳೂರು : ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಎಲ್ಲ ಅಪರಾಧಿಗಳಿಗೆ ಬಿಜೆಪಿ ಮುಖಂಡ ಹಾಗೂ ಜಿಪಂ ಸದಸ್ಯರಾಗಿದ್ದ ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯ ನ್ಯಾಯಾಲಯ ಘೋಷಿಸಿದೆ. ಇನ್ನೇನು ಪ್ರಕರಣದಲ್ಲಿ ಶಾಸಕ ವಿನಯ್ ಪಾರಾಗಿಬಿಟ್ಟರು ಎಂಬಂತಹ ಸ್ಥಿತಿ ನಿರ್ಮಾಣವಾಗಿದ್ದಾಗ ತನಿಖಾಧಿಕಾರಿಯಾಗಿ ಬಂದ ಸಿಬಿಐ ಅಧಿಕಾರಿ ರಾಕೇಶ್ ರಂಜನ್ ಪ್ರಕರಣಕ್ಕೆ ಹೊಸ ತಿರುವು ನೀಡಿದ್ದರು! ಹೌದು, ಯೋಗೇಶ್‌ಗೌಡ ಕೊಲೆ ಪ್ರಕರಣ ತಾರ್ಕಿಕ ಅಂತ್ಯ ಕಂಡಿರುವುದರಲ್ಲಿ ಸಿಬಿಐ ಇನ್ಸ್‌ಪೆಕ್ಟರ್ ರಾಕೇಶ್ ರಂಜನ್ ಅವರ ಶ್ರಮ ಹಾಗೂ ವೃತ್ತಿ ನೈಪುಣ್ಯತೆ ಸಾಕಷ್ಟು ಕೆಲಸ ಮಾಡಿದೆ. ಈ ಪ್ರಕರಣ ತನಿಖಾಧಿಕಾರಿ ರಾಕೇಶ್ ರಂಜನ್ ವೃತ್ತಿ ಬದುಕಿನಲ್ಲೂ ಅತ್ಯಂತ ಮಹತ್ವದ್ದಾಗಿದೆ.

ಏಕೆಂದರೆ ಸಿಐಡಿ ಅಧಿಕಾರಿಗಳು ಇಡೀ ಪ್ರಕರಣವನ್ನು ತಿರುಚಿ ರಿಯಲ್ ಎಸ್ಟೇಟ್ ಸಂಬಂಧದ ಕೊಲೆ ಎಂಬಂತೆ ಬಿಂಬಿಸಲು ವೇದಿಕೆ ಸೃಷ್ಟಿಸಿದ್ದರು ಎಂಬ ಅಂಶಗಳನ್ನು ಸಿಬಿಐ ತನ್ನ ತನಿಖೆಯಲ್ಲಿ ಬಯಲಿಗೆಳೆದಿತ್ತು. ಕೊಲೆ ಪ್ರಕರಣಕ್ಕೆ ಇಂತಹ ಸ್ಫೋಟಕ ತಿರುವು ನೀಡಿದ್ದೇ ಸಿಬಿಐ ಅಧಿಕಾರಿ ರಾಕೇಶ್ ರಂಜನ್.

ರಾಕೇಶ್ ರಂಜನ್ ಯಾರು? ಬಿಹಾರ್‌ನ ರಾಜ್ಯದ ಸಾಮಾನ್ಯ ರೈತರೊಬ್ಬನ ಮಗನಾದ ರಾಕೇಶ್ ರಂಜನ್ ಪದವಿ ಮುಗಿದ ಬಳಿಕ ಬಿಎಸ್ ಎಫ್ ಯೋಧರಾಗಿ ಸೇರ್ಪಡೆಗೊಂಡರು. ಅವರ ವೃತ್ತಿ ನೈಪುಣ್ಯತೆ ಪರಿಗಣಿಸಿ ಬಿಎಸ್‌ಎಫ್ ಗುಪ್ತದಳ ಅಧಿಕಾರಿಯಾಗಿ ನಿಯೋಜನೆಗೊಂಡು 5 ವರ್ಷಗಳ ಕಾಲ ಅಲ್ಲಿದ್ದರು. ರಾಜೀವ್ ಗಾಂಧಿ ಅವರಿಗೆ ಭದ್ರತಾ ಉಸ್ತುವಾರಿಯಾಗಿದ್ದ ಅಂದಿನ ನ್ಯಾಷನಲ್ ಸೆಕ್ಯೂರಿಟಿ ಗ್ರೂಪ್ ಮುಖ್ಯಸ್ಥ ಟಿ. ಮಡಿಯಾಳ್ ಅವರು ರಾಕೇಶ್ ರಂಜನ್ ಚಾಕಚಕ್ಯತೆ ಕಂಡು ಸಿಬಿಐಗೆ ಕರೆಸಿಕೊಂಡರು. ಅದಾದ ನಂತರ ರಾಕೇಶ್ ದೇಶದ ಗಮನ ಸೆಳೆದ ಹಲವು ಪ್ರಮುಖ ಪ್ರಕರಣಗಳ ತನಿಖಾ ತಂಡದ ಭಾಗವಾದರು. 2011ರಲ್ಲಿ ಬಹುಕೋಟಿ ಗಣಿ ಹಗರಣದ ರೂವಾರಿ ಗಾಲಿ ಜನಾರ್ದನ್ ರೆಡ್ಡಿ ಅವರನ್ನು ಬಂಧಿಸಿದ್ದು ಕೂಡ ಇದೇ ರಾಕೇಶ್ ರಂಜನ್. ಆಗ ಹೈದರಾಬಾದ್ ವಲಯದ ಸಿಬಿಐ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ರಾಕೇಶ್, ಬಳ್ಳಾರಿಯ ರೆಡ್ಡಿ ನಿವಾಸದ ಮುಂದೆ ಪ್ರತ್ಯಕ್ಷರಾದ ಬಳಿಕವಷ್ಟೇ ಸ್ಥಳೀಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಬಂಧಿಸುತ್ತಿರುವ ವಿಷಯ ತಿಳಿಸಿದ ಅರ್ಧ ಗಂಟೆಯಲ್ಲಿ ನೇರವಾಗಿ ರಸ್ತೆ ಮೂಲಕ ಹೈದರಾಬಾದ್‌ಗೆ ಕರೆದೊಯ್ದಿದ್ದರು. ಆದಾದ ನಂತರ ಸತತ 9 ದಿನಗಳ ತನಕ ರೆಡ್ಡಿ ವಿಚಾರಣೆ ನಡೆಸಿದ್ದು ಇದೇ ರಾಕೇಶ್ ರಂಜನ್ ರಾಕೇಶ್ ರಂಜನ್ ಈವರೆಗೆ ತಮ್ಮ ವೃತ್ತಿ ಬದುಕಿನಲ್ಲಿ ಕೇವಲ 15 ಪ್ರಕರಣಗಳ ತನಿಖಾಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಆ ಪೈಕಿ 12 ಪ್ರಕರಣಗಳಲ್ಲಿ ನ್ಯಾಯಾಲಯ ಆರೋಪಿಗಳಿಗೆ ಶಿಕ್ಷೆ ವಿಧಿಸಿದೆ ಇದೀಗ ಯೋಗೇಶ್‌ಗೌಡ ಕೊಲೆ ಪ್ರಕರಣದ ತನಿಖೆ ನಡೆಸಿ, ಚಾರ್ಜ್ ಶೀಟ್ ಸಲ್ಲಿಸಿದ್ದರಿಂದ ವಿನಯ್ ಕುಲಕರ್ಣಿಗೆ ಶಿಕ್ಷೆ ವಿಧಿಸಿರುವುದು 13ನೇ ಪ್ರಕರಣ. ಇನ್ನೆರಡು ಪ್ರಕರಣಗಳಲ್ಲಿ ಪ್ರಮುಖ ಆರೋಪಿಗಳ ನಿಧನ ಹೊಂದಿದ್ದರಿಂದ ಪ್ರಕರಣಗಳು ವಿಲೆಯಾಗಿವೆ ರಾಕೇಶ್ ರಂಜನ್ ಅತ್ಯುತ್ತಮ ಸೇವೆಗೆ 2020ರಲ್ಲಿ ಪ್ರತಿಷ್ಠಿತ ಕೇಂದ್ರ ಗೃಹ ಸಚಿವರ ಪದಕ ದೊರೆತಿದೆ. ಕಳೆದ 2019ರ ಸೆಪ್ಟೆಂಬರ್‌ನಲ್ಲಿ ಧಾರವಾಡದ ಬಿಜೆಪಿಯ ಮುಖಂಡ ಹಾಗೂ ಜಿಪಂ ಸದಸ್ಯ ಯೋಗೀಶ್‌ಗೌಡ ಕೊಲೆ ಪ್ರಕರಣವನ್ನು ಸಿಬಿಐಗೆ ವಹಿಸಿದಾಗ ರಾಕೇಶ್ ರಂಜನ್ ಪ್ರಕರಣದ ತನಿಖಾಧಿಕಾರಿಯಾಗಿ ನಿಯುಕ್ತಿಗೊಂಡರು. ಯೋಗೀಶ್ ಕೊಲೆ ಪ್ರಕರಣ ಇನ್ನೇನು ಮುಗಿದೇ ಹೋಗಿತ್ತು ಎಂದುಕೊಂಡಿದ್ದ ರಾಜ್ಯದ ಜನತೆಗೆ ದಿನಗಳೆದಂತೆ ಹೊರಬಿದ್ದ ಸಂಗತಿಗಳು ಹುಬ್ಬೇರಿಸುವಂತೆ ಮಾಡಿತ್ತು.

ಕೊಲೆ ಮಾಡಿದ್ದು ನಾವೇ ಎಂದು ಆರು ಮಂದಿ ಆರೋಪಿಗಳು ಕೊಲೆಯಾದ 24 ಗಂಟೆಯಲ್ಲೇ ಶರಣಾಗಿದ್ದರಾದರೂ, ಶೂಟರ್‌ಗಳು ಸ್ಥಳೀಯ ರೌಡಿಗಳಲ್ಲ, ಬದಲಾಗಿ ಹೊರಗಿನವರು ಎಂಬ ಹೊಸ ಸಂಗತಿಯನ್ನು ಬಯಲು ಮಾಡುವಲ್ಲಿ ರಾಕೇಶ್ ರಂಜನ್ ಪಾತ್ರ ಮಹತ್ವದ್ದು.

ಕೇಂದ್ರ ಸರ್ಕಾರದಿಂದ ರಂಜನ್‌ಗೆ ಶಹಭಾಷ್ ಗಿರಿ: ಕೇಂದ್ರ ಸರ್ಕಾರ ರಾಕೇಶ್ ರಂಜನ್ ಅವರ ವೃತ್ತಿ ನೈಪುಣ್ಯತೆಗೆ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವರ ಮೆಡಲ್ ಪುರಸ್ಕಾರ ಘೋಷಿಸಿದೆ. ದೇಶದ 15 ಮಂದಿ ಸಿಬಿಐ ಅಧಿಕಾರಿಗಳಿಗೆ ಈ ಪುರಸ್ಕಾರ ನೀಡಲಾಗಿದ್ದು, ಆ ಪಟ್ಟಿಯಲ್ಲಿ ರಂಜನ್ ಹೆಸರಿದೆ. ತನಿಖಾ ಏಜನ್ಸಿಗಳಲ್ಲಿ ವಿಶಿಷ್ಟ ಸಾಧನೆ ಮಾಡುವ ಅಧಿಕಾರಿಗಳಿಗೆ ಈ ಪುರಸ್ಕಾರವನ್ನು ಈ ವರ್ಷದಿಂದ ಕೊಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮೊದಲ ವರ್ಷವೇ ಈ ಪ್ರಶಸ್ತಿಯಲ್ಲಿ ರಾಕೇಶ್ ರಂಜನ್ ಪಾಲುದಾರ ಎಂಬುದು ಗಮನಾರ್ಹ.

ಕಿರುಸುದ್ದಿ

ಕೋಟೆಕಾರು ಶ್ರೀ ಶೃಂಗೇರಿ ಶಂಕರ ಮಠ: ಏ.21ಕ್ಕೆ ಶ್ರೀ ಶಂಕರ ಜಯಂತಿ

ಮಂಗಳೂರು : ಇಲ್ಲಿಗೆ ಸಮೀಪದ ಕೋಟೆಕಾರು ಶ್ರೀ ಶೃಂಗೇರಿ ಶಂಕರ ಮಠದಲ್ಲಿ ದಕ್ಷಿಣಾಮ್ನಾಯ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಮತ್ತು ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ ಏ.21ರಂದು ಶ್ರೀ ಶಂಕರ ಜಯಂತ್ಯುತ್ಸವವನ್ನು ಆಚರಿಸಲಾಗುವುದು. ಅಂದು ಪೂರ್ವಾಹ್ನ 7.30ಕ್ಕೆ ಶ್ರೀ ರುದ್ರಯಾಗ ಆರಂಭ, 9 ಗಂಟೆಯಿಂದ ಶ್ರೀ ಶಂಕರ ವಿಜಯ ಪಾರಾಯಣ, ಸಂಜೆ 5 ಗಂಟೆಯಿಂದ ಶ್ರೀ ಶಂಕರ ಜಯಂತಿ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ. ಸಮಾರಂಭದ ಅಧ್ಯಕ್ಷತೆಯನ್ನು ವಾಮಂಜೂರಿನ ಎಸ್‌ಡಿಎಂ ಮಂಗಳಜ್ಯೋತಿಯ ಆಡಳಿತಾಧಿಕಾರಿ ಪ್ರೊ.ನರೇಶ್ ಮಲ್ಲಿಗೆಮಾಡು ಅವರು ವಹಿಸಲಿದ್ದಾರೆ. ಉದ್ಘಾಟನೆಯನ್ನು ಉಕ್ಕಿನಡ್ಕದ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಅಧ್ಯಕ್ಷರಾದ ಡಾ.ಮೇಘಶ್ಯಾಮ ರಾವ್ ನೆರವೇರಿಸಲಿದ್ದು, ಅಭ್ಯಾಗತರಾಗಿ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು ಅವರು ಪಾಲ್ಗೊಳ್ಳುವರು. ಶ್ರೀಶಂಕರರ ಕುರಿತಂತೆ ವೇ.ಮೂ.ಬ್ರಹ್ಮಶ್ರೀ ಹಿರಣ್ಯ ವೆಂಕಟೇಶ್ವರ ಭಟ್ ಅವರು ಉಪನ್ಯಾಸ ನೀಡಲಿದ್ದಾರೆ. ಸಂಜೆ 6.30ರಿಂದ ಶ್ರೀ ಶಂಕರರ ಕೃತಿಗಳ ಹಾಡುಗಾರಿಕೆಯನ್ನು ಎಂ.ವಿ.ಚೈತನ್ಯ ಇವರು ನಡೆಸಿಕೊಡಲಿದ್ದಾರೆ. 8.30ರಿಂದ ವಸಂತೋತ್ಸವ, ಆಚಾರ್ಯ ಪೂಜೆ, ಪ್ರಸಾದ ವಿತರಣೆ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

ಜೆಡಿಎಸ್ ಕಾರ್ಯಾಧ್ಯಕ್ಷರಾಗಿ ಶಶಿರಾಜ್ ಶೆಟ್ಟಿ ಕೊಳಂಬೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಜನತಾದಳ (ಜಾತ್ಯಾತೀತ) ಘಟಕದ ನೂತನ ಕಾರ್ಯಾಧ್ಯಕ್ಷರಾಗಿ ಯುವ ನಾಯಕ ಶಶಿರಾಜ್ ಶೆಟ್ಟಿ ಕೊಳಂಬೆ ಅವರನ್ನು ನೇಮಕ ಮಾಡಲಾಗಿದೆ.



ಇದರೊಂದಿಗೆ ಜಿಲ್ಲಾ ಸಮಿತಿಯ ಸಮಗ್ರ ಪಟ್ಟಿಯನ್ನೂ ಪ್ರಕಟಿಸಲಾಗಿದೆ. ದ.ಕ. ಜಿಲ್ಲಾ ಜೆಡಿಎಸ್ ಅಧ್ಯಕ್ಷ ಜಾಕೆ ಮಾಧವ ಗೌಡ ಅವರ ಶಿಫಾರಸ್ಸಿನಂತೆ ನಡೆದಿದ್ದು, ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಮಂಗಳವಾರ ಬೆಂಗಳೂರಿನ ಪಕ್ಷದ ಕೇಂದ್ರ ಕಚೇರಿಯಲ್ಲಿ ನೂತನ ಸಮಿತಿಯನ್ನು ಅಂಗೀಕರಿಸಿ ಅಧಿಕೃತವಾಗಿ ಘೋಷಿಸಿದ್ದಾರೆ.

ದ.ಕ. ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ಮಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಏ. 18 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಬಳಿಕ ತ್ರೈಮಾಸಿಕ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆ ನಡೆಸಿ ಬೆಂಗಳೂರಿಗೆ ಮರಳಲಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಪದ್ಮನಾಭ ಶೆಟ್ಟಿ ಸ್ಮರಣಾರ್ಥ ಪತ್ನಿ, ಮಕ್ಕಳು, ಮೊಗರುಮನೆ, ಕುಂಜತ್ತಬೈಲು
2. ಕವಿತಾ ಸನಿಲ್, 'ಶ್ರೀ ಕಟೀಲೇಶ್ವರಿ', ಬೊಲ್ಪುಗುಡ್ಡೆ, ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರದಲ್ಲಿ.
3. ಗಿರಿಜಾ ಶೆಟ್ಟಿ ಮತ್ತು ಫೇಮಿಲಿ, 'ಲಕ್ಷ್ಮೀ ನಿವಾಸ', ಮಣಿಬೆಟ್ಟು, ಮುಂಡ್ಕೂರು.
4. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ ಹತ್ತು ಸಮಸ್ತರು, ಅರ್ಕುಳ, ತುಪ್ಪೆಕಲ್ಲು.
5. ತಿಮ್ಮಪ್ಪಯ್ಯ ಆಚಾರ್ಯ ಮತ್ತು ಫೇಮಿಲಿ, 'ದುರ್ಗಾದೇವಿ ನಿವಾಸ', ಕೊಡೆತ್ತೂರು, ನಡುಗೋಡು, ಕಿನ್ನಿಗೋಳಿ.
6. ಸರೋಜಿನಿ ನಾರಾಯಣ ಮೂಲ್ಯ ಮತ್ತು ಮನೆಯವರು, ಕಟ್ಟಪುಣೆ ಮನೆ, ಮಳಲಿ.
7. ದಿ। ಸಂಜೀವ ಶೆಟ್ಟಿ, ದಿ। ಶಕುಂತಳಾ ಶೆಟ್ಟಿ ಸ್ಮರಣಾರ್ಥ ಮಕ್ಕಳು, ಕೆರೆಮನೆ, ಪಂಜ ಮೊಗಪ್ಪಾಡಿ, ಪಕ್ಷಿಕೆರೆ.

ಶ್ರೀ ಧರ್ಮಸ್ಥಳ ಮೇಳ
ಉದ್ಯಾವರ ಬೊಳ್ಜೆಯಲ್ಲಿ
ಶ್ರೀಮತಿ ಮಲ್ಲಿಕಾ ಮತ್ತು ಶ್ರೀ ಜಗದೀಶ
ಶ್ರೀ ಮಂಜುನಾಥ ನಿಲಯ

ಶ್ರೀ ಸಾಲಿಗ್ರಾಮ ಮೇಳ
ಕೋಡಿ ಕನ್ಯಾಣ ಶ್ರೀ ಮಹಾಸತೀಶ್ವರೀ ದೇವಸ್ಥಾನದಲ್ಲಿ
ಬಯಲಾಟ - **ಸ್ವಪ್ನಮಂಟಪ**

ಶ್ರೀ ಪೆರ್ಡೂರು ಮೇಳ
ಬೆಳ್ವಾಡಿಯಲ್ಲಿ - **ಪವಿತ್ರ ಪದ್ಮಿನಿ**

ಶ್ರೀ ಹನುಮಗಿರಿ ಮೇಳ
ಪುತ್ತೂರು ಕೊಡಿನೀರುನಲ್ಲಿ

ಶ್ರೀ ಪಾವಂಜೆ ಮೇಳ
ಮಂಗಳೂರು ಕದ್ರಿ ಮೈದಾನದಲ್ಲಿ
ಶ್ರೀ ದೇವಿ ಮಹಾತ್ಮೆ



ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸ್ವಾವಲಂಬಿ ಸಾರಥಿ ಯೋಜನೆಯಡಿ ಹರ್ಷ ಕೊರ್ಗಿ ಅವರಿಗೆ ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅವರು ಕುಂದಾಪುರ ಶಾಸಕರ ಕಚೇರಿಯಲ್ಲಿ ಗುರುವಾರ ವಾಹನವನ್ನು ವಿತರಿಸಿದರು. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪನಾ ಅಧಿಕಾರಿ ಶಂಕರ ಮಲ್ಲಾರ್ ಉಪಸ್ಥಿತರಿದ್ದರು. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 4 ಲಕ್ಷ ರೂ. ಸಬ್ಸಿಡಿ ಹಾಗೂ 5 ಲಕ್ಷ ರೂ. ಬ್ಯಾಂಕ್ ಸಾಲದ ಮೂಲಕ ವಾಹನ ಒದಗಿಸಲಾಗಿದೆ.

ಇಂದು ಅಬ್ಬಕ್ಕ ನೆನಪಿನ್ನೈಸಿರಿ ಸಂಚಿಕೆ ಲೋಕಾರ್ಪಣೆ

ಮಂಗಳೂರು: ತುಳುನಾಡಿನ ವೀರವನಿತೆ ಅಬ್ಬಕ್ಕಳ 500ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಆಕೆಯ ಇತಿಹಾಸವನ್ನು ಯುವಜನಾಂಗಕ್ಕೆ ತಿಳಿಸುವ ಅಬ್ಬಕ್ಕ : 500 ಪ್ರೇರಣಾದಾಯಿ 100 ಉಪನ್ಯಾಸ ಸರಣಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಹಾಗೂ ಅಬ್ಬಕ್ಕ ನೆನಪಿನ್ನೈಸಿರಿ ಸಂಚಿಕೆ ಲೋಕಾರ್ಪಣೆ ಸಮಾರಂಭ ಏ.18ರಂದು ಸಂಜೆ 5 ಗಂಟೆಗೆ ಉಳ್ಳಾಲದ ಶಾರದಾನಿಕೇತನ ಸಭಾಂಗಣದಲ್ಲಿ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಮಂಗಳೂರು ವಿಭಾಗದ ಜಂಟಿ ಕಾರ್ಯದರ್ಶಿ ಡಾ. ಮಾಧವ ಎಂ.ಕೆ. ತಿಳಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಮಂಗಳೂರು ವಿಭಾಗ ಹಾಗೂ ನಿರ್ಮಲ ಭಾರತ್ ಚಾರಿಟಬಲ್ ಟ್ರಸ್ಟ್ ಮಂಗಳೂರು ಇದರ ಸಹಯೋಗದಲ್ಲಿ ನಡೆದಿರುವ ಉಪನ್ಯಾಸ ಸರಣಿಯ ಸಮಾರೋಪ ಮತ್ತು ಕೃತಿ ಲೋಕಾರ್ಪಣೆ ಕಾರ್ಯಕ್ರಮವನ್ನು ಅಬ್ಬಕ್ಕ ವಂಶಸ್ಥರಾದ ಧರ್ಮಸ್ಥಳದ ಅನಿತಾ ಸುರೇಂದ್ರ ಕುಮಾರ್ ಉದ್ಘಾಟಿಸಲಿದ್ದಾರೆ ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ ಪ್ರಮುಖ್ ಸುಧೀರ್ ಸಮಾರೋಪ ಭಾಷಣವನ್ನು ಮಾಡುವರು. ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ. ಕೋಟ್ಯಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವೇಣೂರು ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯದರ್ಶಿ ಪ್ರವೀಣ್ ಕುಮಾರ್ ಇಂದ್ರ, ಆರೆಸ್ಸೆಸ್ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಿ.ಎಸ್. ಪ್ರಕಾಶ್, ಕೆಆರ್‌ಎಂಎಸ್‌ಎಸ್ ರಾಜ್ಯಾಧ್ಯಕ್ಷ ಡಾ.ಗುರುನಾಥ ಬಡಿಗೇರ್, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಸಂದೀಪ್ ಬೂದಿಹಾಳ್, ನಿರ್ಮಲ ಭಾರತ್ ಚಾರಿಟಬಲ್ ಟ್ರಸ್ಟ್ ಮಂಗಳೂರು ಇದರ ವಿಶ್ವಸ್ಥ ಕೆ. ರಮೇಶ್ ಉಪಸ್ಥಿತರಿರುವರು ಎಂದರು.

ಬಂಟ್ವಾಳದ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ ಸಂಚಯಗಿರಿಯ ಸಂಸ್ಥಾಪಕರಾದ ಡಾ.ತುಕಾರಾಮ ಪೂಜಾರಿ ಹಾಗೂ ಡಾ.ಆಶಾಲತಾ ಎಸ್.ಸುವರ್ಣ ಅವರಿಗೆ ಗೌರವ ಸಮರ್ಪಣೆ ನಡೆಯಲಿದೆ. ವೀರರಾಣಿ ಅಬ್ಬಕ್ಕ ಪ್ರಶಸ್ತಿ ಪುರಸ್ಕೃತ ಗುರು ರಾಜಶ್ರೀ ಉಳ್ಳಾಲ್ ನಾಟ್ಯನಿಕೇತನ ಕೊಲ್ಯ ಇವರ ಶಿಷ್ಯ ವೃಂದದಿಂದ ನೃತ್ಯ ಮೋಹನ ಹಾಗೂ ವೀರರಾಣಿ ಅಬ್ಬಕ್ಕ ಕಿರು ನೃತ್ಯ ರೂಪಕ ಪ್ರಸ್ತುತ ಪಡಿಸಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ರಾಜೇಶ್ ಕುಮಾರ್, ಜಿತೇಂದ್ರ ಶೆಟ್ಟಿ, ಮಮತಾ ಶೆಟ್ಟಿ, ಸುಧಾ ಯು. ಉಪಸ್ಥಿತರಿದ್ದರು.

ಕೊಡಗು ವಿಶ್ವವಿದ್ಯಾಲಯದಲ್ಲಿ 'ಕೊಡವ ಸಂಸ್ಕೃತಿ ಅಧ್ಯಯನ ಪೀಠ ಸ್ಥಾಪನೆ

ಸಂಶೋಧನೆ-ಸಂರಕ್ಷಣೆಗೆ ವಿಶೇಷ ಕಾರ್ಯಯೋಜನೆ

ಮಡಿಕೇರಿ: ಕೊಡಗಿನ ಕುಶಾಲನಗರ ಸಮೀಪದ ಚಿಕ್ಕ ಅಳುವಾರದಲ್ಲಿ 2023ರಲ್ಲಿ ಪ್ರಾರಂಭವಾದ ಕೊಡಗು ವಿಶ್ವವಿದ್ಯಾಲಯದಲ್ಲಿರುವ ಕೊಡಗು ವಿಶ್ವವಿದ್ಯಾಲಯದಲ್ಲಿ ಕೊಡವ ಸಂಸ್ಕೃತಿ ಅಧ್ಯಯನ ಪೀಠವನ್ನು ಪ್ರಾರಂಭಿಸಲಾಗುವುದು ಎಂದು ಕೊಡಗು ವಿವಿ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅವರು ತಿಳಿಸಿದ್ದಾರೆ.



ಕೊಡಗು ಜಿಲ್ಲೆಯಲ್ಲಿ ಹೇರಳವಾಗಿ ಕಂಡುಬರುವ ಕೊಡವ ಸಂಸ್ಕೃತಿಯು ಭಾರತದ ಇತರ ಸಂಸ್ಕೃತಿಗಳಿಗಿಂತ ಭಿನ್ನವಾಗಿರುವ ಸಾಂಸ್ಕೃತಿಕ ಅಸ್ಮಿತೆಯಾಗಿದ್ದು, ವಿಶಿಷ್ಟ ಸಂಪ್ರದಾಯ ಆಚರಣೆಗಳನ್ನು ಒಳಗೊಂಡಿರುವ ಪಶ್ಚಿಮ ಘಟ್ಟ ಪ್ರದೇಶದ ಸ್ಥಳೀಯ ಕೊಡವ ಸಮುದಾಯಗಳ ಜೀವನ ಕ್ರಮವಾಗಿದೆ.

ಕೊಡವ ಸಂಸ್ಕೃತಿಯು ಪ್ರಾಚೀನ ಪರಂಪರೆ, ಸಮರ ಕೌಶಲ್ಯ, ಕೃಷಿ, ಪ್ರಕೃತಿ ಮತ್ತು ಕುಟುಂಬ ನೆಲೆಗಟ್ಟಿನೊಂದಿಗೆ ಸಂಯೋಜನೆ ಹೊಂದಿರುವ ಸಾಮುದಾಯಿಕ ಜೀವನ ಪದ್ಧತಿಯಾಗಿದೆ ಮತ್ತು ಹೇರಳವಾದ ಮೌಖಿಕ ಸಾಹಿತ್ಯವನ್ನು ಹೊಂದಿರುವ ಶ್ರೀಮಂತ ಜಾನಪದ ಸಂಸ್ಕೃತಿಯಾಗಿದೆ. ಕೊಡವರು ಮತ್ತು ಇತರ 21 ಕೊಡವ ಸಹ-ಸಾಂಸ್ಕೃತಿಕ ಪರಿವಾರಗಳು ಕೊಡಗು ಜಿಲ್ಲೆಯ ಮೂಲನಿವಾಸಿಗಳಾಗಿದ್ದು, ಸಮಾನ ಸಾಂಸ್ಕೃತಿಕ ಗುಣಧರ್ಮ, ಮೌಲ್ಯಗಳು ಮತ್ತು ಪಾರಿವಾರಿಕ ಸಮನ್ವಯತೆಯನ್ನು ಹೊಂದಿರುವುದು ಕಂಡುಬಂದಿದೆ.

ಕೊಡವ ಸಂಸ್ಕೃತಿ ಅಧ್ಯಯನ ಪೀಠ

ಕೊಡವ ಸಂಸ್ಕೃತಿಯನ್ನು ದಾಖಲಿಸುವ ಮತ್ತು ಸಂರಕ್ಷಿಸುವ ಪ್ರಯತ್ನಗಳ ಹೊರತಾಗಿಯೂ, ಹಲವಾರು ವಿಚಾರಗಳಲ್ಲಿ ಮೂಲ ಮತ್ತು ಪೂರಕ ಸಂಶೋಧನೆಗಳ ಕೊರತೆಯಿರುವ ಕಾರಣ, ಮತ್ತು ಸದರಿ ಕಾರ್ಯದಲ್ಲಿ ಅನಿರ್ದಿಷ್ಟ ವಿಳಂಬವಾಗಿರುವ ಕಾರಣದಿಂದ ಅಧ್ಯಯನಕ್ಕೆ ಮೂಲ ಪುರಾವೆಗಳ ಅಲಭ್ಯತೆ ಮತ್ತು ಪೂರಕ ಕಾಲ ಗತಿಸಿಹೋಗುವ ಆತಂಕವಿರುವ ಹಿನ್ನಲೆಯಲ್ಲಿ ಸಮರೋಪಾದಿಯಲ್ಲಿ ಅಧ್ಯಯನ ಮತ್ತು ಸಂಶೋಧನೆಯನ್ನು ಆರಂಭಿಸಬೇಕಾದ ಅಗತ್ಯತೆಯನ್ನು ಪರಿಗಣಿಸಿರುವ ಕೊಡಗು ವಿಶ್ವವಿದ್ಯಾಲಯವು, ಈ ಪ್ರದೇಶದ ಮೇಲೆ ಕಾರ್ಯವ್ಯಾಪ್ತಿಯನ್ನು ಕೂಡಾ ಹೊಂದಿರುವುದರಿಂದ, ಪ್ರಸ್ತಾಪಿತ ಅಧ್ಯಯನದ ಉದ್ದೇಶಕ್ಕಾಗಿ ಸರ್ಕಾರ ಮತ್ತು ಕೊಡಗಿನ ಪ್ರಾಜ್ಞರು ಮತ್ತು ಅಭಿಮಾನಿಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯದಲ್ಲಿ 'ಕೊಡವ ಸಂಸ್ಕೃತಿ ಅಧ್ಯಯನ ಪೀಠ' ಎಂಬ ದತ್ತಿ ಪೀಠವನ್ನು ಸ್ಥಾಪಿಸಲು ಪ್ರಸ್ತಾಪಿಸಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ರ ಅಡಿಯಲ್ಲಿ ಪೀಠಕ್ಕೆ ಶಾಸನಬದ್ಧ ಆಧಾರವನ್ನು ನೀಡುವ ಸಲುವಾಗಿ ಪೂರಕ ಅಧಿನಿಯಮವನ್ನು ಸಿದ್ದಪಡಿಸಿ ಸರಕಾರದ ಅನುಮೋದನೆಗಾಗಿ ಸೂಕ್ತ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ. ಈ ಅಧ್ಯಯನ ಪೀಠವು ಶೈಕ್ಷಣಿಕ ಜಗತ್ತು ಮತ್ತು ಕೊಡವ ಸಮುದಾಯದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಸಂವಾದವನ್ನು ಸುಲಭಗೊಳಿಸಲಿದೆ. ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸಲಿದೆ ಮತ್ತು ಸಮುದಾಯದ ಸದಸ್ಯರು ತಮ್ಮ ಪರಂಪರೆಯನ್ನು ಸಂರಕ್ಷಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಿಸಲಿದೆ. ಅಧ್ಯಯನ ಪೀಠವು ಸಂಶೋಧನೆ, ದಾಖಲೀಕರಣ, ಪ್ರಕಟಣೆ ಮತ್ತು ಶೈಕ್ಷಣಿಕ ತರಬೇತಿ ಕಾರ್ಯಕ್ರಮಗಳನ್ನು ಸುಗಮಗೊಳಿಸಲಿದೆ ಮತ್ತು ಭವಿಷ್ಯದ ಪೀಳಿಗೆಗೆ ಕೊಡವ ಸಂಪ್ರದಾಯಗಳ ಪ್ರಾಮುಖ್ಯತೆಯನ್ನು ಸಾದರಪಡಿಸುವಲ್ಲಿ ಪಾಲುದಾರಿಕೆಯನ್ನು ವಹಿಸಿಕೊಳ್ಳಲಿದೆ ಎಂದು ಆಲೂರ ವಿವರಿಸಿದ್ದಾರೆ.

ಶಾಶ್ವತ ದತ್ತಿ ನಿಧಿ

ಕೊಡಗು ವಿಶ್ವವಿದ್ಯಾಲಯವು ಕೊಡವ ಸಂಸ್ಕೃತಿ ಅಧ್ಯಯನ ಪೀಠಕ್ಕಾಗಿ 10 ಕೋಟಿ ರೂಪಾಯಿಗಳ ಶಾಶ್ವತ ದತ್ತಿ ನಿಧಿ ಸ್ಥಾಪಿಸುವ ಗುರಿ ಹೊಂದಿದೆ. ಪೀಠದ ದತ್ತಿ ನಿಧಿಯ ಮೂಲ ಮೊತ್ತವನ್ನು ಖರ್ಚು ಮಾಡದೆ, ಅದರಿಂದ ಬರುವ ಸಂಚಿತ ಬಡ್ಡಿ ಮತ್ತು ಇತರ ವಾರ್ಷಿಕ ಅನುದಾನಗಳನ್ನು ಮಾತ್ರ ಪೀಠದ ದೈನಂದಿನ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತದೆ. ಇದು ಪೀಠವು ದೀರ್ಘಕಾಲದವರೆಗೆ ಆರ್ಥಿಕವಾಗಿ ಸ್ವಾವಲಂಬಿಯಾಗಿರಲು ಸಹಾಯ ಮಾಡುತ್ತದೆ. ಸಂಶೋಧನೆ ಮತ್ತು ಪ್ರಕಟಣೆ, ಪುಸ್ತಕ ಪ್ರಕಟಣೆ, ಸಂಶೋಧನಾ ಸಹಾಯಕರಿಗೆ ವಿದ್ಯಾರ್ಥಿ ವೇತನ/ಸಂಶೋಧನಾ ಭತ್ಯೆ, ಅನುವಾದ ಕಾರ್ಯ, ಸೆಮಿನಾರ್ ಮತ್ತು ಕಾರ್ಯಾಗಾರ, ಸಾಂಸ್ಕೃತಿಕ ಉತ್ಸವಗಳು, ಉಪನ್ಯಾಸ ಮಾಲೆ, ಡಿಜಿಟಲ್ ಆರ್ಕೈವ್, ಗ್ರಂಥಾಲಯ, ಕ್ಷೇತ್ರ ಕಾರ್ಯ, ಡಿಜಿಟಲ್ ಸಂಪನ್ಮೂಲ, ಜ್ಞಾನದ ಪಾಲುದಾರಿಕೆ, ದೈನಂದಿನ ಕಚೇರಿ ನಿರ್ವಹಣೆ ಇತ್ಯಾದಿಗಳಿಗೆ ನಿಯಮಿತವಾಗಿ ಬಳಸಿಕೊಳ್ಳಲಾಗುವುದು.

ಬೆಂಬಲ ನಿರೀಕ್ಷೆ

ಕೊಡಗಿನ ಜನಪ್ರತಿನಿಧಿಗಳು, ರಾಜಕೀಯ ನಾಯಕರು ಮತ್ತು ಮುತ್ಸದ್ದಿಗಳು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಕೊಡವ ಸಮಾಜಗಳು, ಕೊಡವ ಸಹ ಪಾರಿವಾರಿಕ ಸಮಾಜಗಳು, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆಗಳು, ಶೈಕ್ಷಣಿಕ ಮತ್ತು ಸಾಹಿತ್ಯ ಕ್ಷೇತ್ರದ ಗಣ್ಯರು, ನಿವೃತ್ತ ಸೇನಾಧಿಕಾರಿಗಳು, ಕ್ರೀಡಾ ಸಾಧಕರು, ಸ್ಥಳೀಯ ಪತ್ರಿಕೆ ಮತ್ತು ಮಾಧ್ಯಮದ ಪ್ರಮುಖರು, ಬುದ್ಧಿಜೀವಿಗಳು ಹಾಗೂ ಲೇಖಕರು ಮತ್ತು ಸಮುದಾಯದ ಇತರ ಪ್ರಮುಖರು, ಕೊಡಗು ವಿಶ್ವವಿದ್ಯಾಲಯದಲ್ಲಿ 'ಕೊಡವ ಸಂಸ್ಕೃತಿ ಅಧ್ಯಯನ ಪೀಠ'ದ ಸ್ಥಾಪನೆಗೆ ಸಹಯೋಗ ಮತ್ತು ಅಗತ್ಯ ಬೆಂಬಲವನ್ನು ನೀಡಬಹುದಾಗಿದೆ ಎಂದು ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅವರು ವಿವರಿಸಿದ್ದಾರೆ.

ಯುಗಾದಿ ಮೂಲಕ ಯಕ್ಷಕಲಾರಾಧನೆ ಅರ್ಥಪೂರ್ಣ: ಪ್ರದೀಪ ಕುಮಾರ ಕಲ್ಕೂರ

ಕೋಟ: ಯುಗಾದಿ ಉತ್ಸವವನ್ನು ಕೇಂದ್ರಿಕರಿಸಿಕೊಂಡು ಯಕ್ಷಕಲಾರಾಧನೆ ಅರ್ಥಪೂರ್ಣ ಎಂದು ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ಹೇಳಿದರು.



ಬುಧವಾರ ಕಾರ್ಕಡ ಭೂಮಿಕ ಸಮೀಪ ಸೌರಮಾನ ಯುಗಾದಿ ಯಕ್ಷಗಾನ ಶೀರ್ಷಿಕೆಯಡಿ ಕೋಟ ಸಾಲಿಗ್ರಾಮ ಹದಿನಾಲ್ಕು ಗ್ರಾಮಗಳ ಯಕ್ಷಗಾನ ಕಲಾಭಿಮಾನಿಗಳ ನೇತೃತ್ವದಲ್ಲಿ ಶ್ರೀ ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮಂಡಳಿ, ಪೆರ್ಡೂರು ಇವರಿಂದ ಯಕ್ಷಗಾನ ಬಯಲಾಟ ಕಾರ್ಯಕ್ರಮದಲ್ಲಿ ಕಲಾರಾಧಕರನ್ನು ಅಭಿನಂದಿಸಿ ಮಾತನಾಡಿ ಯುಗಾದಿ ಎನ್ನುವುದು ಹೊಸ ಮನ್ವಂತರದ ಜತೆ ಹಳೆಯ ಚಿಂತನೆಗಳನ್ನು ನೆನಪಿಸುತ್ತಾ ಸಾಂಸ್ಕೃತಿಕ ಸಾಮಾಜಿಕ ಪುರಾತನ ಹಿನ್ನಲ್ಲೆಯನ್ನು ಈ ಸಮಾಜಕ್ಕೆಧಾರೆ ಎರೆಯುವ ಕಾರ್ಯ ಆಗಬೇಕಿದೆ, ಇಂದಿನ ಯುವ ಜನಾಂಗಕ್ಕೆ ಶಿಕ್ಷಣವೊಂದೆ ಶಿಕ್ಷೆಯಾಗದೆ ಸಂಸ್ಕಾರ ಭರಿತ ನಾಳಿನ ಸುಂದರ ಪ್ರಜೆಯಾಗಿ ರೂಪಿಸಲು ಕರೆ ನೀಡಿದರಲ್ಲದೆ ನಮ್ಮ ಕಲಾರಾಧನೆ, ಆಚರಣೆಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ ಅದನ್ನು ಉಳಿಸಿ ಬೆಳೆಸುವ ಕಾರ್ಯ ಆಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಯಕ್ಷಾಭಿಮಾನಿಗಳಾದ ರಾಘವೇಂದ್ರ ಮಧ್ಯಸ್ಥ ಪಾರಂಪಳ್ಳಿ, ಆನಂದ್ ಆಚಾರ್,ಎಚ್ ನಾಗರಾಜ್ ಹಂದೆ, ಗಣೇಶ್ ಕಿಣಿ, ಶ್ರೀಕಾಂತ್ ಐತಾಳ್, ರಮೇಶ್ ಭಂಡಾರಿ,ಸಿ.ಸೂರ್ಯನಾರಾಣ ಮಯ್ಯ, ಕೆ.ನಾಗರಾಜ ಸೋಮಯಾಜಿ ಮತ್ತಿತರರು ಅಭಿನಂದಿಸಲಾಯಿತು. ವಿಶೇಷವಾಗಿ ಇತ್ತೀಚಿಗೆ ಸಾಲಿಗ್ರಾಮ ದೇಗುಲದ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಶಾಲಿಗಳಾದ ಇಂದ್ರಪ್ರಸ್ಥ ಪ್ರಕಾಶ್ ಮಯ್ಯ, ಹರ್ತಟ್ಟು ದಂಪತಿ,ಕೆ.ತಾರಾನಾಥ ಹೊಳ್ಳ ದಂಪತಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು.

ವಿಶ್ವವಿಖ್ಯಾತ ಸಾಲಿಗ್ರಾಮ ಮಕ್ಕಳ ಮೇಳದ ನಿರ್ದೇಶಕ ಎಚ್ ಸುಜಯೀಂದ್ರ ಹಂದೆ ಅಭಿನಂದನಾ ನುಡಿಗಳನ್ನಾಡಿದರು.

ಕಾರ್ಯಕ್ರಮವನ್ನು ಮಾಧುರಿ ಶ್ರೀರಾಮ್ ನಿರೂಪಿಸಿದರು. ಯಕ್ಷಾರಾಧಕ ಎಚ್ ಜನಾರ್ದನ ಹಂದೆ ವಂದಿಸಿದರು.

ನಂತರ ಚಂದ್ರಹಾಸ ಚರಿತ್ರೆ ರತಿ ಕಲ್ಯಾಣ ಯಕ್ಷಗಾನ ಪ್ರದರ್ಶನಗೊಂಡಿತು.ಗೆಳೆಯರ ಬಳಗ ಕಾರ್ಕಡ,ಕರ್ನಾಟಕ ಯಕ್ಷಧಾಮ ಮಂಗಳೂರು ಸಹಕಾರ ನೀಡಿತು.

ಕಾರ್ಕಡ ಭೂಮಿಕ ಸಮೀಪ ಸೌರಮಾನ ಯುಗಾದಿ ಯಕ್ಷಗಾನ ಶೀರ್ಷಿಕೆಯಡಿ ಕೋಟ ಸಾಲಿಗ್ರಾಮ ಹದಿನಾಲ್ಕು ಗ್ರಾಮಗಳ ಯಕ್ಷಗಾನ ಕಲಾಭಿಮಾನಿಗಳ ನೇತೃತ್ವದಲ್ಲಿ ಶ್ರೀ ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮಂಡಳಿ, ಪೆರ್ಡೂರು ಇವರಿಂದ ಯಕ್ಷಗಾನ ಬಯಲಾಟ ಕಾರ್ಯಕ್ರಮದಲ್ಲಿ ಕಲಾರಾಧಕರನ್ನು ಸಾಲಿಗ್ರಾಮ ದೇಗುಲದ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಶಾಲಿಗಳಾದ ಇಂದ್ರಪ್ರಸ್ಥ ಪ್ರಕಾಶ್ ಮಯ್ಯ, ಹರ್ತಟ್ಟು ದಂಪತಿ,ಕೆ. ತಾರಾನಾಥ ಹೊಳ್ಳ ದಂಪತಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು.

ಪೋಷಣ್ ಅಭಿಯಾನ ಪೋಷಣ್ ಪಕ್ವಾಡ ಹಾಗೂ ವಿಶ್ವ ಮಹಿಳಾ ದಿನಾಚರಣೆ

ಸಮಾಜದ ಬದಲಾವಣೆ ಸ್ತ್ರೀಯರಿಂದ ಸಾಧ್ಯ

ಸುಳ್ಯ: ಸಮಾಜದಲ್ಲಿ ಸ್ತ್ರೀಯರಿಂದ ಬದಲಾಣೆಗಳು ಸಾಧ್ಯವಾಗಿದ್ದು ಇಂದು ಸಾಧನೆಗಳ ಶಿಖರದಲ್ಲಿ ಮಹಿಳೆಯರು ಮಿಂಚುತ್ತಿದ್ದಾರೆ. ಮಹಿಳೆಯರು ಅಬಲೆಯರಾಗದೆ ಸಭಲೆಯಾಗಿ ಸಾಧನೆಗಳ ಮೂಲಕ ಮಹಿಳೆಯ ಶಕ್ತಿಗಳನ್ನು ತೋರಿಸಬೇಕಿದೆ. ಜೊತೆಗೆ ನಾರಿಶಕ್ತಿಯ ಮೂಲಕ ಸ್ತ್ರೀಯರಿಗೂ ಮುಂದೆ ಶಾಸನ ರಚನೆಯ ಅವಕಾಶ ಶೇ.33ರಷ್ಟು ಸಿಗಲಿದ್ದು, ಈ ಮೂಲಕ ಸ್ತ್ರೀ ಶಕ್ತಿಗಳ ಆಡಳಿತ ಉದಯವಾಗಲಿದೆ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಸುಳ್ಯ ಹಾಗೂ ತಾಲೂಕು ಸ್ತ್ರೀ ಶಕ್ತಿ ಬ್ಲಾಕ್ ಸೊಸೈಟಿ ಸುಳ್ಯ ಇವರ ಸಹಯೋಗದಲ್ಲಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಪೋಷಣ್ ಅಭಿಯಾನ ಯೋಜನೆ, ಪೋಷಣ್ ಪಕ್ವಾಡ ಮತ್ತು ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಭಾ ವೇದಿಕೆಯಲ್ಲಿ ಸುಳ್ಯ ನಗರ ಯೋಜನ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ. ಮುಸ್ತಫ, ಶಿಶು ಅಭಿವೃದ್ಧಿ ಅಧಿಕಾರಿ ಶೈಲಜಾ, ತಹಶೀಲ್ದಾರ್ ಮಂಜುಳ ಎಂ., ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಣಾಧಿಕಾರಿ ರಾಜಣ್ಣ, ಸ್ತ್ರೀ ಶಕ್ತಿ ಬ್ಲಾಕ್ ಸೊಸೈಟಿ ಅಧ್ಯಕ್ಷೆ ಚಿತ್ರಕಲಾ ಹಾಗೂ ಸಂಪನ್ಮೂಲ ವ್ಯಕ್ತಿ ರಾಜೇಶ್ವರಿ ಉಪಸ್ಥಿತರಿದ್ದರು. ಸಭಾ ವೇದಿಕೆಯಲ್ಲಿ ಶಿಶು ಅಭಿವೃದ್ಧಿ ಇಲಾಖೆಯ ಯೋಜನೆ ಸೇವೆಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಕುಸುಮಾವತಿ, ರತ್ನಾವತಿ, ಇಂದಿರಾ, ಲತಾ ಅಂಬೆಕಲ್ಲು, ನಳಿನಿ ರೈ, ತೀರ್ಥಕುಮಾರಿ ಹಾಗೂ ಅಮೃತ ಘಟಕ ಪ್ರಶಸ್ತಿಯನ್ನು ಕೋಲ್ಚಾರ್ ಸ್ತ್ರೀ ಶಕ್ತಿ ಘಟಕಕ್ಕೆ ನೀಡಿ ಸನ್ಮಾನಿಸಲಾಯಿತು.

> ಮಹಿಳೆಯರು ಅಬಲೆಯರಾಗದೆ ಸಬಲೆಯಾಗಿ ಸಾಧನೆಗಳ ಮೂಲಕ ಮಹಿಳೆಯ ಶಕ್ತಿಯನ್ನು ತೋರಿಸಬೇಕಿದೆ.

ಭಾಗ್ಯಲಕ್ಷ್ಮೀ ಯೋಜನೆ

ಇದೇ ಸಮಾರಂಭದಲ್ಲಿ ಭಾಗ್ಯಲಕ್ಷ್ಮೀ ಯೋಜನೆಯ ಬಾಂಡ್ ಪಡೆದು ಯೋಜನೆಗೆ ಅರ್ಹರಾದ ಹೆಣ್ಣು ಮಕ್ಕಳಿಗೆ ಪರಿಪಕ್ವ ಮೊತ್ತ ವಿತರಣೆಯನ್ನು ಸಾಂಕೇತಿಕವಾಗಿ ನಡೆಸಲಾಯಿತು. ಈಗಾಗಲೇ ತಾಲೂಕಿನಲ್ಲಿ ಸರಿ ಸುಮಾರು 200ಕ್ಕೂ ಅಧಿಕ ಜನರಿಗೆ ತಲಾ ರೂ.31,765 ರಂತೆ ಬಂದಿದ್ದು ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 10 ಜನರಿಗೆ ವಿತರಿಸಲಾಯಿತು.

ರವೀಶ ಸ್ವಾಗತಿಸಿ, ವಿಜಯ ವಂದಿಸಿದರು. ಉಷಾ ಪ್ರಸಾದ್ ಕೆ. ಕಾರ್ಯಕ್ರಮ ನಿರ್ವಹಿಸಿದರು.

ನಾರಿ ಶಕ್ತಿ ವಂದನ್ ಮಸೂದೆ ಜಾರಿಗೆ ದಕ್ಷಿಣ ಕನ್ನಡ ಬಿಜೆಪಿ ಮಹಿಳಾ ಮೋರ್ಚಾದಿಂದ ಕಾರ್ಯಕ್ರಮ

ಸಂಸದ ಕ್ಯಾ. ಚೌಟರ ಕಚೇರಿಯಲ್ಲಿ ಸಹಿ ಸಂಗ್ರಹ ಅಭಿಯಾನ

ಮಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಐತಿಹಾಸಿಕ 'ನಾರಿ ಶಕ್ತಿ ವಂದನ್ ಅಧಿನಿಯಮ'ವನ್ನು ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಮೋರ್ಚಾದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರ ಕಚೇರಿಯಲ್ಲಿ ಸಹಿ ಸಂಗ್ರಹ ಅಭಿಯಾನ ಬುಧವಾರ ನಡೆಯಿತು.



ವಿವಿಧ ಕೆಲಸಗಳ ನಿಮಿತ್ತ ಸಂಸದ ಕ್ಯಾ. ಚೌಟ ಅವರನ್ನು ಭೇಟಿ ಮಾಡಲು ಬಂದಿದ್ದ ಮಹಿಳೆಯರು, ಕೇಂದ್ರ ಸರ್ಕಾರದ ಐತಿಹಾಸಿಕ 'ನಾರಿ ಶಕ್ತಿ ವಂದನ್ ಅಧಿನಿಯಮ' ಜಾರಿಯಾಗುತ್ತಿರುವ ಸಂದರ್ಭ ಮಹಿಳೆಯರು ಸ್ವಯಂಪ್ರೇರಿತರಾಗಿ ಸಹಿ ಸಂಗ್ರಹ ಅಭಿಯಾನದಲ್ಲಿ ಭಾಗವಹಿಸಿ, ಮಹಿಳೆಯರಿಗೆ ರಾಜಕೀಯದಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಕಳೆದ ದಶಕದಲ್ಲಿ ಭಾರತವು ಕೇವಲ ಮಹಿಳಾ ಕಲ್ಯಾಣದ ಹಂತದಿಂದ ಮಹಿಳಾ ನೇತೃತ್ವದ ಅಭಿವೃದ್ಧಿಯತ್ತ ದೃಢವಾದ ದಾಪುಗಾಲು ಹಾಕಿದ್ದು, 'ನಾರಿ ಶಕ್ತಿ'ಯ ನವೋದಯಕ್ಕೆ ಸಾಕ್ಷಿಯಾಗಿದೆ ಎಂದು ಪಾಲ್ಗೊಂಡ ಮಹಿಳೆಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಸತ್ತಿನ ವಿಶೇಷ ಕಲಾಪದಲ್ಲಿ ಈ ಅಧಿನಿಯಮವು ಚರ್ಚೆಯಾಗುತ್ತಿರುವುದು ದೇಶದ ಇತಿಹಾಸದಲ್ಲಿ ಒಂದು ಸುವರ್ಣ ಅಧ್ಯಾಯವಾಗಲಿದೆ. "ಮಹಿಳಾ ಸಬಲೀ ಕರಣದಿಂದ ಮಹಿಳೆಯರ ನೇತೃತ್ವದ ಅಭಿವೃದ್ಧಿ ಎಂಬ ಆಶಯದೊಂದಿಗೆ ಕೇಂದ್ರ ಸರ್ಕಾರವು ಕೈಗೊಂಡಿರುವ ಈ ಕ್ರಾಂತಿಕಾರಿ ಹೆಜ್ಜೆಗೆ ನಮ್ಮೆಲ್ಲರ ಬೆಂಬಲವಿದೆ ಎಂದು ಇದೇವೇಳೆ ಮಹಿಳೆಯರು ಹೇಳಿದ್ದಾರೆ.

ಈ ಸಂದರ್ಭ ಮಾತನಾಡಿದ ಸಂಸದ ಕ್ಯಾ. ಬ್ರಿಜೇಶ್ ಚೌಟ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆಯನ್ನಿಟ್ಟಿದೆ. 'ನಾರಿ ಶಕ್ತಿ ವಂದನ್ ಅಧಿನಿಯಮ' ಎಂದು ಕರೆಯಲಾಗುವ ಮೀಸಲಾತಿ ಕಾನೂನಿನ ತಿದ್ದುಪಡಿಗಳನ್ನು ತರಲು ಮುಂದಾಗಿರುವುದು ಐತಿಹಾಸಿಕ ನಿರ್ಧಾರ. ಸಂಸತ್ತಿನ ವಿಶೇಷ ಕಲಾಪದಲ್ಲಿ ಈ ಅಧಿನಿಯಮದ ಚರ್ಚೆಗೆ ಅವಕಾಶ ಕಲ್ಪಿಸಿರುವುದು ಮಹಿಳಾ ಸಬಲೀಕರಣದ ಇತಿಹಾಸದಲ್ಲಿ ಒಂದು ಸುವರ್ಣ ಅಧ್ಯಾಯವಾಗಲಿದೆ. 'ಮಹಿಳಾ ಸಬಲೀಕರಣದಿಂದ ಮಹಿಳೆಯರ ನೇತೃತ್ವದ ಅಭಿವೃದ್ಧಿ' ಎಂಬ ಆಶಯದೊಂದಿಗೆ ಕೇಂದ್ರ ಸರ್ಕಾರವು ಕೈಗೊಂಡಿರುವ ಈ ಕ್ರಾಂತಿಕಾರಿ ಹೆಜ್ಜೆಗೆ ಪೂರ್ಣ ರೀತಿಯ ಬೆಂಬಲವಿದ್ದು, ಈ ಮಸೂದೆ ಕಾನೂನು ಆಗಿ ಜಾರಿಗೆ ಬರುವ ದಿನಗಳು ಕೂಡ ಹತ್ತಿರವಾಗಿರುವುದು ಬಹಳ ಸಂತೋಷದ ವಿಚಾರ ಎಂದು ಸಂತಸ ವ್ಯಕ್ತಪಡಿದರು.

ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಮಹಿಳಾ ಮೋರ್ಚಾದ ಅಧ್ಯಕ್ಷೆ ಮಂಜುಳಾ ರಾವ್, ಜಿಲ್ಲಾ ವಕ್ತಾರ ಮಾಧವ್ ಮಾವೆ, ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿ ಶ್ವೇತಾ ಪೂಜಾರಿ, ಕಾರ್ಯಕಾರಣಿ ಸದಸ್ಯೆ ಸುಲೋಚನಾ ಭಟ್, ಸಮಾಜ ಸೇವಕರಾದ ಹಿಲ್ಡಾ ರಾಯಪ್ಪನ್,

ನಿಕಟ ಪೂರ್ವ ಮನಪಾ ಸದಸ್ಯರು, ಮುಖಂಡರು ಪಂಚಾಯತ್ ಸದಸ್ಯರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಾಸಕ ಕೊಡ್ಗಿ ಕಚೇರಿಯಲ್ಲಿ ಪಶುಪಾಲನಾ ಇಲಾಖೆಯ

ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಣೆ

ಕುಂದಾಪುರ : ಪಶುಪಾಲನಾ ಇಲಾಖೆಯಲ್ಲಿ ಸರಕಾರದ ವಿವಿಧ ಯೋಜನೆಗಳ ಅರ್ಹ ಫಲಾನುಭವಿಗಳು ಯೋಜನೆಯ ಸದುಪಯೋಗ ಪಡೆದುಕೊಂಡು ಅಭಿವೃದ್ಧಿ ಹೊಂದಬೇಕು. ಯೋಜನೆ ಮೂಲಕ ಪಡೆದುಕೊಂಡ ಸೌಲಭ್ಯ, ಸವಲತ್ತುಗಳನ್ನು ಸಮರ್ಪಕವಾಗಿ ಬಳಸಿಕೊಂಡು ಯೋಜನೆಯ ಉದ್ದೇಶವನ್ನು ಸಾರ್ಥಕಗೊಳಿಸಬೇಕು ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.




ಜಿಲ್ಲಾ ಪಂಚಾಯತ್ ಉಡುಪಿ, ತಾಲೂಕು ಪಂಚಾಯತ್ ಕುಂದಾಪುರ ಮತ್ತು ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ ಕುಂದಾಪುರ ಇದರ ವತಿಯಿಂದ ಪಶುಪಾಲನಾ ಇಲಾಖೆಯ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಕುಂದಾಪುರ ಶಾಸಕರ ಕಚೇರಿಯಲ್ಲಿ ಗುರುವಾರ ಸವಲತ್ತು ವಿತರಿಸಿ ಅವರು ಮಾತನಾಡಿದರು.

ಕುಂದಾಪುರ ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಅರುಣ್ ಹೆಗ್ಡೆ, ಪಶು ವೈದ್ಯಾಧಿಕಾರಿಗಳಾದ ಡಾ.ಅರುಣ್ ಕೆ.ಪಿ., ಡಾ.ಜಯಣ್ಣ, ಡಾ.ಪಿ.ರಶೀದ್, ಇಲಾಖೆ ಅಧಿಕಾರಿಗಳು, ಪಶು ಸಖಿಯರು, ಫಲಾನುಭವಿಗಳು ಉಪಸ್ಥಿತರಿದ್ದರು.

ಶೇ.50ರ ಸಹಾಯಧನದಲ್ಲಿ 10 ಮಂದಿ ಫಲಾನುಭವಿಗಳಿಗೆ ರಬ್ಬರ್ ನೆಲಹಾಸು, ನಾಲ್ಕು ಮಂದಿ ಫಲಾನುಭವಿಗಳಿಗೆ ಮೇವು ಕತ್ತರಿಸುವ ಯಂತ್ರ ಹಾಗೂ ನೆಕ್ಕು ಬಿಲ್ಲೆಗಳನ್ನು ವಿತರಿಸಲಾಯಿತು.

ನಿಧನ ಸುದ್ದಿ

ಉದಯಕುಮಾರ್ ಶೆಟ್ಟಿ ಇನ್ನ



ಪಡುಬಿದ್ರಿ: ಉದ್ಯಮಿ, ಪಡುಬಿದ್ರಿ ಸನ್‌ಶೈನ್ ಟಯರ್ಸ್ ಸಂಸ್ಥೆಯ ಮಾಲಕ ಉದಯ ಕುಮಾರ್ ಶೆಟ್ಟಿ ಇನ್ನ (56) ಅಲ್ಪಕಾಲದ ಅಸೌಖ್ಯದಿಂದ ಶುಕ್ರವಾರ ಪಡುಬಿದ್ರಿಯ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಉಡುಪಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ, ಮಾಜಿ ಜಿ.ಪಂ. ಸದಸ್ಯೆ ರೇಷ್ಮಾ ಉದಯ ಶೆಟ್ಟಿ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಪ್ರಖರ ವಾಗ್ಮಿಯಾಗಿ ಪ್ರಸಿದ್ಧರಾಗಿದ್ದ ಅವರು, ಚಲನಚಿತ್ರ ಮತ್ತು ನಾಟಕ ಕಲಾವಿದರಾಗಿ, ಜೇಸಿಐ ಪಡುಬಿದ್ರಿಯ ಅಧ್ಯಕ್ಷರಾಗಿ, ಜೆಸಿಐ ವಲಯ 15 ರ ಪ್ರಶಸ್ತಿ ವಿಜೇತ ವಲಯಾಧ್ಯಕ್ಷರಾಗಿ, ಬೆಳ್ಮಣ್ಣು ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ, ಇನ್ನ ಸಾಧನಾ ಪ್ರತಿಷ್ಠಾನದ ಅಧ್ಯಕರಾಗಿ, ಇನ್ನ ಎಮ್‌ವಿ ಶಾಸ್ತ್ರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ, ಇನ್ನ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾಗಿ, ಬಿಜೆಪಿ ಪಕ್ಷದ ನಾಯಕರಾಗಿ, ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾಗಿದ್ದರಲ್ಲದೆ ಹಲವು ಸಂಘ ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿದ್ದರು. ಅವರ ನಿಧನಕ್ಕೆ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ವಿ. ಸುನಿಲ್ ಕುಮಾರ್, ಯಶ್ ಪಾಲ್ ಸುವರ್ಣ, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ ಸಹಿತ ಪಕ್ಷದ ಮುಖಂಡರು, ಬಿಜೆಪಿ ನಿಕಟಪೂರ್ವ ಮಂಗಳೂರು ವಿಭಾಗ ಪ್ರಭಾರಿ ಕೆ.ಉದಯ ಕುಮಾರ್ ಶೆಟ್ಟಿ, ಮಾಜಿ ಶಾಸಕ ಲಾಲಾಜಿ ಆರ್.ಮೆಂಡನ್, ಪಡುಬಿದ್ರಿ ದೇವಳದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ.ಕೆ.ಪ್ರಕಾಶ್ ಶೆಟ್ಟಿ, ಪಡುಬಿದ್ರಿ ಬಂಟರ ಸಂಘದ ಅಧ್ಯಕ್ಷ ಡಾ.ದೇವಿಪ್ರಸಾದ್ ಶೆಟ್ಟಿ, ಜೇಸಿಐ ಇಂಡಿಯಾ ಆಡಳಿತ ಮಂಡಳಿಯ ನಿರ್ದೇಶಕ ವೈ.ಸುಕುಮಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ನವೀನ್ ಶೆಟ್ಟಿ ಕುತ್ಯಾರು, ಉಪಾಧ್ಯಕ್ಷ ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಕಾಪು ತಾಲೂಕು ಕಸಾಪ ಅಧ್ಯಕ್ಷ ಪುಂಡಲೀಕ ಮರಾತೆ, ಕಾಪು ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಉದ್ಯಾವರ, ಗೀತಾಂಜಲಿ ಸುವರ್ಣ, ಜಿ.ಪಂ. ಮಾಜಿ ಉಪಾಧ್ಯಕ್ಷೆ ಎರ್ಮಾಳು ಶೀಲಾ ಕೆ. ಶೆಟ್ಟಿ ಸಹಿತ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಶನಿವಾರ ಅವರ ಇನ್ನಾದ ಸ್ವಗೃಹದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಕಿಶಾನ್ ಅಂಬೆಕಲ್ಲು



ಸುಳ್ಯ: ಮಡಪ್ಪಾಡಿ ಗ್ರಾಮದ ಅಂಬೆಕಲ್ಲು ಹುವಪ್ಪ ಗೌಡರ ಪುತ್ರ ಕಿಶಾನ್ ಅಂಬೆಕಲ್ಲು ಸೋಮವಾರ ಮಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಕಿಡ್ನಿ ಸಮಸ್ಯೆಯಿಂದ ಸುಳ್ಯದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿ ಚಿಕಿತ್ಸೆಗೆ ಫಲಕಾರಿಯಾಗದೆ ನಿಧನರಾದರು. ಮೃತರು ತಂದೆ, ತಾಯಿ, ಇಬ್ಬರು ಸಹೋದರರು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ.

ರವೀಂದ್ರ ರೈ



ಬಂಟ್ವಾಳ: ಇಲ್ಲಿಗೆ ಸಮೀಪದ ಕೈತ್ರೋಡಿ ನಿವಾಸಿ, ಪ್ರಗತಿಪರ ಕೃಷಿಕ ಕೆ. ರವೀಂದ್ರ ರೈ (86) ಇವರು ಅಸೌಖ್ಯದಿಂದ ಗುರುವಾರ ತಡರಾತ್ರಿ ಸ್ವಗೃಹದಲ್ಲಿ ನಿಧನರಾದರು. ಮೃತರಿಗೆ ಪತ್ನಿ ಮತ್ತು ನಾಲ್ವರು ಪುತ್ರಿಯರು ಇದ್ದಾರೆ. ಮೃತರು ಪ್ರಗತಿಪರ ಕೃಷಿಕರಾಗಿ, ಶ್ರೀ ಕ್ಷೇತ್ರ ಬದನಡಿ ನಾಗಬ್ರಹ್ಮ ಸುಬ್ರಹ್ಮಣ್ಯೇಶ್ವರ ದೇವಳದ ಮಾಜಿ ಆಡಳಿತ ಮೊಕ್ತೇಸರರಾಗಿ, ರಾಯಿ-ಕೊಯಿಲ ವಲಯ ಬಿಜೆಪಿ ಮಾಜಿ ಅಧ್ಯಕ್ಷರಾಗಿ ಗುರುತಿಸಿಕೊಂಡಿದ್ದರು.

ನಾರಾಯಣ ಬಂಗೇರ



ಬಂಟ್ವಾಳ: ಪಂಜಿಕಲ್ಲು ಗ್ರಾಮದ ಎನಿಲಕೋಡಿ ನಿವಾಸಿ, ಪ್ರಗತಿಪರ ಕೃಷಿಕ ನಾರಾಯಣ ಬಂಗೇರ ಎನಿಲಕೋಡಿ (88) ಇವರು ಅಸೌಖ್ಯದಿಂದ ಸ್ವಗೃಹದಲ್ಲಿ ಬುಧವಾರ ತಡರಾತ್ರಿ ನಿಧನರಾದರು. ಮೃತರಿಗೆ ಪತ್ನಿ, ನಾಲ್ವರು ಪುತ್ರರು ಮತ್ತು ಪುತ್ರಿ ಇದ್ದಾರೆ. ಮೃತರು ಕೃಷಿಕರಾಗಿ, ಕೊಯಿಲ ಗೋವಿಂದಬೆಟ್ಟ ಭಜನಾ ಮಂದಿರ ಟ್ರಸ್ಟಿಯಾಗಿ, ರಾಯಿ ವಲಯ ಗಾಣಿಗರ ಸಂಘದ ಹಿರಿಯ ಸದಸ್ಯರಾಗಿ, ಪಂಜಿಕಲ್ಲು ಪದವು ನ್ಯಾಯಬೆಲೆ ಅಂಗಡಿ ಮುನ್ನಡೆಸುತ್ತಿದ್ದರು.

ವಿ. ಮನೋಹರ ಕಾಮತ್



ಮಂಗಳೂರು: ಇಲ್ಲಿನ ರಥಬೀದಿಯ ಶಾರದಾ ಪ್ರೆಸ್‌ನ ನಿರ್ದೇಶಕ ವಿ. ಮನೋಹರ ಕಾಮತ್ ಹೃದಯಾಘಾತದಿಂದ ಶುಕ್ರವಾರ ಮಣ್ಣಗುಡ್ಡೆಯ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 80 ವರ್ಷವಾಗಿತ್ತು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.



ದರ್ಶನ ಬಲಿ



ಉಳ್ಳಾಲ್ತಿ ಭೇಟಿ



ತೆಪ್ಪೋತ್ಸವ

ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಬ್ರಹ್ಮರಥೋತ್ಸವ

ಹತ್ತೂರಿನಿಂದಲೂ ಹರಿದುಬಂದ ಭಕ್ತ ಸಾಗರ

ಪುತ್ತೂರು: ಇತಿಹಾಸ ಪ್ರಸಿದ್ಧ ಮಹತೋಭಾರ ಶ್ರೀಮಹಾಲಿಂಗೇಶ್ವರ ದೇವಾಲಯದಲ್ಲಿ ಶುಕ್ರವಾರ ಬ್ರಹ್ಮರಥೋತ್ಸವದ ಪೂರ್ವಭಾವಿಯಾಗಿ ಬೆಳಗ್ಗೆ ನಡೆದ ಶ್ರೀ ದೇವರ ದರ್ಶನ ಬಲಿ ಮತ್ತು ಬಟ್ಟಲು ಕಾಣಿಕೆ ಸಮರ್ಪಣೆ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತ ಜನಸ್ತೋಮ ಪಾಲ್ಗೊಂಡರು.

ಬಲ್ನಾಡಿನಿಂದ ಗುರುವಾರ ರಾತ್ರಿ ಶ್ರೀ ದೇವಳಕ್ಕೆ ಆಗಮಿಸಿದ ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಜತೆ ಮೂರು ಸುತ್ತಿನ ದರ್ಶನ ಬಲಿಯು ಉತ್ಸವದ ಕೊನೆಯ ಭಾಗದಲ್ಲಿ ನಡೆಯಿತು.

ಶ್ರೀ ಉಳ್ಳಾಲ್ತಿ ದೈವವು ದೇವಾಲಯದ ಧ್ವಜಸ್ತಂಭದ ಬಲಭಾಗದಲ್ಲಿ ಶ್ರೀ ದೇವರ ಉತ್ಸವ ಮೂರ್ತಿಯ ಮುಂದೆ ಇರಿಸಲಾದ ಹರಿವಾಣಕ್ಕೆ ಕಡ್ತಲೆ ಸ್ಪರ್ಶಿಸುವ ಮೂಲಕ ಬಟ್ಟಲು ಕಾಣಿಕೆ ಸ್ವೀಕಾರಕ್ಕೆ ಅನುವು ಮಾಡಿಕೊಟ್ಟಿತು. ಬಟ್ಟಲು ಕಾಣಿಕೆ ಹಾಕಿದ ಭಕ್ತರಿಗೆ ಶ್ರೀ ದೇವರ ಉತ್ಸವ ಮೂರ್ತಿಯನ್ನು ಹೊತ್ತ ಬ್ರಹ್ಮವಾಹಕರು ಶ್ರೀಗಂಧ ಪ್ರಸಾದವನ್ನು ನೀಡಿದರು.

ಮಹಾ ಅನ್ನದಾನ

ಶುಕ್ರವಾರ ಮಧ್ಯಾಹ್ನ ಬ್ರಹ್ಮರಥೋತ್ಸವದ ಅನ್ನಸಂತರ್ಪಣೆಯಲ್ಲಿ 50 ಸಾವಿರಕ್ಕೂ ಮಿಕ್ಕಿ ಭಕ್ತರು ಅನ್ನ ಪ್ರಸಾದ ಸ್ವೀಕರಿಸಿದರು. ಬ್ರಹ್ಮರಥೋತ್ಸವದ ಹಿನ್ನೆಲೆಯಲ್ಲಿ ಅಂಗಡಿ ಮುಂಗಟ್ಟುಗಳಿಗೆ ರಜೆಯ ಹಿನ್ನೆಲೆಯಲ್ಲಿ ಭಕ್ತರ ಸಂದಣಿ ಹೆಚ್ಚಿತ್ತು. ದರ್ಶನ ಬಲಿ ಉತ್ಸವದಲ್ಲಿ ಪಾಲ್ಗೊಂಡು ಬಟ್ಟಲು ಕಾಣಿಕೆ ಸಲ್ಲಿಸಿದ ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು.

ದೇವಾಲಯದ ಹೊರಾಂಗಣದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಭಕ್ತರ ಬಾಯಾರಿಕೆ ನೀಗಿಸುವ ನಿಟ್ಟಿನಲ್ಲಿ ಪಾನಕ, ಮಜ್ಜಿಗೆ ಸೇರಿದಂತೆ ಪಾನೀಯದ ವ್ಯವಸ್ಥೆ ಮಾಡಲಾಗಿತ್ತು. ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರದ ಆಗಮನ

ಜಾತ್ರೆಯ ಅಂಗವಾಗಿ ಗುರುವಾರ ರಾತ್ರಿ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರವು ಸಕಲ ಬಿರುದಾವಳಿಗಳೊಂದಿಗೆ ಆಗಮಿಸಿ ದೇವಾಲಯದ ಹೊರಾಂಗಣದಲ್ಲಿ ಶ್ರೀ ದೇವರ ಭೇಟಿ ನಡೆಯಿತು.



ಪಲ್ಲಕ್ಕಿ ಉತ್ಸವ

ದೇವಸ್ಥಾನದಲ್ಲಿ ಸಣ್ಣ ರಥೋತ್ಸವ, ಕೆರೆ ಆಯನ

ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಜಾತ್ರೋತ್ಸವದ ಪ್ರಯುಕ್ತ ಗುರುವಾರ ರಾತ್ರಿ ದೇವಾಲಯದ ಒಳಾಂಗಣದಲ್ಲಿ ಉತ್ಸವ ಬಲಿ ನಡೆಯಿತು. ಪೂರ್ವ ಶಿಷ್ಟ ಸಂಪ್ರದಾಯದಂತೆ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರ ಶ್ರೀ ದೇವಳಕ್ಕೆ ಆಗಮಿಸಿದ ಬಳಿಕ ತಡರಾತ್ರಿ ಪಲ್ಲಕ್ಕಿ ಉತ್ಸವ, ಸಣ್ಣ ರಥೋತ್ಸವ ಮತ್ತು ಕೆರೆ ಉತ್ಸವ, ತೆಪ್ಪೋತ್ಸವವು ಸಾವಿರಾರು ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ನಡೆಯಿತು.

ಇಂದು ಜಳಕದ ಸವಾರಿ

ಏ.18ರಂದು ಸಂಜೆ ಶ್ರೀ ದೇವರ ಅವಭೃತ ಸವಾರಿಯು 13 ಕಿ.ಮೀ. ದೂರವಿರುವ ವೀರ ಮಂಗಲ ಕುಮಾರಧಾರಾ ನದಿ ತಟಕ್ಕೆ ತೆರಳಲಿದೆ. ಪುತ್ತೂರ‍್ದ ಉಳ್ಳಾಯನ ಜಳಕದ ಸವಾರಿ ಎಂದು ಭಕ್ತರಿಂದ ತುಳುವಿನಲ್ಲಿ ಹೇಳಲ್ಪಡುವ ಅವಭೃತ ಸವಾರಿಯಲ್ಲಿ ದಾರಿಯುದ್ದಕ್ಕೂ ಶ್ರೀ ದೇವರು ಆರತಿ, ಹಣ್ಣುಕಾಯಿ ಮತ್ತು ಕಟ್ಟೆ ಪೂಜೆಗಳನ್ನು ಸ್ವೀಕರಿಸುತ್ತಾ ಏ.19ರಂದು ಮುಂಜಾನೆ ವೀರಮಂಗಲ ನದಿ ತಟಕ್ಕೆ ತಲುಪುತ್ತಾರೆ. ಅಲ್ಲಿ ಅವಭೃತ ಮುಗಿಸಿ ಬೆಳಗ್ಗೆ 10 ಗಂಟೆಗೆ ದೇವರು ದೇವಾಲಯಕ್ಕೆ ತಲುಪಿ ಧ್ವಜಾವರೋಹಣ ನಡೆಯುತ್ತದೆ.

ಇಂದು ತುಲಾಭಾರ

ದೇವಾಲಯದಲ್ಲಿ ಏ.18ರಂದು ಬೆಳಗ್ಗೆ ಬಾಗಿಲು ತೆಗೆಯುವ ಮುಹೂರ್ತ ನಡೆದು ತುಲಾಭಾರ ಸೇವೆ ನಡೆಯುತ್ತದೆ. ವರ್ಷದಲ್ಲಿ ಏ.16 ಹಾಗೂ 18 ರಂದು ಮಾತ್ರ ಭಕ್ತರು ಶ್ರೀ ಮಹಾಲಿಂಗೇಶ್ವರ ದೇವರಿಗೆ ಹರಕೆಯ ತುಲಾಭಾರ ಸಲ್ಲಿಸಬಹುದು. ಬಾಳೆಕಾಯಿ, ಸಕ್ಕರೆ, ಬೆಲ್ಲ, ಅಕ್ಕಿ, ತೆಂಗಿನಕಾಯಿಯ ಮೊದಲಾಗಿ ತುಲಾಭಾರ ಸೇವೆ ನಡೆಯುತ್ತದೆ.

ಮಲ್ಲಿಗೆ ಸಮರ್ಪಣೆ

ದೇವಾಲಯಕ್ಕೆ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರ ವಿವಿಧ ಬಿರುದಾವಳಿಗಳಿಂದ ಆಗಮಿಸಿದ ಸಂದರ್ಭ ದಲ್ಲಿ ಸೀಮೆಯ ಭಕ್ತರು ಮಲ್ಲಿಗೆ ಹೂವನ್ನು ದೈವಗಳಿಗೆ ಬಲ್ನಾಡಿನಲ್ಲಿ, ಪುತ್ತೂರು ದೇವಾಲಯದಲ್ಲಿ ಮತ್ತು ಪುತ್ತೂರು ಹಳೆ ಪೊಲೀಸ್ ಠಾಣೆಯ ಬಳಿ ಇರುವ ಅಂಕದ ಕಟ್ಟೆಯ ಬಳಿ ಸಮರ್ಪಣೆ ಮಾಡಿ ಪ್ರಸಾದ ಸ್ವೀಕರಿಸಿದರು.

ಪರವಾನಿಗೆ ಭೂಮಾಪಕರ ಮುಷ್ಕರದಿಂದ ಸಾರ್ವಜನಿಕರಿಗೆ ಸಮಸ್ಯೆ

ತಕ್ಷಣ ಕ್ರಮಕ್ಕೆ ಸಿಎಂಗೆ ಯಶ್‌ಪಾಲ್ ಮನವಿ

ಉಡುಪಿ: ಕಳೆದ 40 ದಿನಗಳಿಂದ ನಡೆಯುತ್ತಿರುವ ಪರವಾನಿಗೆ ಭೂಮಾಪಕರ ಮುಷ್ಕರದಿಂದ ಕಂದಾಯ ಇಲಾಖೆಗೆ ಸಂಬಂಧಿತ ಕಾರ್ಯಗಳು ಸ್ಥಗಿತಗೊಂಡು ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿದ್ದು ಈ ಬಗ್ಗೆ ರಾಜ್ಯ ಸರಕಾರ ತಕ್ಷಣ ಕ್ರಮವಹಿಸುವಂತೆ ಮುಖ್ಯ ಮಂತ್ರಿಗಳಿಗೆ ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಮನವಿ ಮಾಡಿದ್ದಾರೆ.



ರಾಜ್ಯದಾದ್ಯಂತ ಪರವಾನಿಗೆ ಭೂಮಾಪಕರು ಕಳೆದ 40 ದಿನಗಳಿಂದ ಮುಷ್ಕರದಲ್ಲಿ ತೊಡಗಿರುವುದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಗಳು ಉಂಟಾಗಿವೆ. ಭೂಮಾಪನ, ಸರ್ವೆ, ಪಹಣಿ ತಿದ್ದುಪಡಿ, ಹದ್ದುಬಸ್ತು, ಖಾತೆ ಬದಲಾವಣೆ ಸೇರಿದಂತೆ ಜಮೀನು ಸಂಬಂಧಿತ ಅನೇಕ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಇದರಿಂದ ರೈತರು, ಬಡಜನರು, ಮನೆ ನಿರ್ಮಾಣಕ್ಕೆ ಸಾಲ ಪಡೆಯುವವರು ಹಾಗೂ ಸಾಮಾನ್ಯ ನಾಗರಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಜ್ಯದಾದ್ಯಂತ ಸುಮಾರು 6,000 ಪರವಾನಿಗೆ ಭೂಮಾಪಕರು, ಉಡುಪಿ ಜಿಲ್ಲೆಯಲ್ಲಿ 118 ಮಂದಿ ಹಾಗೂ ಉಡುಪಿ ತಾಲೂಕಿನಲ್ಲಿ 22 ಮಂದಿ ಮುಷ್ಕರದಲ್ಲಿ ನಿರತರಾಗಿದ್ದಾರೆ. ಸಾರ್ವಜನಿಕರು ದಿನನಿತ್ಯ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೆಯೇ ಉಡುಪಿ ಜಿಲ್ಲೆಯಲ್ಲಿ ಸಾವಿರಕ್ಕೂ ಹೆಚ್ಚು ಭೂಮಾಪನ ಅರ್ಜಿಗಳ ವಿಲೇವಾರಿ ಬಾಕಿ ಇದ್ದು ವಿಶೇಷವಾಗಿ ಉಡುಪಿ ತಾಲೂಕಿನಲ್ಲಿ 350ಕ್ಕೂ ಅಧಿಕ ಭೂಮಾಪನ ಅರ್ಜಿಗಳು ಬಾಕಿ ಯಾಗಿದೆ ಎಂದು ಶಾಸಕರು ವಿವರಿಸಿದ್ದಾರೆ.

ಜನರ ಸಂಕಷ್ಟ ನಿವಾರಿಸಿ

ರೈತರು, ಜಮೀನು ಖರೀದಿ/ಮಾರಾಟ ಮಾಡುವವರು, ವಾರಸುದಾರಿಕೆ ದಾಖಲೆ ಮಾಡಿಸಿಕೊಳ್ಳುವವರು ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳು ಆರ್ಥಿಕ ಮತ್ತು ಆಡಳಿತಾತ್ಮಕ ತೊಂದರೆ ಅನುಭವಿಸುತ್ತಿದ್ದಾರೆ. ಆದುದರಿಂದ, ಈ ಗಂಭೀರ ಸಮಸ್ಯೆಯನ್ನು ತಕ್ಷಣ ಪರಿಗಣಿಸಿ ಪರವಾನಿಗೆ ಭೂಮಾಪಕರೊಂದಿಗೆ ಮಾತುಕತೆ ನಡೆಸಿ, ಸದ್ರಿಯವರ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸಿ, ಮುಷ್ಕರವನ್ನು ಶೀಘ್ರ ಅಂತ್ಯಗೊಳಿಸುವಂತೆ ಕ್ರಮ ಕೈಗೊಳ್ಳಬೇಕು ಹಾಗೆಯೇ ಸಾರ್ವಜನಿಕ ಹಿತದೃಷ್ಟಿಯಿಂದ ಭೂಮಾಪನ ಸೇವೆಗಳು ಮರು ಪ್ರಾರಂಭವಾಗುವಂತೆ ತುರ್ತು ಮಧ್ಯಪ್ರವೇಶ ಮಾಡಿ ಜನರ ಸಂಕಷ್ಟ ನಿವಾರಿಸುವಂತೆ ಯಶ್ ಪಾಲ್ ಸುವರ್ಣ ಆಗ್ರಹಿಸಿದ್ದಾರೆ.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಬ್ರಹ್ಮಕಲಶೋತ್ಸವ

ಜನರ ಸಹಕಾರದಲ್ಲಿ ಮಾದರಿ



ಬೆಳ್ತಂಗಡಿ: ರಾಜಗೋಪುರ, ಬ್ರಹ್ಮರಥ, ನೂತನ ಧ್ವಜಸ್ತಂಭ ಪೂರ್ಣ ಪ್ರಮಾಣದಲ್ಲಿ ನಿರ್ಮಾಣಗೊಂಡು ಬ್ರಹ್ಮಕಲಶೋತ್ಸವ ನಡೆಯುತ್ತಿದೆ. ಕರಾಯ ಊರಿನ ಭಕ್ತರು ಯಾವುದೇ ಭೇದ, ಭಾವ ಮಾಡದೇ ನಾವೆಲ್ಲರೂ ಒಂದು, ನಾವು ಕರಾಯ ದೇವರ ಭಕ್ತರು ಇದು ನನ್ನ ಕರ್ತವ್ಯ ಎಂಬ ನೆಲೆಯಲ್ಲಿ ಸೇವೆ ನೀಡುತ್ತಿದ್ದಾರೆ ಎಂದು ಶಾಸಕ ಹರೀಶ್ ಪೂಂಜ ಹೇಳಿದರು.

ಅವರು ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಮಾತನಾಡಿದರು.

ಕುದ್ರೋಳಿ ಶ್ರೀ ಬ್ರಹ್ಮಬೈದರ್ಕಳ ಗರಡಿ ಕ್ಷೇತ್ರದ ಅಧ್ಯಕ್ಷ ಸುನೀಲ್ ಕುಮಾರ್ ಅಗರಿ, ಬಂಟ್ವಾಳ ಸಹಾಯಕ ಪ್ರಾದೇಶಿಕ ಸಾರಿಗೆಯ ಅಧಿಕಾರಿ ಚರಣ್ ಕೆ., ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಮಾಜಿ ಸದಸ್ಯ ಪ್ರಸನ್ನ ಗೌಡ, ಶರ್ಮಿಳಾ ಆನಂದ ಪರ್ಕಳ, ಕಾರಿಂಜ ಶ್ರೀ ವಿಘ್ನೇಶ್ವರ ಭಜನಾ ಮಂಡಳಿಯ ಅಧ್ಯಕ್ಷ ಗೋಪಾಲಕೃಷ್ಣ ಗೌಡ, ನೇಜಿಕಾರು ರಾಜರಾಜೇಶ್ವರಿ ಭಜನಾ ಮಂಡಳಿಯ ಅಧ್ಯಕ್ಷ ಉದಯ ಗೌಡ, ತಣ್ಣೀರುಪಂತ ಮೃತ್ಯುಂಜಯ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಪ್ರಭಾಕರ ಗೌಡ ಪೊಸಂದೋಡಿ, ಉಪ್ಪಿನಂಗಡಿ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ಸುನೀಲ್ ಅಣವು, ಕರಾಯ ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ಸಾಮ್ರಾಟ್ ಕರ್ಕೇರ, ಕಣಿಯೂರು ಗುತ್ತಿನ ಸುದರ್ಶನ್ ಹೆಗ್ಡೆ, ಹಲೇಜಿಯ ಕೆ.ಎನ್. ಸುಧೀರ್ ಕುಮಾರ್, ಹಿರಿಯ ನಾಗರಿಕ ನಾರಾಯಣ ಶೆಟ್ಟಿ, ವೆಂಕಪ್ಪ ನಾಯ್ಕ ಕೊಲ್ಲಿ, ಕಲ್ಲೇರಿ ಕಿನ್ಯಾಜೆ ನೇತ್ರಾವತಿ ಹೋಟೆಲ್‌ನ ಧರ್ಣಪ್ಪ ಗೌಡ, ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಅನಂತಕೃಷ್ಣ ಕುದ್ದಣ್ಣಾಯ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಅತುಲ್ ಕುಮಾರ್ ಕೆ.ಎನ್. ಹಲೇಜಿ, ವಾರಿಜ, ಮಾಜಿ ಪಂಚಾಯತ್ ಸದಸ್ಯೆ ಲೀಲಾವತಿ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುದರ್ಶನ್ ಕೊಲ್ಲಿ ಉಪಸ್ಥಿತರಿದ್ದರು. ರಾಜಶೇಖರ ರೈ ಸ್ವಾಗತಿಸಿದರು. ಯುವರಾಜ್ ಅನಾರು ಹಾಗೂ ಮಹೇಶ್ ಕಾರ್ಯಕ್ರಮ ನಿರೂಪಿಸಿ, ರಘುರಾಮ ಶೆಟ್ಟಿ ವಂದಿಸಿದರು.

> **ಶ್ರದ್ಧೆ, ಆಸಕ್ತಿಯಿಂದ ಒಗ್ಗೂಡಿ ಎಲ್ಲರ ಅವಿರತ ಶ್ರಮದಿಂದ ಒಳ್ಳೆಯ ರೀತಿಯಲ್ಲಿ ದೇಗುಲ ನಿರ್ಮಾಣಗೊಂಡಿದೆ. ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಮಾತ್ರವಲ್ಲದೆ ಧರ್ಮಕಾರ್ಯಗಳು ನಡೆಯಬೇಕು. ಕೆಲವೊಂದು ಕ್ಷೇತ್ರದಲ್ಲಿ ಮಕ್ಕಳಿಗೆ ಧಾರ್ಮಿಕ ಶಿಬಿರಗಳು ನಡೆಯುತ್ತಿದೆ.**
> ■ ತಂತ್ರಿ ಕಾರ್ತಿಕ್ ಕೆಮ್ಮಿಂಜೆ

ಹವಾಮಾನ ವೈಪರೀತ್ಯದಿಂದ ಗೇರು ಕೃಷಿಕರ ನಿರೀಕ್ಷೆ ಹುಸಿ

ಕಾಸರಗೋಡು: ಬಿಸಿಲಿನ ತಾಪ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಗೇರು ಮರದಲ್ಲಿ ಹೂವು ಹಾಗೂ ಕಾಯಿಗಳು ಕರಟಿ ಹೋಗಿವೆ. ಇದರಿಂದಾಗಿ ಈ ಬಾರಿ ಉತ್ತಮ ಫಸಲಿಂದ ಉತ್ತಮ ಆದಾಯ ಲಭಿಸಬಹುದೆಂಬ ಗೇರು ಕೃಷಿಕರ ನಿರೀಕ್ಷೆಯು ಹುಸಿಯಾದಂತಾಗಿದೆ.

ಒಂದೆಡೆ ಬಿಸಿಲಿನ ತಾಪ ಇನ್ನೊಂದೆಡೆ ಉತ್ತಮ ಬೆಲೆಯಿದ್ದರೂ ಉತ್ಪಾದನೆ ಇಲ್ಲದ ಕಾರಣ ಗೇರು ಕೃಷಿಕರನ್ನು ಸಂಕಷ್ಟಕ್ಕೀಡುಮಾಡಿದೆ.

ಜಿಲ್ಲೆಯಲ್ಲಿ ಬೇಸಿಗೆ ತೀವ್ರಗೊಂಡ ಹಿನ್ನೆಲೆಯಲ್ಲಿ ಹೂವು ಹಾಗೂ ಕಾಯಿ ಕರಟಿ ನಾಶವಾಗಿರುವುದರೊಂದಿಗೆ ಗೇರುಬೀಜ ಕೃಷಿಕರ ಈ ಸೀಸನ್‌ನ ಲೆಕ್ಕಾಚಾರಗಳೆಲ್ಲಾ ಬುಡಮೇಲಾಗಿದೆ. ಈ ವರ್ಷದ ಆರಂಭದಲ್ಲಿ ಕಿಲೋಗೆ 145 ರಿಂದ 158ರ ವರೆಗೆ ಬೆಲೆ ಲಭಿಸುತ್ತಿತ್ತು. ಕಳೆದ ಕೆಲವು ವರ್ಷಗಳಿಂದ ಇತರೆಲ್ಲಾ ಕೃಷಿ ಉತ್ಪನ್ನಗಳಂತೆ ಗೇರುಬೀಜಕ್ಕೂ ಉತ್ತಮ ಬೆಲೆ ಲಭಿಸುತ್ತಿದೆ. ಆದರೆ ಹವಾಮಾನದ ವೈಪರೀತ್ಯ ಹಾಗೂ ಅತೀ ಬಿಸಿಯಿಂದಾಗಿ ಉತ್ಪಾದನೆಗೆ ದೊಡ್ಡ ಮಟ್ಟಿನಲ್ಲಿ ಹೊಡೆತ ಲಭಿಸಿದ ಹಿನ್ನೆಲೆಯಲ್ಲಿ ಕೃಷಿಕರು ಕಣ್ಣೀರು ಸುರಿಸುತ್ತಿದ್ದಾರೆ.

ಒಟ್ಟಾರೆಯಾಗಿ ತೀವ್ರ ಉಷ್ಣತೆಯಿಂದಾಗಿ ಗೇರು ಕೃಷಿಕರ ನಿರೀಕ್ಷೆಯ ಲೆಕ್ಕಾಚಾರಗಳೆಲ್ಲಾ ಬುಡಮೇಲಾಗತೊಡಗಿದೆ.



ಭಾರೀ ಕುಸಿತ

ಜಿಲ್ಲೆಯ ಮಲೆನಾಡು ವಲಯದಲ್ಲಿ ಗೇರು ಬೀಜ ಉತ್ಪಾದನೆಯಲ್ಲಿ ಈ ವರ್ಷ ಭಾರೀ ಕುಸಿತ ಉಂಟಾಗಿದೆ. ಆದರೆ ಕಳೆದ ದಿನಗಳಲ್ಲಿ ಸುರಿದ ಮಳೆಗೆ ಒಣಗಿದ ಹೂವುಗಳು ಉದುರಿದ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಉತ್ಪಾದನೆಯಲ್ಲಿ ಬದಲಾವಣೆ ಉಂಟಾಗಬಹುದೆಂದು ಕೃಷಿಕರು ನಿರೀಕ್ಷಿಸುತ್ತಿದ್ದಾರೆ. ಆದರೆ ಮಳೆ ನಿರಂತರವಾಗಿ ಸುರಿದರೆ ಬೆಲೆ ಕಡಿಮೆಯಾಗಲು ಸಾಧ್ಯತೆ ಇದೆ. ಸರಕಾರಿ ಮಟ್ಟದಲ್ಲಿ ಕನಿಷ್ಠ ದರ ನಿಗದಿಪಡಿಸಿ ಗೇರು ಬೀಜ ಸಂಗ್ರಹ ಆರಂಭಿಸದ ಕಾರಣ ರಖಂ ವ್ಯಾಪಾರಿಗಳು ಒಂದೇ ಮಳೆಗೆ ಬೆಲೆ ಕಡಿಮೆ ಮಾಡುವ ಸಾಧ್ಯತೆ ಇದೆ ಎಂದು ಕೃಷಿಕರು ಹೇಳುತ್ತಾರೆ.

ಉರ್ವ ಶ್ರೀ ಕೊರಗಜ್ಜ ಕ್ಷೇತ್ರಕ್ಕೆ ಚಿನ್ನದ ಮುಟ್ಟಾಳೆ ಸಮರ್ಪಣೆ ಸಮಾರಂಭ

ಆಡಳಿತ ಮಂಡಳಿ ಕಾರ್ಯ ಸ್ತುತ್ಯರ್ಹ

ಮಂಗಳೂರು: ನಗರದ ಉರ್ವ ಬಳಿಯ ಶ್ರೀ ಕೊರಗಜ್ಜ ಕ್ಷೇತ್ರಕ್ಕೆ ಚಿನ್ನದ ಮುಟ್ಟಾಳೆ ಸಮರ್ಪಿಸುವ ಅಂಗವಾಗಿ ಧಾರ್ಮಿಕ ಸಭೆ ಉರ್ವ ಮೈದಾನದಲ್ಲಿ ಇತ್ತೀಚೆಗೆ ಜರಗಿತು.

ಧಾರ್ಮಿಕ ಸಭೆ ಉದ್ಘಾಟಿಸಿದ ಕದ್ರಿ ದೇವಸ್ಥಾನದ ದೇರೆಬೈಲ್ ವಿಠಲದಾಸ ತಂತ್ರಿ ಅವರು ಮಾತನಾಡಿ, ಶ್ರೀ ಕ್ಷೇತ್ರ ಕದ್ರಿಗೂ ಕೊರಗಜ್ಜನಿಗೂ ಅವಿನಾಭಾವ ಸಂಬಂಧ ಇರುವ ಐತಿಹ್ಯವಿದೆ. ತುಳುನಾಡಿನಾದ್ಯಂತ ಅಪಾರ ಭಕ್ತರು ನಂಬುವ ಕೊರಗಜ್ಜನು ಸರ್ವರಿಗೂ ಒಳಿತನ್ನುಂಟುಮಾಡಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಧಾರ್ಮಿಕ ಕ್ಷೇತ್ರದ ಆದಾಯದಲ್ಲಿ ನಿರ್ದಿಷ್ಟ ಮೊತ್ತವನ್ನು ವಿವಿಧ ಸಮಾಜಮುಖಿ ಕಾರ್ಯಗಳಿಗೆ ವಿನಿಯೋಗಿಸುತ್ತಿರುವ ಕೊರಗಜ್ಜ ಕ್ಷೇತ್ರದ ಆಡಳಿತ ಮಂಡಳಿಯ ಕಾರ್ಯ ಸ್ತುತ್ಯರ್ಹವಾಗಿದೆ ಎಂದರು.

ಮಠದಕಣಿ ದೇವಸ್ಥಾನದ ಪ್ರಧಾನ ಅರ್ಚಕ ವಿದ್ಯಾಶಂಕರ್ ಭಟ್ ಮಾತನಾಡಿ, ಶ್ರೀ ಕ್ಷೇತ್ರದಲ್ಲಿ ಭಕ್ತರ ಸಂಕಷ್ಟ ನಿವಾರಣೆ ಮಾಡುವ ಕೊರಗಜ್ಜನ ನಿಜ ಅರ್ಥದ ಸಾನ್ನಿಧ್ಯ ಇರುವುದರಿಂದಲೇ ಸುಂದರ ವಿನ್ಯಾಸದ ಚಿನ್ನದ ಮುಟ್ಟಾಳೆಯನ್ನು ಕೊರಗಜ್ಜನಿಗೆ ಸಮರ್ಪಿಸಲು ಸಾಧ್ಯವಾಗಿದೆ ಎಂದರು.



> **ಅಪಾರ ಭಕ್ತರ ಸಹಕಾರದಿಂದ ಭವ್ಯ ಮೆರವಣಿಗೆಯ ಮೂಲಕ ಚಿನ್ನದ ಮುಟ್ಟಾಳೆಯನ್ನು ಕೊರಗಜ್ಜನಿಗೆ ಸಮರ್ಪಿಸಿದ ಆಡಳಿತ ಸಮಿತಿಯ ಕಾರ್ಯ ಶ್ಲಾಘನೀಯ.**
> ■ ಡಾ. ಗಣೇಶ್ ಅಮೀನ್

ಮುಖ್ಯ ಅತಿಥಿಗಳಾಗಿ ದಿನೇಶ್ ಬಿ., ಜಗದೀಶ ಶೆಟ್ಟಿ, ರಾಧಾಕೃಷ್ಣ ಅಶೋಕನಗರ, ಪ್ರವೀಣ್ ಸುವರ್ಣ, ವಿಜಯಕುಮಾರ್, ವಿಘ್ನೇಶ್ ಶೆಟ್ಟಿ, ಮಂಜುಷಾ ರೈ, ದಿವಾಕರ ಶೆಟ್ಟಿ, ಅನಿಲ್ ಶರ್ಮಾ, ಶ್ರೀಧರ್ ಕುಮಾರ್, ಬಾಲಕೃಷ್ಣ ಗುರಿಕಾರ, ಅರುಣ್ ಕುಮಾರ್, ಪೂವಪ್ಪ ಅಮೀನ್, ಬಾಬಾ ಅಲಂಕಾರ್, ವಸಂತ ಉರ್ವಸ್ಟೋರ್, ನಂದನ್ ಮಲ್ಯ, ಮನೋಜ್ ಕುಮಾರ್, ರಕ್ಷಿತ್ ಸಾಲ್ಯಾನ್, ನಿತಿನ್ ಬಿ. ಸಾಲ್ಯಾನ್, ಟಿ.ಎ.ಅಶೋಕನ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ದೈವ ಚಾಕರಿ ಮಾಡುತ್ತಿರುವ ಪಾತ್ರಿ, ಮಧ್ಯಸ್ಥರು ಹಾಗೂ ಸಹಾಯಕರನ್ನು ಸನ್ಮಾನಿಸಲಾಯಿತು. ಆರೋಗ್ಯ ಸಮಸ್ಯೆಯುಳ್ಳವರಿಗೆ ಸಹಾಯಹಸ್ತ ಹಾಗೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಸತೀಶ್ ಶೆಟ್ಟಿ ಕೊಡಿಯಾಲಬೈಲ್ ಸ್ವಾಗತಿಸಿದರು. ದೀಪಕ್ ಅಡ್ಯಾರ್ ಕಾರ್ಯಕ್ರಮ ನಿರೂಪಿಸಿದರು.

ಬಿಸಿಲಿನಿಂದ ಬಳಲುತ್ತಿರುವ ಪಕ್ಷಿಗಳ ಬಾಯಾರಿಕೆ ತಣಿಸಿಲು ಬಾಲ ವೇದಿಕೆ ಮಕ್ಕಳಿಂದ ತೊಟ್ಟಿ ರೆಡಿ!

ಕಾಸರಗೋಡು: ಜಿಲ್ಲೆಯಲ್ಲಿ ತಾಪಮಾನ ದಿನ ಕಳೆದಂತೆ ಹೆಚ್ಚುತ್ತಿದ್ದು, ಬೇಸಿಗೆಯ ಬಿಸಿಲಿನಿಂದ ಪಕ್ಷಿಗಳು ಮತ್ತು ಪ್ರಾಣಿಗಳು ತುಂಬಾ ಬಾಯಾರುತ್ತಿವೆ. ಈ ಪರಿಸ್ಥಿತಿಯನ್ನು ಮನಗಂಡು ಬೋವಿಕ್ಕಾನ ಸಮೀಪದ ಕುಂಡಂಗುಳಿ ಸಹೃದಯ ಬಾಲ ವೇದಿಕೆಯ ಮಕ್ಕಳು ಪಕ್ಷಿಗಳಿಗೆ ಕುಡಿಯುವ ನೀರಿನ ತೊಟ್ಟಿಗಳನ್ನು ಸಿದ್ಧಪಡಿಸಿ ಇರಿಸುವ ಮೂಲಕ ನಾಡಿಗೆ ಮಾದರಿಯಾಗಿದ್ದಾರೆ.

ಈ ಪುಟ್ಟ ಸ್ನೇಹಿತರು ತಮ್ಮ ಹಿತ್ತಿಲಿನಲ್ಲಿ ಮತ್ತು ಮರಗಳ ರೆಂಬೆ ಕೊಂಬೆಗಳಲ್ಲಿ ಕುಡಿಕೆಗಳನ್ನು ಇರಿಸಿ ಅವುಗಳಲ್ಲಿ ಪಕ್ಷಿಗಳಿಗೆ ಕುಡಿಯಲು ನೀರನ್ನು ಹಾಕಿ ಜೊತೆಗೆ ನೆರಳು ನೀಡುವ ಮೂಲಕ ಪರಿಸರದ ಮೇಲಿನ ತಮ್ಮ ಪ್ರೀತಿ, ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಓದುವ ಶಿಬಿರದ ಭಾಗವಾಗಿ ಹೆಸರು ನೋಂದಾಯಿಸಿಕೊಂಡಿರುವ ಸುಮಾರು 62 ಮಂದಿ ಮಕ್ಕಳು ತಮ್ಮ ಮನೆಗಳಲ್ಲಿ ಮತ್ತು ಪರಿಸರಗಳಲ್ಲಿ ನೀರಿನ ಕುಡಿಕೆಗಳನ್ನು ಸಿದ್ಧಪಡಿಸಿಕೊಂಡರು.

ಬಾಲ ವೇದಿಕೆಯ ಅಧ್ಯಕ್ಷೆ ದಿಯಾ ಮಧು ಮತ್ತು ಕಾರ್ಯದರ್ಶಿ ಉಲ್ಲಾಸ್ ಅವರು ಕಾರ್ಯ ಚಟುವಟಿಕೆಗಳಿಗೆ ನೇತೃತ್ವ ನೀಡಿದ್ದಾರೆ. ಉಷ್ಣತೆ ತೀವ್ರಗೊಂಡಿರುವುದರಿಂದ ಪಕ್ಷಿಗಳಿಗೆ ಕುಡಿಯಲು ನೀರು ಲಭಿಸುತ್ತಿಲ್ಲ. ಈ ಬೇಸಿಗೆಯಲ್ಲಿ ಪಕ್ಷಿಗಳಿಗೆ ಸಾಧ್ಯವಾದಷ್ಟು ಸಹಾಯ ಒದಗಿಸಲು ಎಲ್ಲರೂ ಮುಂದೆ ಬರಬೇಕೆಂದು ಬಾಲ ವೇದಿಕೆಯ ಕಾರ್ಯಕರ್ತರು ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿದ್ದಾರೆ.







ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಹೈದರಾಬಾದ್	5	2	3	0	4	+0.576
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	5	1	4	0	2	-1.076
ಕೆಕೆಆರ್	5	0	4	1	1	-1.383

ಹಸಿರು ಜೆರ್ಸಿಯಲ್ಲಿ ಆರ್‌ಸಿಬಿ | ಭರವಸೆಯಲ್ಲಿ ರಜತ್ ಪಡೆ | ದಿಲ್ಲಿಗೆ ಗೆಲುವಿನ ತವಕ

ಇಂದು ಕ್ಯಾಪಿಟಲ್ಸ್ VS ಆರ್‌ಸಿಬಿ

ಬೆಂಗಳೂರು: ವಿಜಯದ ಓಟದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತನ್ನ ನಾಗಾಲೋಟವನ್ನು ಹಸಿರು ಜೆರ್ಸಿ ಪಂದ್ಯಕ್ಕೆ ವಿಸ್ತರಿಸುವ ವಿಶ್ವಾಸದಲ್ಲಿದೆ. ಸೋಲಿನಿಂದ ಹೊರಬರಲು ಯತ್ನಿಸುತ್ತಿರುವ ದಿಲ್ಲಿ ಕ್ಯಾಪಿಟಲ್ಸ್ ತಂಡವು ರಜತ್ ಪಡೆಯನ್ನು ಶನಿವಾರದ ಸೂಪರ್ ಕದನಗಳ ಮೊದಲ ಪಂದ್ಯದಲ್ಲಿ ಎದುರಿಸಲಿದೆ.

ಈಗಾಗಲೇ ಪಂದ್ಯಾವಳಿಯಲ್ಲಿ ಭಾರೀ ಮುನ್ನಡೆ ಸಾಧಿಸಿರುವ ಬೆಂಗಳೂರು ಅಗ್ರ ಎರಡರಲ್ಲೇ ಕಾಣಿಸಿಕೊಂಡಿದೆ. ದಿಲ್ಲಿ ಕ್ಯಾಪಿಟಲ್ಸ್ ಸತತ ಸೋಲಿನೊಂದಿಗೆ ಹಿನ್ನಡೆ ಅನುಭವಿಸಿದೆ. ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡರಲ್ಲೂ ಅಲ್ಪ ಹಿನ್ನಡೆ ಅನುಭವಿಸಿರುವ ದಿಲ್ಲಿ ಕ್ಯಾಪಿಟಲ್ಸ್ ಸಮತೋಲಿತ ಬೆಂಗಳೂರು ತಂಡವನ್ನು ಎದುರಿಸಲು ಸಜ್ಜಾಗಿದೆ.

ಶುಕ್ರವಾರದಂದು ಯಥಾಪ್ರಕಾರ ಅಭ್ಯಾಸ ಜರುಗಿತು. ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್ ಮತ್ತೊಮ್ಮೆ ಅಬ್ಬರದ ಬ್ಯಾಟಿಂಗ್ ಮಾಡಿದರು. ಇತ್ತ ದಿಲ್ಲಿ ಪರ ಕೆಎಲ್ ರಾಹುಲ್ ಬ್ಯಾಟಿಂಗ್ ಮಾಡುತ್ತಿದ್ದರು. ಕಳೆದ ಬಾರಿ ಬೆಂಗಳೂರಲ್ಲಿ ಪಂದ್ಯ ನಡೆದಾಗ ರಾಹುಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದರು.

ಆರ್‌ಸಿಬಿಗೆ ಆತ್ಮವಿಶ್ವಾಸ: ಹೈದರಾಬಾದ್, ಚೆನ್ನೈ, ಲಖನೌ ಹೀಗೆ ಬಂದ ತಂಡಗಳನ್ನೆಲ್ಲಾ ತವರಿನಲ್ಲಿ ಸೋಲಿಸಿರುವ ಬೆಂಗಳೂರು ಎಲ್ಲಾ ಪಂದ್ಯಗಳಲ್ಲಿ ಏಕಪಕ್ಷೀಯವಾಗಿ ಮೇಲುಗೈ ಸಾಧಿಸಿದೆ. ರಾಜಸ್ಥಾನ ಪಂದ್ಯದ ನಂತರ ಪುಟಿದೆದ್ದಿರುವ ರಜತ್ ಪಡೆ ಬಲಿಷ್ಠ ಬ್ಯಾಟಿಂಗ್ ಹಾಗೂ ಅನುಭವಿ ಬೌಲಿಂಗ್ ಬಳಗವನ್ನು ಹೊಂದಿದೆ. ರಜತ್ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಸಾಲ್ಟ್ ಕೈಜೋಡಿಸಬೇಕಿದೆ. ವಿರಾಟ್ ಕೊಹ್ಲಿ ಮೊದಲ ಪಂದ್ಯದಿಂದಲೂ ಆಕ್ರಮಣಕಾರಿ ಬ್ಯಾಟಿಂಗ್ ಮಾಡುತ್ತಿರುವುದು ತಂಡಕ್ಕೆ ಆನೆ ಬಲ. ತಂಡದಲ್ಲಿ ಹೆಚ್ಚುವರಿ ಬ್ಯಾಟರ್‌ಗಳಿದ್ದಾರೆ. 7 ವಿಕೆಟ್ ಬಿದ್ದರೂ ಸಿಕ್ಸರ್ ಬಾರಿಸುವ ಸಾಮರ್ಥ್ಯ ಹೊಂದಿರುವುದೇ ತಂಡದ ದೊಡ್ಡ ಬಲ. ಬೌಲಿಂಗ್‌ನಲ್ಲಿ ಕೃಣಾಲ್, ಸುಯಶ್ ಸ್ಪಿನ್ ವಿಭಾಗದಲ್ಲಿ ಮಿಂಚಿದರೆ, ಡಫಿ, ಭುವನೇಶ್ವರ್ ಕುಮಾರ್ ಸೇರಿದಂತೆ ಪ್ರಮುಖರು ವಿಶ್ವಾಸ ಹೆಚ್ಚಿಸಿದ್ದಾರೆ. ಕಳೆದ ಪಂದ್ಯದಲ್ಲಿ ಹ್ಯಾಜೆಲ್ವುಡ್ ಮಾರಕ ಬೌಲಿಂಗ್ ದಾಳಿ ಮಾಡಿದ್ದರು. ತವರಲ್ಲಿ ಯುವ ವೇಗಿ ರಸಿಖ್ ಸಲಾಂ ಕೂಡ ಮಿಂಚಿರುವುದು ವಿಶ್ವಾಸ ಹೆಚ್ಚಿಸಿದೆ.

ದಿಲ್ಲಿಗೆ ಗೆಲುವಿನ ಆಸೆ: ಇತ್ತ ದಿಲ್ಲಿ ತಂಡ ಲಯಕ್ಕಾಗಿ ಪರದಾಡುತ್ತಿದೆ. ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ನಟರಾಜನ್, ಮುಖೇಷ್ ಮಿಂಚಿದ್ದಾರೆ. ಸ್ಪಿನ್ನರ್‌ಗಳು ಅಲ್ಪ ದುಬಾರಿಯಾಗಿದ್ದಾರೆ. ರಾಹುಲ್ ಒಂದು ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದ್ದಾದರೂ ನಿರೀಕ್ಷಿತ ಪ್ರದರ್ಶನ ಪ್ರತಿ ಪಂದ್ಯದಲ್ಲೂ ಬಂದಿಲ್ಲ. ನಿಸ್ಸಂಕಾ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದ್ದಾರೆ. ಸಮೀರ್ ರಿಜ್ವಿ, ಅಕ್ಷರ್ ಪಟೇಲ್ ಕೂಡ ಅಲ್ಪ ಕೊಡುಗೆ ನೀಡಿದ್ದಾರೆ. ಆದರೆ ಫಿನಿಶಿಂಗ್‌ನಲ್ಲಿ ದಿಲ್ಲಿ ಹಿನ್ನಡೆ ಅನುಭವಿಸಿದೆ. ಎರಡು ಪಂದ್ಯಗಳಲ್ಲಿ ಕೊನೆಯ ಕ್ಷಣದ ಸೋಲು ಕಂಡಿದೆ. ಎರಡು ಗೆಲುವು ಹಾಗೂ ಎರಡು ಸೋಲುಗಳೊಂದಿಗೆ ದಿಲ್ಲಿ ಸಮಾನ ಫಲಿತಾಂಶ ಹೊಂದಿದ್ದು, ಚೇತರಿಸಿಕೊಳ್ಳುವ ತವಕದಲ್ಲಿದೆ.

ಹಸಿರು ಜೆರ್ಸಿಯಲ್ಲಿ ಆರ್‌ಸಿಬಿ: ಪಂದ್ಯದಲ್ಲಿ ಆರ್‌ಸಿಬಿ ತನ್ನ ಪ್ರಸಿದ್ಧ ಹಸಿರು ಜೆರ್ಸಿಯನ್ನು ಧರಿಸುವ ಮೂಲಕ ಗ್ರೀನ್ ಇನಿಶಿಯೇಟಿವ್' ಸಂದೇಶವನ್ನು ಹರಡಲಿದೆ. ಈಗಾಗಲೇ 8 ಅಂಕಗಳೊಂದಿಗೆ ಉತ್ತಮ ಪ್ರದರ್ಶನ ನೀಡುತ್ತಿರುವ ಆರ್‌ಸಿಬಿ, ಟೂರ್ನಿಯಲ್ಲಿ ತನ್ನ ಪ್ರಾಬಲ್ಯವನ್ನು ಮತ್ತಷ್ಟು ಬಲಪಡಿಸಲು ಎದುರು ನೋಡುತ್ತಿದೆ. ಹೀಗಿರುವಾಗ ಪ್ರತಿ ವರ್ಷದಂತೆ ಈ ಬಾರಿಯೂ ಮಧ್ಯಾಹ್ನದ ಪಂದ್ಯಕ್ಕೆ ಆರ್‌ಸಿಬಿ ಹಸಿರು ಜೆರ್ಸಿಯಲ್ಲಿ ಕಾಣಿಸಿಕೊಳ್ಳಲಿದೆ.



ಮತ್ತೆ ಮಿಂಚಿದ್ದು ಖುಷಿ ವಿಚಾರ: ಜೋಶ್

ಗಾಯದ ಬಳಿಕ ಮತ್ತೆ ತಂಡಕ್ಕೆ ಮರಳಿ ಕೊಡುಗೆ ನೀಡುವುದು ಸಂತೋಷಕರ. ಆ ಸಮಯದಲ್ಲಿ ರಿಕವರಿ ಪ್ರಕ್ರಿಯೆಯ ಮಹತ್ವವನ್ನು ಅರಿತುಕೊಂಡೆ, ಎಂದು ತಂಡದ ಪ್ರಮುಖ ವೇಗಿ ಜೋಶ್ ಹ್ಯಾಜೆಲ್ವುಡ್ ಹೇಳಿದರು. ಪಂದ್ಯಕ್ಕೂ ಮುನ್ನ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ತಂಡದ ನಾಯಕ ರಜತ್ ಪಾಟಿದಾರ್ ನಾಯಕತ್ವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪಾಟಿದಾರ್ ಶಾಂತವಾಗಿ ಆಟವನ್ನು ನಿಯಂತ್ರಿಸುತ್ತಿದ್ದಾರೆ ಮತ್ತು ದಿನದಿಂದ ದಿನಕ್ಕೆ ಉತ್ತಮ ನಾಯಕನಾಗಿ ಬೆಳೆದಿದ್ದಾರೆ, ಎಂದರು.

ಕೊಹ್ಲಿ ನಮಗೆ ಬಲ ತರುತ್ತಾರೆ

ಹಿಂದಿನ ಪಂದ್ಯದಲ್ಲಿ ಮೊದಲ ಬಾರಿ ಇಂಪ್ಯಾಕ್ಟ್ ಆಟಗಾರನಾಗಿ ಆಡಿದ ವಿರಾಟ್ ಕೊಹ್ಲಿ ಕುರಿತು ಮಾತನಾಡಿದ ಅವರು, ಅವರು ಖಂಡಿತ ಆಡುತ್ತಾರೆ. ಮೈದಾನದಲ್ಲಿ ಅವರ ಎನರ್ಜಿ ಮತ್ತು ಫೀಲ್ಡಿಂಗ್ ತಂಡಕ್ಕೆ ಮಹತ್ವದ ಬಲ, ಎಂದರು. ಟಿ20 ಕ್ರಿಕೆಟ್‌ನಲ್ಲಿ ಯಶಸ್ಸಿನ ಮಂತ್ರದ ಬಗ್ಗೆ ಮಾತನಾಡಿದ ಜೋಶ್, ನನ್ನ ಶಕ್ತಿ ಎಂದರೆ ನಿರಂತರವಾಗಿ ಕಠಿಣ ಲೆಂತ್‌ನಲ್ಲಿ ಬೌಲಿಂಗ್ ಮಾಡುವುದು. ಒತ್ತಡದ ಸಂದರ್ಭದಲ್ಲಿಯೂ ನಿಖರವಾಗಿ ಅನುಷ್ಠಾನಗೊಳಿಸುವುದು ಮುಖ್ಯ ಎಂದು ಹೇಳಿದರು.

ಪಂದ್ಯದ ವಿವರ

ಆರ್‌ಸಿಬಿ-ದಿಲ್ಲಿ ಕ್ಯಾಪಿಟಲ್ಸ್
ಯಾವಾಗ: ಶನಿವಾರ, **ಎಲ್ಲಿ:** ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು, **ಸಮಯ:** ಮಧ್ಯಾಹ್ನ 3:30

ಪಿಚ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.

ಕಿರುಸುದ್ದಿ

ಬ್ಯಾಡ್ಮಿಂಟನ್: ಉಬರ್ ಕಪ್‌ಗಿಲ್ಲ ತ್ರಿಸಾ ಜಾಲಿ-ಗಾಯತ್ರಿ



ಹೊಸದಿಲ್ಲಿ: ಭಾರತದ ಪ್ರಮುಖ ಮಹಿಳಾ ಡಬಲ್ಸ್ ಜೋಡಿ ತ್ರಿಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಮುಂಬರುವ ಉಬರ್ ಕಪ್ ಫೈನಲ್ಸ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಭಾರತೀಯ ಬ್ಯಾಡ್ಮಿಂಟನ್ ಸಂಘ ಘೋಷಿಸಿದೆ.

ಇತ್ತೀಚಿನ ಬಿ ಡಬ್ಲ್ಯು ಎಫ್ ರ‍್ಯಾಂಕಿಂಗ್‌ನಲ್ಲಿ 30ನೇ ಸ್ಥಾನದಲ್ಲಿರುವ ಈ ಜೋಡಿ, ಸ್ವಿಸ್ ಓಪನ್ ವೇಳೆ ಟ್ರಿಸಾ ಭುಜದ ಗಾಯಕ್ಕೆ ಒಳಗಾದ ನಂತರದಿಂದ ಆಡುತ್ತಿಲ್ಲ. ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್‌ಗೆ ಸಿದ್ಧರಾಗಿದ್ದರೂ, ಸ್ಪರ್ಧೆಗೆ ಮುನ್ನವೇ ತ್ರಿಸಾ ಮತ್ತೆ ಗಾಯಗೊಂಡರು. ಈ ಬಗ್ಗೆ ಮಾತನಾಡಿರುವ ಭಾರತದ ಡಬಲ್ಸ್ ಕೋಚ್ ಬಿ ಸುಮೀತ್ ರೆಡ್ಡಿ, ತ್ರಿಸಾ ಅಭ್ಯಾಸದ ವೇಳೆ ಸಂಗಾತಿಯ ಕಾಲಿಗೆ ತಗುಲಿ ಕಾಲಿಗೆ ಗಾಯ ಮಾಡಿಕೊಂಡಿದ್ದಾರೆ. ಇದು ದೊಡ್ಡ ಗಾಯವಲ್ಲ, ನಾಲ್ಕು ವಾರಗಳಲ್ಲಿ ಚೇತರಿಸಿಕೊಳ್ಳುವ ಸಾಧ್ಯತೆ ಇದೆ. ಅವರ ಬದಲಿಗೆ ಶ್ರುತಿ ಮಿಶ್ರಾ ಮತ್ತು ಪ್ರಿಯಾ ಕೊಂಜೆಂಗ್ಬಾಮ್ ಜೋಡಿಯನ್ನು ತಂಡಕ್ಕೆ ಸೇರಿಸಲಾಗಿದೆ. ಈ ಸ್ಪರ್ಧೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ದಲ್ಲಿ ಏಪ್ರಿಲ್ 24ರಿಂದ ಮೇ 3ರವರೆಗೆ ನಡೆಯಲಿದೆ. ಇನ್ನೊಂದು ಡಬಲ್ಸ್ ಜೋಡಿಯಾಗಿ ಕವಿಪ್ರಿಯಾ ಸೆಲ್ವಂ ಮತ್ತು ಸಿಮ್ರಾನ್ ಸಿಂಗ್ ಕೂಡ ತಂಡದಲ್ಲಿದ್ದಾರೆ.

ಭಾರತ ತಂಡದಲ್ಲಿ ಯಾರ‍್ಯಾರು?: ತಂಡದ ನಾಯಕತ್ವವನ್ನು ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ ವಿ ಸಿಂಧು ವಹಿಸಲಿದ್ದಾರೆ. ಜೊತೆಗೆ ಯುವ ಆಟಗಾರ್ತಿಯರಾದ ಉನ್ನತಿ ಹೂಡಾ, ತನ್ವಿ ಶರ್ಮ, ದೇವಿಕಾ ಸಿಹಾಗ್ ಮತ್ತು ಇಶಾರಾಣಿ ಸಿಂಗಲ್ಸ್ ವಿಭಾಗದಲ್ಲಿ ತಂಡಕ್ಕೆ ಬಲ ತುಂಬಲಿದ್ದಾರೆ. ಇನ್ನೂ ಅನುಭವದ ದೃಷ್ಟಿಯಿಂದ ತನಿಷಾ ಕ್ರಾಸ್ಟೊ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹ್ಯಾಂಬರ್ಗ್ ಓಪನ್: ವೀರ ಚೋಟ್ರಾನಿ ಕ್ವಾರ್ಟರ್‌ಗೆ

ಹೊಸದಿಲ್ಲಿ: ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ನಡೆಯುತ್ತಿರುವ ಸ್ಕ್ವ್ಯಾಶ್ ಹ್ಯಾಂಬರ್ಗ್ ಓಪನ್‌ನಲ್ಲಿ ಭಾರತದ ವೀರ ಚೋಟ್ರಾನಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಪುರುಷರ ದ್ವಿತೀಯ ಸುತ್ತಿನಲ್ಲಿ ಜರ್ಮನಿಯ ಎಂಟನೇ ಸೀಡ್ ರಫೇಲ್ ಕ್ಯಾಂಡ್ರಾ ಅವರನ್ನು 11-8, 11-7, 11-7 ಅಂತರದಲ್ಲಿ ಸೋಲಿಸಿ ವೀರ ಮುಂದಿನ ಹಂತಕ್ಕೇರಿದರು. ಆದರೆ ಇತರ ಭಾರತೀಯ ಆಟಗಾರರಿಗೆ ಈ ಸುತ್ತಿನಲ್ಲಿ ನಿರಾಸೆ ಎದುರಾಯಿತು. ಐದನೇ ಸೀಡ್ ಅಭಯ್ ಸಿಂಗ್ ಇಂಗ್ಲೆಂಡ್‌ನ ಸ್ಯಾಮ್ ಟಾಡ್ ವಿರುದ್ಧ 9-11, 11-7, 4-11, 2-11 ಅಂತರದಲ್ಲಿ ಸೋತರು. ಏಳನೇ ಸೀಡ್ ರಮಿತ್ ಟಂಡನ್ ಹಂಗೇರಿಯ ಬಲಾಝು ಫಾರ್ಕಾಸ್ ವಿರುದ್ಧ 10-12, 11-4, 5-11, 9-11 ಅಂತರದಲ್ಲಿ ಸೋಲು ಕಂಡರು. ಮಹಿಳಾ ವಿಭಾಗದಲ್ಲಿ ಭಾರತದ ಮಾಜಿ ವಿಶ್ವ ನಂ.10 ಜೋಷ್ನಾ ಚಿನ್ನಪ್ಪ ನ್ಯೂಜಿಲ್ಯಾಂಡ್‌ನ ಎಂಟನೇ ಸೀಡ್ ಜೊಯೆಲ್ ಕಿಂಗ್ ವಿರುದ್ಧ 11-9, 11-7, 9-11, 11-4 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಂದರು.

ಪಂಜಾಬ್‌ಗೆ ಸತತ ನಾಲ್ಕನೇ ಗೆಲುವು | ಶ್ರೇಯಸ್ ಅಯ್ಯರ್ ಆರ್ಭಟ | ಮುಂಬೈಗೆ ಮತ್ತೆ ಸೋಲು

ಪ್ರಭಸಿಮ್ರನ್ ಪ್ರಾಬಲ್ಯದ ಮುಂದೆ ಮಂಕಾದ ಮುಂಬೈ



ಮುಂಬೈ: ಬಾನೆತ್ತರದ ಸಿಕ್ಸರ್‌ಗಳ ಮೂಲಕ ಮುಂಬೈ ಬೌಲರ್‌ಗಳ ಬೆವರಿಳಿಸಿದ ಪ್ರಭಸಿಮ್ರನ್ ಸಿಂಗ್ ಮತ್ತು ಶ್ರೇಯಸ್ ಅಯ್ಯರ್ ತವರಲ್ಲಿ ಹಾರ್ದಿಕ್ ಪಡೆಯನ್ನು ಸೋಲಿಸಿದರು.

ಆರಂಭಿಕ ಆಟಗಾರ(ಡಿಕಾಕ್) V/S ಆರಂಭಿಕ ಆಟಗಾರ (ಪ್ರಭಸಿಮ್ರನ್) ಪಂದ್ಯದಲ್ಲಿ ಪಂಜಾಬ್ 8 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಇದರೊಂದಿಗೆ ಆರ್‌ಸಿಬಿ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿರುವ ಶ್ರೇಯಸ್ ಪಡೆ ಗೆಲುವಿನೋಟ ಮುಂದುವರಿಸಿದೆ. ಶುಕ್ರವಾರದ ಪಂದ್ಯದಲ್ಲಿ ಟಾಸ್ ಗೆದ್ದ ಬ್ಯಾಟಿಂಗ್ ಆಹ್ವಾನ ಕೊಟ್ಟ ಪಂಜಾಬ್ ಮುಂಬೈ ತಂಡವನ್ನು 195 ರನ್‌ಗೆ ತಡೆಯಿತು. ಡಿಕಾಕ್ ಶತಕ ಬಾರಿಸಿದರು. ನಮನ್ ಅರ್ಧಶತಕ ಬಾರಿಸಿದರು. ಅರ್ಶದೀಪ್ ಸಿಂಗ್ 3 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಪಂಜಾಬ್ 16.3 ಓವರ್‌ಗಳಲ್ಲೇ ಪಂದ್ಯ ಮುಗಿಸಿತು. ಪ್ರಭಸಿಮ್ರನ್ ಅಜೇಯ 80 ರನ್ ಬಾರಿಸಿದರೆ, ಶ್ರೇಯಸ್ ಅಯ್ಯರ್ 66 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮುಂಬೈ ಪರ ಘಾಜ್ನೀಫರ್ 2 ವಿಕೆಟ್ ಪಡೆದುಕೊಂಡರು.

ಪ್ರಭಸಿಮ್ರನ್ ಸಿಂಗ್ ಪಂದ್ಯದ ಹೀರೋ ಅನ್ನಿಸಿಕೊಂಡರು. ಶ್ರೇಯಸ್ ಅಯ್ಯರ್ ಕುಡ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಇತ್ತ ಡಿಕಾಕ್ ಶತಕದಾಟವಾಡಿದರು. ಅರ್ಶದೀಪ್ ಗೆಲುವಿನಲ್ಲಿ ಮಿಂಚಿದರು.

ಪಂಜಾಬ್ ಅಬ್ಬರ: ಪಂಜಾಬ್ ಪವರ್‌ಪ್ಲೇನಲ್ಲಿ ಅಬ್ಬರಿಸಿತು. ಪ್ರಿಯಾಂಶ್ ಆರ್ಯ ಹಾಗೂ ಪ್ರಭಸಿಮ್ರನ್ ಸಿಂಗ್ ಬೌಂಡರಿ ಬಾರಿಸುವತ್ತ ಸಾಗಿದರು. ಆದಾಗ್ಯೂ ಘಾಜ್ನೀಫರ್ ಪ್ರಿಯಾಂಶ್‌ಗೆ ಪೆವಿಲಿಯನ್ ಹಾದಿ ತೋರಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಕೂಪರ್ ಕೊನೊಲಿ ಸೆಟ್ ಆಗಿ ಇನ್ನೇನು ಸ್ಫೋಟಕ ಹೊಡೆತಕ್ಕೆ ಮುಂದಾಗುವಷ್ಟರಲ್ಲಿ ಎರಡನೇ ವಿಕೆಟ್ ಪಡೆದರು ಘಾಜ್ನೀಫರ್. ಇಷ್ಟಾದರೂ ಪ್ರಭಸಿಮ್ರನ್ ಸಿಂಗ್ ಆರ್ಭಟ ನಿಲ್ಲಲಿಲ್ಲ. ಇಬ್ಬರ ಆಟದೊಂದಿಗೆ ಪಂಜಾಬ್ ಪವರ್‌ಪ್ಲೇನಲ್ಲಿ 60 ರನ್ ಗಳಿಸಿತು.

ಮಧ್ಯಮ ಓವರ್‌ಗಳಲ್ಲಿ: ಮಧ್ಯಮ ಕ್ರಮಾಂಕದಲ್ಲಿ ಬಂದ ಶ್ರೇಯಸ್ ಅಯ್ಯರ್ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಆದರೆ ಇನ್ನೊಂದು ಬದಿಯಲ್ಲಿ ಪ್ರಭಸಿಮ್ರನ್ ಆಟವೇ ನಡೆಯಿತು. ಬೌಂಡರಿಗಳೊಂದಿಗೆ ಅಬ್ಬರಿಸಿದ ಅವರು, ಪಂದ್ಯದ ಗತಿ ತಮ್ಮ ತಂಡದ ಪರ ಇಟ್ಟರು. 23 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ಅಬ್ಬರ ಮುಂದುವರಿಸಿದರು. ಕಳಪೆ ಫೀಲ್ಡಿಂಗ್ ಮಾಡಿದ ಮುಂಬೈ ಹಿನ್ನಡೆ ಅನುಭವಿಸಿತು. ಇತ್ತ ಸೆಟ್ ಆಗಿದ್ದ ಶ್ರೇಯಸ್ ಅಯ್ಯರ್ ಕೂಡ ಬೌಂಡರಿ ಬಾರಿಸುವತ್ತ ಸಾಗಿದರು. ಪ್ರಭಸಿಮ್ರನ್ ಬಾನೆತ್ತರದ ಸಿಕ್ಸರ್‌ಗಳೊಂದಿಗೆ ಮುಂಬೈಗೆ ಗೆಲುವಿನಿಂದ ದೂರ ಮಾಡಿದರು. ಶ್ರೇಯಸ್ ಅವರದ್ದೂ ಮಿಂಚಿನಾಟ. ಬೂಮ್ರಾ ಸೇರಿದಂತೆ ಪ್ರಮುಖ ಬೌಲರ್‌ಗಳನ್ನು ದಂಡಿಸಿ ಈ ಜೋಡಿ ಪಂದ್ಯವನ್ನು ಗೆಲ್ಲಿಸಿತು. ಪ್ರಭಸಿಮ್ರನ್ ಹಾಗೂ ಶ್ರೇಯಸ್ ಡೆತ್ ಓವರ್ ವರೆಗೂ ಪಂದ್ಯವನ್ನು ಬಿಡಲೇ ಇಲ್ಲ. ಶ್ರೇಯಸ್ 64ಕ್ಕೆ ವಿಕೆಟ್ ಕಳೆದುಕೊಂಡರೂ ಪ್ರಭಸಿಮ್ರನ್ ಪಂದ್ಯವನ್ನು ಗೆಲ್ಲಿಸಿದರು. ಒಟ್ಟು 39 ಎಸೆತ ಎದುರಿಸಿದ ಅವರು, 2 ಸಿಕ್ಸರ್ ಮತ್ತು 11 ಸ್ಫೋಟಕ ಬೌಂಡರಿಗಳೊಂದಿಗೆ ಮಿಂಚಿದರು.

ಸಂಕ್ಷಿಪ್ತ ಸ್ಕೋರ್:

ಮುಂಬೈ 20 ಓವರ್‌ಗಳಲ್ಲಿ 195/6: ಡಿಕಾಕ್ 112*, ನಮನ್ 50; ಅರ್ಶದೀಪ್ 22/3
ಪಂಜಾಬ್ 16.3 ಓವರ್‌ಗಳಲ್ಲಿ 198/3: ಪ್ರಭಸಿಮ್ರನ್ 80*, ಶ್ರೇಯಸ್ 66; ಘಾಜ್ನೀಫರ್ 31/2

ಕೊನೆಗೂ ಮಿಂಚಿದ ಕ್ಯಾಮರೋನ್ ಗ್ರೀನ್

ಅಹಮದಾಬಾದ್: ಕುಸಿದ ಕೆಕೆಆರ್‌ಗೆ ಕ್ಯಾಮರೋನ್ ಗ್ರೀನ್ ಆಸರೆ ಸಿಕ್ಕ ನಂತರ ಕೆಕೆಆರ್ ಸ್ಪರ್ಧಾತ್ಮಕ ಗುರಿ ನಿರ್ಮಿಸಲು ಸಾಧ್ಯವಾಯಿತು. ಗುಜರಾತ್ ತಂಡವನ್ನು ಎದುರಿಸಿದ್ದ ರಹಾನೆ ಪಡೆ ಸತತ ಸೋಲುಗಳ ನಂತರ ಕೊನೆಗೂ ಗ್ರೀನ್ ಆಸರೆ ಪಡೆಯಿತು. ಆದಾಗ್ಯೂ ದೊಡ್ಡ ಸ್ಕೋರ್ ನತ್ತ ಸಾಗುತ್ತಿದ್ದ ತಂಡವನ್ನು ವೇಗಿಗಳು ತಡೆದ ನಂತರ 20 ಓವರ್‌ಗಳಲ್ಲಿ 180 ರನ್‌ಗಳಿಗೆ ಆಲೌಟ್ ಆಯಿತು.

ಅಹಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಭಾರೀ ಆಘಾತಕ್ಕೊಳಗಾಯಿತು. ಕಳೆದ ಪಂದ್ಯಗಳಲ್ಲಿ ತೀರಾ ಹಿನ್ನಡೆ ಅನುಭವಿಸಿದ್ದ ಗ್ರೀನ್ (79, 55ಎ, 7ಬೌ, 4ಸಿ) ಉತ್ತಮ ಬ್ಯಾಟಿಂಗ್ ಮಾಡಿದ ನಂತರ ಸ್ಪರ್ಧೆ ನೀಡಬಹುದಾದ ಸ್ಕೋರ್ ನಿರ್ಮಿಸಿದೆ.

ಆರಂಭಿಕ ಕುಸಿತ: ಬ್ಯಾಟಿಂಗ್ ಆಹ್ವಾನ ಪಡೆದ ಕೋಲ್ಕತ್ತಾ ನೈಟ್ ರೈಡರ್ಸ್ ಆರಂಭಿಕ ಆಘಾತ ಎದುರಿಸಿತು. ಫಿನ್ ಆಲೆನ್ ಬದಲಿಗೆ ಕಣಕ್ಕಿಳಿದ ಸೈಫರ್ಟ್ ಸ್ಫೋಟಕ ಬ್ಯಾಟಿಂಗ್ ಮಾಡಲೆತ್ನಿಸಿದರು. ಆದರೆ ನಾಯಕ ರಹಾನೆ ಮಾತ್ರ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಭರವಸೆಯ ಬ್ಯಾಟರ್ ರಘುವಂಶಿ ಬೌಂಡರಿಗಳೊಂದಿಗೆ ಅಬ್ಬರಿಸುವ ವಿಶ್ವಾಸ ತೋರಿಸಿದರೂ ಅವರಾಟ 8 ರನ್‌ಗೆ ಮಾತ್ರ ಸೀಮಿತವಾಗಿತ್ತು. ಸೈಫರ್ಟ್ ಆಟ 19 ರನ್‌ಗೆ ನಿಂತಿತು. ಮಧ್ಯಮ ಕ್ರಮಾಂಕದಲ್ಲಿ ಬಂದ ಗ್ರೀನ್ ಸೆಟ್ ಆಗುವತ್ತ ಸಾಗಿದರು. ಅಲ್ಲಿಗೆ ಪವರ್‌ಪ್ಲೇ ಮುಗಿಯಿತು. ಕೆಕೆಆರ್ 3 ವಿಕೆಟ್ ಕಳೆದುಕೊಂಡು 37 ರನ್‌ಗಳಿಸಿತ್ತು.

ಗ್ರೀನ್ ಆಸರೆ: ಮಧ್ಯಮ ಓವರ್‌ಗಳಲ್ಲಿ ಗ್ರೀನ್ ನಾನ್‌ಸ್ಟ್ರೈಕ್‌ನಲ್ಲಿ ನಿಲ್ಲವಷ್ಟರಲ್ಲಿ ರೋಮನ್ ಪೋವೆಲ್, ಅಂಕುಲ್ ರಾಯ್ ಮತ್ತು ರಿಂಕು ಸಿಂಗ್ ಕೂಡ ವಿಕೆಟ್ ಒಪ್ಪಿಸಿದರು. ಸೆಟ್ ಆದ ಗ್ರೀನ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಸ್ಟ್ರೈಕ್‌ರೇಟ್ ಹಿಗ್ಗಿಸಿಕೊಂಡರು. ಗಗನದೆತ್ತರದ ಸಿಕ್ಸರ್ ಹಾಗೂ ಅಬ್ಬರದ ಬೌಂಡರಿಗಳೊಂದಿಗೆ ಮಿಂಚಿದರು. ಅಲ್ಲಿಗೆ ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. ಕೆಕೆಆರ್ 120 ರನ್‌ಗಳಿಸಿತು.

ದಿಢೀರ್ ಕುಸಿತ: ಗ್ರೀನ್ ಸೆಟ್ ಆಗಿದ್ದರು. ರಮಣ್‌ದೀಪ್ ಬಂದ ತಕ್ಷಣಕ್ಕೆ ಬೌಂಡರಿಗಳೊಂದಿಗೆ ಅಬ್ಬರಿಸಿದರು. ಇನ್ನೇನು ಕೆಕೆಆರ್ ಡೆತ್ ಓವರ್‌ಗಳಲ್ಲಿ ರನ್ ಹೊಳೆ ಹರಿಸುತ್ತದೆ ಅನ್ನುವಷ್ಟರಲ್ಲಿ ಗುಜರಾತ್ ವೇಗಿಗಳು ಕಡಿವಾಣ ಹಾಕಿದರು. ಸಿರಾಜ್ ರಮಣ್‌ದೀಪ್ ವಿಕೆಟ್ ಪಡೆದರು. ಸುನಿಲ್ ನರೈನ್‌ಗೂ ಖೆಡ್ಡಾ ತೋಡಿದರು. ಬಂದ ಬ್ಯಾಟರ್‌ಗಳೆಲ್ಲರೂ ಕ್ಯಾಚ್ ಆದರು. ಗ್ರೀನ್‌ಗೆ ಅವಕಾಶ ಸಿಕ್ಕಾಗ ಒಂದೆರಡು ಬೌಂಡರಿಗಳನ್ನು ಬಾರಿಸಿದರು. ಕೊನೆಯ ಎರಡು ಓವರ್‌ಗಳಲ್ಲಿ 7 ರನ್ ಮಾತ್ರ ಬಂದವು. ಪವರ್‌ಪ್ಲೇನಲ್ಲಿ ಕೆಕೆಆರ್ 23 ರನ್‌ಗಳಿಸಿತು 4 ವಿಕೆಟ್ ಕಳೆದುಕೊಂಡಿತು.

ಗ್ರ್ಯಾಂಡ್‌ಮಾಸ್ಟರ್ ಸಾಧನೆ ಮೆಟ್ಟಿಲಲ್ಲಿದೆ ಸ್ಫೂರ್ತಿದಾಯಕ ಕತೆ

ವೈಶಾಲಿಯ ವಿಜಯದ ಕತೆ

ಚೆನ್ನೈ: ಮನೆಯಲ್ಲಿ ಕೂತು ಟಿವಿ ನೋಡುತ್ತಿದ್ದ ಬಾಲಕಿಯೊಬ್ಬಳಿಗೆ ಪಾಲಕರು ಚೆಸ್ ಕ್ಲಾಸಿಗೆ ಕಳುಹಿಸುತ್ತಾರೆ. ಚೆಸ್ ಎಂಬ ಜಾಣರಾಟಕ್ಕೆ ಬಿದ್ದ ಆಕೆ, ಮುಂದೊಂದು ದಿನ ಅತ್ಯುತ್ತಮ ಆಟಗಾರ್ತಿ ಆಗುತ್ತಾಳೆ. ಚದುರಂಗದಾಟದಲ್ಲಿ ದೊಡ್ಡ ಇತಿಹಾಸ ಹೊಂದಿದ ಭಾರತದಲ್ಲಿ ಅತ್ಯುತ್ತಮ ಆಟಗಾರ್ತಿ ಎಂಬ ಪಟ್ಟ ಕೂಡ ಪಡೆಯುತ್ತಾರೆ. ಇದು ಕ್ಯಾಂಡಿಡೇಟ್ಸ್ ಪಂದ್ಯಾವಳಿ ಗೆದ್ದ ಆರ್. ವೈಶಾಲಿ ಕತೆ!.

ಇತ್ತೀಚೆಗೆ ಮುಕ್ತಾಯಗೊಂಡ ಕ್ಯಾಂಡಿಡೇಟ್ಸ್ ಪಂದ್ಯಾವಳಿಯಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಗೆಲುವು ಸಾಧಿಸಿದರು. ಚೆಸ್ ಲೋಕದಲ್ಲಿ ಭಾರತದ ಸಾರ್ವಭೌಮತ್ವ ಎತ್ತಿಹಿಡಿದ ಅವರು, ಈಗ ವಿಶ್ವ ಚಾಂಪಿಯನ್‌ಶಿಪ್ ಅರ್ಹತೆ ಗಿಟ್ಟಿಸಿಕೊಂಡರು. ಇದರೊಂದಿಗೆ ಡಿ. ಗುಕೇಶ್‌ನೊಂದಿಗೆ ವಿಶ್ವಚಾಂಪಿಯನ್ ಎಂಬ ಪಟ್ಟ ಕಟ್ಟಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ.

ವೈಶಾಲಿ ಗೆಲುವು, ಗೆಲುವಿಗೆ ಮಾತ್ರ ಸೀಮಿತವಲ್ಲ: ಚೆಸ್ ಆಟದ ರೋಚಕತೆ ಅರಿತ ವೈಶಾಲಿ, ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ. ಕ್ಯಾಂಡಿಡೇಟ್ಸ್ ಗೆಲುವು ಅವರ ವೈಯಕ್ತಿಕ ಸಾಧನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಇದು ಲಕ್ಷಾಂತರ ಮಹಿಳಾ ಪಟುಗಳಿಗೆ ಪ್ರೇರಣೆ. ಭಾರತಕ್ಕೆ ಹೆಮ್ಮೆ ಮತ್ತು ವಿಶ್ವ ಚಾಂಪಿಯನ್‌ಶಿಪ್ ಗೆಲುವಿನ ನಿರೀಕ್ಷೆಯಾಗಿದೆ. ಕ್ಯಾಂಡಿಡೇಟ್ಸ್ ಗೆದ್ದ ಮೊದಲ ಭಾರತದ ಮಹಿಳೆ ಎಂಬ ಪಟ್ಟಕ್ಕೆ ತಕ್ಕಂತೆ ರೋಚಕ ಕಹಾನಿ ಹೊಂದಿದ್ದಾರೆ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ.

ಪ್ರಜ್ಞಾನಂದ ಅವರ ಅಕ್ಕನಿಂದ ಚಾಂಪಿಯನ್‌ವರೆಗೆ: ಚೆಸ್ ಲೋಕಕ್ಕೆ ಕಾಲಿಟ್ಟಾಗ ವೈಶಾಲಿ ಅವರನ್ನು ಭಾರತದ ಪುರುಷ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರ ಅಕ್ಕನಾಗಿ ಪರಿಚಯ ಪಡೆದವರು.



ತಾಳ್ಮೆಯೇ ಗೆಲುವಿನ ಸೂತ್ರ

ಆರ್. ವೈಶಾಲಿಯ ತಾಳ್ಮೆ ಮಾದರಿ. ಪಂದ್ಯದಲ್ಲಿರುವ ಅವರ ಶಾಂತತೆಯೇ ಶ್ರೇಷ್ಠರನ್ನು ಸೋಲಿಸುತ್ತಾ ಬಂದಿದೆ. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಜಾಣತೆಯನ್ನು ಪ್ರದರ್ಶಿಯೇ ವೈಶಾಲಿ ಯಶಸ್ಸನ್ನು ಪಡೆದಿದ್ದಾರೆ. ಇದಕ್ಕೆ ಹಲವಾರು ಉದಾಹರಣೆಗಳಿವೆ. ಕ್ಯಾಂಡಿಡೇಟ್ಸ್ ಪಂದ್ಯಾವಳಿಯಲ್ಲೇ ಅವರು ಮಧ್ಯಮ ಸುತ್ತಿನ ಒಂದು ಪಂದ್ಯದಲ್ಲಿ ಸೋತಿದ್ದರು. ಅಲ್ಲಿಗೆ ನಿಲ್ಲದ ಅವರ ಛಲ ಗೆಲುವಿನ ಹಾದಿಗೆ ತಂದಿತು. ಅವರ ತಾಳ್ಮೆ ಚಾಂಪಿಯನ್ ಸ್ಥಾನದಲ್ಲಿ ನಿಲ್ಲಿಸಿತು. ಇದಕ್ಕೂ ಮುನ್ನವೇ ಅವರು ಹೆಚ್ಚಿನ ತಾಳ್ಮೆ ಹೊಂದಿದ್ದರು ಎಂಬ ವಿಚಾರ ಅವರ ಕೋಚ್ ತ್ಯಾಗರಾಜನ್ ಮಾಧ್ಯಮದೊಂದಿಗೆ ಮಾತನಾಡುತ್ತಾ ಈ ಹಿಂದೆ ತಿಳಿಸಿದ್ದರು.ವೈಶಾಲಿಗೆ ತಾಳ್ಮೆಯಿದೆ. ಹೆಚ್ಚಿನ ಹೊತ್ತು ಒಂದೇ ಕಡೆ ಕೂಡುವ ಮತ್ತು ಒಂದೇ ಕೆಲಸದ ಮೇಲೆ ಗಮನ ಹರಿಸುವ ಶಕ್ತಿ ಇದೆ. ಇಂತಹ ಶಕ್ತಿ ಸಾಮಾನ್ಯ ಜನರಲ್ಲಿರುವುದಿಲ್ಲ. ಅವರು 5 ಗಂಟೆಯ ವರೆಗೂ ಒಂದೇ ಕಡೆ ಕೂಡುವ ಸಾಮರ್ಥ್ಯ ಹೊಂದಿದ್ದರು. ಬೇಕಾದರೆ ಹೆಚ್ಚಿನ ಸಮಯವನ್ನೂ ಚೆಸ್‌ಗೆ ನೀಡಲು ಸಿದ್ಧರಿದ್ದರು ಎಂದಿದ್ದಾರೆ.

ಚೆನ್ನೈ-ಹೈದರಾಬಾದ್ ಸೆಣಸು ಇಂದು

ಹೈದರಾಬಾದ್: ಗೆಲುವಿಗಾಗಿ ಹುಡುಕಾಟ ನಡೆಸುತ್ತಿರುವ ಹೈದರಾಬಾದ್ ಮತ್ತು ಇತ್ತೀಚೆಗಷ್ಟೇ ಲಯಕ್ಕೆ ಮರಳಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಶನಿವಾರದ ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಸೂಪರ್ ವೀಕೆಂಡ್‌ನ ಎರಡನೇ ಪಂದ್ಯಕ್ಕೆ ಹೈದರಾಬಾದ್ ಆತಿಥ್ಯ ನೀಡಲಿದ್ದು, ಗೆಲುವಿಗಾಗಿ ಎರಡು ಬಲಿಷ್ಠ ತಂಡಗಳು ಸಿದ್ಧವಾಗಿವೆ. ಮೊದಲಿಗೆ ಮೂರು ಪಂದ್ಯಗಳಲ್ಲಿ ಸತತ ಸೋಲನುಭವಿಸಿದ್ದ ಚೆನ್ನೈ ದಿಲ್ಲಿ ಹಾಗೂ ಕೋಲ್ಕತ್ತಾ ತಂಡಗಳನ್ನು ಸೋಲಿಸಿ ನಿಟ್ಟುಸಿರಿಟ್ಟಿದೆ. ಇತ್ತ ಹೈದರಾಬಾದ್ ಕೂಡ ಮೂರು ಸೋಲು ಮತ್ತು ಎರಡು ಗೆಲುವಿನೊಂದಿಗೆ ಕಣಕ್ಕಿಳಿಯುತ್ತಿದೆ. ಚೆನ್ನೈ ತಂಡಕ್ಕೆ ಧೋನಿ ಬಲ ಸಿಗುವ ಸಾಧ್ಯತೆ ಇದೆ. ಇತ್ತ ಹೈದರಾಬಾದ್ ತವರಿನ ಬೆಂಬಲ ಪಡೆಯಲಿದೆ.

ಚೆನ್ನೈ ತಂಡಕ್ಕೆ ವಿಶ್ವಾಸ: ಸಂಜು ಸ್ಯಾಮ್ಸನ್ ಲಯಕ್ಕೆ ಮರಳಿರುವುದು ತಂಡಕ್ಕೆ ಬಲ ತಂದಿದೆ. ಒಂದು ಶತಕ ಬಾರಿಸಿರುವ ಅವರು, ಕಳೆದ ಪಂದ್ಯದಲ್ಲೂ ಮಿಂಚಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಆಯುಷ್ ಮಾತ್ರೆ ವಿಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಸರ್ಫರಾಜ್ ಖಾನ್, ಡೇವಾಲ್ಡ್ ಬ್ರೇವಿಸ್ ಕೂಡ ಅಬ್ಬರದ ಬ್ಯಾಟಿಂಗ್ ಮಾಡಿದ್ದಾರೆ. ಫಿನಿಶಿಂಗ್‌ನಲ್ಲಿ ದುಬೆ ಸಿದ್ಧರಾಗಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಓವರ್‌ಟನ್ ಲಯದಲ್ಲಿದ್ದಾರೆ. ಕಳೆದೆರಡು ಪಂದ್ಯಗಳಲ್ಲಿ ಪರಿಣಾಮಕಾರಿ ಬೌಲಿಂಗ್ ಮಾಡಿರುವ ಅವರು, ಮಿಂಚಲು ಸಜ್ಜಾಗಿದ್ದಾರೆ. ಖಲೀಲ್ ಬದಲಿಗೆ ಯಾರು ಕಣಕ್ಕಿಳಿಯಲಿದ್ದಾರೆ ಎಂಬುದು ಖಾತ್ರಿಯಾಗಿಲ್ಲ. ಸ್ಪಿನ್ ವಿಭಾಗದಲ್ಲಿ ನೂರ್ ಅಹ್ಮದ್ ಮಿಂಚಿರುವುದು ವಿಶ್ವಾಸ ಹಿಗ್ಗಿಸಿದೆ.




ಪಿಚ್

ಹೈದರಾಬಾದ್‌ನ ಬ್ಯಾಟಿಂಗ್ ಪಿಚ್‌ನಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮೇಲುಗೈ ಸಾಧಿಸಿದ್ದಾರೆ. ಫ್ಲಾಟ್ ಪಿಚ್ ಇರುವುದು ಬ್ಯಾಟರ್‌ಗಳಿಗೆ ಲಾಭ ತಂದುಕೊಡಲಿದೆ. ಸ್ಪಿನ್ನರ್‌ಗಳಿಗೂ ಅಲ್ಪ ಸಹಾಯ ಮಾಡಲಿದೆ.

ಹೈದರಾಬಾದ್‌ಗೆ ಬ್ಯಾಟಿಂಗ್ ಬಲ: ಹೆಡ್, ಅಭಿ, ಕ್ಲಾಸೆನ್, ಕಿಶನ್ ಹೀಗೆ ಸಾಲು ಸಾಲು ಬಲಿಷ್ಠ ಬ್ಯಾಟರ್‌ಗಳನ್ನು ಹೊಂದಿರುವ ಹೈದರಾಬಾದ್ ಗೆಲುವಿನ ಹಳಿಗೆ ಮರಳುವ ಹಂಬಲದಲ್ಲಿದೆ. ಹೆಡ್-ಅಭಿ ಲಯಕ್ಕೆ ಮರಳುವುದು ತಂಡಕ್ಕೆ ಬಲ. ಇನ್ನು ನಾಯಕ ಇಶಾನ್ ಕಿಶನ್ ಕೂಡ ಅಬ್ಬರದ ಬ್ಯಾಟಿಂಗ್ ಮಾಡಲು ಸಿದ್ಧರಾಗಿದ್ದಾರೆ. ಕ್ಲಾಸೆನ್ ಪ್ರಸ್ತುತ ಆರೆಂಜ್ ಕ್ಯಾಪ್ ರೇಸ್‌ನಲ್ಲಿದ್ದು ಇನ್ನಷ್ಟು ಬಲ ತಂದಿದ್ದಾರೆ. ಬೌಲಿಂಗ್ ವಿಚಾರದಲ್ಲಿ ಅನುಭವದ ಕೊರತೆ ತಂಡಕ್ಕಿದೆ. ಉನಾಡ್‌ಕಟ್ ಒಬ್ಬರನ್ನು ಬಿಟ್ಟರೆ ಇನ್ನಿಳಿದವರು, ಅನುಭವ ಹೊಂದಿಲ್ಲ.

ಪದಬಂಧ 5957

▸▸ ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಧಾರಾಳ ದಾನ ಮಾಡುವ ಹಸ್ತ (3)
5.ಅಮೂಲ್ಯ ಮುತ್ತುಗಳ ಆಶ್ರಯತಾಣ (4)
6.ನಿರ್ದಿಷ್ಟ ಪ್ರದೇಶ ಪ್ರವೇಶಿಸಲು ಬೇಕಾದ ಅನುಮತಿ (4)
7.ಪುನಃ ತರಿಸಿದ ಕಟುವಾಸನೆಯ ಸೊಪ್ಪು (3)
9.ಸಮರ್ಥನೆ ಮಾಡುವ ಪ್ರಮಾಣ (3)
10.ನೀರಿನಲ್ಲಿ ಮುಳುಗದಂತೆ ಮಾಡು (3)
11.ಕನ್ನಡದಲ್ಲಿ ಸೊಳ್ಳೆಯಾದರೆ ಸಂಸ್ಕೃತದಲ್ಲಿ? (3)
15.ಸಲಹೆಯನ್ನು ಉಲ್ಲಂಘಿಸು (4)
16.ಬಾಗಿದ ಸೊಂಡಿಲುಳ್ಳವನು-ಗಣಪ (4)
17.ರಾತ್ರಿಯ ವಿರುದ್ಧ ಅವಧಿ (3)

ಮೇಲಿನಿಂದ ಕೆಳಕ್ಕೆ
1.ದೇವತೆಗಳ ಶತ್ರು-ದಾನವ (4)
2.ಒಣಗಿದ ಮರದ ತುಂಡಿದು (3)
3.ಘನತೆ-ಸ್ವಾಭಿಮಾನದ ವಿಶೇಷ ನಡೆಯಿದು (3)
4.ದಾವಣಗೆರೆ ಜಿಲ್ಲೆಯ ಐತಿಹಾಸಿಕ ನಗರ (4)
8.ನಿಜವಾಗಿ ಸಂಭವಿಸುವುದು-ಸತ್ಯ (3)
9.ಸಮಸ್ಯೆ-ವಿಷಯವನ್ನು ನೋಡುವ ವಿಭಿನ್ನ ರೀತಿ (3)
10.ಇವು ಹಾರಿಕೆಯ ನುಡಿಗಳು (3)
12.ದೃಷ್ಟಿದೋಷಕ್ಕಾಗಿ ಬಳಸುವ ಸಾಧನ (3)
13.ಹರ್ಷದ ತದ್ಭವರೂಪ ತಲೆಕೆಳಗಾಗಿದೆ (3)
14.ಎರಡಾಗಿ ಟಿಸಿಲೊಡೆದದ್ದು (3)

5956 ಉತ್ತರ

ಎಡದಿಂದ ಬಲಕ್ಕೆ:
5.ಮನೋಬಲ
6.ಹಗೆತನ 7.ಮದನ
8.ತಟವಟ 10.ತರುಲತೆ
12.ಮಹಾರಾಜ
14.ದಾಸವಾಳ
15.ಲಗೋರಿ
16.ಅನುಪಮ
17.ಹೋಮಕುಂಡ

ಮೇಲಿನಿಂದ ಕೆಳಕ್ಕೆ :
1.ಧಾಮ 2.ಬಾಲನಟ
3.ಸಹಮತ 4. ಜ್ಞಾನ
9.ವಜೀರಾ 11.ಸವರು
13.ಜಲಮಯ
14.ದಾರಿಹೋಕ 16.ಅಡ್ಡಿ
18.ತಡ

ಕಿರುಸುದ್ದಿ

ಮುಲ್ಕಿ: ಗಾಂಜಾ ಸೇವನೆ; ಇಬ್ಬರ ಬಂಧನ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಪ್ರಕರಣದಲ್ಲಿ ಗಾಂಜಾ ಸೇವಿಸುತ್ತಿದ್ದ ಇಬ್ಬರನ್ನು ಮುಲ್ಕಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಮುಲ್ಕಿ ಪೊಲೀಸ್ ಠಾಣಾ ವ್ಯಾಪ್ತಿಯ ಹಳೆಯಂಗಡಿ ಬಸ್ಸ್ ನಿಲ್ದಾಣದ ಬಳಿಯಲ್ಲಿ ಅಬ್ದುಲ್ ರವೂಫ್ ಎಂಬಾತನನ್ನು ಗಾಂಜಾ ಸೇವಿಸಿದ ಆರೋಪದಲ್ಲಿ ಮುಲ್ಕಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಮಂಗಳೂರು ಎಜೆ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿ ವೈದ್ಯರು ಆತ ಗಾಂಜಾ ಸೇವಿಸಿರುವ ಬಗ್ಗೆ ದೃಢಪತ್ರ ನೀಡಿದ್ದು ಆರೋಪಿಯು ಮಾದಕ ವಸ್ತುವನ್ನು ಸೇವನೆ ಮಾಡಿರುವುದರಿಂದ ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಹಳೆಯಂಗಡಿ ಕದಿಕೆ ಸೇತುವೆ ಬಳಿಯಲ್ಲಿ ಶಾಕೀರ್ ಎಂಬಾತನು ಅಮಲಿನಲ್ಲಿನಂತೆ ಕಂಡು ಬಂದಿದ್ದು, ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಆತ ಮಾದಕ ವಸ್ತುವನ್ನು ಸೇದಿರುವುದಾಗಿ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ. ಬಳಿಕ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಆರೋಪಿಯು ಮಾದಕ ವಸ್ತುವನ್ನು ಸೇವನೆ ಮಾಡಿರುವ ಬಗ್ಗೆ ವೈದ್ಯಕೀಯ ಪರೀಕ್ಷೆ ನಡೆಸಿ ದೃಢಪಟ್ಟು ಆರೋಪಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕಾರಿನಲ್ಲಿ ಸಾಗಿಸುತ್ತಿದ್ದ ಎಂಡಿಎಂಎ, ಗಾಂಜಾ ಸಹಿತ ಇಬ್ಬರ ಸೆರೆ

ಬದಿಯಡ್ಕ: ಕಾರಿನಲ್ಲಿ ಮಾದಕ ವಸ್ತುಗಳಾದ ಗಾಂಜಾ ಹಾಗೂ ಎಂಡಿಎಂಎ ಸಹಿತ ಪ್ರಯಾಣಿಸುತ್ತಿದ್ದ ಇಬ್ಬರನ್ನು ಬದಿಯಡ್ಕ ಪೊಲೀಸರು ಬದಿಯಡ್ಕ ಚೆನ್ನಾರಕಟ್ಟೆ ನಿವಾಸಿ ರಂಜಿತ್ ರೈ (36), ಸುಳ್ಯ ಆಲೆಟ್ಟಿ ಸಂಗಂ ನಿಲಯದ ಪೂಜಿತ್ ಸಾಗರ್ ಎಸ್.ವಿ. (29) ಎಂಬವರು ಬಂಧಿತರು. ಗುರುವಾರ ರಾತ್ರಿ ಬದಿಯಡ್ಕ – ಮುಳ್ಳೇರಿಯ ರಸ್ತೆಯಲ್ಲಿ ಬದಿಯಡ್ಕ ಇನ್‌ಸ್ಪೆಕ್ಟರ್ ಅನೂಪ್‌ಕೃಷ್ಣ ಆರ್.ಪಿ. ಅವರ ನೇತೃತ್ವದಲ್ಲಿ ಕಾರು ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ 0.36 ಗ್ರಾಂ ಎಂಡಿಎಂಎ ಹಾಗೂ 95.89 ಗ್ರಾಂ ಗಾಂಜಾ ಪತ್ತೆಹಚ್ಚಲಾಯಿತು.

ತೆಂಗಿನಮರದಿಂದ ಬಿದ್ದು ಮೃತ್ಯು

ಪುತ್ತೂರು: ತೆಂಗಿನಮರದಿಂದ ಬಿದ್ದು, ವ್ಯಕ್ತಿಯೋರ್ವರು ಮೃತಪಟ್ಟ ಘಟನೆ ಕೆಯ್ಯೂರು ಗ್ರಾಮದ ಎರಕ್ಕಳದಲ್ಲಿ ನಡೆದಿದೆ. ಎರಕ್ಕಳ ನಿವಾಸಿ ದೇಜಮ್ಮ ಅವರ ಪುತ್ರ ಶೇಖರ ಗೌಡ(45) ಎಂಬವರು ತೆಂಗಿನ ಮರದಿಂದ ಬಿದ್ದು ಮೃತಪಟ್ಟ ವ್ಯಕ್ತಿಯಾಗಿದ್ದಾರೆ. ಅವರು ಏ.14ರಂದು ಕೂಲಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ತೆಂಗಿನ ಮರದಿಂದ ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಯುಸಿ ವಿದ್ಯಾರ್ಥಿ ಆತ್ಮಹತ್ಯೆ

ಬೆಳ್ತಂಗಡಿ: ಉಜಿರೆ ಗ್ರಾಮದ ಟಿ.ಬಿ.ಕ್ರಾಸ್ ನಿವಾಸಿ ಮಹಮ್ಮದ್ ಆಯಾನ್ (17) ಅಪಾರ್ಟೆಂಟ್‌ನ ರೂಂನಲ್ಲಿ ಫ್ಯಾನ್‌ಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಏ.15 ರಂದು ಸಂಜೆ ನಡೆದಿದೆ. ಮೊಹಮ್ಮದ್ ಇಲಿಯಾಸ್ ಅವರ ಎರಡನೇ ಪುತ್ರ. ಈತ ಲಾಯಿಲದ ಕಾಶಿಬೆಟ್ಟುನಲ್ಲಿರುವ ಅಭ್ಯಾಸ್ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ಮುಗಿಸಿ ದ್ವಿತೀಯ ಪಿಯುಸಿಗೆ ತೇರ್ಗಡೆಯಾಗಿದ್ದ. ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡದ ಗ್ಯಾಸ್ ಕೊರತೆ | ಹಳೇ ವ್ಯವಸ್ಥೆಗೆ ಮರಳಿದ ಮಂಗಳೂರು ವಿವಿ ಹಾಸ್ಟೆಲ್

ಹೊಟ್ಟೆಗಿಲ್ಲಿ ನಿತ್ಯ ಕಟ್ಟಿಗೆ ಒಲೆ ಅಡುಗೆ!

ಸುರೇಶ್ ಡಿ. ಪಳ್ಳಿ

ದಿಗಂತ ವಿಶೇಷ

ಮಂಗಳೂರು: ಕಳೆದ ಎರಡು ತಿಂಗಳಿನಿಂದ ಎಲ್ಲೆಡೆ ಗ್ಯಾಸ್ ಸಂಕಷ್ಟ!. ಇದೇ ಕಾರಣದಿಂದ ಬಹುತೇಕ ಹೋಟೆಲ್, ಕ್ಯಾಂಟಿನ್‌ಗಳು ಬಂದ್ ಆಗಿವೆ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿನ ಯುದ್ಧ ದಿಂದಾಗಿ ದೇಶದಲ್ಲಿ ಅನಿಲ ಸಮಸ್ಯೆ ಎದುರಾಗಿದ್ದು ನಿಜ. ಆದರೆ, ಅದು ನಮ್ಮನ್ನು ಮರಳಿ ಹಿಂದಿನ ವ್ಯವಸ್ಥೆಯತ್ತ ಮುಖಮಾಡುವಂತೆ ಮಾಡಿರುವುದನ್ನು ಮರೆಯುವಂತಿಲ್ಲ...

ಮಂಗಳೂರು ವಿಶ್ವವಿದ್ಯಾನಿಲಯದ ವಸತಿ ನಿಲಯಗಳು ಕೂಡ ಗ್ಯಾಸ್ ಕೊರತೆಗೆ ಅಷ್ಟಾಗಿ ತಲೆಕೆಡಿಸಿಕೊಂಡಿಲ್ಲ. ಪರ್ಯಾಯ ಇಂಧನ ಬಳಕೆಯ ಮೂಲಕ ಹಾಯಾಗಿವೆ. ಗ್ಯಾಸ್ ಸಮಸ್ಯೆ ಎದುರಾಗುತ್ತಿದ್ದಂತೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಅವರು ವಿವಿಯ ಹಾಸ್ಟೆಲ್‌ಗಳಲ್ಲಿ ಕಟ್ಟಿಗೆ ಒಲೆ ಆರಂಭಿಸಲು ಸೂಚನೆ ನೀಡುವ ಮೂಲಕ ವಸತಿ ನಿಲಯಗಳಲ್ಲಿ ಉಳಿದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದಾರೆ. ಸದ್ಯ ವಿವಿ ಕ್ಯಾಂಪಸ್‌ನ ವಸತಿ ನಿಲಯದ ಭೋಜನಾಲಯದತ್ತ ತೆರಳಿದರೆ ಅಲ್ಲೊಂದು ಹಳ್ಳಿಯ ಚಿತ್ರಣ ಕಣ್ಣೆದುರು ಬಂದು ನಿಲ್ಲುತ್ತದೆ.

ಕಟ್ಟಿಗೆಯೇ ಇಲ್ಲಿ ಪ್ರಧಾನ!

ಗ್ಯಾಸ್ ಸಮಸ್ಯೆ ಕಾಡಿದಾಗಿನಿಂದ ಇಲ್ಲಿ ಕಟ್ಟಿಗೆ ಒಲೆಯೇ ಪ್ರಧಾನವಾಗಿದೆ. ಹಾಸ್ಟೆಲ್ ಭೋಜನಾಲಯದ ಪಕ್ಕದಲ್ಲಿಯೇ ಒಲೆ ಸಿದ್ಧಗೊಳಿಸಲಾಗಿದೆ. ಪುರುಷರ ವಸತಿಗೃಹದಲ್ಲಿ ಸುಮಾರು 350 ರಷ್ಟು ವಿದ್ಯಾರ್ಥಿಗಳು ಮತ್ತು ಮಹಿಳಾ ವಸತಿ ಗೃಹದಲ್ಲಿ ಉದ್ಯೋಗಸ್ಥ ಮಹಿಳೆಯರು ಸೇರಿ 500ರಷ್ಟು ವಿದ್ಯಾರ್ಥಿನಿಯ ರಿದ್ದು ಅವರಿಗೆ ಕಟ್ಟಿಗೆ ಬಳಸಿ ನಿತ್ಯ ಅಡುಗೆ ತಯಾರಿಸಲಾಗುತ್ತಿದೆ. ಬೆಳಗ್ಗೆ 4.30ಕ್ಕೆ ಎದ್ದೇಳುವ ಅಡುಗೆ ಸಿಬ್ಬಂದಿಗಳು ಬೆಳಗ್ಗಿನ ಉಪಾಹಾರದ ಸಿದ್ಧತೆ ಆರಂಭಿಸುತ್ತಾರೆ. ಸರಿಯಾಗಿ 7.30ಕ್ಕೆ ಶುಚಿ ರುಚಿಯ ಆಹಾರ ಅಚ್ಚುಕಟ್ಟಾಗಿ ಪೂರೈಕೆಗೆ ಸಿದ್ಧವಾಗುತ್ತದೆ.



ಮಂಗಳೂರು ವಿವಿಯ ಪುರುಷರ ವಸತಿಗೃಹದ ಬಳಿಯ ಭೋಜನಾಲಾಯದ ಪಕ್ಕದಲ್ಲಿ ಕಟ್ಟಿಗೆ ಒಲೆಯ ಮೂಲಕ ಅಡುಗೆ ಸಿದ್ಧವಾಗುತ್ತಿರುವುದು

ಚಪಾತಿ, ಗೋಳಿಬಜೆ ಸದ್ಯಕ್ಕೆ ಕ್ಯಾನ್ಸಲ್!

ಒಲೆಯಲ್ಲಿಯೇ ಎಲ್ಲವನ್ನೂ ತಯಾರಿಸಬೇಕಾಗಿರುವುದರಿಂದ ಕೆಲವು ತಿಂಡಿಗಳನ್ನು ಸದ್ಯ ನಿಲ್ಲಿಸಲಾಗಿದೆ. ಚಪಾತಿ, ಗೋಳಿಬಜೆ ಇತ್ಯಾದಿ ತಿಂಡಿಗಳಿಗೆ ಸದ್ಯ ವಿರಾಮ ನೀಡಲಾಗಿದೆ!. ಇದರ ಬದಲಾಗಿ ಹೆಚ್ಚಾಗಿ ಪಲಾವ್, ಟೊಮೆಟೋ ಬಾತ್ ಮಾಡಲಾಗುತ್ತಿದೆ. ಮಧ್ಯಾಹ್ನ ಊಟಕ್ಕೆ ಅನ್ನ, ಪಲ್ಯ ಸಾಂಬಾರ್ ಮಾಡಲಾಗುತ್ತಿದೆ.

ಇಲ್ಲಿ ಪಲಾವ್‌ಗೆ ಬೇಕು 30 ಕೆಜಿ ಅಕ್ಕಿ!

ಪುರುಷರ ವಸತಿ ನಿಲಯದಲ್ಲಿ ನಿತ್ಯ 30 ಕೆಜಿ ಅಕ್ಕಿಯ ಉಪಾಹಾರ ಸಿದ್ಧವಾಗುತ್ತದೆ. ಪಲಾವ್‌ಗೆ ಕನಿಷ್ಟವೆಂದರೂ 30 ಕೆಜಿ ಅಕ್ಕಿ ಬೇಕಾಗುತ್ತದೆ. ಅನ್ನ ಮಾಡಲು ಒಮ್ಮೆಗೆ 25 ಕೆಜಿ ಅಕ್ಕಿ ಬಳಸುತ್ತೇವೆ. ಹೊರಾಂಗಣದಲ್ಲಿ ಅಡುಗೆ ಮಾಡುವುದರಿಂದ ಹೆಚ್ಚು ಮುಂಜಾಗೃತೆ ವಹಿಸುತ್ತೇವೆ ಎನ್ನುತ್ತಾರೆ ಸಿಬ್ಬಂದಿಗಳು.

ಅನ್ನ ಬೇಯಲು ಸಮಯಬೇಕು

ವಿದ್ಯಾರ್ಥಿಗಳ ಸಮಯಕ್ಕೆ ಸರಿಯಾಗಿ ಊಟ, ಉಪಾಹಾರವನ್ನು ಸಿದ್ಧಗೊಳಿಸುತ್ತೇವೆ. ವಿಳಂಬ ಮಾಡುವುದಿಲ್ಲ. ಆರಂಭದಲ್ಲಿ ಕಟ್ಟಿಗೆ ಒಲೆಗೆ ಒಗ್ಗಿಕೊಳ್ಳುವುದು ಕಷ್ಟವಾದರೂ ಈಗ ಆರಾಮವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಅಡುಗೆ ತಯಾರಿಯ ಬ್ಯುಸಿಯ ನಡುವೆಯೂ ಮಾತಿಗಿಳಿದರು ಭೋಜನಾಲಯ ಸಿಬ್ಬಂದಿ ಶೇಖರ್ ಅವರು. ಅನ್ನ ಬೇಯಲು ಮಾತ್ರ ಸ್ವಲ್ಪ ಹೆಚ್ಚು ಬೇಕಾ ಗುತ್ತದೆ. ಸಾಂಬಾರ್, ಪಲ್ಯ, ಎಲ್ಲವನ್ನು ಬೇಗ ಮಾಡಿ ಮುಗಿಸುತ್ತೇವೆ. ಒಟ್ಟು ಆರು ಮಂದಿ ಸಿಬ್ಬಂದಿಗಳಿದ್ದು ಎಲ್ಲರೂ ಜೊತೆ ಸೇರಿ ಕೆಲಸ ಮಾಡುವುದರಿಂದ ಬೇಗನೆ ಮುಗಿದುಹೋಗುತ್ತದೆ. ಸಮಯಕ್ಕೆ ಸರಿಯಾಗಿ ಅಡುಗೆ ತಯಾರಿ ಮಾಡಲು ಒತ್ತು ನೀಡುತ್ತೇವೆ ಎನ್ನುತ್ತಾರವರು.

850ಕ್ಕೂ ಅಧಿಕ ಮಂದಿಗೆ ನಿತ್ಯ ಕಟ್ಟಿಗೆ ಒಲೆ ಅಡುಗೆ

ಮಂಗಳೂರು ವಿವಿಯ ವಸತಿ ನಿಲಯದಲ್ಲಿ ಉಳಿದುಕೊಂಡಿರುವ 850ಕ್ಕೂ ಅಧಿಕ ಮಂದಿಗೆ ನಿತ್ಯ ಕಟ್ಟಿಗೆ ಒಲೆಯ ಮೂಲಕವೇ ಅಡುಗೆ ತಯಾರಿಸಲಾಗುತ್ತಿದೆ.

ಸಮಸ್ಯೆಯಾಗದಂತೆ ನೋಡಿಕೊಂಡಿದ್ದೇವೆ



ವಿಶ್ವವಿದ್ಯಾನಿಲಯದ ಹಾಸ್ಟೆಲ್‌ಗಳಲ್ಲಿ ತಂಗಿರುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆ ಎದುರಾಗದಂತೆ ಎಚ್ಚರವಹಿಸಿದ್ದೇವೆ. ಗ್ಯಾಸ್ ಸಮಸ್ಯೆ ಎದುರಾದಾಗಿನಿಂದ ಕಟ್ಟಿಗೆ ಒಲೆಯ ಮೂಲಕವೇ ಊಟೋಪಚಾರದ ವ್ಯವಸ್ಥೆ ಮಾಡಿದ್ದೇವೆ.

■ ಪ್ರೊ.ಪಿ.ಎಲ್.ಧರ್ಮ, ಕುಲಪತಿ, ಮಂಗಳೂರು ವಿಶ್ವವಿದ್ಯಾನಿಲಯ

ಸಮಯಕ್ಕೆ ಸರಿಯಾಗಿ ಊಟ

ಇಲ್ಲಿ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಉಪಾಹಾರ, ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಕಟ್ಟಿಗೆಯನ್ನೇ ಬಳಸಿ ಮಾಡಬೇಕಾಗಿರುವುದರಿಂದ ತುಸು ಬೇಗನೆ ಅಡುಗೆ ಕೆಲಸ ಆರಂಭಿಸುತ್ತೇವೆ.

■ ಶೇಖರ್ ಮತ್ತು ಈರಣ್ಣ ಅಡುಗೆ ಸಿಬ್ಬಂದಿಗಳು.

ಅಂಗ ದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದರು ಪುಟಾಣಿ

ಮಡಿಕೇರಿ: ಅರಳುವ ಮುನ್ನವೇ ವಿಧಿಯ ಕ್ರೂರ ಅಟ್ಟಹಾಸಕ್ಕೆ ಸಿಲುಕಿ ಅಪಘಾತದಲ್ಲಿ ಉಸಿರು ಚೆಲ್ಲಿದ ನಾಲ್ಕರ ಹರೆಯದ ಬಾಲಕನೊಬ್ಬ ಸಾವಿನ ನಂತರವೂ ತನ್ನ ಕಣ್ಣು ಮತ್ತು ಕಿಡ್ನಿಗಳನ್ನು ದಾನ ಮಾಡಿ ಸಾರ್ಥಕತೆ ಮೆರೆದಿದ್ದಾನೆ.



ಕೊಡಗು ಜಿಲ್ಲೆಯ ಚಿಕ್ಕಅಳುವಾರ ಗ್ರಾಮದ ರಜಿತ್ ಮತ್ತು ರಮ್ಯಾ ದಂಪತಿಯ ಏಕೈಕ ಪುತ್ರ ಅನ್ವಿಕ್ (4ವರ್ಷ) ಸಾವಿನಲ್ಲೂ ಸಾರ್ಥಕತೆ ಮೆರೆದ ಬಾಲಕ.

ಸೋಮವಾರಪೇಟೆ ತಾಲೂಕಿನ ಯಡವನಾಡು ಗ್ರಾಮದಲ್ಲಿ ತಾತ ಹರಗ ತಿಮ್ಮಯ್ಯ ಮತ್ತು ಅಜ್ಜಿಯೊಂದಿಗೆ ವಾಸವಿದ್ದ ಅನ್ವಿಕ್ ಕಳೆದ ಸೋಮವಾರ ಅಜ್ಜಿಯೊಂದಿಗೆ ಸೋಮವಾರಪೇಟೆಗೆ ಹೋಗಿದ್ದಾನೆ. ಮರಳಿ ಬಸ್ಸಿನಲ್ಲಿ ಬಂದು ಯಡವನಾಡಿನ ಬಸ್ ತಂಗುದಾಣದಲ್ಲಿ ಇಳಿದು ರಸ್ತೆ ದಾಟುತ್ತಿದ್ದಾಗ ಕುಶಾಲನಗರ ಕಡೆಯಿಂದ ವೇಗವಾಗಿ ಬಂದ ಕಾರು ಈತನಿಗೆ ಡಿಕ್ಕಿ ಹೊಡೆದಿದೆ. ಇದರಿಂದ ತಲೆಗೆ ತೀವ್ರ ಪೆಟ್ಟಾಗಿದ್ದ ಅನ್ವಿಕ್‌ನನ್ನು ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಆದರೆ ಮೆದುಳು ನಿಷ್ಕ್ರಿಯಗೊಂಡ ಪರಿಣಾಮ ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ರಾತ್ರಿ ಅನ್ವಿಕ್ ಇಹಲೋಕ ತ್ಯಜಿಸಿದ್ದಾನೆ.

ಮಾನವೀಯತೆ

ಇದ್ದ ಒಬ್ಬನೇ ಮಗನ ಅಕಾಲಿಕ ಸಾವು ದುಃಖದ ಮಡುವಿನಲ್ಲಿ ಮುಳುಗಿಸಿದ್ದರೂ ಕೂಡಾ ಪೋಷಕರು ಅನ್ವಿಕ್‌ನ ಕಿಡ್ನಿ ಹಾಗೂ ಕಣ್ಣುಗಳನ್ನು ದಾನ ಮಾಡುವ ಮಾನವೀಯತೆ ಮೆರೆದು ಅನ್ವಿಕ್‌ನಿಗೆ ಸಾರ್ಥಕತೆ ತಂದುಕೊಟ್ಟಿದ್ದಾರೆ.

ಲಾರಿ-ಕಾರು ಡಿಕ್ಕಿ : ಓರ್ವ ದಾರುಣ ಸಾವು

ಕಾಪು : ರಾ.ಹೆ. 66 ರ ಪಾಂಗಳ ವಿದ್ಯಾವರ್ಧಕ ಶಾಲೆಯ ಎದುರು ಲಾರಿ ಮತ್ತು ಕಾರು ಅಪಘಾತದಲ್ಲಿ ಕಾರು ಚಾಲಕ ಶ್ರೇಯಸ್ ಆಚಾರ್ ಮೃತಪಟ್ಟ ಘಟನೆ ಸಂಭವಿಸಿದೆ.ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ಗಾಯಗೊಂಡಿರುತ್ತಾರೆ.

ಗುರುವಾರದ ತಡರಾತ್ರಿ 12.30ರ ಸುಮಾರಿಗೆ ಮಂಗಳೂರು ಬಂದರ್ ನಲ್ಲಿ ಕೋಕ್ ಲೋಡ್ ಮಾಡಿಕೊಂಡು ಕೊಪ್ಪಳ ಜಿಲ್ಲೆಯ ಗಿಣಿಗೇರಿಗೆ ತೆರಳುತ್ತಿದ್ದ ಲಾರಿಗೆ ಮಂಗಳೂರು ಕಡೆಯಿಂದ ಉಡುಪಿ ಕಡೆಗೆ ತೆರಳುತ್ತಿದ್ದ ಶ್ರೇಯಸ್ ಆಚಾರ್ ಚಲಾಯಿಸುತ್ತಿದ್ದ ಕಿಯಾ ಕಾರು, ಲಾರಿಗೆ ಹಿಂಬದಿಯ ಎಡಬದಿಗೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ.

ಕಾರು ಚಲಾಯಿಸುತ್ತಿದ್ದ ಶ್ರೇಯಸ್ ಆಚಾರ್ ಚಾಲಕನ ಸೀಟಿನಲ್ಲಿ ಸಿಲುಕಿಕೊಂಡು ತಲೆಯ ಹಿಂಬದಿಗೆ ತೀವ್ರ ಗಾಯವಾಗಿದ್ದು, ಮಾತನಾಡುತ್ತಿರಲಿಲ್ಲ. ಚಿಕಿತ್ಸೆಗಾಗಿ ಆ್ಯಂಬುಲೆನ್ಸ್ ವಾಹನದಲ್ಲಿ ಉಡುಪಿಯ ಅಜ್ಜರಕಾಡು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆಸ್ಪತ್ರೆಯಲ್ಲಿ ಪರೀಕ್ಷಿಸಿದ ವೈದ್ಯರು ಶ್ರೇಯಸ್ ಆಚಾರ್ ರವರು ಅದಾಗಲೇ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಡಾರ್ವಿನ್ ಹಾಗೂ ಸೂರ್ಯ ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿದೆ.

ಈ ಬಗ್ಗೆ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದ ಶಾಸಕ ವೇದವ್ಯಾಸ ಕಾಮತ್

ಅನುದಾನದ ಶ್ವೇತಪತ್ರ ಹೊರಡಿಸಲಿ

ಮಂಗಳೂರು: 'ಅಭಿವೃದ್ಧಿ ವಿಚಾರದಲ್ಲಿ ಯಾರೂ ರಾಜಕಾರಣ ಮಾಡಬಾರದು' ಎಂದು ಚರ್ಚೆ ಆರಂಭಿಸಿರುವ ಜಿಲ್ಲೆಯ ಕೆಲವು ಕಾಂಗ್ರೆಸ್ ನಾಯಕರು ಸ್ವತಃ ತಾವೇ ಅದನ್ನು ಪಾಲಿಸುತ್ತಿದ್ದಾರಾ ಎಂಬುದನ್ನು ಮೊದಲು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಷ್ಟು ಅನುದಾನಗಳನ್ನು ತಂದಿದ್ದೇನೆ ಮತ್ತು ಇಂದಿನ ಕಾಂಗ್ರೆಸ್ ಸರ್ಕಾರದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಅನುದಾನ ನೀಡಿ ಯಾವ ಕಾಮಗಾರಿ ಅನುಷ್ಠಾನಗೊಂಡಿದೆ ಎಂಬುದರ ಬಗ್ಗೆ ಶ್ವೇತಪತ್ರ ಬಿಡುಗಡೆ ಮಾಡಲಿ. ಆ ಮೂಲಕ ಅಭಿವೃದ್ಧಿ ವಿಚಾರದಲ್ಲಿ ಯಾರು ರಾಜಕಾರಣ ಮಾಡುತ್ತಿದ್ದಾರೆ ಎಂಬುದು ಕ್ಷೇತ್ರದ ಜನತೆ ತೀರ್ಮಾನಿಸುತ್ತಾರೆ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ–2ರಡಿ 165 ಕೋಟಿ ರೂ.ಗಳ ಕಾಮಗಾರಿಯಾಗಿದ್ದು, ಅದಕ್ಕೆ ಹಣ ಎಲ್ಲಿಂದ ಬಂತು ಕಾಂಗ್ರೆಸ್ ನಾಯಕರು ಕೇಳಿದ್ದಾರೆ. ಪ್ರಶ್ನೆ ಕೇಳಿದ ಸ್ವತಃ ಅವರಿಗೇ ಉತ್ತರ ಗೊತ್ತಿದೆ. ಆದರೂ ಜನರಲ್ಲಿ ಗೊಂದಲ ಮೂಡಿಸುವ ವಿಫಲ ಯತ್ನ ನಡೆಸುತ್ತಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ–1 165 ಕೋಟಿ ರೂ. ಘೋಷಣೆಯಾಗಿತ್ತು. ಆದರೆ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅನುದಾನಗಳಿಗೆ ತಡೆ ನೀಡಿತು. ಈಗ ಯೋಜನೆಯ ಹೆಸರಿನ ಮುಂದೆ '2' ಸೇರಿಸಿ ನಮ್ಮ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಗೆ ಅನುದಾನ ನೀಡುತ್ತಿದೆ ಎಂದು ಅಲ್ಲಲ್ಲಿ ಬ್ಯಾನರ್ ಹಾಕಿ ಜನರ ದಾರಿ ತಪ್ಪಿಸುವ ಕೆಲಸ ಮಾಡಲಾಗುತ್ತಿದೆ. ಅದೇ ಯೋಜನೆ, ಅದೇ ಅನುದಾನ. ಹೆಸರು ಮಾತ್ರ ಬದಲಾವಣೆ ಅಷ್ಟೇ. ಇದು ಕಾಂಗ್ರೆಸ್ ಸಾಧನೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಆರೋಪಿಸಿದರು.

ಹಿಂದಿನ ಯೋಜನೆಗೆ ತಡೆ ನೀಡಿದ್ದು ಯಾಕೆ? ಈಗ ಅದೇ ಯೋಜನೆಗೆ ಬೇರೆ ಹೆಸರು ನೀಡಿರುವುದು ಯಾಕೆ? ಹಾಗಾದರೆ ಇಲ್ಲಿ ರಾಜಕಾರಣ ಮಾಡುತ್ತಿರುವುದು ಯಾರು? ಇದರಲ್ಲಿ ಹಣಕಾಸು ಇಲಾಖೆಯ ಅನುಮೋದನೆ ಪಡೆಯದೇ, ಶಿಲಾನ್ಯಾಸ ನಡೆಸಲಾಗಿದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ. ಅವರು ಹಿಂದಿನ ಸರ್ಕಾರದ ಬಜೆಟ್ ಪುಟಗಳ ದಾಖಲೆಗಳನ್ನು ತಿರುವಿ ಹಾಕಿ ನೋಡಲಿ. 165 ಕೋಟಿ ರೂ.ಗಳ ಯೋಜನೆ ಬಜೆಟ್ ನಲ್ಲೇ ಘೋಷಣೆಯಾಗಿದೆ. ಹಣಕಾಸು ಇಲಾಖೆಯ ಅನುಮತಿ ನಂತರವೇ ಬಜೆಟ್‌ನಲ್ಲಿ ಘೋಷಣೆಯಾಗಲು ಸಾಧ್ಯ ಎಂಬ ಕನಿಷ್ಠ ಜ್ಞಾನ ಇರುವ ಯಾರಿಗಾದರೂ ತಿಳಿದಿರುತ್ತದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಶಾಸಕರಿಗೆ 50 ಕೋಟಿ, ಬಿಜೆಪಿ–ಜೆಡಿಎಸ್ ಶಾಸಕರಿಗೆ 25 ಕೋಟಿ ರೂ. ಕೊಟ್ಟಿದ್ದೇವೆ ಎಂದು ಹೇಳುವ ಇವರು, ಅದರಿಂದ ಕ್ಷೇತ್ರದಲ್ಲಿ ಒಂದಾದರೂ ಅಭಿವೃದ್ಧಿ ಕಾರ್ಯಕ್ಕೆ ಶಂಕುಸ್ಥಾಪನೆ ಹಾಕಿದ, ಕಾಮಗಾರಿಯ ಟೆಂಡರ್ ಕರೆದ ದಾಖಲೆ ಕೊಡಬಲ್ಲರಾ? ಯಾವ ಸರ್ಕಾರ ಇದ್ದರೂ ಅನುದಾನ ಕೊಡಲೇಬೇಕು. ನಮ್ಮ ಕ್ಷೇತ್ರಕ್ಕೆ ಯಾವುದಾದರೂ ವಿಶೇಷ ಅನುದಾನ ನೀಡಿದ್ದರೆ ಅದು ನಮ್ಮ ಸರ್ಕಾರದ ಸಾಧನೆ ಎಂದು ಜನತೆ ಮುಂದೆ ಇಡಲಿ ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದೇ ದಿನ 70ಕ್ಕಿಂತ ಹೆಚ್ಚು ಗುದ್ದಲಿ ಪೂಜೆ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿರುವ ದಾಖಲೆ ಇದೆ. ಆದರೆ, ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಒಂದೇ ಒಂದು ಗುದ್ದಲಿ ಪೂಜೆ ನಡೆಯುವುದೂ ಸಹ ಕಷ್ಟವಾಗಿದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾದ ಎಲ್ಲಾ ಅನುದಾನಗಳಿಗೆ ಈಗಿನ ಕಾಂಗ್ರೆಸ್ ಸರ್ಕಾರ ತಡೆ ನೀಡಿತ್ತು. ನಂತರ ಸತತ ಪ್ರಯತ್ನದ ಫಲವಾಗಿ ಇದರಲ್ಲಿ ಕೆಲವೇ ಕೆಲವು ಕಾಮಗಾರಿಗಳು ಇದೀಗ ಮತ್ತೆ ಆರಂಭವಾಗುತ್ತಿದೆ ಎಂದರು.

ರಾಜಕಾಲುವೆಗಳ ಹೂಳೆತ್ತುವ ಕಾರ್ಯ, ಮಳೆಹಾನಿ ಪರಿಹಾರ ಪ್ರತಿ ವರ್ಷ ನಡೆಯುತ್ತದೆ. ಅದು ಸರಕಾರದ ಸಾಧನೆ ಆಗಲಾರದು ಎಂದು ಕಾಮತ್ ಹೇಳಿದರು.

ಬಿಜೆಪಿ ಮಂಗಳೂರು ದಕ್ಷಿಣ ಮಂಡಲ ಅಧ್ಯಕ್ಷ ರಮೇಶ್ ಕಂಡೆಟ್ಟು, ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಹೆಗ್ಡೆ, ಲಲ್ಲೇಶ್ ಕುಮಾರ್ ಉಪಸ್ಥಿತರಿದ್ದರು.



ಒಂದೇ ಒಂದು ದಾಖಲೆ ನೀಡಲಿ

ಬಿಜೆಪಿ ಸರಕಾರದ ಅವಧಿಯಲ್ಲಿ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ ಘೋಷಣೆಯಾಗಿತ್ತು. ಆ ಯೋಜನೆಯ ಹೆಸರು ಬದಲಾಯಿಸಿ ಈಗ ಶಿಲಾನ್ಯಾಸ ಮಾಡಲು ಹೊರಟಿದ್ದಾರೆ. ನಗರದಲ್ಲಿ ಅಮೃತ ಯೋಜನೆ, ಜಲಸಿರಿ, ಹಾಗೂ ಒಳಚರಂಡಿ ಕಾಮಗಾರಿಗಳು ಚಾಲ್ತಿಯಲ್ಲಿವೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ. ವಾಸ್ತವದಲ್ಲಿ ಅದು ಕೇಂದ್ರ ಸರ್ಕಾರದ ಯೋಜನೆಗಳು. ಅನುದಾನಗಳನ್ನು ನೀಡಿದ್ದೂ ಸಹ ಕೇಂದ್ರ ಸರ್ಕಾರ. ಆದರೆ ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಹೆಣಗಾಡುತ್ತಿದೆ. ಕಾಂಗ್ರೆಸ್ ಸರ್ಕಾರ ಈ ಯೋಜನೆಗಳಿಗೆ ಅನುದಾನ ಕೊಟ್ಟ ಬಗ್ಗೆ ಒಂದೇ ಒಂದು ದಾಖಲೆ ನೀಡಲಿ.

■ ವೇದವ್ಯಾಸ ಕಾಮತ್, ಶಾಸಕರು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 36° 26° | ಉಡುಪಿ 33° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 18, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3

ಅಕಾಲಿಕ ಮಳೆ, ಹವಾಮಾನ ವೈಪರೀತ್ಯಕ್ಕೆ ನಲುಗಿದ ಕಲ್ಲಂಗಡಿ ಬೆಳೆ!



ಪುಟ 5

ಮಾಡ ಶ್ರೀ ದೈವಗಳ ಉತ್ಸವಕ್ಕೆ ಉದ್ಯಾವರ ಸಾವಿರ ಜಮಾಅತ್‌ಗೆ ಆಹ್ವಾನ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ರಸ್ತೆ ಬದಿ ಕಸ ಎಸೆದರೆ, ರೂ.1000 ದಂಡ, ಮಾಹಿತಿ ಕೊಟ್ಟರೆ ಸಿಗುತ್ತದೆ ಬಹುಮಾನ!!

ಮೂಡುಬಿದಿರೆ: ತಾಲೂಕಿನ ತೆಂಕಮಿಜಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ರಸ್ತೆ ಬದಿ ಕಸ ಎಸೆಯುವುದು ಹಾಗೂ ಸುಡುವುದು ಮತ್ತು ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಪಂಚಾಯತ್ ತಿಳಿಸಿದೆ.

ರಸ್ತೆ ಬದಿ ಕಸ ಬಿಸಾಡುವುದು, ಸುಡುವುದು ಮತ್ತು ಏಕಬಳಕೆಯ ಪ್ಲಾಸ್ಟಿಕ್ ಅಂಗಡಿಗಳಲ್ಲಿ ಬಳಸುವುದು ಕಂಡು ಬಂದರೆ ರೂ. 1000 ದಂಡ ವಿಧಿಸಲಾಗುವುದು. ತಪ್ಪಿದ್ದಲ್ಲಿ ಅಂತವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು ಎಂದು ತಿಳಿಸಿದ್ದಾರೆ. ರಸ್ತೆ ಬದಿ ತ್ಯಾಜ್ಯ ಎಸೆಯುವವರ ಬಗ್ಗೆ ಸೂಕ್ತ ದಾಖಲೆಯೊಂದಿಗೆ ಮಾಹಿತಿ ನೀಡಿದರೆ ಗ್ರಾಮ ಪಂಚಾಯತ್ ವತಿಯಿಂದ ಬಹುಮಾನ ನೀಡಲಾಗುವುದು ಎಂದು ಪಂಚಾಯತ್ ತಿಳಿಸಿದೆ.

ಅಲಲ್ಲಿ ಒಂದಿಷ್ಟು ಮಳೆ ನಡುವೆ ದಕ್ಷಿಣ ಕನ್ನಡದಲ್ಲಿ ಮತ್ತಷ್ಟು ಹೆಚ್ಚಿದ ಪ್ರತಾಪ

ಮಂಗಳೂರು: ಗುರುವಾರ ಸಂಜೆಯ ಬಳಿಕ ಕೆಲವು ಭಾಗಗಳಲ್ಲಿ ಮಳೆಯಾಗಿದ್ದರೂ ಶುಕ್ರವಾರ ತಾಪಮಾನ ನಾಗರಿಕರನ್ನು ಅಕ್ಷರಶಃ ಹೈರಾಣಾಗಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ 39 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿದ್ದರೆ ಉಡುಪಿಯಲ್ಲಿ 35 ಡಿಗ್ರಿ ಸೆಲ್ಸಿಯೆಸ್‌ನಷ್ಟು ಕಂಡುಬಂದಿತ್ತು.

ಕಿಲೋಗೆ 80 ರೂ. ಗಡಿ ದಾಟಿದ ಧಾರಣೆ

ಘರ್ಜಿಸಿದ ಗುಜ್ಜೆ!

ಎಲ್ಲೆಲ್ಲೂ ಡಿಮ್ಯಾಂಡಪ್ಪೋ ಡಿಮ್ಯಾಂಡು

■ ಸುದೀಪ್ ರಾಜ್ ಸುಳ್ಯ


ಉಡುಪಿ: ಕರಾವಳಿಯ ಸಾಂಪ್ರದಾಯಿಕ ಪಾಕಪದ್ಧತಿಯಲ್ಲಿ ಅತ್ಯಂತ ವಿಶಿಷ್ಟ ಸ್ಥಾನ ಪಡೆದಿರುವ 'ಗುಜ್ಜೆ'ಗೆ (ಎಳೆ ಹಲಸು) ಈಗ ಮಾರುಕಟ್ಟೆಯಲ್ಲಿ ಹಿಂದೆಂದೂ ಇಲ್ಲದ ಭಾರಿ ಬೇಡಿಕೆ ವ್ಯಕ್ತವಾಗಿದೆ.

ಗಗನಕ್ಕೇರಿದ ಗುಜ್ಜೆ ಧಾರಣೆ

ಕರಾವಳಿಯ ಸಾಂಪ್ರದಾಯಿಕ ಅಡುಗೆಗಳ ರಾಜ ಎಂದೇ ಕರೆಸಿಕೊಳ್ಳುವ ಗುಜ್ಜೆಯ ದರ ಈಗ ಗಗನಕ್ಕೇರಿದ್ದು, ಪ್ರತೀ ಕೆ.ಜಿ.ಗೆ 80 ರಿಂದ 100 ರೂಪಾಯಿಗಳ ದರದಲ್ಲಿ ಮಾರಾಟವಾಗುತ್ತಿದೆ.

ಅಡುಗೆಯಲ್ಲಿ ಗುಜ್ಜೆಯೇ ಪ್ರಧಾನ

ಕರಾವಳಿ ಭಾಗದ ಯಾವುದೇ ರೀತಿಯ ಶುಭ ಸಮಾರಂಭಗಳು, ಮದುವೆಗಳು, ದೇವಸ್ಥಾನಗಳ ಅನ್ನದಾನಗಳಲ್ಲಿ ಗುಜ್ಜೆ ಪದಾರ್ಥಗಳಿಲ್ಲದಿದ್ದರೆ ಆ ಊಟವೇ ಅಪೂರ್ಣ ಎಂಬಂತಿದೆ. ಇಲ್ಲಿನ ಗುಜ್ಜೆ ಸಾಂಬಾರ್, ಗುಜ್ಜೆ ಪಲ್ಯ ಹಾಗೂ ಗುಜ್ಜೆ ಕಬಾಬ್ ಅತ್ಯಂತ ಪ್ರಸಿದ್ಧ ಖಾದ್ಯ ಗಳಾಗಿದ್ದು, ಇವುಗಳ ರುಚಿಗೆ ಜನ ಸಂಪೂರ್ಣ ಈಗ ಫಿದಾ ಆಗಿದ್ದಾರೆ. »ಪುಟ 3





ವಿಟಮಿನ್, ಖನಿಜಾಂಶ ಭಂಡಾರ ಈ ಎಳೆ ಹಲಸು!

ಗುಜ್ಜೆ ಅತ್ಯಂತ ಆರೋಗ್ಯಕರವೂ ಹೌದು. ಇದು ಕರಾವಳಿ ಕರ್ನಾಟಕದ ಪ್ರಮುಖ ಸಾಂಪ್ರದಾಯಿಕ ಆಹಾರವಾಗಿದ್ದು, ಗುಜ್ಜೆಯ ಒಡಲು ಸಾಕಷ್ಟು ಪೋಷಕಾಂಶಗಳಿಂದ ಕೂಡಿದೆ. ಇದು ವಿಟಮಿನ್, ಖನಿಜಾಂಶ ಮತ್ತು ನಾರಿನಂಶವನ್ನು ಹೊಂದಿದ್ದು, ಇಷ್ಟೇ ಅಲ್ಲದೆ ಕಡಿಮೆ ಕ್ಯಾಲೋರಿ ಹೊಂದಿದೆ.

ಸಂಗಮ ವಿಶೇಷ

ಪಲ್ಯ, ಗಸಿ, ಮಂಚೂರಿ ಹುಳಿ, ಕಬಾಬ್...

ಹೊಟೇಲ್‌ಗಳಲ್ಲಿಯೂ ಗುಜ್ಜೆಗೆ 'ಗಣ್ಯ'ರ ಸ್ಥಾನಮಾನವಿದೆ. ಗುಜ್ಜೆಯಿಂದ ಪಲ್ಯ, ಗಸಿ (ಹುಳಿ), ಕಬಾಬ್, ಗುಜ್ಜೆ ಮಂಚೂರಿ, ಗುಜ್ಜೆ ಕಡ್ಲೆ ಸುಕ್ಕದಂತಹ ರುಚಿಕರವಾದ ಖಾದ್ಯಗಳನ್ನು ತಯಾರಿಸಲಾಗುತ್ತದೆ. ಗುಜ್ಜೆ ಖಾದ್ಯ ಸವಿಯಲೆಂದೇ ಗ್ರಾಹಕರು ಹೊಟೇಲ್‌ಗಳಿಗೆ ಕಾಲಿಡುವುದು ಕರಾವಳಿಯಲ್ಲಿ ಸಾಮಾನ್ಯ ಸಂಗತಿ.

ಶುಭ ಸಮಾರಂಭದ 'ಅನಿವಾರ್ಯ' ಖಾದ್ಯ

ವರ್ಷಾರಂಭ ಜನವರಿಯಿಂದ ಬಹುತೇಕ ಮಳೆಗಾಲ ಆರಂಭವಾಗುವವರೆಗೂ ಮಾತ್ರ ಗುಜ್ಜೆ ಸಿಗುತ್ತದೆ. ಇದೇ ವೇಳೆ ಹೆಚ್ಚಾಗಿ ಮದುವೆ, ಜಾತ್ರೆ, ನೇಮ, ಸಮಾರಂಭಗಳು ನಡೆಯುವ ಕಾರಣ ಎಲ್ಲೆಡೆ ಊಟದಲ್ಲಿ ಗುಜ್ಜೆಯ ಪದಾರ್ಥಗಳಿಗೆ ವಿಶೇಷ ಬೇಡಿಕೆ ಇರುತ್ತದೆ. ಮಾಂಸಾಹಾರದಂತೆಯೇ ಪದರಗಳನ್ನು ಹೊಂದಿರುವ ಮತ್ತು ಅದಕ್ಕೆ ಸರಿಸಮಾನವಾದ ರುಚಿ ನೀಡುವ ಕಾರಣ ಇದನ್ನು ಸಸ್ಯಾಹಾರಿಗಳ ನೆಚ್ಚಿನ ಖಾದ್ಯ ಎನ್ನಲಾಗುತ್ತದೆ. ಮಾರುಕಟ್ಟೆಯಲ್ಲಿ ಬೆಲೆ ಎಷ್ಟೇ ಇದ್ದರೂ, ಇಲ್ಲಿನ ಸಾಂಪ್ರದಾಯಿಕ ಅನ್ನದಾನಗಳಲ್ಲಿ 'ಗುಜ್ಜೆ ಸಾಂಬಾರ್' ಇಲ್ಲದಿದ್ದರೆ ಆ ಊಟಕ್ಕೆ ಪೂರ್ಣ ಕಳೆ ಬರುವುದಿಲ್ಲ.

ಗುಡುಗು, ಸಿಡಿಲು, ಗಾಳಿ ಮಳೆ

ಕಡಬ ತಾಲೂಕಿನಲ್ಲಿ ಸಂಕಷ್ಟದ ಸುರಿಮಳೆ

ಧರೆಗುರುಳಿದ ವಿದ್ಯುತ್ ಕಂಬಗಳು







ಕಡಬ: ಕಡಬ ತಾಲೂಕಿನ ಹಲವೆಡೆ ಗುರುವಾರ ಸಂಜೆ ಗುಡುಗು, ಸಿಡಿಲು ಸಹಿತ ಭಾರೀ ಗಾಳಿ– ಮಳೆಯಾಗಿದ್ದು ಅಪಾರ ಪ್ರಮಾಣದ ನಷ್ಟ ಉಂಟಾಗಿದೆ.

ಬಿರುಗಾಳಿಯ ತೀವ್ರತೆಗೆ ಹಲವೆಡೆ ಮರಗಳು ಉರುಳಿ ಬಿದ್ದಿದ್ದು ವಿದ್ಯುತ್ ಕಂಬಗಳು ಹಾಗೂ ತಂತಿಗಳು ತುಂಡಾಗಿ ವಿದ್ಯುತ್ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. ಮೆಸ್ಕಾಂ ಇಲಾಖೆಗೆ ಅಪಾರ ನಷ್ಟ ಉಂಟಾಗಿದೆ. ಸಿಡಿಲಿನ ಅಬ್ಬರ ಹೆಚ್ಚಾಗಿತ್ತು. ಆಲಂಕಾರು ಪೇಟೆಯ ಹತ್ತಿರದ ಕಲ್ಯಾಣ ಮಂಟಪವೊಂದರ ಬಳಿಯ ತೆಂಗಿನ ಮರಕ್ಕೆ ಸಿಡಿಲು ಬಡಿದು ಬೆಂಕಿ ಕಾಣಿಕೊಂಡು ಉರಿದು ಹೋಗಿದೆ. »ಪುಟ 3

ವಿದ್ಯುತ್ ಪೂರೈಕೆ ಸಂಪೂರ್ಣ ಅಸ್ತವ್ಯಸ್ತ

ಹಲವೆಡೆ ಮರಗಳು ವಿದ್ಯುತ್ ಲೈನ್‌ಗಳ ಮೇಲೆ ಬಿದ್ದ ಪರಿಣಾಮ ಕಡಬ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡಿದೆ. ಆಲಂಕಾರು, ಪೆರಾಬೆ, ಕೊಯ್ಲ, ರಾಮಕುಂಜ, ಕಡಬ ಮುಂತಾದ ಗ್ರಾಮಗಳಲ್ಲಿ ಮರ ವಿದ್ಯುತ್ ಲೈನ್‌ಗೆ ಬಿದ್ದು ಅಪಾರ ಹಾನಿಯುಂಟಾಗಿದೆ.

ಕಾಸರಗೋಡು ಜಿಲ್ಲೆಗೆ ಸಿಕ್ಕಿತು 'ವಿಷು ಹಬ್ಬ'ದ ಇಲಾಖೆಯ ವಿಶೇಷ ಕೊಡುಗೆ

ರೈಲು ನಿಲ್ದಾಣಕ್ಕೆ 1.10 ಕೋಟಿ ರೂಪಾಯಿನ ಲಿಫ್ಟ್!

ಕಾಸರಗೋಡು: ಜಿಲ್ಲೆಯ ಪ್ರಮುಖ ರೈಲು ನಿಲ್ದಾಣವಾದ ಕಾಸರಗೋಡು ನಗರದ ರೈಲು ನಿಲ್ದಾಣದಲ್ಲಿ ವಿಷು ಹಬ್ಬದ ವಿಶೇಷ ಕೊಡುಗೆಯಾಗಿ ನೂತನವಾಗಿ ನಿರ್ಮಿಸಲಾದ ಸಕಲ ಸೌಲಭ್ಯಗಳಿರುವ ಎರಡು ಲಿಫ್ಟ್‌ಗಳನ್ನು ಉದ್ಘಾಟಿಸಲಾಗಿದೆ.

1.10 ಕೋಟಿ ರೂಪಾಯಿ ವೆಚ್ಚ

ಸುಮಾರು 1.10 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಎರಡು ಲಿಫ್ಟ್‌ಗಳನ್ನು ನಿರ್ಮಿಸಲಾಗಿದೆ. ಇನ್ನೊಂದೆಡೆ ಈ ರೈಲು ನಿಲ್ದಾಣದಲ್ಲಿ ಈಗಾಗಲೇ ಹಳೆಯ ಎರಡು ಲಿಫ್ಟ್‌ಗಳು ಸಮರ್ಪಕವಾಗಿ ಕಾರ್ಯವೆಸಗುತ್ತಿದ್ದರೂ, ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದಿನಂಪ್ರತಿ ಅಪಾರ ಜನದಟ್ಟಣೆ ಕಂಡುಬರುತ್ತಿತ್ತು.



ಹಲವು ಅಭಿವೃದ್ಧಿ ಕಾರ್ಯ ಪೂರ್ಣ

ಅಮೃತ್ ಭಾರತ್ ಯೋಜನೆಯಡಿ ಈಗಾಗಲೇ ಹಲವು ಸೌಲಭ್ಯಗಳನ್ನು ಇಲ್ಲಿ ಅಳವಡಿಸಲಾಗಿದ್ದು, ಪ್ರಯಾಣಿಕರಿಂದ ಭಾರೀ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಅತ್ಯಾಧುನಿಕ 'ಅಮೃತ್ ಭಾರತ್' ಲುಕ್ ಸಿಗುತ್ತಿದೆ

ಕಾಸರಗೋಡು ನಗರದ ರೈಲು ನಿಲ್ದಾಣದ ಆಧುನೀಕರಣ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಮೃತ್ ಭಾರತ್ ಯೋಜನೆಯಂತೆ ಈ ಲಿಫ್ಟ್‌ಗಳನ್ನು ನಿರ್ಮಿಸಲಾಗಿದ್ದು, ಮಾತ್ರವಲ್ಲದೆ ರೈಲು ನಿಲ್ದಾಣವು ಅತ್ಯಾಧುನಿಕ ಮಾದರಿಯಲ್ಲಿ ಪ್ರಗತಿ ಹೊಂದುತ್ತಿದೆ. ಮುಂದೆ ಈ ರೈಲು ನಿಲ್ದಾಣದಲ್ಲಿ ಎಸ್ಕಲೇಟರ್ ಸೌಕರ್ಯ ಏರ್ಪಡಿಸುವ ಯೋಜನೆಯೂ ರೈಲ್ವೆ ಇಲಾಖೆಯ ಪರಿಗಣನೆಯಲ್ಲಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಗರ್ಭಿಣಿ, ಅಶಕ್ತರಿಗೆ ಅತೀ ಹೆಚ್ಚು ಅನುಕೂಲ

ಸುಮಾರು 1.10 ಕೋಟಿ ರೂಪಾಯಿ ವೆಚ್ಚದಲ್ಲಿ ಕಾರ್ಯಾರಂಭಗೊಂಡ ಈ ಲಿಫ್ಟ್‌ಗಳು ಪ್ರಯಾಣಿಕರಲ್ಲಿ ಸಂತಸ ತಂದಿದೆ. ಈ ಲಿಫ್ಟ್‌ಗಳು, ರೈಲು ನಿಲ್ದಾಣಕ್ಕೆ ಆಗಮಿಸುವ ಹಿರಿಯ ನಾಗರಿಕರು, ಗರ್ಭಿಣಿಯರು, ದಿವ್ಯಾಂಗರು, ಸಣ್ಣಪುಟ್ಟ ಮಕ್ಕಳು ಹಾಗೂ ಭಾರದ ಲಗೇಜ್‌ಗಳನ್ನು ಹೇರಿಕೊಂಡು ಆಗಮಿಸುವ ಪ್ರಯಾಣಿಕರಿಗೆ ಅತೀ ಹೆಚ್ಚು ಪ್ರಯೋಜನಕಾರಿಯಾಗಿದೆ.

ಗ್ರಾಹಕರ ಜೇಬಿಗೆ ಯುದ್ಧದ ಏಟು: ಸಿಎನ್‌ಜಿಗೆ ಈಗ 89.50 ರೇಟು!

ವಾಹನ ಚಾಲಕರನ್ನು ಸುಸ್ತಾಗಿಸಿದೆ 'ಅಗ್ಗ'ದ ಇಂಧನ

ಸುರತ್ಕಲ್: ದಕ್ಷಿಣ ಕನ್ನಡ ಜಿಲ್ಲೆಯ ವಾಹನ ಸವಾರರಿಗೆ ಸಿಎನ್‌ಜಿ ದರದಲ್ಲಿ ಆಗಿರುವ ಹಠಾತ್ ಏರಿಕೆ ಮತ್ತೊಮ್ಮೆ ಶಾಕ್ ನೀಡಿದೆ. ಲೀಟರ್‌ಗೆ 88 ರೂ. ಇದ್ದ ದರ ಈಗ 89.50ಕ್ಕೆ ಹೆಚ್ಚಿಸಲಾಗಿದ್ದು, ಕೆಜಿಗೆ ಸುಮಾರು 1.50 ರಷ್ಟು ಏರಿಕೆ ಮಾಡಲಾಗಿದೆ.

ಸ್ಥಿರವಾಗಿಯೇ ಇತ್ತು ದರ

ಕೊಲ್ಲಿ ಯುದ್ಧ ಪರಿಸ್ಥಿತಿಯಿಂದ ಉಂಟಾದ ಇಂಧನ ಪೂರೈಕೆ ವ್ಯತ್ಯಯದ ನಡುವೆ ಸಿಎನ್‌ಜಿ ದರ ಮಾತ್ರ ಸ್ಥಿರವಾಗಿಯೇ ಉಳಿದಿತ್ತು. ಸಿಎನ್‌ಜಿ ಅಗ್ಗದ ಇಂಧನ ಎಂಬ ನಿರೀಕ್ಷೆಯಲ್ಲಿ ವಾಹನಗಳನ್ನು ಖರೀದಿಸಿದ ಬಳಕೆದಾರರಿಗೆ ಈ ದರ ಏರಿಕೆ ಬಿಸಿ ತಟ್ಟುತ್ತಿದೆ. ಇಂಧನ ವೆಚ್ಚ ಕಡಿಮೆಗಾಗಿ ಆಯ್ಕೆ ಮಾಡಿದ ಸಿಎನ್‌ಜಿ ವಾಹನ ಸವಾರರು ಈಗ ಹೆಚ್ಚುವರಿ ಖರ್ಚು ಭರಿಸಬೇಕಾದ ಪರಿಸ್ಥಿತಿ ಇದೆ.



ಡೀಸೆಲ್ ಮತ್ತು ಸಿಎನ್‌ಜಿ ಈಗ ಒಂದೇ ಬೆಲೆ!

ಡೀಸೆಲ್ ಹಾಗೂ ಸಿಎನ್‌ಜಿ ದರ ಒಂದೇ ಆಗಿದೆ. ಇದು ಸಾರಿಗೆ ಕ್ಷೇತ್ರಕ್ಕೂ ಪರಿಣಾಮ ಬೀರುವ ಸಾಧ್ಯತೆ ಇದೆ. ಮುಂದೆ ಇಂಧನ ದರ ಏರಿಕೆ ಇನ್ನಷ್ಟು ಹೆಚ್ಚಾಗಬಹುದೆಂಬ ಆತಂಕವೂ ವ್ಯಕ್ತವಾಗುತ್ತಿದೆ.

ಬಂಟ್ವಾಳ, ಬೆಳ್ತಂಗಡಿ, ವಿಟ್ಲ ಆಸ್ಪತ್ರೆಗಳ ನಿರ್ವಹಣೆಗೆ ಇನ್ನು ವೈದ್ಯಕೀಯ ಕಾಲೇಜ್‌ಗಳ ಸಾಥ್

ಸರ್ಕಾರಿ–ಖಾಸಗಿ ನಡುವೆ ಸಹಯೋಗಕ್ಕೆ ಗ್ರೀನ್ ಸಿಗ್ನಲ್

ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಹೆಚ್ಚಿನ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಗ್ರೀನ್ ಸಿಗ್ನಲ್ ಸಿಕ್ಕಿದ್ದು, ರಾಜ್ಯ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯದಿಂದ ದ.ಕ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಏನಿದೆ ಸರ್ಕಾರದ ಆದೇಶದಲ್ಲಿ?

ಸರ್ಕಾರದ ಈ ಆದೇಶದನ್ವಯ ಅಳ್ವಾಸ್ ಹೆಲ್ತ್ ಸೆಂಟರ್ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು ಆಸ್ಪತ್ರೆ ಮತ್ತು ಮೂಡುಬಿದ್ರೆ ಸಮುದಾಯ ಆರೋಗ್ಯ ಕೇಂದ್ರ, ಬಂಟ್ವಾಳ ತಾಲೂಕು ಆಸ್ಪತ್ರೆ ಜತೆ ಮಂಗಳೂರಿನ ಎ.ಜೆ. ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಹಾಗೂ ವಿಟ್ಲ ಸಮುದಾಯ ಆರೋಗ್ಯವು ಕೇಂದ್ರದ ಜತೆ ಯೆನೆಪೋಯ ವೈದ್ಯಕೀಯ ಕಾಲೇಜಿನೊಂದಿಗೆ ಒಡಂಬಡಿಕೆ ಮಾಡಲು ಸರಕಾರಕ್ಕೆ ಅನುಮೋದನೆ ನೀಡಲಾಗಿದೆ. ಸರಕಾರಿ ಆಸ್ಪತ್ರೆ ಕಾರ್ಯ ವಿಧಾನ ಹಾಗೆಯೇ ಮುಂದುವರಿಯಲಿದ್ದು, ಖಾಸಗಿ ಸಹಯೋಗ ಮಾತ್ರವೇ ಇರುತ್ತದೆ. »ಪುಟ 3



ಸಂಗಮ ವಿಶೇಷ

ಏನೇನಿದೆ ಲಾಭ?

- ಸರಕಾರಿ ಆಸ್ಪತ್ರೆಯಲ್ಲಿ ಇನ್ನು ವೈದ್ಯರ ಕೊರತೆ ಕಾಡದು
- ಆಸ್ಪತ್ರೆಯಲ್ಲಿ ಸುಧಾರಿತ ಸೇವೆಗಳನ್ನು ನೀಡಲು ಸಾಧ್ಯ
- ಖಾಸಗಿಯವರು ಹೆಚ್ಚುವರಿ ಶುಲ್ಕ ವಿಧಿಸುವುದಕ್ಕೆ ದರಿಂದ ಕಡಿವಾಣ

ಆತಂಕ ಬೇಡ

ಬಡ ಜನರಿಗೆ ಸೇವೆ ನೀಡಬೇಕು ಎಂಬ ಉದ್ದೇಶದ ಈ ನಿರ್ಧಾರ ಉತ್ತಮವಾಗಿದೆ. ವೈದ್ಯರ ಕೊರತೆ ನೀಗಿಸಲು ಇದು ಸಹಕಾರಿ. ಜನರಿಗೂ ಉತ್ತಮ ಆರೋಗ್ಯ ಸೇವೆ ಲಭ್ಯವಾಗಲಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಹಿಂದಿನ ಯೋಜನೆಗಳು ಹಾಗೆಯೇ ಮುಂದುವರಿಯುತ್ತದೆ. ಯಾವುದೇ ಆತಂಕ ಬೇಡ.

● ಡಾ. ಅಶೋಕ್ ಕುಮಾರ್ ರೈ, ಬಂಟ್ವಾಳ ತಾಲೂಕು ಆರೋಗ್ಯಾಧಿಕಾರಿ.

ಗುಡುಗು, ಸಿಡಿಲು, ಗಾಳಿ ಮಳೆಯ ರೌದ್ರಾವತಾರ: ಮಂಗಳೂರು ಗ್ರಾಮಾಂತರ ಪರಿಸರದಲ್ಲಿ ಕಷ್ಟ ನಷ್ಟ

ಅಲ್ಲಲ್ಲಿ ಉರುಳಿದ ಮರಗಳು | ರಾತ್ರಿ ಪೂರ್ತಿ ವಿದ್ಯುತ್ ಪೂರೈಕೆ ಸ್ಥಗಿತ

ಕೈಕಂಬ: ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಗುರುವಾರ ರಾತ್ರಿ ಗುಡುಗು ಸಹಿತ ಗಾಳಿ ಮಳೆ ಸುರಿದಿದ್ದು, ಹಲವೆಡೆ ಮರಗಳು ಉರುಳಿ ಬಿದ್ದು ಹಾನಿಯಾಗಿದೆ.

ಕೆಲವೆಡೆ ಗುಡುಗು ಸಹಿತ ಭಾರೀ ಮಳೆ

ಗುರುಪುರ, ಮಳಲಿ, ಬಜಪೆ, ಗುರುಪುರ–ಕೈಕಂಬ, ಗಂಜಿಮಠ ಸುತ್ತಮುತ್ತ ಗುಡುಗು ಸಹಿತ ಸಾಧಾರಣ ಮಳೆಯಾಗಿದ್ದರೆ, ಮುತ್ತೂರು, ಕುಲವೂರು, ಕುಪ್ಪೆಪದವು, ಎಡಪದವು ಸುತ್ತಮುತ್ತ ಗುಡುಗು ಸಹಿತ ಭಾರೀ ಗಾಳಿ ಮಳೆ ಸುರಿದಿದೆ.

ಎಡಪದವು ಮೆಸ್ಕಾಂ ವಿಭಾಗದಲ್ಲಿ ಗಾಳಿಗೆ ಒಂಬತ್ತು ಕಂಬಗಳು ತುಂಡಾಗಿ ಬಿದ್ದಿದ್ದು, ಬಹುತೇಕ ಪ್ರದೇಶದಲ್ಲಿ ಗುರುವಾರ ರಾತ್ರಿಯಿಂದ ವಿದ್ಯುತ್ ಸರಬರಾಜು ಸಂಪೂರ್ಣ ಸ್ಥಗಿತಗೊಂಡಿತ್ತು. ಶುಕ್ರವಾರ ಮಧ್ಯಾಹ್ನ ಸರಬರಾಜು ಯಥಾಸ್ಥಿತಿಗೆ ತರುವಲ್ಲಿ ಮೆಸ್ಕಾಂ ಯಶಸ್ವಿಯಾಯಿತು. ಗುರುವಾರ ರಾತ್ರಿ ಸುರಿದ ಮಳೆಗೆ ಮೆಸ್ಕಾಂ ಇಲಾಖೆಗೆ ಅಪಾರ ನಷ್ಟ ಉಂಟಾಗಿದೆ.





ಸುತ್ತ ಮುತ್ತ

ಸಿಬಿಎಸ್‌ಇ ಪರೀಕ್ಷೆ: ವಿದ್ಯಾರ್ಥಿಗಳ ಸಾಧನೆ





ಬಂಟ್ವಾಳ: 2025–26ನೇ ಸಾಲಿನ ಹತ್ತನೇ ತರಗತಿ ಸಿಬಿಎಸ್‌ಇ ಪರೀಕ್ಷೆಯಲ್ಲಿ ಬಂಟ್ವಾಳ ರಘುರಾಮ ಮುಕುಂದ ಪ್ರಭು ಸಂಸ್ಥೆಯ ಪಬ್ಲಿಕ್ ಸ್ಕೂಲ್ ಶೇ.100 ಫಲಿತಾಂಶವನ್ನು ದಾಖಲಿಸಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.

ಒಟ್ಟು 39 ಮಂದಿ ವಿದ್ಯಾರ್ಥಿಗಳು ಹತ್ತನೇ ತರಗತಿ ಸಿಬಿಎಸ್‌ಇ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು 21 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 18 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯೊಂದಿಗೆ ಶಾಲೆ ಸತತ 15ನೇ ಬಾರಿ ಶೇ.100 ಫಲಿತಾಂಶ ದಾಖಲಿಸಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ದೇವಿಶ್ ಎಸ್.ರೈ (97.8%), ಅನನ್ಯ ಎಂ(96.8%), ಧೃತಿ ಎಚ್(96.4%), ರಚನ್ ಸುವರ್ಣ(96.4%), ದ್ವಿತಿ ಅಳ್ವ ಕರಂಕ (94.8%), ಸಾಯಿ ವೈಷ್ಣವ(94.2%), ಪ್ರಥ್ವಾ ಎನ್ ಜೆ(93.2%), ವಿವಾನ್ ಮರ್ಲಿಕ್ ಮೆನೇಜಸ್ (93.2%), ಮಹಾ ಎಸ್.ರೈ (90.6%) ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಇವರಿಗೆ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಕೂಡಿಗೆ ಪಾಂಡುರಂಗ ಶೆಣೈ, ಕಾರ್ಯದರ್ಶಿ ಕೂಡಿಗೆ ಪ್ರಕಾಶ್ ಶೆಣೈ ಮತ್ತು ಅನಿರುದ್ಧ ಕಾಮತ್ , ಎಸ್.ವಿ.ಎಸ್. ಸಮೂಹ ಸಂಸ್ಥೆಗಳ ಸಂಚಾಲಕಿ ಕೆ ರೇಖಾ ಶೆಣೈ, ಪ್ರಾಂಶುಪಾಲರು ಅಭಿನಂದನೆ ಸಲ್ಲಿಸಿದ್ದಾರೆ.

ಇಂದು ತಂಗುದಾಣ ಲೋಕಾರ್ಪಣೆ

ಪುತ್ತೂರು: ಪುತ್ತೂರು–ಕಾಣಿಯೂರು ಮಾರ್ಗದ ಕರೆಮನೆ ಕಟ್ಟೆ ಎಂಬಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ಕಟ್ಟೆಯ ಬಳಿ ದಿ. ನಳಿನಿ ಲೋಕಪ್ಪ ಗೌಡ ಅವರ ಹೆಸರಿನಲ್ಲಿ ನಿರ್ಮಿಸಲಾಗಿರುವ ಸುಸಜ್ಜಿತ ಪ್ರಯಾಣಿಕರ ತಂಗುದಾಣವು ಏ.18ಕ್ಕೆ ಲೋಕಾರ್ಪಣೆಗೊಳ್ಳಲಿದೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಲೋಕಪ್ಪ ಗೌಡ ಅವರ ಹಿತೈಷಿ ಪ್ರಕಾಶ್ ರಾಮಕುಂಜ, ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ಸುಸಜ್ಜಿತ ಬಸ್ಸು ತಂಗುದಾಣವನ್ನು ನಿರ್ಮಿಸಿದ್ದಾರೆ. ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ತಂಗುದಾಣದ ಉದ್ಘಾಟನೆ ನೆರವೇರಿಸಲಿದ್ದಾರೆ ಲೋಕೋಪಯೋಗಿ ಇಲಾಖೆ ಸಹಾಯಕ ಎಂಜಿನಿಯರ್ ಪ್ರಮೋದ್ ಕುಮಾರ್ ಕೆ.ಕೆ. ಮತ್ತು ಪುತ್ತೂರು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ನವೀನ್ ಭಂಡಾರಿ ಉಪಸ್ಥಿತರಿರಲಿದ್ದಾರೆ. ಪ್ರತೀ ವರ್ಷದಂತೆ ನಡೆಯುವ 25 ನೇ ವರ್ಷದ ಸತ್ಯನಾರಾಯಣ ಪೂಜೆ, ಶ್ರೀ ಮಹಾಲಿಂಗೇಶ್ವರ ದೇವರಿಗೆ ಕಟ್ಟೆ ಪೂಜೆ, ಸಾರ್ವಜನಿಕ ಅನ್ನ ಸಂತರ್ಪಣೆ, ಶ್ರೀ ಹನುಮಗಿರಿ ಮೇಳದವರಿಂದ ಯಕ್ಷಗಾನ ಬಯಲಾಟ 'ಶ್ರೀ ದೇವಿ ಮಹಾತ್ಮೆ' ಪ್ರದರ್ಶನ ನಡೆಯಲಿದೆ ಎಂದರು.

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಕಂಕನಾಡಿ, ವೆಲೆನ್ಸಿಯ, ಸೈಂಟ್ ಜೋಸೆಫ್ ನಗರ, ಬಿ.ವಿ ರೋಡ್, ಗೋರಿಗುಡ್ಡ, ಉಜ್ಜೋಡಿ, ಲೋವರ್ ಬೆಂದೂರು ರಾಧ ಮೆಡಿಕಲ್, ಕಂಕನಾಡಿ ಮಾರ್ಕೆಟ್, ಹೈಲ್ಯಾಂಡ್, ಫಳ್ನೀರ್, ಯುನಿಟಿ, ವಾಸ್‌ಲೇನ್, ಸೈಂಟ್ ಮೇರಿಸ್ ಸ್ಕೂಲ್, ಬಲ್ಮಠ ಮಿಷನ್ ಕಂಪೌಂಡ್ , ಬಲ್ಮಠ ನ್ಯೂ ರೋಡ್, ಅಥೆನಾ ಹಾಸ್ಪಿಟಲ್, ಫಾದರ್ ಮುಲ್ಲರ್ ಹಾಸ್ಪಿಟಲ್, ಹೆಬಿಕ್ ಸ್ಕೂಲ್, ಎವಿ ಜಂಕ್ಷನ್, ಶಾಂತಿನಿಲಯ, ಕಂಕನಾಡಿ ಬೈಪಾಸ್ ರೋಡ್, ಕಲ್ಪನಾ ರೋಡ್, ಬೆಂದೂರುವೆಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾ.18ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅನುದಾನ ಬಿಡುಗಡೆ

ಬೆಳ್ತಂಗಡಿ: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಬೆನ್ನು ಮೂಳೆ ಮುರಿತಕ್ಕೊಳಗಾಗಿ ದಿವ್ಯಾಂಗರಾದವರಿಗೆ ಸಮರ್ಪಿತವಾಗಿ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಅಭಿವೃದ್ಧಿಗಾಗಿ ರೂ.10 ಲ.ರೂ. ಅನುದಾನವನ್ನು ಶಾಸಕ ಹರೀಶ್ ಪೂಂಜ ಅವರ ಸ್ಥಳೀಯ ಪ್ರದೇಶಾಭಿವೃದ್ಧಿಯಡಿ ಬಿಡುಗಡೆ ಗೊಳಿಸಿದ್ದಾರೆ. ಈ ಕೇಂದ್ರವು ದಿವ್ಯಾಂಗರ ಪುನರ್ವಸತಿ ಹಾಗೂ ಉತ್ತಮ ಜೀವನಕ್ಕೆ ನೆರವಾಗಲಿದೆ.

ಬೆಳೆ ವಿಮೆ ಪರಿಹಾರದಲ್ಲಿ ಕಡಬದ ಕೃಷಿಕರಿಗೆ ಅನ್ಯಾಯ

ಆರು ಗ್ರಾಮಕ್ಕೆ ಸಿಗದ ಬಿಡಿಗಾಸು

ಕಡಬ: ರಾಜ್ಯದಲ್ಲಿ ಕಳೆದ 2024–25ನೇ ಸಾಲಿಗೆ ಸಂಬಂಧಿಸಿದ ಹವಾಮಾನ ಆಧಾರಿತ ಬೆಳೆ ವಿಮೆಯಲ್ಲಿ ರೈತರಿಗೆ ಪರಿಹಾರ ಸಿಕ್ಕಿರುವುದು ಅಲ್ಪ ಮೊತ್ತ. ಆದರಲ್ಲೂ ತಾಲೂಕಿನ ಆರು ಗ್ರಾಮಗಳ ರೈತರಿಗೆ ಬಿಡಿಗಾಸು ಸಿಕ್ಕಿಲ್ಲ, ಇದರ ವಿರುದ್ಧ ಏ.21ರಂದು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಮಲೆನಾಡು ಜನಹಿತ ರಕ್ಷಣ ವೇದಿಕೆಯ ಜಿಲ್ಲಾ ಸಂಪರ್ಕ ಪ್ರಮುಖ್ ರಮಾನಂದ ಎಣ್ಣೆಮಜಲು ಹೇಳಿದರು. ಅವರು ಶುಕ್ರವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೈತರಿಗಾಗಿರುವ ಅನ್ಯಾಯದ ವಿರುದ್ಧ ಮಲೆನಾಡು ಜನಹಿತ ರಕ್ಷಣಾ ವೇದಿಕೆಯ ರಾಜ್ಯ ಸಂಚಾಲಕ ಕಿಶೋರ್ ಶಿರಾಡಿ ನೇತೃತ್ವದಲ್ಲಿ ಜಾತ್ಯಾತೀತ ಹಾಗೂ ಪಕ್ಷಾತೀತ ನೆಲೆಯಲ್ಲಿ ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ರೈತರಿಗೆ ವಿಮಾ ಪರಿಹಾರ ಮೊತ್ತ ಪಾವತಿಸುವ ಸಂದರ್ಭದಲ್ಲಿ ಅನ್ಯಾಯವಾಗಿರುವ ಬಗ್ಗೆ ಈಗಾಗಲೇ ತಾಲೂಕು ಕಚೇರಿ ಮುಂಭಾಗದಲ್ಲಿ ಮಲೆನಾಡು ಜನ ಹಿತರಕ್ಷಣಾ ವೇದಿಕೆಯ ನೇತೃತ್ವದಲ್ಲಿ ಪ್ರತಿಭಟನೆ ಸಲ್ಲಿಸಲಾಗಿದೆ. ಇದರಿಂದಾಗಿ ಕೆಲವು ಗ್ರಾಮಗಳ ರೈತರ ಖಾತೆಗೆ ಅಲ್ಪ ಸ್ವಲ್ಪ ಹಣ ಜಮೆಯಾಗಿದೆ. ಆದರೂ ಕಡಬ ತಾಲೂಕಿನ ಇಚ್ಲಂಪಾಡಿ, ಕೌಕ್ರಾಡಿ, ನೆಲ್ಯಾಡಿ, ಕೊಣಾಲು, ಗೋಳಿತೊಟ್ಟು ಹಾಗೂ ಆಲಂತಾಯ ಗ್ರಾಮಗಳ ಸುಮಾರು 2000ಕ್ಕೂ ಅಧಿಕ ರೈತರಿಗೆ ಇದೂವರೆಗೂ ಬಿಡಿಗಾಸು ಕೂಡ ಜಮೆಯಾಗದಿರುವುದಿಲ್ಲ. ಈ ಬಗ್ಗೆ ನಮ್ಮಲ್ಲಿ ದಾಖಲೆ ಇದೆ. ಇದೇ ವಿಚಾರದಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಸದನದಲ್ಲಿ ತೋಟಗಾರಿಕಾ ಸಚಿವರಿಗೆ ಕೇಳಿದ ಪ್ರಶ್ನೆಗೆ ಬಂಟ್ವಾಳ, ಪುತ್ತೂರು ಹಾಗೂ ಸುಳ್ಯ ತಾಲೂಕುಗಳಿದ ಒಟ್ಟು 10 ದೂರುಗಳು ಬಂದಿದೆ ಎಂದು ತಿಳಿಸಿದ್ದಾರೆ ಎಂದರು.

ವೇದಿಕೆಯ ಪ್ರಮುಖರಾದ ಪ್ರಮುಖ್ ಕುಶಾಲಪ್ಪ ಅನಿಲ, ದಿವ್ನೇಶ್ ಗೌಡ ಕಲ್ಕ, ನಾಗೇಶ್ ನಳಿಯಾರ್ ಮತ್ತಿತರರು ಉಪಸ್ಥಿತರಿದ್ದರು.



ಏ.21ಕ್ಕೆ ಪ್ರತಿಭಟನೆ

ಬೆಳೆ ವಿಮೆ ಬಾರದೇ ಇರುವ ರೈತರು ಏ.21 ರಂದು ಕಡಬ ತಾಲೂಕು ಕಚೇರಿ ಮುಂಬಾಗದಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ. ಅನ್ಯಾಯವೆಸಗಿದ ಅಧಿಕಾರಿಗಳ ಅಮಾನತು ಮಾಡಬೇಕು ಎಂದು ಒತ್ತಾಯಿಸಲಾಗುವುದು ಎಂದು ವೇದಿಕೆಯ ಪ್ರಮುಖರಾದ ರಮಾನಂದ ಎಣ್ಣೆಮಜಲು ತಿಳಿಸಿದರು.

ನಾಳೆ ಉಪ್ಪಿನಂಗಡಿಯಲ್ಲಿ ಸಮಾಲೋಚನಾ ಸಭೆ

ಕೋಳಿ ಅಂಕ ಉಳಿವಿಗೆ ಹೋರಾಟ

ಉಪ್ಪಿನಂಗಡಿ: ಪರಂಪರಾಗತ ಹಿನ್ನೆಲೆಯುಳ್ಳ ಕೋಳಿ ಅಂಕ ಪ್ರಾಚೀನ, ಸಾಂಪ್ರದಾಯಿಕ, ಧಾರ್ಮಿಕ ನೆಲೆಗಟ್ಟಿನೊಂದಿಗೆ ಜಾತ್ರೆ, ನೇಮ, ಕೃಷಿ ಮುಂತಾದ ವಿಚಾರಗಳಿಗೆ ಹೊಂದಿಕೊಂಡು ನಡೆಯುವ ತುಳುನಾಡಿನ ಕ್ರೀಡೆಯಾಗಿದ್ದು ಇದನ್ನು ಉಳಿಸಿಕೊಳ್ಳುವುದಕ್ಕಾಗಿ ಕಾನೂನು ಹೋರಾಟ ನಡೆಸಬೇಕಾದ ಅನಿವಾರ್ಯತೆ ಎದುರಾಗಿದ್ದು, ಈ ನಿಟ್ಟಿನಲ್ಲಿ ಸಾಂಪ್ರದಾಯಿಕ ಆಚರಣಾ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ಏ. 19ರಂದು ಉಪ್ಪಿನಂಗಡಿ ಸಾಥೀ ಹಾಲ್‌ನಲ್ಲಿ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ಶಿವಣ್ಣ ಗೌಡ ಇಡ್ಯಾಡಿ ಹೇಳಿದರು.

ಅವರು ಗುರುವಾರ ಉಪ್ಪಿನಂಗಡಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1200 ವರ್ಷಗಳಿಗೂ ಅಧಿಕ ಇತಿಹಾಸವನ್ನು ಹೊಂದಿರುವ ಕೋಳಿ ಅಂಕಕ್ಕೆ ಜೂಜು ಮಸ್ತಿಯ ಹಣೆಪಟ್ಟಿ ಕಟ್ಟಿ ಸರಕಾರ, ಪೊಲೀಸ್ ಇಲಾಖೆ ನಿರ್ಬಂಧ ಹೇರುವ ಮುಖಾಂತರ ಈ ನಾಡಿನ ಜನತೆಯ ಧಾರ್ಮಿಕ ಭಾವನೆಗೆ ನೋವುಂಟು ಮಾಡಿದೆ. ಆದಾಗ್ಯೂ ತೆಂಗಿನ ಕಾಯಿ ಕುಟ್ಟುವುದು ಒಂದು ಸಾಂಪ್ರದಾಯಿಕ, ಮನರಂಜನಾ ಕ್ರೀಡೆಯಾಗಿದ್ದು ಇದನ್ನು ವರ್ಷದ ಒಂದು ಶುಭ ದಿನದಂದು ಆಚರಿಸಲಾಗುತ್ತದೆ. ಇದಕ್ಕೂ ಪೊಲೀಸ್ ಇಲಾಖೆ ಕಡಿವಾಣ ಹಾಕಿದೆ. ತಲೆದೋರಿರುವ ಸಮಸ್ಯೆಯನ್ನು ಕಾಯ್ದೆ ಮೂಲಕ ಬಗೆಹರಿಸುವಂತೆ ಮುಖ್ಯಮಂತ್ರಿಗಳಿಂದ ಹಿಡಿದು ಸಚಿವರು, ಶಾಸಕರ ಮೂಲಕ ಸರ್ಕಾರವನ್ನು ಆಗ್ರಹಿಸಿದ್ದೇವೆ. ಇದಕ್ಕೆ ಮನ್ನಣೆ ಸಿಗದೇ ಇದ್ದಲ್ಲಿ ಹೋರಾಟ ಅನಿವಾರ ಎಂದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಜಿಲ್ಲಾ ಅಧ್ಯಕ್ಷ ಬೆಳಿಯಪ್ಪ ಗೌಡ ಕೊಯಿಲ, ಪುತ್ತೂರು ತಾಲೂಕು ವೇದಿಕೆಯ ಸಂತೋಷ್ ಶೆಟ್ಟಿ ನಿರಂಜನ, ಯೋಗೀಶ್, ಬಂಟ್ವಾಳ ತಾಲ್ಲೂಕಿನ ಲೋಕೇಶ್ ಸರಪಾಡಿ ಉಪಸ್ಥಿತರಿದ್ದರು.

ನಮಗೂ ಅವಕಾಶ ಕೊಡಿ

ರಾಜ್ಯದಲ್ಲಿ ನಡೆಯುವ ಕುದುರೆ ರೇಸ್, ಕ್ರಿಕೆಟ್, ಕ್ಲಬ್‌ಗಳಲ್ಲಿ ಜುಗಾರಿ ನಡೆಯುತ್ತದೆ. ಇವುಗಳಲ್ಲಿಯೂ ಜೂಜಾಟ ನಡೆಯುತ್ತಿರುತ್ತದೆ. ಇವುಗಳೆಲ್ಲ ಶ್ರೀಮಂತರು ಆಡುವ ಆಟಗಳು. ಕಂಬಳ, ಕೋಳಿ ಅಂಕ ರೈತಾಪಿ ವರ್ಗದ ಜನ ಮನರಂಜನೆಗಾಗಿ ಆಡುತ್ತಾರೆ. ಇಲ್ಲಿ ಜೂಜಾಟ ಇರುವುದಿಲ್ಲ. ಹೀಗಿರುವಾಗ ಬಡವರಿಗೊಂದು ಕಾನೂನು, ಶ್ರೀಮಂತರಿಗೊಂದು ಕಾನೂನು ಜಾರಿ ಮಾಡುವುದು ಎಷ್ಟು ಸರಿ ಎಂದು ಶಿವಣ್ಣ ಗೌಡ ಪ್ರಶ್ನಿಸಿದರು.

ಪಡುಮಲೆಯಲ್ಲಿ ಧರ್ಮ ಶಿಕ್ಷಣ ತರಗತಿ ಉದ್ಘಾಟಿಸಿ ಸುಬ್ರಹ್ಮಣ್ಯ ನಟ್ಟೋಜ ಆಶಯ

ಸನಾತನ ಸಂಸ್ಕೃತಿ ಅಭ್ಯುದಯಕ್ಕೆ ಮಕ್ಕಳಲ್ಲಿ ಜಾಗೃತಿ

ಪುತ್ತೂರು: ಮಕ್ಕಳಿಗೆ ಧರ್ಮದ ಬಗ್ಗೆ ಅರಿವು ಮೂಡಿಸುವುದರಿಂದ ಸನಾತನ ಸಂಸ್ಕೃತಿಯ ಅಭ್ಯುದಯಕ್ಕೆ ಎಳವೆಯಲ್ಲೇ ನಾಂದಿ ಹಾಡಿದಂತಾಗುವುದು ಎಂಬುದನ್ನು ಮನಗಂಡು ಶೃಂಗೇರಿ ಶ್ರೀಗಳು ಧರ್ಮ ಶಿಕ್ಷಣ ನೀಡುವ ಕಾರ್ಯವನ್ನು ಆರಂಭಿಸಿದ್ದಾರೆ. ಅದಕ್ಕಾಗಿ ಪ್ರತಿ ಊರುಗಳಲ್ಲಿ ಸಮಿತಿ ರಚಿಸಿ, ತರಗತಿ ನಡೆಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಹಾಗಾಗಿ ನಾವೆಲ್ಲ ಒಂದಾಗಿ ಅವರ ಶ್ರಮವನ್ನು ಸಾರ್ಥಕಗೊಳಿಸೋಣ ಎಂದು ಧರ್ಮಾಭ್ಯುದಯ ಧರ್ಮ ಶಿಕ್ಷಣ ಸಮಿತಿಯ ಪುತ್ತೂರು ತಾಲೂಕು ಸಂಚಾಲಕ ಸುಬ್ರಹ್ಮಣ್ಯ ನಟ್ಟೋಜ ಹೇಳಿದರು.

ಅವರು ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನ ಪಡುಮಲೆಯಲ್ಲಿ ನಡೆದ ಧರ್ಮಾಭ್ಯುದಯ ಧರ್ಮ ಶಿಕ್ಷಣ ಸಮಿತಿ ಪಡುಮಲೆ ಇದರ ವತಿಯಿಂದ ನಡೆಯಲಿರುವ ಧರ್ಮ ಶಿಕ್ಷಣ ತರಗತಿಯನ್ನು ಉದ್ಘಾಟಿಸಿ ಮಾತನಾಡಿ ಧರ್ಮ ಶಿಕ್ಷಣದ ಮಹತ್ವವನ್ನು ತಿಳಿಸಿದರು.

ಮುಖ್ಯ ಅತಿಥಿಯಾಗಿದ್ದ ಬಡಕ್ಕಿಲ ಗಣರಾಜ ಭಟ್, ಮಕ್ಕಳಿಗೆ ಧರ್ಮ ಶಿಕ್ಷಣದ ಅಗತ್ಯತೆಯನ್ನು ತಿಳಿಸಿ ಹಿಂದೂ ಧರ್ಮದ ಏಳಿಗೆಗೆ ತಾಯಂದಿರು ಮನೆಯಲ್ಲೇ ಮಕ್ಕಳಿಗೆ ಆರಂಭಿಕ ಶಿಕ್ಷಣ ನೀಡಬೇಕೆಂದು ಹೇಳಿದರು. ಹಿಂದು ಸಮುದಾಯದ ಮಕ್ಕಳಿಗೆ ಎಳೆಯಲ್ಲಿಯೇ ಧಾರ್ಮಿಕ ಪ್ರಜ್ಞೆ ಮೂಡಿಸಬೇಕು. ಹಾಗೂ ದೇಶದ ಸಂಸ್ಕೃತಿ ಹಾಗೂ ಹಿಂದು ಸಮುದಾಯ ಆಚರಣೆಗಳನ್ನು ಸರಿಯಾಗಿ ತಿಳಿಸಿಕೊಟ್ಟಲ್ಲಿ ಅವರು ದಾರಿ ತಪ್ಪುವುದಿಲ್ಲ ಎಂದರು.

ಸಮಿತಿಯ ಅಧ್ಯಕ್ಷ ಸಿ.ಸಿ. ಸಂತೋಷ್ ಆಳ್ವ ಗಿರಿಮನೆ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಿತಿಯ ಗೌರವಾಧ್ಯಕ್ಷ ಶ್ರೀನಿವಾಸ ಭಟ್ ಚಂದುಕೂಡ್ಲು, ತಾಲೂಕು ಸಮಿತಿಯ ಖಜಾಂಚಿ ಸ್ವಾಮಿ ಮಾಧವ, ಶ್ರೀ ಕ್ಷೇತ್ರದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸತೀಶ್ ರೈ ಕಟ್ಟಾವು, ಸದಸ್ಯರು ಜನಾರ್ದನ ಪೂಜಾರಿ ಪದಡ್ಕ, ನಿವೃತ್ತ ಶಿಕ್ಷಕ ರಾಮಣ್ಣ ಗೌಡ ಶುಭ ಹಾರೈಸಿದರು.

ಖುಶಿಕ್ ಎಂ. ಪ್ರಾರ್ಥಿಸಿದರು. ಸಮಿತಿಯ ಪ್ರಧಾನ ಸಂಚಾಲಕ ಸುಬ್ಬಯ್ಯ ರೈ ಹಲಸಿನಡಿ ಸ್ವಾಗತಿಸಿ, ಗೌರವ ಸಲಹೆಗಾರ ಶಂಕರಿ ಪಟ್ಟೆ ವಂದಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀಶಾವಾಸವಿ ತುಳುನಾಡ್ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯದರ್ಶಿ ಶಿವಕುಮಾರ್ ಮೋಡಿಕೆ, ಸಂಯೋಜಕ ಸನತ್ ಕುಮಾರ್ ರೈ ಮೂಡಾಯೂರು, ಜೊತೆ ಕಾರ್ಯದರ್ಶಿ ಆನಂದ ಪಾಟಾಳಿ ಸಹಕರಿಸಿದರು.



ಮಕಳಿಗೆ ಭಗವದ್ಗೀತೆ ಪುಸ್ತಕದ ವಿತರಣೆ

ಪಡುಮಲೆಯ ಧರ್ಮಾಭ್ಯುದಯ ಧರ್ಮ ಶಿಕ್ಷಣ ಸಮಿತಿ ವತಿಯಿಂದ ನಡೆಸಲಾಗುತ್ತಿರುವ ಧರ್ಮ ಶಿಕ್ಷಣ ತರಗತಿಗೆ ಹೆಸರು ನೋಂದಾಯಿಸಿದ ಮಕ್ಕಳಿಗೆ ಭಗವದ್ಗೀತೆ ಪುಸ್ತಕ ವಿತರಿಸಲಾಯಿತು.

ಕುತ್ತಾರು ಭ್ರಾಮರಿ ಮಹಿಳಾ ಮಂಡಲದಿಂದ ಚೆಣ್ಣರ ಚಾವಡಿ ಬೇಸಿಗೆ ಶಿಬಿರ

ಕೂಡು ಕುಟುಂಬದ ಸಂಸ್ಕೃತಿ ಉಳಿಯಬೇಕಿದೆ

ಉಳ್ಳಾಲ: ಕೂಡು ಕುಟುಂಬ ಸಂಸ್ಕೃತಿಯು ನಶಿಸಿ ಹೋಗಿದೆ. ಇಂತಹ ಕುಟುಂಬಗಳು ಉಳಿಯಬೇಕಿದೆ. ಆಧುನಿಕ ಜೀವನದ ಕಾಲಘಟ್ಟದಲ್ಲಿ ಬೇಸಿಗೆ ಶಿಬಿರಗಳು ಎಳೆಯ ಮಕ್ಕಳ ಮನಸ್ಸುಗಳಿಗೆ ಮೋಜಿನ ಜೊತೆಗೆ ಮೌಲ್ಯಯುತ ಶಿಕ್ಷಣ ನೀಡಬೇಕಿದೆ ಎಂದು ಮುನ್ನೂರು ಗ್ರಾಮ ಪಂಚಾಯತ್ನ ನಿವೃತ್ತ ಪಿಡಿಒ ರವೀಂದ್ರ ರಾಜೀವ ನಾಯಕ್ ಕರೆ ನೀಡಿದರು.

ಕುತ್ತಾರು ಭ್ರಾಮರಿ ಮಹಿಳಾ ಮಂಡಲದ ವತಿಯಿಂದ ಮುನ್ನೂರು ಗ್ರಾಮ ಸುಭಾಸ್ ನಗರದ ಸಮುದಾಯ ಭವನದಲ್ಲಿ ಶುಕ್ರವಾರದಂದು ಆರಂಭಗೊಂಡ 'ಚೆಣ್ಣರ ಚಾವಡಿ 3.0' 3ನೇ ವರ್ಷದ ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರದಲ್ಲಿ ಅನೇಕ ವಿಷಯಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ತಿಳಿಯುವ ಅವಕಾಶವೂ ಲಭಿಸಿದಂತಾಗುತ್ತದೆ. ಮಕ್ಕಳು ಇಂತಹ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ಶಿಬಿರದ ಸದುಪಯೋಗ ಪಡೆದುಕೊಳ್ಳಲಿ ಎಂದರು.

ಗುತ್ತಿಗೆದಾರ ಸುಂದರ ಗಟ್ಟಿ ಮಾತನಾಡಿ, ಮಕ್ಕಳು ಸ್ವಲ್ಪ ಬಿಡುವು ಸಿಕ್ಕಿದ ಕೂಡಲೇ ಮೊಬೈಲ್ ಗೀಳಿಗೆ ದಾಸರಾಗುತ್ತಾರೆ. ಪೋಷಕರು ತಮ್ಮ ಮಕ್ಕಳನ್ನ ಇಂತಹ ಶಿಬಿರಗಳಿಗೆ ಕಳಿಸಿದಲ್ಲಿ ಮಕ್ಕಳು ಮೊಬೈಲ್ ಅನ್ನು ಬಿಟ್ಟು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನ ತೊಡಗಿಸಿ ದೈಹಿಕ ಹಾಗೂ ಮಾನಸಿಕವಾಗಿ ಸದೃಢಗೊಳ್ಳುತ್ತಾರೆ. ತುಳು ಭಾಷೆಯನ್ನ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಶಿಬಿರದಲ್ಲಿ ಮಕ್ಕಳಿಗೆ ತುಳು ಲಿಪಿ ಕಲಿಸುತ್ತಿರುವ ಭ್ರಾಮರಿ ಮಹಿಳಾ ಮಂಡಲದ ಪ್ರಯತ್ನ ಶ್ಲಾಘನೀಯ ಎಂದರು. ಭ್ರಾಮರಿ ಮಹಿಳಾ ಮಂಡಲದ ಅಧ್ಯಕ್ಷ ಸುನೀತಾ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷೆ ಧನಲಕ್ಷ್ಮಿ ಗಟ್ಟಿ ಕೋಟೆಕಾರು ಪ.ಪಂ. ಅಧ್ಯಕ್ಷೆ ದಿವ್ಯಾ ಸತೀಶ್ ಶೆಟ್ಟಿ ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಮಹಿಳಾ ವೇದಿಕೆಯ ಪ್ರದಾನ ಸಂಚಾಲಕಿ ಮಾಧವಿ ಉಳ್ಳಾಲ್, ಸುಭಾಸ್ ನಗರ ಕೊರಗಜ್ಜ ಸೇವಾ ಸಮಿತಿಯ ಅಧ್ಯಕ್ಷ ಗೋಪಾಲದಾಸ್, ಪ್ರಮುಖರಾದ ಸುಮಲತಾ ಕೊಣಾಜೆ, ಜಯಶ್ರೀ, ಸುನೀತಾ, ಮಮತಾ, ಶಶಿಕಲಾ ಗಟ್ಟಿ, ಚಂದ್ರಕಲಾ, ಮಹಿಳಾ ಮಂಡಲದ ಸದಸ್ಯರು ಇದ್ದರು.

ಸುರೇಖಾ ಸ್ವಾಗತಿಸಿ, ಶೃತಿ ಅನಿಲ್ ನಿರೂಪಿಸಿದರು. ಪವಿತ್ರ ವಂದಿಸಿದರು.



ಮಕ್ಕಳಿಗೆ ತುಳು ಲಿಪಿಯ ಕಲಿಕೆ

ಎಂಭತ್ತೈದು ಮಕ್ಕಳು ಶಿಬಿರದಲ್ಲಿ ಹೆಸರು ನೋಂದಾಯಿಸಿದರು. ಶಿಬಿರದಲ್ಲಿ ಮಕ್ಕಳಿಗೆ ಕ್ರಿಯಾತ್ಮಕ ಚಟುವಟಿಕೆಗಳೊಂದಿಗೆ ಮೊದಲ ಬಾರಿಗೆ ತುಳು ಲಿಪಿಯನ್ನು ಕಲಿಸಲಾಯಿತು. ಶಿಬಿರಾರ್ಥಿ ಮಕ್ಕಳು ತುಳು ಲಿಪಿ ಕಲಿತು ಬರೆದಲ್ಲಿ ಮುನ್ನೂರು ಗ್ರಾ.ಪಂ ವತಿಯಿಂದ ವಿಶೇಷ ಬಹುಮಾನ ನೀಡುವುದಾಗಿ ಪಂಚಾಯತ್ ಪಿಡಿಒ ಶ್ರೀಕಾಂತ್ ಸಿಂಪಿಗೇರ ಘೋಷಿಸಿದ್ದಾರೆ.

ದ.ಕ. ಜಿಲ್ಲಾ ಕಚೇರಿಯಲ್ಲಿ ಜಿಲ್ಲಾ ಯುವ ಮೋರ್ಚಾದ ಪ್ರಮುಖರ ಸಭೆ



ಮಂಗಳೂರು: ಭಾರತೀಯ ಜನತಾ ಪಾರ್ಟಿಯ ದಕ್ಷಿಣ ಕನ್ನಡ ಜಿಲ್ಲಾ ಕಚೇರಿಯಲ್ಲಿ ಜಿಲ್ಲಾ ಯುವ ಮೋರ್ಚಾದ ಪ್ರಮುಖರ ಸಭೆ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಉಳ್ಳಾಲ ನಂದನ್ ಮಲ್ಯ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುಗಿತು.

ಜನಪರ ಕಾರ್ಯಕ್ರಮಗಳ ಬಗ್ಗೆ ಚರ್ಚೆ

ಈ ಸಭೆಯಲ್ಲಿ ಜಿಲ್ಲಾ ಬಿಜೆಪಿಯ ಸಂಘಟನಾತ್ಮಕ ಬೆಳವಣಿಗೆ ಮತ್ತು ಮುಂಬರುವ ದಿನಗಳಲ್ಲಿ ಯುವ ಮೋರ್ಚಾ ಹಮ್ಮಿಕೊಳ್ಳಬೇಕಾದ ವಿವಿಧ ಜನಪರ ಕಾರ್ಯಕ್ರಮಗಳ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.

ಕೇಂದ್ರದ ಸಾಧನೆಯನ್ನು ತಿಳಿಸಿ

ದಕ್ಷಿಣ ಕನ್ನಡ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಂಘಟನೆಯ ಬಲವರ್ಧನೆಗೆ ಯುವ ಮೋರ್ಚಾದ ಪಾತ್ರ ನಿರ್ಣಾಯಕವಾಗಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕೇಂದ್ರ ಸರ್ಕಾರದ ಸೌಲಭ್ಯಗಳು ತಲುಪುವಂತೆ ಮಾಡುವಲ್ಲಿ ಯುವಕರು ಮುಂಚೂಣಿಯಲ್ಲಿರಬೇಕು ಎಂದು ಮಾರ್ಗದರ್ಶನ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ ಅವರು ಭಾಗವಹಿಸಿ ಸಲಹೆ ಸೂಚನೆ ನೀಡಿದರು.

ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉಮೇಶ್ ಕುಲಾಲ್ ಸ್ವಾಗತಿಸಿದರು. ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭರತ್‌ರಾಜ್ ಕೃಷ್ಣಾಪುರ ವಂದಿಸಿದರು. ಜಿಲ್ಲಾ ಸಮಿತಿಯ ಸದಸ್ಯರು, ವಿವಿಧ ಮಂಡಲಗಳ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಪಾಲ್ಗೊಂಡಿದ್ದರು.

ಲೆಟರ್‌ಹೆಡ್ ದುರುಪಯೋಗ: ಪ್ರಭು ಮೇಲಿನ ಪ್ರಕರಣಕ್ಕೆ ಹೈಕೋರ್ಟ್‌ನಿಂದ ತಡೆ

ಬಂಟ್ವಾಳ: ಕರ್ನಾಟಕ ಸರಕಾರವು ಕಳೆದ ಸೆಪ್ಟಂಬರ್‌ನಲ್ಲಿ ಹಮ್ಮಿಕೊಂಡಿದ್ದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಬಗ್ಗೆ ಬಂಟ್ವಾಳ ತಾಲೂಕು ಪಂಚಾಯತ್ ಹೆಸರನ್ನು ತನ್ನ ಲೆಟರ್ ಹೆಡ್‌ಗೆ ಬಳಸಿ ದುರುಪಯೋಗ ಪಡಿಸಿದರೆನ್ನಲಾದ ಆರೋಪದಲ್ಲಿ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ತಾಲೂಕು ಪಂಚಾಯತ್ ಮಾಜಿ ಸದಸ್ಯ, ಬಿಜೆಪಿ ಮುಖಂಡ ಪ್ರಭಾಕರ ಪ್ರಭು ವಿರುದ್ಧ ದಾಖಲಾದ ಪ್ರಕರಣಕ್ಕೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ನೀಡಿ ಆದೇಶಿಸಿದೆ.



ಕರ್ನಾಟಕ ರಾಜ್ಯ ಸರಕಾರದ ವತಿಯಿಂದ 2025 ಸೆಪ್ಟೆಂಬರ್ ತಿಂಗಳಲ್ಲಿ ಹಮ್ಮಿಕೊಂಡಿದ್ದ ನಾಗರೀಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಗತಿ ಬಗ್ಗೆ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ದ.ಕ. ಜಿ.ಪಂ. ಸಿಇಒ ಅವರು ಹೈಕೋರ್ಟ್ ಆದೇಶ ಮೀರಿ ಜ್ಞಾಪನ ಪತ್ರ ಹೊರಡಿಸಿದ್ದರು. ಇದನ್ನು ಆಕ್ಷೇಪಿಸಿ ಬಂಟ್ವಾಳ ತಾ. ಪಂ. ಮಾಜಿ ಸದಸ್ಯ ಪ್ರಭಾಕರ ಪ್ರಭು ಅವರು ದ.ಕ.ಜಿ.ಪಂ. ಸಿಇಒ ಯವರಿಗೆ ಪತ್ರ ಬರೆದು ಆಕ್ಷೇಪ ಪತ್ರದೊಂದಿಗೆ ಮನವಿ ಸಲ್ಲಿಸಿದ್ದರು.

ಈ ಸಮೀಕ್ಷೆಯಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ಭಾಗವಹಿಸಬಹುದು ಹಾಗೂ ಸಮೀಕ್ಷೆಯಲ್ಲಿ ನಾಗರೀಕರಿಗೆ ಆಸಕ್ತಿ ಇಲ್ಲವಾದಲ್ಲಿ ಒತ್ತಡ ಹೇರುವಂತಿಲ್ಲ ಎಂದೂ ಹೈಕೋರ್ಟ್ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಆದೇಶಪ್ರತಿಯೊಂದಿಗೆ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಒತ್ತಡ ಹಾಕದಂತೆ ಮನವಿ ಮಾಡಿ ಪತ್ರ ಬರೆದಿದ್ದರು. ಈ ಸಂದರ್ಭ ಪ್ರಭುರವರು ತಾ.ಪಂ. ಸದಸ್ಯರಾಗಿದ್ದ ಕಾಲದ ಲೆಟರ್ ಹೆಡ್‌ಗೆ ಮಾಜಿ ಸದಸ್ಯ ಎಂದು ಬರೆದು ದುರುಪಯೋಗಪಡಿಸಿದ್ದರು ಎಂದು ಆರೋಪಿಸಲಾಗಿತ್ತು. ಆಗಿನ ಜಿಪಂ ಸಿಇಒ ಅವರ ಸೂಚನೆಯಂತೆ ಬಂಟ್ವಾಳ ತಾ.ಪಂ. ಇಒ ನೀಡಿದ ದೂರಿನಂತೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಭಾಕರ ಪ್ರಭು ವಿರುದ್ಧ ಕೇಸು ದಾಖಲಾಗಿತ್ತು. ಬಳಿಕ ಪ್ರಭು ಅವರಿಗೆ ಪೊಲೀಸರು ನೋಟಿಸ್ ಜಾರಿಗೊಳಿಸಿ ವಿಚಾರಣೆ ಕೂಡ ನಡೆಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಭು ರವರು ಕರ್ನಾಟಕ ಹೈಕೋರ್ಟ್ ನಲ್ಲಿ ತಡೆಯಾಜ್ಞೆ ಕೋರಿ ರಿಟ್ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಾಧೀಶರು ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಭಾಕರ ಪ್ರಭು ಮೇಲೆ ದಾಖಲಾಗಿದ್ದ ಪ್ರಕರಣಕ್ಕೆ ತಡೆಯಾಜ್ಞೆ ನೀಡಿ ಪ್ರಕರಣ ಮುಂದೂಡಿದ್ದಾರೆ. ಪ್ರಭು ಪರವಾಗಿ ಹೈಕೋರ್ಟ್ ನ್ಯಾಯವಾದಿ ರೋಹಿತ್ ಬಿ. ಜೆ. ಅವರು ವಾದಿಸಿದ್ದರು.



ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಸೋಮವಾರ ಬೆಳಿಗ್ಗೆ 10 ಗಂಟೆಗೆ ಹಗಲು ರಥೋತ್ಸವ ಹಾಗೂ ಮಂಗಳವಾರ ರಾತ್ರಿ ಆರಟ ರಥೋತ್ಸವ ನಡೆಯಲಿದ್ದು ರಥ ಕಟ್ಟುವ ಕೆಲಸ ನಡೆಯುತ್ತಿದೆ.

ಒಂದೇ ದಿನದಲ್ಲಿ 15 ಲ.ರೂ. ಸಂದಾಯ

ಉಪ್ಪಿನಂಗಡಿ: ಇಲ್ಲಿನ ಬಸ್ ನಿಲ್ದಾಣದ ಬಳಿ ಇರುವ ಪಂಚಾಯತ್ ಸ್ವಾಮ್ಯದ ವಾಣಿಜ್ಯ ಸಂಕೀರ್ಣಗಳ ಏಲಂ ಬಿಡ್‌ನಲ್ಲಿ ಪಡೆದ ಅಂಗಡಿ ಕೋಣೆಗಳ ಕಂತು ಬಾಕಿ ಇರಿಸಿದ್ದ 20 ಅಂಗಡಿಗಳಿಗೆ ಪಂಚಾಯತ್ ಪಿಡಿಒ ವಿಲ್ಫ್ರೆಡ್ ಲಾರೆನ್ಸ್ ರೋಡ್ರಿಗ್ರಸ್ ಮಂಗಳವಾರ ಬೀಗ ಜಡಿದು ಪರಿಣಾಮ ಬಾಕಿದಾರರು ಬಾಕಿ ಮೊತ್ತದ ಶೇ. 50ರಂತೆ ಒಟ್ಟು 15 ಲಕ್ಷ ರೂಪಾಯಿ ಪಂಚಾಯತ್‌ಗೆ ಸಂದಾಯ ಮಾಡಿ ಬೀಗ ತೆರವುಗೊಳಿಸಿಕೊಂಡಿದ್ದಾರೆ.


ಏಲಂ ಪ್ರಕ್ರಿಯೆಯಲ್ಲಿ ಪಡೆದುಕೊಂಡ ಅಂಗಡಿ ಕೊಠಡಿಗಳ ಬಿಡ್ ಮೊತ್ತವನ್ನು ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡಿದ್ದರೂ ಹಲವರು ಉಳಿಕೆ ಮೊತ್ತದ ಕಂತುಗಳನ್ನು ಪಾವತಿಸದೆ ಪಂಚಾಯತ್ ಆಡಳಿತದ ವಿನಂತಿಗಳನ್ನು ಕಡೆಗಣಿಸುತ್ತಾ ಬಂದಿದ್ದರು. ಬಹುತೇಕ ಪ್ರಸಂಗಗಳಲ್ಲಿ ಪಂಚಾಯತ್ ಸದಸ್ಯರ ಮನವೊಲಿಸಿ ಕಠಿಣಕ್ರಮದಿಂದ ಪಾರಾಗುತ್ತಿದ್ದರು.

ಪಂಚಾಯತ್ ಆಡಳಿತ ಬಾಕಿಯಾದ ಮೊತ್ತವನ್ನು ಪಾವತಿಸುವಂತೆ ಹಲವು ಬಾರಿ ಸೂಚನೆ ನೀಡಿ, ಸ್ಪಂದನೆ ವ್ಯಕ್ತವಾಗದೇ ಇದ್ದಾಗ ಸರಕಾರಿ ರಜಾ ದಿನವಾದ ಮಂಗಳವಾರದಂದು ಮುಂಜಾನೆಯಿಂದಲೇ ಬೀಗ ಜಡಿಯುವ ಕಾರ್ಯಾಚರಣೆ ನಡೆಸಲಾಯಿತು. ಇದರ ಫಲವಾಗಿ ಅಂಗಡಿ ಮಾಲಕರು ಬಾಕಿ ಇರಿಸಿದ್ದ ಮೊತ್ತದ ಶೇ.50ರಷ್ಟನ್ನು ಪಾವತಿಸಿದ್ದಾರೆ.

ಮೂಡುಬಿದಿರೆಯಲ್ಲಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾಹಿತಿ

ನಾಳೆ ಆತ್ಮಶಕ್ತಿ ನೂತನ ಶಾಖೆಯ ಲೋಕಾರ್ಪಣೆ

ಮೂಡುಬಿದಿರೆ: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಈಗಾಗಲೇ ದ.ಕ. ಮತ್ತು ಉಡುಪಿ ಜಿಲ್ಲೆಯಾದ್ಯಂತ 34 ಶಾಖೆಗಳನ್ನು ಹೊಂದಿದ್ದು 35ನೇ ಶಾಖೆ ಮೂಡುಬಿದಿರೆಯಲ್ಲಿ ಏ.19ಕ್ಕೆ ಮೂಡುಬಿದಿರೆಯ ಅಂಚೆ ಕಚೇರಿಯ ಎದುರುಗಡೆಯ ರಾಮಯ್ಯ ಕಾಂಪ್ಲೆಕ್ಸ್‌ನಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ತಿಳಿಸಿದರು.



ಮೂಡುಬಿದಿರೆ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರು ನೂತನ ಶಾಖೆ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಉಮಾನಾಥ ಕೋಟ್ಯಾನ್ ಅವರು ದೀಪ ಪ್ರಜ್ವಲನೆ ಮಾಡಲಿದ್ದಾರೆ. ಕರ್ನಾಟಕ ಸರಕಾರದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿರುವ ಐ.ತಾರನಾಥ ಪೂಜಾರಿ ಅವರು ಭದ್ರತಾಕೋಶ ಉದ್ಘಾಟಿಸಲಿದ್ದು ಆಳ್ವಾಸ್ ಮುಖ್ಯಸ್ಥ ಡಾ.ಎಂ.ಮೋಹನ ಆಳ್ವ ಅವರು ಗಣಕೀಕೃತ ಬ್ಯಾಂಕಿಂಗ್ ಗೆ ಚಾಲನೆ ನೀಡಲಿದ್ದಾರೆ. ಬೆಳುವಾಯಿ ಸಹಕಾರಿ ವ್ಯವಸಾಯಿಕ ಸಂಘದ ಅಧ್ಯಕ್ಷ ಭಾಸ್ಕರ ಎಸ್.ಕೋಟ್ಯಾನ್ ಅವರು ನಿರಖು ಠೇವಣಿ ಪತ್ರ ಬಿಡುಗಡೆ ಮಾಡಲಿದ್ದು, ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ಅವರು ಮೈಕ್ರೋ ಸಾಲ ಯೋಜನೆಗೆ ಚಾಲನೆ ನೀಡಲಿದ್ದಾರೆ. ಮೂಡುಬಿದಿರೆ ಬ್ರಹ್ಮಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಸುರೇಶ್ ಕೆ. ಪೂಜಾರಿ ಅವರು ಇ- ಮುದ್ರಾಂಕ ಸೇವೆಗೆ, ವಕೀಲರ ಸಂಘದ ಅಧ್ಯಕ್ಷ ಹರೀಶ್ ಪಿ. ಉಳಿತಾಯ ಖಾತೆಗೆ, ಪುರಸಭಾ ನಿಕಟಪೂರ್ವ ಉಪಾಧ್ಯಕ್ಷ ನಾಗರಾಜ್ ಪೂಜಾರಿ ಆವರ್ತನ ಖಾತೆಗೆ,ದೇವಾಡಿಗ ಸುಧಾರಕ ಸಂಘದ ಅಧ್ಯಕ್ಷ ಪುರಂದರ ದೇವಾಡಿಗ ಅವರು ಪಿಗ್ಮಿ ಖಾತೆಗೆ ಚಾಲನೆ ನೀಡಲಿದ್ದಾರೆ. ಯುವವಾಹಿನಿ ಮೂಡುಬಿದಿರೆ ಘಟಕದ ಅಧ್ಯಕ್ಷ ಗಿರೀಶ್ ಕೋಟ್ಯಾನ್, ಗುರುದೇವ ವಿವಿಧೋದ್ದೇಶ ಸಹಕಾರಿ ಸಂಘದ ಉಪಾಧ್ಯಕ್ಷ ಜಗದೀಶ್ಚಂದ್ರ ಡಿ.ಕೆ, ಪ್ರೆಸ್ ಕ್ಲಬ್ ಅಧ್ಯಕ್ಷ ಬಿ.ಸೀತಾರಾಮ ಆಚಾರ್ಯ, ಉದ್ಯಮಿ ಕೆ.ಶ್ರೀಪತಿ ಭಟ್ ಹಾಗೂ ಕಟ್ಟಡ ಮಾಲಕರಾದ ಸುರೇಶ್ ಆಚಾರ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದವರು ಮಾಹಿತಿ ನೀಡಿದರು. ಸಂಘದ ಉಪಾಧ್ಯಕ್ಷ ನೇಮಿರಾಜ್ ಪೂಜಾರಿ, ನಿರ್ದೇಶಕರಾದ ಪರಮೇಶ್ವರ ಪೂಜಾರಿ, ಗೋಪಾಲ ಎನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್, ಸಂದೀಪ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಳಿ

ಅನುಭವಿ ವೃತ್ತಿಪರ ನಿರ್ದೇಶಕರ ಆಯ್ಕೆ

ಪುತ್ತೂರು: ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು ಕಳೆದ 25 ವರ್ಷಗಳಿಂದ ಕಾರ್ಯಾಚರಿಸುತ್ತಿದೆ. ಸಹಕಾರಿಯ ಸದಸ್ಯರಿಗೆ ನಿರಂತರವಾಗಿ ಗುಣಮಟ್ಟದ ತ್ವರಿತ ಸೇವೆಯನ್ನು ನೀಡುವ ಸಲುವಾಗಿ ಅನುಭವ ಹಾಗೂ ಕ್ರಿಯಾಶೀಲ ಆಡಳಿತ ಮಂಡಳಿಯಿದ್ದು ಇದಕ್ಕೆ ಪೂರಕವಾಗಿ ಇಬ್ಬರು ವೃತ್ತಿಪರ ನಿರ್ದೇಶಕರನ್ನು ಆಯ್ಕೆ ಮಾಡಲಾಗಿದೆ.



ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ 36 ವರ್ಷಗಳ ಸೇವಾನುಭವ ಹೊಂದಿರುವ ನಿವೃತ್ತ ಹಿರಿಯ ವ್ಯವಸ್ಥಾಪಕ, ಸರ್ಟಿಫೈಡ್ ಅಸೋಸಿಯೇಟ್ ಆಫ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕರ್ಸ್, ಬ್ಯಾಂಕಿಂಗ್ ಆಡಳಿತ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಮಂಗಳೂರಿನ ಪಾಂಡೇಶ್ವರ ನಿವಾಸಿ ಪುಷ್ಪಲತಾ ಎನ್. ಹಾಗೂ ಸುಳ್ಯ ತಾಲೂಕಿನ ಮಂಡೆಕೋಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಮುಖ್ಯ ಕಾರ್ಯನಿರ್ವಾಹಕರಾಗಿ ನಿವೃತ್ತರಾಗಿರುವ ಹಾಗೂ ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಳ್ಯದ ಮಂಡೆಕೋಲು ಗ್ರಾಮದ ಚಾಕೋಟೆ ನಿವಾಸಿ ಅನಂತಕೃಷ್ಣ ಬಿ. ಅವರು ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದು ಪ್ರಸ್ತುತ 400 ದಿನಗಳ ಸಾಮಾನ್ಯ ಸದಸ್ಯರ ಠೇವಣಿಗೆ ಶೇ.9.30 ಮತ್ತು ವಿಶೇಷ ಠೇವಣಿಗಳಿಗೆ ಶೇ.9.70 ಬಡ್ಡಿದರ ನೀಡಲಾಗುತ್ತಿದೆ. ನೂತನವಾಗಿ ಮೂರು ಶಾಖೆಗಳನ್ನು ಆರಂಭಿಸಲಾಗುವುದು ಇದರ ಸದುಪಯೋಗವನ್ನು ಪಡೆದುಕೊಂಡು ಸಹಕಾರಿಯ ಪ್ರಗತಿಯಲ್ಲಿ ಕೈಜೋಡಿಸುವಂತೆ ಸಹಕಾರಿಯ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಸಂತ ನಾಯಕ್ ಎ. ಅವರು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

10 ಎಕರೆ ಪ್ರದೇಶದಲ್ಲಿ ಬೆಳೆದ ಕಲ್ಲಂಗಡಿ ಬೆಳೆ ಸಂಪೂರ್ಣ ನಾಶ | ಸಂಕಷ್ಟಕ್ಕೆ ಸಿಲುಕಿದ ಹರ್ತಟ್ಟು ಕೃಷಿಕ

ಅಕಾಲಿಕ ಮಳೆ, ಹವಾಮಾನ ವೈಪರೀತ್ಯಕ್ಕೆ ನಲುಗಿದ ಕೃಷಿ!

ಕೋಟ: ಇಲ್ಲಿನ ಕೋಟ ಪಂಚಾಯತ್ ವ್ಯಾಪ್ತಿ ಸೇರಿದಂತೆ ಅನೇಕ ಭಾಗಗಳಲ್ಲಿ ಕೃಷಿಕರು ಕಲ್ಲಂಗಡಿ ಬೆಳೆಯನ್ನು ಲಾಭದಾಯಕ ಆದಾಯವಾಗಿಸಿದ್ದರು. ಆದರೆ ಇದೀಗ ಹವಾಮಾನ ವೈಪರೀತ್ಯದ ಪರಿಣಾಮ ಕಲ್ಲಂಗಡಿ ಬೆಳೆಗಾರರು ತಲೆಮೇಲೆ ಕೈಯಿಟ್ಟು ಕೂರುವ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ.

ಇಲ್ಲಿನ ಕೋಟದ ಹರ್ತಟ್ಟು ಕೃಷಿಕ ಸಿದ್ಧ (ಶ್ರೀಧರ) ದೇವಾಡಿಗ ಹಾಗೂ ಅಜಿತ್ ದೇವಾಡಿಗ ಸುಮಾರು 10 ಎಕರೆ ಕೃಷಿ ಭೂಮಿಯಲ್ಲಿ ಕಲ್ಲಂಗಡಿ ಬೆಳೆ ದಾಖಲೆ ಪ್ರಮಾಣದಲ್ಲಿ ಬೆಳೆದಿದ್ದಾರೆ. ಆದರೆ ಅಕಾಲಿಕ ಮಳೆ, ತಾಪಮಾನದ ಹೊಡೆತಕ್ಕೆ ಬೆಳೆ ಸಾಕಷ್ಟು ಪ್ರಮಾಣದಲ್ಲಿ ಹಾನಿಗೊಂಡಿದೆ.



ಬೇಸಿಗೆ ಬೇಗೆಗೆ ಹಣ್ಣಿಗೆ ಡಿಮ್ಯಾಂಡ್!

ಕಲ್ಲಂಗಡಿ ಬೆಳೆ ಡಿಮ್ಯಾಂಡ್ ಇದ್ದರೂ ಗದ್ದೆಯಲ್ಲಿ ಕಲ್ಲಂಗಡಿಯ ಸ್ಥಿತಿ ಕಂಡರೆ ಕೃಷಿಕನ ಪಾಡು ಅಯ್ಯೋ ಎನಿಸುತ್ತಿದೆ. 10 ಎಕರೆ ಪ್ರದೇಶದಲ್ಲಿ ಬೆಳೆದ ಬೆಳೆ ಇತ್ತೀಚಿಗೆ ಸುರಿದ ಮಳೆಯಿಂದ ಕಲ್ಲಂಗಡಿ ಕೊಳೆತು ನಾರುವಂತಾಗಿದೆ. ಹೀಗಿರುವಾಗ ಕೃಷಿಕ ಕೃಷಿ ಕಾಯಕದಲ್ಲಿ ಮುನ್ನುಡಿ ಬರೆಯಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಿದೆ.

ಹಡಿಲು ಭೂಮಿ ಹಸನಾಗಿಸಿದರು..!!!

ಇಲ್ಲಿನ ಹರ್ತಟ್ಟು ಹಾಡಿಕೆರೆಬೆಟ್ಟು ಕೃಷಿ ಭೂಭಾಗ ಸಾಕಷ್ಟು ಪ್ರದೇಶ ಹಡಿಲು ಭೂಮಿಯಾಗಿ ಪರಿವರ್ತನೆಗೊಂಡಿದ್ದು, ಇದರ ಮೇಲೆ ಹರ್ತಟ್ಟು ಸಿದ್ಧ ದೇವಾಡಿಗ ಆ ಭೂಮಿಯನ್ನು ಉಳುಮೆಗೊಳಿಸಿ ಇದೀಗ ಸುಂದರ ಕೃಷಿ ಭೂಮಿಯಾಗಿ ಸಿದ್ಧಪಡಿಸಿ ಕೃಷಿಗೆ ಯೋಗ್ಯವಾಗಿಸಿ ಬಂಗಾರದ ಬೆಳೆ ಬೆಳೆಯಲು ಅಣಿಯಾಗಿದ್ದಾರೆ. ಆದರೆ ವಾತಾವರಣ ಏರುಪೇರಿನಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ.

ನೀರಿಗಾಗಿ ಕೆರೆಯ ಹೂಳು ತೆಗೆದರು..!

ಕಲ್ಲಂಗಡಿ ಬೆಳೆಯ ಪ್ರಾರಂಭಿಕ ಉಳುಮೆ ಕಾರ್ಯದಿಂದ ಹಿಡಿದು ಗಿಡ ನೆಡುವವರೆಗೆ ಸಾಕಷ್ಟು ಪರಿಶ್ರಮ ಆಗತ್ಯವಾಗಿದೆ. ಆದಾದ ನಂತರ ಅದಕ್ಕೆ ಬೇಕಾಗುವ ಪೋಷಕಾಂಶಗಳನ್ನು ನೀಡುವುದು ಸೇರಿದಂತೆ ಆಗಾಗ ಸಮರ್ಪಕವಾಗಿ ನೀರು ಒದಗಿಸುವ ಅಗತ್ಯತೆಯೂ ಬಹುಮುಖ್ಯವಾಗಿದೆ. ಆದರೆ ಈ ಇರ್ವರು ಕೃಷಿಕರಿಗೆ ನೀರಿನ ಸಮಸ್ಯೆ ಎದುರಾದಾಗ ಜಮೀನಿನ ಸನಿಹದ ಕೆರೆಯ ಹೂಳು ತೆಗೆದು ನೀರು ವ್ಯವಸ್ಥೆ ಮಾಡಿಕೊಂಡಿದ್ದರು.

ಗದ್ದೆಯಲ್ಲೆ ಕಲ್ಲಂಗಡಿ ಗೋಳು

ಸಿದ್ಧ (ಶ್ರೀಧರ) ದೇವಾಡಿಗರು ಹೊಸ ಹೊಸ ಪ್ರಯೋಗಗಳ ಮೂಲಕ ಕಲ್ಲಂಗಡಿ ಹಣ್ಣು ಲಾಭದಾಯ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಅದರಲ್ಲಂತೂ ಈ ವರ್ಷ ತಾಪಮಾನಕ್ಕೆ ಕಲ್ಲಂಗಡಿ ಮಾರುಕಟ್ಟೆ ದರಲ್ಲೂ ಏರಿಕೆ ಕಂಡಿತ್ತು. ಈ ನಡುವೆ ವ್ಯವಹಾರ ಕುದುರಿಸಿ ಇನ್ನೇನು ಆದಾಯ ಕೈ ಸೇರಬೇಕೆನ್ನುವಷ್ಟರಲ್ಲಿ ಅಕಾಲಿಕ ಮಳೆ ಆದಾಯಕ್ಕೆ ಕೊಳ್ಳಿಯಿಟ್ಟಿದೆ. ಇತ್ತೀಚಿಗಿನ ವರ್ಷಗಳಲ್ಲಿ ಹೆಚ್ಚಿನ ಬೆಳೆಗಳು ರಾಸಾಯನಿಕ ಗೊಬ್ಬರ ಬಳಸಿ ಬೆಳೆ ಬೆಳೆಯುತ್ತಾರೆ. ಆದರೆ ಈ ಇರ್ವರು ಕೃಷಿಕರು ಕಲ್ಲಂಗಡಿ ಹಣ್ಣಿಗೆ ಆರಂಭದಿಂದ ಕೊನೆತನಕ ರಾಸಾಯನಿಕಕ್ಕೆ ಮೊರೆ ಹೋಗದೆ ಸಾವಯುವ ಗೊಬ್ಬರ ಬಳಸಿ ಸಮೃದ್ಧ ಕೃಷಿ ಮಾಡುತ್ತಿದ್ದಾರೆ.

> **ಕೃಷಿಗೆ ಹವಾಮಾನ ಸಂಚಕಾರದ ಭಯ**
>
> 
>
> ಪ್ರತಿವರ್ಷ ಕಲ್ಲಂಗಡಿ ಬೆಳೆ ಬೆಳೆಯುತ್ತಿದ್ದೇವೆ. ಆದರೆ ಗಿಡ ಅಥವಾ ಕಾಯಿ ಬಿಡುವುದರಲ್ಲಿ ಸಮಸ್ಯೆಗಳಿಲ್ಲ. ಒಂದು ರೀತಿಯಲ್ಲಿ ಇನ್ನೇನು ಫಸಲು ಕೈ ಸೇರುವ ಹಂತಕ್ಕೆ ಬಂದಾಗ ಅಕಾಲಿಕ ಮಳೆ ಬೆಳೆಗಾರರನ್ನು ಕಂಗೆಡಿಸಿದೆ. ಕಳೆದ ಸಾಕಷ್ಟು ವರ್ಷಗಳಿಂದ ಕಲ್ಲಂಗಡಿ ಬೆಳೆಯಲ್ಲಿ ಸಂತೃಪ್ತಿ ಕಂಡಿದ್ದೇನೆ. ಹವಾಮಾನ ಸಮಸ್ಯೆ ಮುಂದಿನ ದಿನಗಳಲ್ಲಿ ಎಲ್ಲಾ ಬೆಳೆಗೂ ಬೆಳೆ ಬೆಳೆಯುವುದಕ್ಕೂ ಸಂಚಕಾರವಾಗಲಿದೆ.
>
> ● **ಸಿದ್ಧ ದೇವಾಡಿಗ,** ಕಲ್ಲಂಗಡಿ ಬೆಳೆಗಾರರು ಹರ್ತಟ್ಟು ಕೋಟ

ಸುತ್ತ ಮುತ್ತ

ನಾಳೆ ಶ್ರೀ ಮಾಸ್ತಿ ಅಮ್ಮ ದೇವಸ್ಥಾನದ ಪ್ರತಿಷ್ಠಾ ವರ್ಧಂತಿ ಮಹೋತ್ಸವ

ಉಡುಪಿ: ಇಲ್ಲಿನ ಸಂತೆಕಟ್ಟೆಯ ರಾ.ಹೆ. 66 ರ ಅಂಬಾಗಿಲು ಸಮೀಪದ ಪುತ್ತೂರು ಶ್ರೀ ಮಾಸ್ತಿ ಅಮ್ಮ ದೇವಸ್ಥಾನದಲ್ಲಿ ಏ.19ರಂದು ಅಕ್ಷಯ ತೃತೀಯ ದಿನದಂದು ದೇವಳದ ಪ್ರತಿಷ್ಠಾ ವರ್ಧಂತಿ ಮಹೋತ್ಸವ ಜರುಗಲಿರುವುದು. ಅಂದು ಬೆಳಿಗ್ಗೆ ಪ್ರಾರ್ಥನೆ, ಪುಣ್ಯಾಹ, ಕಲಾ ಸಾನಿಧ್ಯಯುಕ್ತವಾಗಿ ಚಂಡಿಕಾಯಾಗ, ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ವಿಶೇಷ ಹೂವಿನ ಅಲಂಕಾರ ಪೂಜೆ, 12:30ಕ್ಕೆ ಮಹಾ ಮಂಗಳಾರತಿ, ತೀರ್ಥ– ಪ್ರಸಾದ ವಿತರಣೆ, ಬಳಿಕ ಸಾರ್ವಜನಿಕ ಮಹಾ 'ಅನ್ನ ಸಂತರ್ಪಣೆ' ಕಾರ್ಯಕ್ರಮ ನಡೆಯಲಿರುವುದು. ಸಂಜೆ 6ಕ್ಕೆ 'ದುರ್ಗಾ ನಮಸ್ಕಾರ ಪೂಜೆ' , ಮಹಾಪೂಜೆ. ರಾತ್ರಿ 8ಕ್ಕೆ ಶ್ರೀ ದೇವಿ ದರ್ಶನ, ಪ್ರಸಾದ ವಿತರಣೆ ನಡೆಯಲಿದೆ ಎಂದು ಗಾಂವ್ಕರ್ ಕುಟುಂಬಸ್ಥರ ಪ್ರಕಟಣೆಯಲ್ಲಿ ತಿಳಿಸಿದೆ.

ಕೆ.ಸಿ.ಕುಂದರ್ ಉದ್ಯಮ ಪುರಸ್ಕಾರಕ್ಕೆ ಆಯ್ಕೆ

ಕೋಟ: ಡಾ. ಶಿವರಾಮ ಕಾರಂತ ಪ್ರತಿಷ್ಠಾನ , ಕೋಟತಟ್ಟು ಗ್ರಾಮ ಪಂಚಾಯತ್ ಕೊಡಮಾಡುವ





ಕರಾವಳಿ ಕಣ್ಮಣಿ ದಿವಂಗತ ಕೆ. ಸಿ. ಕುಂದರ್ ಸ್ಮಾರಕ ಉದ್ಯಮ ಪುರಸ್ಕಾರಕ್ಕೆ ಉದ್ಯಮದಲ್ಲಿ ತಮ್ಮದೆ ವಿಶಿಷ್ಟವಾದ ಸ್ಥಾನ ಗಳಿಸಿರುವ ಅಲೆನ್ ರೋಹನ್ ವಾಜ್ ಕಲ್ಯಾಣಪುರ ಮತ್ತು ಗಣೇಶ ಪೂಜಾರಿ ಬಾರ್ಕೂರು ಅವರನ್ನು ಆಯ್ಕೆ ಮಾಡಲಾಗಿದೆ. ಮೇ 3ರ ಭಾನುವಾರ ಮಧ್ಯಾಹ್ನ 4ಕ್ಕೆ ಕಾರಂತ ಥೀಮ್ ಪಾರ್ಕ್‌ನಲ್ಲಿ ಪುರಸ್ಕಾರವನ್ನು ಪ್ರದಾನ ಮಾಡಲಾಗುವುದೆಂದು ಪ್ರತಿಷ್ಠಾನದ ಅಧ್ಯಕ್ಷ ಆನಂದ ಸಿ ಕುಂದರ್, ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ, ಪಂಚಾಯತ್ ಪಿಡಿಒ. ರವೀಂದ್ರ ರಾವ್, ಕಾರ್ಯದರ್ಶಿ ಸುಮತಿ ಅಂಚನ್ ಪ್ರಕಟಣೆ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಸುರಿಮಳೆ

ಕೊಂಬಾರು, ಶಿರಾಡಿ, ನೆಲ್ಯಾಡಿ, ಪೆರಾಬೆ, ಕಡಬ, ಕೋಡಿಂಬಾಳ ಗ್ರಾಮಗಳಲ್ಲಿ ಸುಮಾರು 25 ಕ್ಕೂ ಅಧಿಕ ವಿದ್ಯುತ್ ಕಂಬಗಳು ಮುರಿದು ಹೋಗಿದ್ದು ಕಡಬ ಮೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಇಇ) ಸಜಿಕುಮಾರ್ ಅವರ ನೇತೃತ್ವದಲ್ಲಿ ತಡರಾತ್ರಿಯ ತನಕ ಮುರಿದು ಹೋದ ಕಂಬಗಳ ಜಾಗದಲ್ಲಿ ಕಂಬಗಳನ್ನು ಮರುಸ್ಥಾಪಿಸುವ ಹಾಗೂ ವಿದ್ಯುತ್ ಲೈನ್ ಎಳೆಯುವ ಕಾರ್ಯಗಳನ್ನು ಯಶಸ್ವಿಯಾಗಿ ಮಾಡಲಾಗಿದೆ.

ರಾಮಕುಂಜ ಗ್ರಾಮದಲ್ಲಿ ಹಾನಿ

ರಾಮಕುಂಜ ಗ್ರಾಮದ ನೀರಾಜೆ ಸಮೀಪ ಕೂಟೇಲು ಎಂಬಲ್ಲಿ ಮನೆಯೊಂದಕ್ಕೆ ಸಿಡಿಲು ಬಡಿದು ಅಪಾರ ಹಾನಿ ಸಂಭವಿಸಿದೆ. ಕೂಟೇಲು ನಿವಾಸಿ ಸಫೀಯ ಎಂಬವರ ಮನೆಗೆ ಸಿಡಿಲು ಬಡಿದು ಮನೆಯ ಗೋಡೆ ಬಿರುಕು ಬಿಟ್ಟಿದೆ. ವಿದ್ಯುತ್ ಉಪಕರಣಗಳು ಹಾನಿಗೊಂಡಿದೆ, ತೆಂಗಿನ ಮರವೊಂದು ಭಾಗಶಃ ಹೊತ್ತಿ ಉರಿದಿದೆ. ಸಿಡಿಲು ತೆಂಗಿನ ಮರವೊಂದಕ್ಕೆ ಬಡಿದು ಬಳಿಕ ಮನೆಯ ಗೋಡೆಗೆ ಬಡಿದು, ಮತ್ತೆ ಮನೆಯ ಹೊರಗಡೆ 3 ಕಡೆಯಲ್ಲಿ ಗೋಡೆಗೆ ಬಡಿದು, ಹೊರಗಡೆಯಿಂದ ತೂರಿಬಂದು ಒಳಗಡೆಯ ಗೋಡೆಯಲ್ಲಿ ರಂಧ್ರ ಕೊರೆದ ರೀತಿಯಲ್ಲಿ ಬಿರುಕು ಬಿಟ್ಟಿದೆ. ಮನೆಯ ವಿದ್ಯುತ್ ಸಂಪರ್ಕದ ವೈರ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡು ಸುಟ್ಟು ಹೋಗಿ ಕರಕಲಾಗಿದೆ. ಕಿಟಕಿಯ ಗಾಜುಗಳು ಒಡೆದು ಹೋಗಿವೆ. ಮನೆಯಲ್ಲಿದ್ದವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗುಜ್ಜೆ!

ದೇವಸ್ಥಾನಗಳ ಹಬ್ಬದ ಸಂದರ್ಭದಲ್ಲಿ ಹಾಗೂ ಸಾಮುದಾಯಿಕ ಕಾರ್ಯಕ್ರಮಗಳಲ್ಲಿ ಗುಜ್ಜೆಯ ಅಡುಗೆಗೆ ಮೊದಲ ಆದ್ಯತೆ ನೀಡಲಾಗುತ್ತದೆ. ವಿಶೇಷವಾಗಿ ಇಲ್ಲಿನ ಸಸ್ಯಾಹಾರಿಗಳ ಪಾಲಿಗೆ ಗುಜ್ಜೆ ಕಬಾಬ್ ಅತ್ಯಂತ ನೆಚ್ಚಿನ ತಿನಿಸಾಗಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ತಯಾರಿಸುವ ಗುಜ್ಜೆಯ ಖಾದ್ಯಗಳು ಎಂತವರ ಬಾಯಲ್ಲೂ ನೀರೂರಿಸುವ ಶಕ್ತಿ ಹೊಂದಿದೆ.

ಗ್ರೀನ್ ಸಿಗ್ನಲ್

ಇಡೀ ಆಸ್ಪತ್ರೆಯನ್ನು ಖಾಸಗಿಗೆ ಒಪ್ಪಿಸುವುದು ಈ ಒಡಂಬಡಿಕೆ ತಿರುಳಲ್ಲ ಎಂದು ಸರಕಾರಿ ಆಸ್ಪತ್ರೆಯ ಮೂಲಗಳು ತಿಳಿಸುತ್ತವೆ. ಇದೀಗ ಸರಕಾರದ ಈ ನಿರ್ಧಾರಕ್ಕೆ ಕೆಲ ಹೋರಾಟಗಾರರಿಂದ ಆಕ್ಷೇಪಗಳು ವ್ಯಕ್ತವಾಗಿದೆ. ದ.ಕ. ಜಿಲ್ಲೆಯ ನಾನಾ ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆಸ್ಪತ್ರೆಗಳನ್ನು ಬಡಜನರಿಗೆ ಉಚಿತ ಆರೋಗ್ಯ ಸೇವೆ ನೀಡುವ ಸರಕಾರಿ ಆಸ್ಪತ್ರೆಗಳು ಜನಸಾಮಾನ್ಯರಿಗೆ ವರದಾನವಾಗಿತ್ತು. ಇದೀಗ ಏಕಾಏಕಿ ಸರಕಾರಿ ಆಸ್ಪತ್ರೆಗಳನ್ನು ಖಾಸಗಿ ಆಸ್ಪತ್ರೆಗಳೊಂದಿಗೆ ಕರಾರು ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸರಕಾರಿ ಆಸ್ಪತ್ರೆಗಳನ್ನು ಬಡಜನರ ಸುಲಿಗೆ ಕೇಂದ್ರವಾಗಿ, ಬಡ ರೋಗಿಗಳನ್ನು ಗುರಾಣಿಯಂತೆ ಪ್ರಯೋಗ ಶಾಲೆಯಲ್ಲಿ ಉಪಯೋಗಿಸಲು ಅವಕಾಶ ಮಾಡಿಕೊಟ್ಟಿದೆ. ಸರಕಾರಕ್ಕೆ ಸಂವಿಧಾನಬದ್ಧ ಉಚಿತ ಆರೋಗ್ಯ ಸೇವೆ ನೀಡಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಂಡಂತಾಗಿದೆ. ಯಾವುದೇ ಕಾರಣಕ್ಕೂ ಬಡಜನರ ಜೀವನ ದಲ್ಲಿ ಚೆಲ್ಲಾಟವಾಡಲು ಅವಕಾಶ ನೀಡುವುದಿಲ್ಲ, ಒಂದುವೇಳೆ ಈ ಒಡಂಬಡಿಕೆಯಿಂದ ಹಿಂದೆ ಸರಿಯದಿದ್ದರೆ ಪ್ರತಿಭಟನೆಗೂ ಹೋರಾಟಗಾರರು ಸಿದ್ಧತೆ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಬಿಲ್ಲಾಡಿಯಲ್ಲಿ ಮಂದಾರ್ತಿ ನೂತನ ಶಾಖೆ | ಏ.20ರಂದು ಉದ್ಘಾಟನೆ

ಹವಾನಿಯಂತ್ರಿತ ಕಟ್ಟಡ ಲೋಕಾರ್ಪಣೆಗೆ ಸಜ್ಜು

ಉಡುಪಿ: ಬಿಲ್ಲಾಡಿಯಲ್ಲಿ ಮಂದಾರ್ತಿ ಸೇವಾ ಸಹಕಾರ ಸಂಘದ ನೂತನ ಸಹಕಾರ ಸಧ್ದಿ ಸಂಪೂರ್ಣ ಹವಾ ನಿಯಂತ್ರಿತ ನೂತನ ಶಾಖೆಯ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ ಏ.20ಕ್ಕೆ ಬೆಳಗ್ಗೆ 10.30ಕ್ಕೆ ಬಿಲ್ಲಾಡಿ ಶಾಖಾ ವಠಾರದಲ್ಲಿ ನಡೆಯಲಿದೆ.



ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿ., ಬೆಂಗಳೂರು ಅಧ್ಯಕ್ಷ ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಶಾಖಾ ಕಚೇರಿ ಉದ್ಘಾಟಿಸಲಿದ್ದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂದಾರ್ತಿ ಸೇವಾ ಸಹಕಾರ ಸಂಘದ ಅಧ್ಯಕ್ಷ ಎಚ್. ಗಂಗಾಧರ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಳ್ವೆ ವ್ಯವಸಾಯ ಸೇವಾ ಸಹಕಾರಿ ಸಂಘ ನಿರ್ದೇಶಕ ಡಾ. ಐಕಳಬಾವ ದೇವಿಪ್ರಸಾದ್ ಶೆಟ್ಟಿ ಬೆಳ್ವೆ ಭದ್ರತಾಕೋಶವನ್ನು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಭದ್ರತಾ ಕೊಠಡಿಯನ್ನು ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಬಿ.ಜಯಕರ ಶೆಟ್ಟಿ ಇಂದ್ರಾಳಿ ಗೋದಾಮನ್ನು ಉಡುಪಿ ತಾಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಸಂಘ ಅಧ್ಯಕ್ಷ ಬಿ.ಅಶೋಕ್ ಕುಮಾರ್ ಶೆಟ್ಟಿ ಮೈರ್ಮಾಡಿ ಕಂಪ್ಯೂಟರ್ ಅನ್ನು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಎಚ್. ಧನಂಜಯ ಶೆಟ್ಟಿ ಸ್ವ-ಸಹಾಯ ಸಂಘವನ್ನು ಉದ್ಘಾಟಿಸಲಿದ್ದಾರೆ. ಮಂದಾರ್ತಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಚ್.ವಿಠಲ ಶೆಟ್ಟಿ ಸಾಲ ಪತ್ರ ವಿತರಿಸಲಿದ್ದು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಆರ್ಡಿ ಕುಮಾರ್ ಶೆಟ್ಟಿ ಬೆಳ್ವೆ ಠೇವಣಿ ಪತ್ರ ಬಿಡುಗಡೆ ಮಾಡಲಿದ್ದಾರೆ.

ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ರಾಜೇಶ್ ರಾವ್ ಉಳಿತಾಯ ಖಾತೆ ಪುಸ್ತಕ ವಿತರಣೆ ಮಾಡಲಿದ್ದಾರೆ. ಉಡುಪಿ ಜಿಲ್ಲೆ ಸಹಕಾರ ಸಂಘಗಳ ಉಪನಿಬಂಧಕರಾದ ಕೆ.ಆರ್.ಲಾವಣ್ಯ, ಕುಂದಾಪುರ ವಿಭಾಗದ ಸಹಕಾರ ಸಂಘಗಳ ಸಹಾಯಕ ಉಪನಿಬಂಧಕ ಜೆ, ಸುಧೀರ್ ಕುಮಾರ್ ಉಪಸ್ಥಿತರಿರುವರು ಎಂದು ಸಂಘದ ಅಧ್ಯಕ್ಷ ಎಚ್. ಗಂಗಾಧರ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> **ಸದಸ್ಯರಿಗೆ ಉತ್ತಮ ಸೇವೆ**
>
> ಮಂದಾರ್ತಿ ಸೇವಾ ಸಹಕಾರ ಸಂಘವು ಅನೇಕ ವರ್ಷದಿಂದ ಗ್ರಾಮಗಳ ಸದಸ್ಯರಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಆಯಾ ಗ್ರಾಮದ ಸದಸ್ಯರಿಗೆ ಇನ್ನೂ ಹತ್ತಿರದಲ್ಲಿ ಅವರಿಗೆ ಅನುಕೂಲ ಆಗುವ ಹಾಗೆ ಗ್ರಾಮಕ್ಕೊಂದು ಶಾಖೆಯನ್ನು ಪ್ರಾರಂಭಿಸಿದ್ದು ಈಗಾಗಲೇ ಹೆಗ್ಗುಂಜೆ ಗ್ರಾಮ, ನಡೂರು ಗ್ರಾಮ, ಶಿರೂರು ಗ್ರಾಮಗಳಲ್ಲಿ ಶಾಖೆಯನ್ನು ಹೊಂದಿದ್ದು ಈಗ ನಾಲ್ಕನೇ ಶಾಖೆ ಬಿಲ್ಲಾಡಿ ಗ್ರಾಮದ ಬಸ್ರೀಬೇರಕಟ್ಟೆಯಲ್ಲಿ ಲೋಕಾರ್ಪಣೆಗೊಳ್ಳಲಿದೆ. ಮುಂದಿನ ದಿನದಲ್ಲಿ ಬಿಲ್ಲಾಡಿ ಗ್ರಾಮಸ್ಥರ ಅಭಿವೃದ್ಧಿಯಲ್ಲಿ ಮಂದಾರ್ತಿ ಸೇವಾ ಸಹಕಾರ ಸಂಘವು ಸಂಪೂರ್ಣ ಸಾಥ್ ನೀಡಲಿದ್ದು ಇದು ಗ್ರಾಮದ ಆರ್ಥಿಕತೆಗೆ ನೆರವಾಗಲಿದೆ.
>
> ● **ಎಚ್.ಗಂಗಾಧರ ಶೆಟ್ಟಿ** ಅಧ್ಯಕ್ಷ, ಮಂದಾರ್ತಿ ಸೇವಾ ಸಹಕಾರ ಸಂಘ

ಆರ್. ಎನ್. ಶೆಟ್ಟಿ ಪಿಯು ಕಾಲೇಜಿಗೆ ಶೇ.99.1 ಫಲಿತಾಂಶ ಸಾಧನೆ

ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ: ಸುಕುಮಾರ್ ಶೆಟ್ಟಿ

ಕುಂದಾಪುರ: ಭರ್ತಿ ಐವತ್ತು ವರ್ಷಗಳನ್ನು ಪೂರೈಸಿರುವ ಕುಂದಾಪುರ ಎಜುಕೇಶನ್ ಸೊಸೈಟಿ ಅಧೀನದಲ್ಲಿರುವ ಕುಂದಾಪುರದ ಆರ್. ಎನ್. ಶೆಟ್ಟಿ ಪದವಿ ಪೂರ್ವ ಕಾಲೇಜು, ವಿ.ಕೆ.ಆರ್. ಮತ್ತು ಎಚ್.ಎಂ.ಎಂ. ಶಾಲೆಗಳಲ್ಲಿ ರ್‍ಯಾಂಕ್‌ಗಿಂತ ಗುಣಮಟ್ಟದ ಶಿಕ್ಷಣ ಹಾಗೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ. ಅತಿ ಹೆಚ್ಚು ಅಂಕ ಪಡೆದವರ ಜತೆಗೆ ಕಡಿಮೆ ಅಂಕ ಬಂದವರನ್ನು ಸಹ ದಾಖಲಾತಿ ಮಾಡಿಕೊಂಡು, ಅವರನ್ನು ಮುನ್ನೆಲೆಗೆ ತರುವ ಪ್ರಯತ್ನ ನಮ್ಮದು ಎಂದು ಕುಂದಾಪುರ ಎಜುಕೇಶನ್ ಸೊಸೈಟಿ ಅಧ್ಯಕ್ಷ, ಬೈಂದೂರು ಮಾಜಿ ಶಾಸಕ ಬಿ.ಎಂ. ಸುಕುಮಾರ್ ಶೆಟ್ಟಿ ಹೇಳಿದರು.



ಕಳೆದ ವರ್ಷ ರಾಜ್ಯಕ್ಕೆ 9 ರ್‍ಯಾಂಕ್

ಅವರು ಶುಕ್ರವಾರ ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿ.ಕೆ.ಆರ್ ಮತ್ತು ಎಚ್.ಎಂ.ಎಂ. ಶಾಲೆಗಳಲ್ಲಿ 1,700 ಮಕ್ಕಳಿದ್ದು, ನುರಿತ ಬೋಧಕ ವರ್ಗವಿದೆ. ಕಳೆದ ವರ್ಷ ರಾಜ್ಯಕ್ಕೆ 9 ರ್‍ಯಾಂಕ್ ಬಂದಿತ್ತು. ಡಾ. ಬಿ.ಬಿ. ಹೆಗ್ಡೆ ಕಾಲೇಜು ಮಂಗಳೂರು ವಿವಿ ವ್ಯಾಪ್ತಿಯಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದೆ ಎಂದರು.

ಶೇ.99 ಫಲಿತಾಂಶ

ಕುಂದಾಪುರದ ಪ್ರತಿಷ್ಠಿತ ಆರ್. ಎನ್. ಶೆಟ್ಟಿ ಪದವಿ ಪೂರ್ವ ಕಾಲೇಜಿನಲ್ಲಿ 328 ಮಕ್ಕಳು ಪರೀಕ್ಷೆ ಬರೆದಿದ್ದು 325 ಮಂದಿ ಉತ್ತೀರ್ಣರಾಗಿದ್ದು ಶೇ.99.1 ಫಲಿತಾಂಶ ಬಂದಿದೆ. ಮೂವರಿಗೆ ರ್‍ಯಾಂಕ್ ಬಂದಿದೆ. 140 ಮಕ್ಕಳು ವಿಶಿಷ್ಟ ಹಾಗೂ 161 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ನಮ್ಮಲ್ಲಿ ಶೇ.30 – 40 ಅಂಕ ಬಂದವರನ್ನು ಸಹ ದಾಖಲಾತಿ ಮಾಡಿಕೊಂಡು, ಶೇ.80 ಅಂಕ ಬರುವ ರೀತಿಯಲ್ಲಿ ಅವರನ್ನು ಕಲಿಸಲಾಗುತ್ತಿದೆ. 20–25 ವರ್ಷಗಳ ಅನುಭವ ಇರುವಂತಹ ಬೋಧಕ ವರ್ಗವಿದೆ. ಸಾಂಸ್ಕೃತಿಕ, ಕ್ರೀಡಾ ವಿಭಾಗದಲ್ಲಿ ನಿರಂತರ ತರಬೇತಿ ನೀಡಲಾಗುತ್ತಿದ್ದು, ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಮಿಂಚುತ್ತಿದ್ದಾರೆ ಎಂದವರು ಹೇಳಿದರು.

ವಿದ್ಯಾರ್ಥಿ ಶುಲ್ಕದಲ್ಲಿ ರಿಯಾಯಿತಿ

ಕುಂದಾಪುರ ಎಜುಕೇಶನ್ ಸೊಸೈಟಿ ಅಧೀನದಲ್ಲಿರುವ ವಿದ್ಯಾಸಂಸ್ಥೆಗಳ ಮೂಲಕ ಪ್ರತಿವರ್ಷ ಸುಮಾರು 60 ಲಕ್ಷ ರೂ. ವಿದ್ಯಾರ್ಥಿ ಶುಲ್ಕದಲ್ಲಿ ರಿಯಾಯಿತಿ ನೀಡುತ್ತಿದ್ದು ಅತ್ಯಂತ ಕಡಿಮೆ ಶುಲ್ಕದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶದ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ ಎಂದು ಬಿ.ಎಂ. ಸುಕುಮಾರ್ ಶೆಟ್ಟಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕುಂದಾಪುರ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಸೀತಾರಾಮ ನಕ್ಕತ್ತಾಯ, ಡಾ. ಬಿ.ಬಿ. ಹೆಗ್ಡೆ ಕಾಲೇಜು ಪ್ರಾಂಶುಪಾಲ ಡಾ. ಕೆ. ಉಮೇಶ್ ಶೆಟ್ಟಿ ಆರ್.ಎನ್. ಶೆಟ್ಟಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ನವೀನ್ ಶೆಟ್ಟಿ ಉಪಸ್ಥಿತರಿದ್ದರು.

> **ಬಡ ಮಕ್ಕಳ ಸುಲಿಗೆ ಸಲ್ಲ**
>
> ಕುಂದಾಪುರ ಪರಿಸರದ ಕೆಲವು ವಿದ್ಯಾಸಂಸ್ಥೆಗಳು ಗ್ರಾಮೀಣ ಪ್ರದೇಶದ ಬಡ ಜನರನ್ನು ಮೂರ್ಖರನ್ನಾಗಿ, ಮರಳು ಮಾಡಿ ಶಿಕ್ಷಣದ ಹೆಸರಿನಲ್ಲಿ ಲಕ್ಷಾಂತರ ರೂ. ಸುಲಿಗೆ ಮಾಡುತ್ತಿದ್ದಾರೆ. ಈ ಮೂಲಕ ಸಮಾಜವನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ನಡೆಯುತ್ತಿರುವುದು ದುರಾದೃಷ್ಟಕರ. ರ್‍ಯಾಂಕ್ ತೋರಿಸಿ ಪಾಪದ ಹಳ್ಳಿ ಜನರನ್ನು ವಂಚಿಸುವ ಕೆಲಸ ನಡೆಯುತ್ತಿದ್ದು, ಈ ಬಗ್ಗೆ ಪಶ್ಚಾತ್ತಾಪ ನೋವು ಉಂಟಾಗುತ್ತಿದೆ.
>
> ● **ಬಿ.ಎಂ. ಸುಕುಮಾರ್ ಶೆಟ್ಟಿ** ಮಾಜಿ ಶಾಸಕ

ಹೆಬ್ರಿಯಲ್ಲಿ ಅಲಯನ್ಸ್ ಕ್ಲಬ್‌ಗಳ ನೂತನ ಪದಾಧಿಕಾರಿಗಳ ಪದಪ್ರದಾನ



ಹೆಬ್ರಿ: ಅಲಯನ್ಸ್ ಕ್ಲಬ್ ಹೆಬ್ರಿ ಮತ್ತು ಲೇಡೀಸ್ ಅಲಯನ್ಸ್ ಕ್ಲಬ್ ಹೆಬ್ರಿ ಸಿಟಿ ಇದರ 2026–2027 ಸಾಲಿನ ಪದಾಧಿಕಾರಿಗಳ ಪದಪ್ರದಾನ ಸಮಾರಂಭವು ಹೆಬ್ರಿ ಸಮಾಜ ಮಂದಿರದಲ್ಲಿ ನಡೆಯಿತು.

ಪದಪ್ರಧಾನ ಅಧಿಕಾರಿಯಾಗಿ ಆಗಮಿಸಿದ 275 ಎಸ್. ಇದರ ಪ್ರಥಮ ಉಪ ಜಿಲ್ಲಾ ಗವರ್ನರ್ ಕೆ. ಸುಧಾಕರ ಹೆಗ್ಡೆ ಪದಪ್ರಧಾನ ಕಾರ್ಯಕ್ರಮ ನೆರವೇರಿಸಿದರು. ನಿಕಟಪೂರ್ವ ಅಧ್ಯಕ್ಷ ಕೆ. ರಾಮಚಂದ್ರ ಭಟ್, ಕಾರ್ಯದರ್ಶಿಯಾಗಿದ್ದ ಬಾಲಚಂದ್ರ. ಎಂ ರವರಿಗೆ ಅಧ್ಯಕ್ಷ ಸ್ಥಾನ ಅಧಿಕಾರ ಹಸ್ತಾಂತರಿಸಿದರು. ಬಾಲಚಂದ್ರ. ಎಂ ರವರು ಸದಸ್ಯರಾಗಿದ್ದ ಸುರೇಶ್ ನಾಯ್ಕ್ ರವರಿಗೆ ಕಾರ್ಯದರ್ಶಿ ಸ್ಥಾನ ಅಧಿಕಾರ ಹಸ್ತಾಂತರಿಸಿದರು. ಕೋಶಾಧಿಕಾರಿ ಅಮೃತ ಆರ್. ಧ್ವಜ ವಂದನೆ ಹೇಳಿದರು. ಕಳೆದ ಸಾಲಿನ ಅಲಯನ್ಸ್ ಕ್ಲಬ್ ಹೆಬ್ರಿ ಸಿಟಿಯ ಪದಾಧಿಕಾರಿಗಳು 2026–2027 ಕ್ಕೆ ಮುಂದುವರಿದು ಪ್ರಮಾಣ ವಚನ ಸ್ವೀಕರಿಸಿದರು. ಲೇಡೀಸ್ ಅಲಯನ್ಸ್ ಕ್ಲಬ್‌ನ ಕಾರ್ಯದರ್ಶಿ ರಮ್ಯಕಾಂತಿ ವರದಿ ಮಂಡಿಸಿದರು. ಕೋಶಾಧಿಕಾರಿ ಸುರೇಶ ಪೂಜಾರಿ ಪದಗ್ರಹಣ ಅಧಿಕಾರಿಯ ಪರಿಚಯ ಮಾಡಿದರು. ಜಿಲ್ಲಾ ಸಂಪುಟದ ದ್ವಿತೀಯ ಉಪ ಜಿಲ್ಲಾ ಗವರ್ನರ್ ಡಾ. ಅಶೋಕ್ ಕುಮಾರ್ ವೈ. ಜಿ, ಕೋಶಾಧಿಕಾರಿ ಜಯರಾಮ ಆಚಾರ್ಯ ಹಾಗೂ ಹೆಬ್ರಿ ಲೇಡೀಸ್ ಅಲಯನ್ಸ್ ಕ್ಲಬ್ಬಿನ ಮುಖ್ಯ ಸಲಹೆಗಾರ ಡಾ. ಭಾರ್ಗವಿ ಐತಾಳ್ ಶುಭ ಹಾರೈಸಿದರು. ಪದಪ್ರಧಾನ ಅಧಿಕಾರಿ ಕೆ.ಸುಧಾಕರ ಹೆಗ್ಡೆ ಮತ್ತು ನಿರ್ಗಮನ ಅಧ್ಯಕ್ಷರಾದ ಕೆ. ರಾಮಚಂದ್ರ ಭಟ್ ರವರನ್ನು ಕ್ಲಬ್ ಗಳ ಪರವಾಗಿ ಸನ್ಮಾನಿಸಲಾಯಿತು. ಅಲಯನ್ಸ್ ಕ್ಲಬ್ ಹೆಬ್ರಿ ಸಿಟಿಯ ಅಧ್ಯಕ್ಷೆ ಸುನೀತ ಹೆಬ್ಬಾರ್ ಸ್ವಾಗತಿಸಿ, ಪ್ರಾಸ್ತಾಪಿಸಿದರು. ಕಾರ್ಯದರ್ಶಿ ಸುರೇಶ ನಾಯ್ಕ್ ವಂದಿಸಿದರು. ಮೆಂಬರ್ಶಿಪ್ ಚೈರ್ ಪರ್ಸನ್ ಮಹೇಶ್ ಹೈಕಾಡಿ ಕಾರ್ಯಕ್ರಮ ನಿರೂಪಿಸಿದರು.

ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂಪನ್ನ



ಬೈಂದೂರು: ಶಿರೂರಿನ ಐತಿಹಾಸಿಕ ಪ್ರಸಿದ್ಧ ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಅತ್ಯಂತ ವೈಭವದಿಂದ ಸಂಪನ್ನಗೊಂಡಿತು.

ಶ್ರೀಕ್ಷೇತ್ರ ಹಟ್ಟಿಯಂಗಡಿ ದೇವಸ್ಥಾನದ ಅನುವಂಶಿಕ ಆಡಳಿತ ಧರ್ಮದರ್ಶಿ ಬಾಲಚಂದ್ರ ಭಟ್ ಅವರು ದೇವಸ್ಥಾನದ ಜೀರ್ಣೋದ್ದಾರ ಕಾರ್ಯ ದಲ್ಲಿ ಸಹಕರಿಸಿದ ಸರ್ವರನ್ನು ಹಾಗೂ ಧನಸಹಾಯ ನೀಡಿದ ದಾನಿಗಳನ್ನು ಗೌರವಿಸಿ ಶುಭಕೋರಿದರು.

ಬೊಬ್ಬರ್ಯ ದೈವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಶ್ರೀಪಾದ ಕುಮಾರ್ ಮೊಗೇರ್ ಅಧ್ಯಕ್ಷತೆ ವಹಿಸಿದ್ದರು. ಸಿದ್ದಿ ಸಮಾಜ ಯೋಗಗುರು ಕೇಶವ ಬೆಳ್ನಿ, ಸೋಡಿಗದ್ದೆ ಮಹಾಸತಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ದೇವಿದಾಸ್ ಮೊಗೇರ್, ಅಳ್ವೆಗದ್ದೆ ನಾಡದೋಣಿ ಮೀನುಗಾರರ ಸಂಘದ ಅಧ್ಯಕ್ಷ ಶ್ರೀಧರ ಅಣ್ಣಪ್ಪ, ಉದ್ಯಮಿ ಮೋಹನ ಕುಷ್ಟು ಪೂಜಾರಿ, ತಾ.ಪಂ. ಮಾಜಿ ಸದಸ್ಯ ಪುಷ್ಪರಾಜ್ ಶೆಟ್ಟಿ, ಪತ್ರಕರ್ತ ಅರುಣ್ ಕುಮಾರ್ ಶಿರೂರು, ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ರಾಮ ಎನ್. ಅಳ್ವೆಗದ್ದೆ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಣಪತಿ ಎಸ್. ಮೊಗವೀರ, ಗೌರವಾಧ್ಯಕ್ಷ ನಾರಾಯಣ ಟಿ. ಅಳ್ವೆಗದ್ದೆ ಬೆಣ್ಣೆಕುದ್ರು ಮೊಗವೀರ ಮಹಾಸಭಾ ಬಾರ್ಕೂರು ಸಂಸ್ಥಾನದ ಅಧ್ಯಕ್ಷ ಸತೀಶ ಅಮೀನ್, ಪ್ರಮುಖರಾದ ಕೃಷ್ಣ ಮೊಗೇರ್, ಎಸ್. ಪ್ರಕಾಶ್ಚಂದ್ರ ಶೆಟ್ಟಿ, ಅಕ್ಷಯ ನಾರಾಯಣ ಮಾಸ್ತಿ, ನಾರಾಯಣ ಎಸ್. ಮೊಗವೀರ, ಗಣಪತಿ ಬಡಿಯಪ್ಪ ಮೊಗವೀರ, ಪದ್ಮಯ್ಯ ಎಸ್. ಮೊಗೇರ್ ಉಪಸ್ಥಿತರಿದ್ದರು.

ದೇವಸ್ಥಾನದ ಅರ್ಚಕ ರಾಮಚಂದ್ರ ಭಟ್ ಹಾಗೂ ಕರ ಸೇವೆ ಮಾಡಿದ ಭಕ್ತಾದಿಗಳನ್ನು ಗೌರವಿಸಲಾಯಿತು. ಗೌರವಾಧ್ಯಕ್ಷ ರಾಮ ಕೆ. ದೊಡ್ಡನೆ ಪ್ರಾಸ್ತಾವಿಸಿದರು. ಪಾಂಡುರಂಗ ಮೊಗೇರ್ ಸ್ವಾಗತಿಸಿ, ಲೋಕೇಶ್ ಮೊಗೇರ್ ಕಾರ್ಯಕ್ರಮ ನಿರೂಪಿಸಿದರು. ಅಜೇಯ್ ಶಂಕರ್ ವಂದಿಸಿದರು.



ಪಡುಬಿದ್ರಿ, ಉದಯಾದ್ರಿ ಶ್ರೀ ಪ್ರಸನ್ನ ಪಾರ್ವತಿ ದೇವಸ್ಥಾನದ ಸಭಾಂಗಣ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ನೀಡಿದ 3 ಲ.ರೂ. ಅನುದಾನದ ಮಂಜೂರಾತಿ ಪತ್ರವನ್ನು ತಾಲೂಕು ಯೋಜನಾಧಿಕಾರಿ ಮಮತಾ ಶೆಟ್ಟಿ ಹಸ್ತಾಂತರಿಸಿದರು. ಪ್ರಮುಖರಾದ ಜಗದಾಭಿ ರಾಮ, ಪಿಡಿ ಚಂದ್ರಶೇಖರ್ ರಾವ್, ಭುಜಂಗ ಆಚಾರ್ಯ, ಶ್ರೀನಿವಾಸ ಶರ್ಮ, ಜನಾರ್ದನ ರಾವ್, ನಯನಾಭಿರಾಮ ಸ್ವಾಮಿ, ಶಶಿಕಾಂತ್ ಪಡುಬಿದ್ರಿ ಮತ್ತಿತರರು ಇದ್ದರು.



ಶಿರ್ವ ಸಂತಮೇರಿ ಕಾಲೇಜಿನ ಸಾಹಿತ್ಯ ಸಂಘ ಹಾಗೂ ಭಾಷಾ ವಿಭಾಗಗಳ ಸಹಯೋಗದಲ್ಲಿ ಇತ್ತೀಚೆಗೆ ಕಾಲೇಜು ಶೈಕ್ಷಣಿಕ ಕ್ಷೇತ್ರ ಸಂದರ್ಶನ ನಡೆಯಿತು. ಕನ್ನಡ ಹಾಗೂ ಸಾಹಿತ್ಯ ಸಂಘದ ಸಂಯೋಜಕ ಡಾ.ಗುಲಾಬಿ ಪೂಜಾರಿ, ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಕೊಸ್ತಾಂವ್ ಗೊನ್ಸಾಲ್ವಿಸ್, ಹಿಂದಿ ವಿಭಾಗದ ಉಪನ್ಯಾಸಕಿ ಸೆಲಿನ್ ಜಾನೆಟ್ ಡಿಸೋಜ, ಕಾಲೇಜಿನ ಐಕ್ಯೂಎಸಿ ಸಂಯೋಜಕ ಜಗದೀಶ್ ಆಚಾರ್ಯ, ವಾಣಿಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ರಾಘವೇಂದ್ರ ಹೆಗಡೆ ಭಾಗವಹಿಸಿದ್ದರು.

100 ಕುಟುಂಬಗಳು ವಾಸವಾಗಿರುವ ಎತ್ತರ ಭೂ ಪ್ರದೇಶ | ಹೊಸೂರು ದೇವಳಕ್ಕೆ ರಸ್ತೆ ಕೊರತೆ, ಈಡೇರದ ಸೇತುವೆ ಬೇಡಿಕೆ

ಮೂಲಸೌಕರ್ಯಗಳಿಂದ ವಂಚಿತವಾಗಿದೆ ಪಶ್ಚಿಮ ಘಟ್ಟದ ತಪ್ಪಲಿನ ಗ್ರಾಮ!

ಬೈಂದೂರು: ಯಡ್ತರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಹೊಸೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವನ್ನು ಸಂಪರ್ಕಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ಈ ಊರಿನ ಜನತೆ ಇದೀಗ ನಿತ್ಯ ಪರದಾಡುವಂತಾಗಿದೆ.

ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ತುತ್ತತುದಿಯ ಈ ಪ್ರದೇಶ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ. ಸುಮಾರು 60 ರಿಂದ 100 ಕುಟುಂಬಗಳು ವಾಸವಾಗಿರುವ ಈ ಪ್ರದೇಶ ಪಶ್ಚಿಮ ಘಟ್ಟದ ತಪ್ಪಲಿನಲ್ಲಿದೆ. ಇಲ್ಲಿನ ಜನರು ಪೌರಾಣಿಕ ಹಿನ್ನೆಲೆಯಿರುವ ಶ್ರೀ ದುರ್ಗಾಪರಮೇಶ್ವರಿ ದೇವಿಯನ್ನು ಪೂಜಿಸುತ್ತಾರೆ. ಈ ದೇವಸ್ಥಾನಕ್ಕೆ ಹೋಗಲು ಸುಸಜ್ಜಿತವಾದ ರಸ್ತೆಗಳಿಲ್ಲ. ಹೀಗಾಗಿ ಕಿರಿದಾದ ಕಾಡಿನ ಹಾದಿಯಲ್ಲೆ ಸಾಗಬೇಕಾಗಿದೆ. ಮಳೆಗಾಲದಲ್ಲಿ ನೀರಿನ ಒತ್ತಡ ಮತ್ತು ಗುಡ್ಡದ ಭಾಗದಿಂದ ನೀರಿನ ಹರಿವು ಅಧಿಕವಾಗಿರುವ ಕಾರಣ ಬೇಸಿಗೆಯಲ್ಲಿ ನಿರ್ಮಿಸಿಕೊಂಡಿರುವ ರಸ್ತೆ ಕೊಚ್ಚಿ ಹೋಗುತ್ತದೆ. ಬೇಸಿಗೆಯಲ್ಲೂ ಯಾವುದೇ ಲಘು ವಾಹನ ಸಂಚರಿಸಲು ಕೂಡ ಸಾಧ್ಯವಿಲ್ಲ. ಕಳೆದ ಹಲವು ವರ್ಷಗಳಿಂದ ಸ್ಥಳೀಯರು ಸಂಬಂಧಿಸಿದ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮನವಿ ನೀಡಿದರೂ ಪ್ರಯೋಜನವಾಗಿಲ್ಲ ಎಂಬುದು ಗ್ರಾಮಸ್ಥರ ಅಳಲು.



> **ರಸ್ತೆ, ಸೇತುವೆ ಅಗತ್ಯ**
>
> ಹೊಸೂರಿನಿಂದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಾಗಲು ಮುಖ್ಯವಾಗಿ ರಸ್ತೆ ಸುಧಾರಣೆಯಾಗಬೇಕಿದೆ. ಮಾತ್ರವಲ್ಲದೆ ಇಲ್ಲಿನ ಜನರು ತಾತ್ಕಾಲಿಕ ಮರದ ಸೇತುವೆ ನಿರ್ಮಿಸಿದ್ದು, ಇದು ಕೂಡ ಶಿಥಿಲಗೊಂಡಿದೆ. ತಾತ್ಕಾಲಿಕ ರಸ್ತೆ ನಿರ್ಮಾಣಕ್ಕೆ ಮೋರಿ ಕೂಡ ಅವಶ್ಯಕತೆಯಿದ್ದು, ಕಾಡಿನ ಸಮೀಪವಿರುವ ಈ ಊರಿನಲ್ಲಿ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಬೇಕಾಗಿದೆ. ಮಾತ್ರವಲ್ಲದೆ ರಸ್ತೆ ಹಾಗೂ ಸೇತುವೆ ಶೀಘ್ರ ನಿರ್ಮಾಣವಾಗಬೇಕಿದೆ ಎಂದು ಈ ಭಾಗದ ನಾಗರಿಕರ ಒತ್ತಾಯವಾಗಿದೆ.

> ಯಡ್ತರೆಯ ಹೊಸೂರಿನಲ್ಲಿ ಮರಾಠಿ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಿದ್ದು ಕೃಷಿ ಹಾಗೂ ಕೂಲಿ ಮಾಡಿ ಜೀವನ ನಡೆಸುತ್ತಿದ್ದಾರೆ. ಇಲ್ಲಿನ ದೇವಸ್ಥಾನ ನಮ್ಮೆಲ್ಲರ ಪ್ರಮುಖ ಆರಾಧನಾ ಕೇಂದ್ರ. ಈ ಊರಿಗೆ ತೆರಳಲು ರಸ್ತೆಗೆ ಸೇತುವೆ ಅಗತ್ಯ.
>
> **ನಾಗಪ್ಪ ಮರಾಠಿ ಹೊಸೂರು,** ಸ್ಥಳೀಯ ನಿವಾಸಿ

ಸುತ್ತಮುತ್ತ

ಇಂದು 'ಕಾರಂತರ ಸುಳಿಯಲ್ಲಿ' ಪುಸ್ತಕ ಲೋಕಾರ್ಪಣೆ

ಕೊಣಾಜೆ: ಮಂಗಳೂರು ವಿವಿ ಡಾ.ಶಿವರಾಮ ಕಾರಂತ ಪೀಠ, ವಿವಿ ಕಾಲೇಜು ಮಂಗಳೂರು ಹಾಗೂ ಡಾ.ಉಲ್ಲಾಸ ಕಾರಂತ ಬೆಂಗಳೂರು ಇವರ ಸಹಯೋಗದಲ್ಲಿ ಡಾ. ಕೆ. ಶಿವರಾಮ ಕಾರಂತರ ಬಗ್ಗೆ ಅವರ ಮಕ್ಕಳಾದ ಉಲ್ಲಾಸ್ ಕಾರಂತ, ಮಾಲವಿಕ ಕಪೂರ ಮತ್ತು ಕ್ಷಮಾರಾವ್ ಅವರು ಇಂಗ್ಲಿಷ್‌ನಲ್ಲಿ ಬರೆದಿರುವ Growing up karanth ಕೃತಿಯನ್ನು ವಿಶ್ವೇಶ್ವರ ಭಟ್ ಅವರು ಕಾರಂತರ ಸುಳಿಯಲ್ಲಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ. ಈ ಕೃತಿಯ ಲೋಕಾರ್ಪಣೆ ಕಾರ್ಯಕ್ರಮ ಏ.18 ರಂದು ಸಂಜೆ 5 ಗಂಟೆಗೆ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ನಡೆಯಲಿದೆ. ವಿಶ್ರಾಂತ ಕುಲಪತಿ ಹಾಗೂ ವಿಮರ್ಶಕರಾದ ಪ್ರೊ. ವಿವೇಕ್ ರೈ ಕೃತಿಯನ್ನು ಅನಾವರಣಗೊಳಿಸಲಿದ್ದಾರೆ. ಅಧ್ಯಕ್ಷತೆಯನ್ನು ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ವಹಿಸಲಿದ್ದಾರೆ. ಲೇಖಕರು ಹಾಗೂ ವನ್ಯಜೀವಿ ತಜ್ಞರಾದ ಡಾ.ಉಲ್ಲಾಸ ಕಾರಂತ ಅವರು ಪ್ರಾಸ್ತಾವಿಕವಾಗಿ ಮಾತನಾಡಲಿದ್ದು ಮಹಾತ್ಮ ಗಾಂಧಿ ಪ್ರತಿಷ್ಠಾನ ಎನ್.ಜಿ. ಮೋಹನ್, ವಿಶ್ವವಿದ್ಯಾಲಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಗಣಪತಿ ಗೌಡ ಮೊದಲಾದವರು ಉಪಸ್ಥಿತರಿರಲಿದ್ದಾರೆ ಎಂದು ಶಿವರಾಮ ಕಾರಂತ ಪೀಠದ ನಿರ್ದೇಶಕ ಪ್ರೊ.ನಾಗಪ್ಪ ಗೌಡ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಇಂದು, ನಾಳೆ 'ರಸಾನ್ವೇಷಣ: ಜ್ಞಾನ ಸಾಧನಾ' ಕಾರ್ಯಾಗಾರ

ಬಂಟ್ವಾಳ: ವಿದುಷಿ ವಿದ್ಯಾ ಮನೋಜ್ ಇವರ



ನಿರ್ದೇಶನದ ಕಲಾನಿಕೇತನ ಡ್ಯಾನ್ಸ್ ಫೌಂಡೇಶನ್ ಕಲ್ಲಡ್ಕ ಭರತನಾಟ್ಯ ಸಂಸ್ಥೆಯ 25ನೇ ವರ್ಷದ ರಜತ ಕಲಾಯಾನ ಸರಣಿ ಕಾರ್ಯಕ್ರಮದ ಪ್ರಯುಕ್ತ ಏ. 18, 19 ರಂದು 'ರಸಾನ್ವೇಷಣ – ಜ್ಞಾನ ಸಾಧನಾ' (ಭಾವ-ರಸ ಮತ್ತು ನಾಯಿಕಾ ಅವಸ್ಥಾಭೇದಗಳ ಕುರಿತಾದ ಒಂದು ಚಿಂತನ – ಮಂಥನ) ಕಾರ್ಯಾಗಾರ ಕಲ್ಲಡ್ಕ ಕಲಾನಿಕೇತನ ಡ್ಯಾನ್ಸ್ ಫೌಂಡೇಶನ್‌ನಲ್ಲಿ ಬೆಳಿಗ್ಗೆ 9.30 ರಿಂದ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಮಂಗಳೂರಿನ ಉರ್ವ ನಾಟ್ಯರಾಧನ ಕಲಾಕೇಂದ್ರ ಭರತನಾಟ್ಯ ಸಂಸ್ಥೆಯ ನಿರ್ದೇಶಕಿ ವಿದುಷಿ ಸುಮಂಗಲ ರತ್ನಾಕರ ರಾವ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಲಯನ್ಸ್ ವಾರ್ಷಿಕ ಸಮ್ಮೇಳನ

ಮಂಗಳೂರು: ಲಯನ್ಸ್ ಜಿಲ್ಲೆ 317ಡಿ ಇದರ ಸುಮಂಗಲ ಜಿಲ್ಲಾ ವಾರ್ಷಿಕ ಸಮ್ಮೇಳನ 'ಸುಮಂಗಲ' ಏ.19ರಂದು ಅಡ್ಯಾರ್ ಗಾರ್ಡನ್‌ನಲ್ಲಿ ನಡೆಯಲಿದೆ ಎಂದು ಕಾರ್ಯಕ್ರಮ ಆಯೋಜನಾ ಸಮಿತಿ ಅಧ್ಯಕ್ಷ ರಾಧಾಕೃಷ್ಣ ರೈ ತಿಳಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮ್ಮೇಳನವನ್ನು ಲಯನ್ಸ್ ಜಿಲ್ಲೆಯ ಪ್ರಥಮ ಮಹಿಳೆ ಮಮತಾ ಶೆಣೈಉದ್ಘಾಟಿಸಲಿದ್ದಾರೆ. ಸಮ್ಮೇಳನ ಅಧ್ಯಕ್ಷತೆಯನ್ನು ಜಿಲ್ಲಾ ಗವರ್ನರ್ ಕುಡ್ಪಿ ಅರವಿಂದ ಶೆಣೈವಹಿಸಲಿದ್ದಾರೆ ಎಂದರು. ನಿಕಟಪೂರ್ವ ಜಿಲ್ಲಾ ಗವರ್ನರ್ ಭಾರತಿ ಬಿ.ಎಂ., ಉಪ ಜಿಲ್ಲಾ ಗವರ್ನರ್‌ಗಳಾದ ತಾರಾನಾಥ್ ಎಚ್.ಎಂ., ಗೋವರ್ಧನ್ ಕೆ. ಶೆಟ್ಟಿ ಅವರನ್ನು ಗೌರವಿಸಲಾಗುವುದು ಎಂದವರು ತಿಳಿಸಿದರು. ಲಯನ್ಸ್ ಸೇವಾ ಯೋಜನೆಯಡಿ ಸುಮಾರು 25ಲ. ರೂ.ವೆಚ್ಚದಲ್ಲಿ ಮೊಬೈಲ್ ಕಿಚನ್ ವಾಹನ ವನ್ನು ಇಸ್ಕಾನ್ ಬಿಸಿಯೂಟ ಯೋಜನೆಗೆ ಹಸ್ತಾಂತರಿಸಲಾಗುವುದು. ಲಯನ್ಸ್ ವೃಕ್ಷಾ ಬೀಜಾಂಕುರ ಯೋಜನೆಯಡಿಯಲ್ಲಿ ಗುರುಪುರ ಕೈಕಂಬ ಪ್ರದೇಶದ ಹೆದ್ದಾರಿ ಬದಿಯಲ್ಲಿ 1ಸಾವಿರ ಗಿಡ ನೆಡುವ ಕಾರ್ಯಕ್ರಮವಾಗಿದ್ದು, ಲಯನ್ಸ್ ಜಿಲ್ಲೆಯಲ್ಲಿ ಕನಿಷ್ಠ 10ಸಾವಿರಕ್ಕಿಂತ ಮಿಕ್ಕಿ ದಾನಿಗಳ ಹಾಗೂ ಜಿಲ್ಲೆಯ ಸದಸ್ಯರ ಸಹಕಾರದಿಂದ ಪೂರ್ಣಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದರು. ಸುದಿಗೋಷ್ಠಿಯಲ್ಲಿ ಕಾರ್ಯದರ್ಶಿ ಸುಕಲತಾ ಭಂಡಾರಿ, ಮುಖ್ಯ ಸಲಹೆಗಾರ ದೇವದಾಸ್ ಭಂಡಾರಿ, ಕೋಶಾಧಿಕಾರಿ ಉಮಾ ಹೆಗಡೆ, ಜಿಲ್ಲಾ ಸಂಪರ್ಕ ಅಧಿಕಾರಿ ಸುದರ್ಶನ ಪಡಿಯಾರ್ ವಿಟ್ಲ, ಚಂದ್ರಹಾಸ ರೈ, ಬಾಲಕೃಷ್ಣ ಹೆಗ್ಡೆ ಉಪಸ್ಥಿತರಿದ್ದರು.

ಏ.21: ದಿಶಾ ಸಭೆ

ಮಂಗಳೂರು: ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುವ ಸಂಬಂಧ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆ (ದಿಶಾ)ಯನ್ನು ಲೋಕಸಭಾ ಸದಸ್ಯ ಕ್ಯಾ.ಬ್ರಿಜೇಶ್ ಚೌಟ ಅಧ್ಯಕ್ಷತೆಯಲ್ಲಿ ಏ.21 ರಂದು ಬೆಳಿಗ್ಗೆ 10.30ಕ್ಕೆ ದ.ಕ.ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ.

ರಸ್ತೆ ಬದಿ ಕಸ ಎಸೆತ: ತಪ್ಪಿತಸ್ಥರಿಂದ ದಂಡ ಪಾವತಿ

ಮಂಗಳೂರು: ಉಳ್ಳಾಲ ತಾಲೂಕಿನ ಮಂಜನಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿಜಯನಗರದಿಂದ ಬಟ್ಟಡ್ಕಕ್ಕೆ ಹೋಗುವ ರಸ್ತೆ ಬದಿ ಪಿಕಪ್ ವಾಹನದಲ್ಲಿ ಕಸ ತಂದು ಸುರಿದ ಬಗ್ಗೆ ಮಂಜನಾಡಿ ಗ್ರಾ.ಪಂ. ಏಪ್ರಿಲ್ 10 ರಂದು ದೂರು ಅರ್ಜಿಯನ್ನು ಪೊಲೀಸು ಠಾಣೆಗೆ ಸಲ್ಲಿಸಿದ್ದು, ನಂತರ ತಪ್ಪಿತಸ್ಥರು ಏ.15 ರಂದು ಗ್ರಾ.ಪಂ.ಗೆ ರೂ. 20 ಸಾವಿರ ದಂಡ ಪಾವತಿಸಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ 2025-26 ನೇ ಸಾಲಿನ ನಗರಸಭಾ ನಿಧಿಯ ಶೇ. 5 ರ ವಿಕಲಚೇತನ ಕಲ್ಯಾಣ ಕಾರ್ಯಕ್ರಮದಡಿ ನಿವೇಶನ ಖರೀದಿ, ಅಂಗವಿಕಲರಿಗೆ ಆರೋಗ್ಯ ವಿಮೆ ನೀಡುವ ಸಲುವಾಗಿ ಅರ್ಹ ವಿಕಲಚೇತನ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಪೂರಕ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಲು ಏಪ್ರಿಲ್ 21 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ನಗರಸಭೆ ಪೌರಾಯುಕ್ತರ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಆಂತರ್ಯ 2-2026' ಸ್ಪರ್ಧೆ

ವಿವೇಕಾನಂದಕ್ಕೆ ಸಮಗ್ರ, ಕೆನರಾ ಕಾಲೇಜ್ ರನ್ನರ್ ಅಪ್

ಪುತ್ತೂರು: ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಎಂಸಿಎ ವಿಭಾಗದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರಮಟ್ಟದ 'ಆಂತರ್ಯ-2026' ತಂತ್ರಜ್ಞಾನ ಮೇಳದಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್ ಸೈನ್ಸ್ ಎಂಡ್ ಕಾಮರ್ಸ್‌ನ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿಯನ್ನು ಗಳಿಸಿದರೆ ಮಂಗಳೂರಿನ ಕೆನರಾ ಕಾಲೇಜಿನ ವಿದ್ಯಾರ್ಥಿಗಳು ರನ್ನರ್ ಅಪ್ ಪ್ರಶಸ್ತಿಯನ್ನು ಗಳಿಸಿದರು.

ನಡೆಯಿತು 9 ಬಗೆಯ ಆಕರ್ಷಕ ಸ್ಪರ್ಧೆಗಳು

ಆಂತರ್ಯದಲ್ಲಿ 18 ಕಾಲೇಜ್‌ಗಳ 228 ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡರು. ಕೋಡಿಂಗ್, ವೆಬ್ ಡಿಸೈನ್, ಐಟಿ ಕ್ವಿಝ್, ಐಡಿಯಥಾನ್, ಐಟಿ ಮ್ಯಾನೇಜರ್, ಟ್ರೆಜರ್ ಹಂಟ್, ಗೇಮಿಂಗ್, ರೀಲ್ಸ್ ಮೇಕಿಂಗ್, ಡ್ಯಾನ್ಸ್ ಹೀಗೆ 9 ಬಗೆಯ ಆಕರ್ಷಕ ಸ್ಪರ್ಧೆಗಳು ನಡೆದವು.

ಕಾರ್ಯಕ್ರಮದ ಉದ್ಘಾಟನೆ

ಕಾಲೇಜಿನ ಸಾವರ್ಕರ್ ಸಭಾ ಭವನದಲ್ಲಿ ಬೆಳಗ್ಗೆ





ನಡೆದ ಉದ್ಘಾಟನಾ ಸಮಾರಂಭದಲ್ಲಿ ಬೆಂಗಳೂರಿನ ಎಕ್ಸ್ ಫೇಕ್ಟರ್ ಸಾಫ್ಟ್‌ವೇರ್ಸ್ ಪ್ರೈವೆಟ್ ಲಿಮಿಟೆಡ್‌ನ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಎಂಡ್ ಮೆಷಿನ್ ಲರ್ನಿಂಗ್ ವಿಭಾಗದ ಮುಖ್ಯಸ್ಥ ಶರತ್ ಕುಮಾರ್ ಎ. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕ ರವಿಕೃಷ್ಣ ಡಿ. ಕಲ್ಲಾಜೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ಸತ್ಯನಾರಾಯಣ ಭಟ್, ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ., ಎಂಸಿಎ ವಿಭಾಗದ ನಿರ್ದೇಶಕಿ ಡಾ. ಜ್ಯೋತಿಮಣಿ ಕೆ., ಕಾರ್ಯಕ್ರಮ ಸಂಯೋಜಕಿ ಡಾ. ರಾಜೇಶ್ವರಿ ಎಂ., ವಿದ್ಯಾರ್ಥಿ ಸಂಯೋಜಕರಾದ ಆದಿತ್ಯ ಮತ್ತು ಹವ್ಯಾಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭ

ಸಂಜೆ ನಡೆದ ಸಮಾರೋಪದಲ್ಲಿ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕಿ ವಿದ್ಯಾ ಆರ್. ಗೌರಿ ಬಹುಮಾನ ವಿತರಣೆ ಮಾಡಿದರು. ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ. ಉಪಸ್ಥಿತರಿದ್ದರು. ಎಂಸಿಎ ವಿಭಾಗದ ನಿರ್ದೇಶಕಿ ಡಾ. ಜ್ಯೋತಿಮಣಿ ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಕಿ ಡಾ. ರಾಜೇಶ್ವರಿ ವಂದಿಸಿದರು. ಪ್ರೊ. ನಿಮಾ ಎಚ್., ಪ್ರೊ. ರಮೇಶ ಕೆ., ಪ್ರೊ. ಅನಿಲ್ ಕುಮಾರ್ ಕೆ., ಪ್ರೊ. ಅನಿರುದ್ಧ ಬಿ.ಜಿ.ಎಸ್. ಮತ್ತು ಪ್ರೊ. ಪೂಜಾಲಕ್ಷ್ಮಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು.

'ಆಂತರ್ಯ' ಫೆಸ್ಟ್: ಅಕ್ಷಯ ಕಾಲೇಜಿನ ಮಕ್ಕಳ ಸಾಧನೆ



ಪುತ್ತೂರು: ನೆಹರೂನಗರದಲ್ಲಿರುವ ವಿವೇಕಾನಂದ ಇಂಜಿನಿಯರಿಂಗ್- ತಂತ್ರಜ್ಞಾನ ಕಾಲೇಜಿನ ಎಂಸಿಎ ವಿಭಾಗದಿಂದ ಆಯೋಜಿಸಲಾದ 'ಆಂತರ್ಯ' ರಾಷ್ಟ್ರೀಯ ಮಟ್ಟದ ಕಾಲೇಜ್ ಐಟಿ ಉತ್ಸವದ ನೃತ್ಯ ಸ್ಪರ್ಧೆಯಲ್ಲಿ ಅಕ್ಷಯ ಕಾಲೇಜಿನ ವಿದ್ಯಾರ್ಥಿಗಳಾದ ದೇವಿಕಾ, ಮೋಕ್ಷ ಪಕಳಕುಂಜ, ದೀಕ್ಷಾ, ಸ್ವರ್ಣಶ್ರೀ, ತ್ರಿಷಾ, ದೀಕ್ಷಾ ಇವರ ತಂಡ ಅದ್ಭುತ ಪ್ರದರ್ಶನ ನೀಡಿ ಪ್ರಥಮ ಸ್ಥಾನ ತಮ್ಮದಾಗಿಸಿಕೊಂಡರು.

ಎವಿಜಿ ಬೇಸಿಗೆ ಶಿಬಿರ-2026 ಸಂಪನ್ನ: ಅಕ್ಷಯಪಾತ್ರೆ ಕಿರು ನಾಟಕ ಪ್ರದರ್ಶನ



ಪುತ್ತೂರು: ನಗರದ ಬನ್ನೂರು ಕೃಷ್ಣನಗರ ಅಲಂಬುಡದ ಎವಿಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆರು ದಿನಗಳ ಕಾಲ ಏರ್ಪಡಿಸಲಾಗಿದ್ದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಗುರುವಾರ ನಡೆಯಿತು.

ಪುತ್ತೂರಿನ ಗಾನ ಸಿರಿ ಕಲಾ ಕೇಂದ್ರದ ಡಾ. ಕಿರಣ್ ಕುಮಾರ್ ಗಾನ ಸಿರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ತಂದೆ ತಾಯಿಯನ್ನು ಗೌರವಿಸಿ, ಪ್ರೀತಿಸಿ ಅವರ ಆಶೀರ್ವಾದವು ನಮ್ಮನ್ನು ಸಾಧನೆ ಹಾಗೂ ಬೇಸಿಗೆ ಶಿಬಿರವು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತದೆ ಎಂದರು.

ಶಾಲಾ ಆಡಳಿತ ಸಮಿತಿ ಅಧ್ಯಕ್ಷ ವೆಂಕಟರಮಣ ಗೌಡ ಕಳುವಾಜೆ , ಇನ್ನು ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮ ನಡೆಸಲು ಸಹಕಾರ ಕೋರಿದರು. ಶಾಲಾ ಸಂಚಾಲಕ ಎ.ವಿ. ನಾರಾಯಣ ಮಾತನಾಡಿದರು.

ಶಿಬಿರದ ಸಂಪನ್ಮೂಲ ವ್ಯಕ್ತಿಗಳಾದ ರಮೇಶ್ ಉಳಾಯ, ತಾರಾನಾಥ ಸವಣೂರು, ಚರಣ್ ಕುಮಾರ್ ಪುದು ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲಾ ಮುಖ್ಯ ಶಿಕ್ಷಕ ಅಮರನಾಥ ಬಿ.ಪಿ. ಪ್ರಸ್ತಾವನೆಗೈದರು. ಶಿಬಿರದ ನಿರ್ದೇಶಕಿ ರಾಧಾ ಸಮಾರೋಪ ಭಾಷಣಗೈದರು.

ವೇದಿಕೆಯಲ್ಲಿ ಶಾಲಾ ಆಡಳಿತ ಸಮಿತಿಯ ಉಪಾಧ್ಯಕ್ಷ ಉಮೇಶ್ ಮಳುವೇಲು, ಶಾಲಾ ಆಡಳಿತ ಅಧಿಕಾರಿ ಗುಡ್ಡಪ್ಪ ಗೌಡ ಬಲ್ಯ ಮತ್ತಿತರರು ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮದ ಮೊದಲಿಗೆ ಮಕ್ಕಳ ಕಿರು ನಾಟಕ 'ಅಕ್ಷಯ ಪಾತ್ರೆ' ಪ್ರದರ್ಶಿಸಲಾಯಿತು. ಶಾಲಾ ನಿರ್ದೇಶಕರಾದ ಪುಷ್ಪಾವತಿ ಕಳುವಾಜೆ, ಸೀತಾರಾಮ ಕೇವಳ, ಪ್ರತಿಭಾ ದೇವಿ, ದೀಕ್ಷ ವಾಮನ ಗೌಡ ಮತ್ತಿತರರಿದ್ದರು. ವಿದ್ಯಾರ್ಥಿನಿಯರಾದ ಅನಿಕ, ಜ್ಞಾನ, ಶ್ರೀವಿಕ, ಚೇತನಕೀರ್ತಿ ಪ್ರಾರ್ಥಿಸಿದರು. ಮಾಸ್ಟರ್ ವಿಕ್ಯಾತ್ ಸಂವಿಧಾನ ಪೀಠಿಕೆ ವಾಚಿಸಿದರು. ಚಂದ್ರಿಕಾ ಸನ್ಮಾನ ಪತ್ರ ವಾಚಿಸಿದರು. ಶಿಕ್ಷಕಿಯರಾದ ರೀಮಾ ಲೋಬೊ ಸ್ವಾಗತಿಸಿ, ಹರ್ಷಿತ ವಂದಿಸಿದರು. ಶಿಕ್ಷಕಿ ಶ್ವೇತ ನಿರೂಪಿಸಿದರು.

ಎವಿಜಿ ಕಲಾ ರತ್ನ ಪ್ರಶಸ್ತಿ ಗೌರವ

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪುತ್ತೂರಿನ ಖ್ಯಾತ ಸ್ಯಾಕ್ಸೋಫೋನ್ ವಾದಕ ವೇಣುಗೋಪಾಲ ಪುತ್ತೂರು ಅವರಿಗೆ ಎವಿಜಿ ಕಲಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.

ಹಿಂದೂ ಯುವ ಸೇನೆ ಸಮಾಜಕ್ಕೆ ಶಕ್ತಿ ನೀಡುವ ಸಂಘಟನೆ: ಸತೀಶ್ ಕುಂಪಲ



ಉಳ್ಳಾಲ: ಆರೆಸ್ಸೆಸ್ ಸಂಘದ ಮಾರ್ಗದರ್ಶನದಲ್ಲಿ ಮಂಗಳೂರಿ ನಲ್ಲಿ ಉದಯಿಸಿದ ಹಿಂದೂ ಯುವ ಸೇನೆಯು ಉಳ್ಳಾಲ ಭಾಗದಲ್ಲಿ ಹಲವಾರು ಶಾಖೆಗಳ ಆರಂಭಿಸಿ ಧರ್ಮ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಹಿಂದೂ ಸಮಾಜಕ್ಕೆ ಶಕ್ತಿ ನೀಡುವ ಸೇನೆಯಾಗಿ ಬೆಳೆದು ನಿಂತಿದೆ.ರಾಣಿ ಅಬ್ಬಕ್ಕಳಿಗೆ 500 ವರ್ಷ,ಆರ್ ಎಸ್‌ಎಸ್ ಗೆ 100 ವರ್ಷಗಳು ತುಂಬಿದ ಸಂದರ್ಭ ಕೊರಗಜ್ಜ ಶಾಖೆ 25 ವರ್ಷಗಳನ್ನು ಪೂರೈಸಿರುವುದು ಔಚಿತ್ಯ ಪೂರ್ಣ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಕೆರೆಬೈಲ್ ಗುಡ್ಡೆಯ ಹಿಂದೂ ಯುವ ಸೇನೆ ಕೊರಗಜ್ಜ ಶಾಖೆ ಬೆಳ್ಳಿ ಹಬ್ಬದ ಪ್ರಯುಕ್ತ ನಡೆದ ಸಭಾ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಪಿಲಾರು ಮೇಗಿನ ಮನೆಯ ಪ್ರಗತಿಪರ ಕೃಷಿಕರಾದ ಮೀನಾಕ್ಷಿ ಸೀತಾರಾಮ ಶೆಟ್ಟಿ ಸಭಾ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭ ಪವರ್ ಲಿಫ್ಟರ್ ಗಣೇಶ್ ಚೆಂಬುಗುಡ್ಡೆ,ಕುಸ್ತಿ ಪಟು ರಾಜೇಶ್ ಕುಲಾಲ್ ,ಸಮಾಜ ಸೇವಕಿ ಮೀನಾಕ್ಷಿ ಸೀತರಾಮ ಶೆಟ್ಟಿ,ನಟ ಸ್ವರಾಜ್ ಶೆಟ್ಟಿ,ಉಳ್ಳಾಲ ಜಾನಪದ ಪರಿಷತ್‌ನ ಅಧ್ಯಕ್ಷ ಪ್ರವೀಣ್.ಎಸ್ ಕುಂಪಲ ಅವರನ್ನು ಸನ್ಮಾನಿಸಲಾಯಿತು.

ಹಿಂದೂ ಯುವ ಸೇನೆ ಕೇಂದ್ರೀಯ ಮಂಡಳಿ ಗೌರವಾಧ್ಯಕ್ಷ ಭಾಸ್ಕರಚಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾಪಿಕಾಡು ಮಂತ್ರದೇವತೆ ಸಾನಿಧ್ಯದ ಪ್ರಶಾಂತ್ ಕಾಪಿಕಾಡ್, ತೊಕ್ಕೊಟ್ಟು ಸಾಯಿ ಪರಿವಾರ್ ಟ್ರಸ್ಟ್‌ನ ಟ್ರಸ್ಟಿ ಪುರುಷೋತ್ತಮ ಕಲ್ಲಾಪು, ಚಿತ್ರ ನಟ ಸ್ವರಾಜ್ ಶೆಟ್ಟಿ, ಸುರೇಶ್ ಶೆಟ್ಟಿ, ಸರಸ್ವತಿ, ಜಯಂತ್ ಕೊಂಡಾಣ, ರಾಜೇಶ್ ಯು.ಬಿ, ಪ್ರವೀಣ್ ರೈ,ಉದ್ಯಮಿ ಸಂತೋಷ್ ಕೆರೆಬೈಲ್, ಲೋಕೇಶ್ ಶೆಟ್ಟಿ , ನಾರಾಯಣ.ಬಿ ಮತ್ತಿತರರದ್ದರು. ರೋಹಿತಾಕ್ಷ ಅಮೀನ್ , ದಿನೇಶ್ ಶೆಟ್ಟಿ, ಪ್ರವೀಣ್.ಎಸ್ ಕುಂಪಲ , ಹರೀಶ್ ಕುಂದರ್ ಉಪಸ್ಥಿತರಿದ್ದರು.

ಕುಂದಾಪುರ ಡಾ.ಬಿ.ಬಿ.ಹೆಗ್ಡೆ ಕಾಲೇಜು: 'ರೆಸ್ಯೂಮ್ ಬಿಲ್ಡಿಂಗ್' ಕಾರ್ಯಾಗಾರ



ಕುಂದಾಪುರ: ಕುಂದಾಪುರದ ಡಾ.ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಆಶ್ರಯ ದಲ್ಲಿ 'ರೆಸ್ಯೂಮ್ ಬಿಲ್ಡಿಂಗ್' ಕಾರ್ಯಾಗಾರ ನಡೆಯಿತು.

ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕ ಹಾಗೂ ಡೀನ್ ಅಕಾಡೆಮಿಕ್ಸ್ ಗಿರಿರಾಜ್ ಭಟ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಪರಿಣಾಮಕಾರಿ ರೆಸ್ಯೂಮ್ ರಚನೆ, ವೃತ್ತಿಪರ ಪ್ರೊಫೈಲ್ ಅಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳಿಗೆ ಸಿದ್ಧರಾಗುವ ಕುರಿತು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭ ಅವರು ವಿದ್ಯಾರ್ಥಿಗಳಿಗೆ ಉದ್ಯೋಗ ಗಿಟ್ಟಿಸುವಲ್ಲಿ ಪ್ರಾಥಮಿಕ ಹಂತದಲ್ಲಿ ರೆಸ್ಯೂಮ್ ಅತ್ಯಂತ ಮಹತ್ವದ್ದಾಗಿದ್ದು ಉತ್ತಮ ವ್ಯಕ್ತಿತ್ವದ ದರ್ಪಣವಾಗಿ ರೆಸ್ಯೂಮ್ ಮೂಡಿಬರಲಿ ಎಂದರು.

ಈ ಸಂದರ್ಭ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಮಹೇಶ ಕುಮಾರ್, ಕಾರ್ಯಕ್ರಮ ಸಂಯೋಜಕ ಮತ್ತು ವಿಭಾಗದ ಸಹಾಯಕ ಪ್ರಾಧ್ಯಾಪಕ ಮಹೇಶ ಪೂಜಾರಿ, ಶಿವಾನಿ ಅಡಿಗ ಉಪಸ್ಥಿತರಿದ್ದರು. ಬಿಸಿಎ ವಿದ್ಯಾರ್ಥಿಗಳಾದ ಅಮರ್ ಸ್ವಾಗತಿಸಿ, ವೈಷ್ಣವಿ ಅತಿಥಿಗಳನ್ನು ಪರಿಚಯಿಸಿ, ಶಶಿಕಾಂತ ವಂದಿಸಿ, ಶಿಫಾ ನಿರೂಪಿಸಿದರು.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಇದರ ಅಂಗವಾಗಿ ಭರತನಾಟ್ಯ ಕಾರ್ಯಕ್ರಮ ನಡೆಯಿತು

ಪ್ರಾಣಿ, ಪಕ್ಷಿಗಳಿಗೂ ನೀರು ಒದಗಿಸುವ ಕೆಲಸವಾಗಬೇಕು: ಜಿಲ್ಲಾಧಿಕಾರಿ ದರ್ಶನ್



ಮಂಗಳೂರು: ಮನುಷ್ಯರಂತೆ ಪ್ರಾಣಿ, ಪಕ್ಷಿಗಳಿಗೂ ನೀರಿನ ಅಗತ್ಯವಿದೆ. ಬೇಸಿಗೆಯಲ್ಲಿ ಮೂಕ ಜೀವಿಗಳಿಗೆ ಕುಡಿಯಲು ನೀರು ಒದಗಿಸುವ ಮೂಲಕ ಅವುಗಳ ರಕ್ಷಣೆಗೆ ವಿದ್ಯಾರ್ಥಿ ಸಮುದಾಯ ಸೇರಿದಂತೆ ಜನತೆ ಸಾಮೂಹಿಕ ಹೊಣೆಗಾರಿಕೆ ವಹಿಸಬೇಕೆಂದು ದ.ಕ.ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಹೇಳಿದರು.

ರೋಟರಿಕ್ಲಬ್ ಮಂಗಳೂರುಸೆಂಟ್ರಲ್, ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್, ಗ್ಲೋಬಲ್ ಗ್ರೀನ್ ಇಕೋ ಫೌಂಡೇಶನ್ ವತಿಯಿಂದ ದ.ಕ.ಜಿಲ್ಲಾಡಳಿತದ ಸಹಯೋ ಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಪ್ರಜಾ ಸೌಧದ ಆವರಣದಲ್ಲಿ ನಡೆದ ಜೀವ -ಜಲ ಉಳಿಸಿಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪೋಸ್ಟರ್ ಬಿಡುಗಡೆ

ಈ ಸಂದರ್ಭ ನೀರು ಮಿತವಾಗಿ ಬಳಸಿ- ಬೊಗಸೆ ನೀರು ಇಟ್ಟು ಏರುತ್ತಿರುವ ತಾಪಮಾನದಲ್ಲಿ ಪಶು ಪಕ್ಷಿಗಳ ಜೀವ ಉಳಿಸಿ ಧ್ಯೇಯದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್ ವಿದ್ಯಾರ್ಥಿ ಗಳಿಗೆ ನೀರಿನ ಕಿರು ತೊಟ್ಟಿಯನ್ನು ಜಿಲ್ಲಾಧಿಕಾರಿ ಅವರು ವಿತರಿಸಿದರು.

ಅಪರ ಜಿಲ್ಲಾಧಿಕಾರಿ ರಾಜು, ರೋಟರಿ 3181 ಇದರ ನಿಯೋಜಿತ ಜಿಲ್ಲಾ ಗವರ್ನರ್ ಶೇಖರ್ ಬೋಳಾರ, ಅಸಿಸ್ಟೆಂಟ್ ಗವರ್ನರ್ ಚೆನ್ನಗಿರಿ ಗೌಡ, ಗ್ಲೋಬಲ್ ಗ್ರೀನ್ ಇಕೋ ಫೌಂಡೇಶನ್‌ನ ನಿರ್ದೇಶಕ ಶ್ರೀನಿವಾಸ ನಾಯಕ್ ಇಂದಾಜೆ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್‌ನ ನಿಕಟಪೂರ್ವ ಅಧ್ಯಕ್ಷ ಬ್ರಿಯಾನ್ ಪಿಂಟೊ, ಕಾರ್ಯದರ್ಶಿ ವಿಕಾಸ್ ಕೋಟ್ಯಾನ್, ಡಾ.ಶಿವಪ್ರಸಾದ್, ಪ್ರದೀಪ್ ಕುಲಾಲ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್‌ನ ಅಧ್ಯಕ್ಷ ಭಾಸ್ಕರ ರೈ ಕಟ್ಟ ನಿರೂಪಿಸಿದರು.

ಕಸಿಹಿತ್ಲು ಮೈದಾನದಲ್ಲಿ ಸಾರ್ವಜನಿಕ ಶನಿಪೂಜೆ, ಜಯಕರ ಪಂಡಿತ್‌ಗೆ ಸನ್ಮಾನ



ಮಂಗಳೂರು: ಎಕ್ಕೂರು ಕಸಿಹಿತ್ಲು ವಾಸುಕಿ ನಗರ ಹರಿ ಓಂ ಸೇವಾ ಸಮಿತಿಯ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ 'ಸಾರ್ವಜನಿಕ ಶನಿ ಪೂಜೆ' ನಮೋ ವೇದಿಕೆ ಕಸಿಹಿತ್ಲು ಮೈದಾನದಲ್ಲಿ ಜರುಗಿತು. ಸಮಿತಿ ಅಧ್ಯಕ್ಷ ರಮೇಶ್ ಎಂ. ಸರಳ ದಂಪತಿ ಹಾಗೂ ಸಮಿತಿ ಪದಾಧಿಕಾರಿಗಳು ದೀಪ ಪ್ರಜ್ವಲನೆ ಮಾಡಿದರು. ಹರಿ ಓಂ ಭಜನಾ ತಂಡದ ಮಹಿಳಾ ಸದಸ್ಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ಕಾವುಬೈಲು ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ಪ್ರಧಾನ ಅರ್ಚಕ ಸುಪ್ರೀಂ ನಾಡಿಗ್ ಅವರ ಪೌರೋಹಿತ್ಯದಲ್ಲಿ ಸಾರ್ವಜನಿಕ ಶನಿ ಪೂಜೆ ನಡೆಯಿತು. ಮಹಾಪೂಜೆ ಬಳಿಕ ಪ್ರಸಾದ ವಿತರಣೆ , ಅನ್ನ ಸಂತರ್ಪಣೆ ನಡೆಯಿತು.

ಈ ಸಂದರ್ಭ ಭಜನಾ ಶಿಕ್ಷಕ ಜಯಕರ ಪಂಡಿತ್ ಅವರನ್ನು ಗೌರವಿಸಲಾಯಿತು. ಸಮಿತಿ ಅಧ್ಯಕ್ಷ ರಮೇಶ್ ಎಂ., ಕಾರ್ಯದರ್ಶಿ ಮನೋಜ್ ಶೆಟ್ಟಿ, ಉಪಾಧ್ಯಕ್ಷರಾದ ಅಶೋಕ್ ರಾವ್, ಸುಮತಿ ಚಂದ್ರಶೇಖರ್ , ಕೋಶಾಧಿಕಾರಿ ಅಚ್ಯುತ್ ಕುಮಾರ್, ರಾಮ್ ಪ್ರಸಾದ್ ಎಕ್ಕೂರು, ಸುಭಾಷ್ ಕುಂಜಿಬೆಟ್ಟು, ರಾಜ್ ಗೋಪಾಲ್ ಎಸ್.ಕುಮಾರ್ ಸಮಿತಿ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಅಗ್ನಿಶಾಮಕ ಸೇವಾ ಸಪ್ತಾಹ ಆಚರಣೆ



ಕುಶಾಲನಗರ: ಕುಶಾಲನಗರ ಅಗ್ನಿಶಾಮಕ ಠಾಣೆ ವತಿಯಿಂದ ಕೊಡಿಗೆಯಲ್ಲಿ ಅಗ್ನಿಶಾಮಕ ಸೇವಾ ಸಪ್ತಾಹವನ್ನು ಆಚರಿಸಲಾಯಿತು.

'ಅಗ್ನಿ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿ' ಎಂಬ ಧ್ಯೇಯ ವಾಕ್ಯದೊಂದಿಗೆ ಅಗ್ನಿ ಸುರಕ್ಷತೆಯ ಬಗ್ಗೆ ಅನುಸರಿಸಬೇಕಾದ ಮಾಹಿತಿ ನೀಡಲಾಯಿತು. ಬೆಂಕಿ ಉಂಟಾಗಲು ಅನೇಕ ಸಾಮಾನ್ಯ ಕಾರಣಗಳು, ಬೆಂಕಿ ನಿವಾರಣೆಯ ಕ್ರಮಗಳು, ಬೆಂಕಿ ಹತ್ತಿಕೊಂಡಾಗ ಅನುಸರಿಸಬೇಕಾದ ಕ್ರಮಗಳು ಸೇರಿದಂತೆ ಇಲಾಖೆಯ ಮಾಹಿತಿಯನ್ನು ಕುಶಾಲನಗರ ಠಾಣಾಧಿಕಾರಿ ರಂಜಿತ್ ಸಾರ್ವಜನಿಕರಿಗೆ ತಿಳಿಸಿದರು.

ಈ ಸಂದರ್ಭ ಕೂಡಿಗೆ ಆಟೋ ಚಾಲಕರು, ಸ್ಥಳೀಯ ವ್ಯಾಪಾರಸ್ಥರು, ಸಾರ್ವಜನಿಕರು, ಕುಶಾಲನಗರ ಅಗ್ನಿಶಾಮಕ ಠಾಣೆಯ ಸಿಬ್ಬಂದಿಗಳಾದ ಮಂಜುನಾಥ, ಪ್ರೇಮಕುಮಾರ್, ಪ್ರಶಾಂತ್, ಪ್ರವೀಣ್ ಇದ್ದರು.

ಇಂದಿನಿಂದ ಕುತ್ತಿಕೋಲ್ ಶ್ರೀ ಭಗವತೀ ಕ್ಷೇತ್ರದ ಪುನರ್ ಪ್ರತಿಷ್ಠಾ ಬ್ರಹ್ಮಕಲಶ

ಕಾಸರಗೋಡು: ಕುತ್ತಿಕೋಲ್ ಶ್ರೀ ತಂಬುರಾಟಿ ಭಗವತೀ ದೇವಸ್ಥಾನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮತ್ತು ಕಳಿಯಾಟ ಮಹೋತ್ಸವ ಏ.18ರಿಂದ 28ರ ವರೆಗೆ ನಡೆಯಲಿದೆ. ಬ್ರಹ್ಮಕಲಶ ಮತ್ತು ಕಳಿಯಾಟ ಮಹೋತ್ಸವ ಏ.18ರಿಂದ 23ರ ತನಕ ಬ್ರಹ್ಮಶ್ರೀ ಇರುವೈಲು ಕೇಶವ ತಂತ್ರಿಗಳ ನೇತೃತ್ವದಲ್ಲಿ ನಡೆಯಲಿದೆ. ಏ.24ರಿಂದ 28ರ ವರೆಗೆ ಐದು ದಿನಗಳ ಕಾಲ ಕಳಿಯಾಟ ಮಹೋತ್ಸವ ನಡೆಯಲಿದೆ ಎಂದು ಆಚರಣಾ ಸಮಿತಿ ಎ.ಮಾಧವನ್ ನಾಯರ್ ಕಳಕ್ಕರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಇಂದು ಹಸಿರುವಾಣಿ ಹೊರೆಕಾಣಿಕೆ

ಏ.18ರಂದು ಬೆಳಿಗ್ಗೆ 10 ಗಂಟೆಗೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆಯೊಂದಿಗೆ ಮಹೋತ್ಸವವು ಆರಂಭಗೊಳ್ಳಲಿವೆ. ಬೆಳಗ್ಗೆ 11.30ಕ್ಕೆ ನಡೆಯುವ ಮಾತೃ ಸಂಗಮ ಕಾರ್ಯಕ್ರಮವನ್ನು ಸುಳ್ಯ ಶಾಸಕ ಭಾಗೀರಥಿ ಮುರುಳ್ಯ ಉದ್ಘಾಟಿಸುವರು.



ಕುತ್ತಿಕೋಲ್ ಗ್ರಾಮ ಪಂಚಾಯತ್ ಅಧ್ಯಕ್ಷೆ ಶೋಭನಾ ಕುಮಾರಿ ಅಧ್ಯಕ್ಷತೆ ವಹಿಸುವರು. ಶಿಕ್ಷಕಿ ಇಂದಿರಾಕುಟ್ಟಿ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ. ಏ.19ರಂದು ಬೆಳಿಗ್ಗೆ 5.30ಕ್ಕೆ ಲಲಿತಾ ಸಹಸ್ರನಾಮ, ಹರಿನಾಮ ಕೀರ್ತನೆ ಸಂಖ್ಯೆ ನಡೆಯಲಿದೆ. ಸಂಜೆ 3ಕ್ಕೆ ಸಾಂಸ್ಕೃತಿಕ ಸಭೆಯನ್ನು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಉದ್ಘಾಟಿಸುವರು. ಉದುಮ ಶಾಸಕ ಸಿ.ಎಚ್.ಕುಂಞಂಬು ಅಧ್ಯಕ್ಷತೆ ವಹಿಸಲಿದ್ದಾರೆ.ವಲ್ಸನ್ ಪಿಲಿಕೋಡ್ ಸಾಂಸ್ಕೃತಿಕ ಉಪನ್ಯಾಸ ನೀಡುವರು.

ಏ.20ರಂದು ವಿವಿಧ ಪೂಜಾ ವಿಧಿವಿಧಾನಗಳು ನಡೆಯಲಿವೆ. ಸಂಜೆ 3 ಗಂಟೆಗೆ ನಾಟ್ಟರಿವ್ ಸಭಾ ಕಾರ್ಯಕ್ರಮವನ್ನು ಕೇರಳ ಪೂರಕಳಿ ಅಕಾಡೆಮಿ ಅಧ್ಯಕ್ಷ ಕೆ.ಕುಂಞಿರಾಮನ್ ಉದ್ಘಾಟಿಸುವರು.

ಶಿವ ಸಹಸ್ರನಾಮ

ಏ.21ರಂದು ಬೆಳಿಗ್ಗೆ 9 ಗಂಟೆಗೆ ಶಿವ ಸಹಸ್ರನಾಮ. ಬೆಳಿಗ್ಗೆ10 ಗಂಟೆಗೆ ಅಕ್ಷರಶ್ಲೋಕ ಸಭಾ ಕಾರ್ಯಕ್ರಮ. ಸಂಜೆ 3 ಗಂಟೆಗೆ ಧಾರ್ಮಿಕ ಸಾಮರಸ್ಯ ಸಭೆಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಉದ್ಘಾಟಿಸಲಿದ್ದಾರೆ. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅತಿಥಿಗಳಾಗಿ ಭಾಗವಹಿಸುವರು. ರೆ.ಫಾ.ಡಾ.ಜೋಸೆಫ್ ವಾರನಾಥ, ಅಬ್ದುಲ್ ಖಾದರ್ ಸಖಾಫಿ ಕಟ್ಟಿಪ್ಪಾರ, ಇಸ್ಮಾಯಿಲ್ ಬಡವಿ ಭಾಗವಹಿಸುವರು.

ಏ.22ರಂದು ಸಂಜೆ 3 ಗಂಟೆಗೆ ನಡೆಯುವ ವಿಚಾರ ಸಂಕಿರಣವನ್ನು ಮಾಜಿ ಶಾಸಕ ಕೆ.ವಿ.ಕುಂಞಿರಾಮನ್ ಉದ್ಘಾಟಿಸುವರು. ಇತಿಹಾಸಿಕ ಸಂಶೋಧಕ ಡಾ.ಸಿ.ಬಾಲನ್ ಉಪನ್ಯಾಸ ನೀಡುವರು.

ಏ.23ರಂದು ಮಹಾಮಸ್ತಕಾಭಿಷೇಕ

ಏ.23ರಂದು ಮಹಾಮಸ್ತಕಾಭಿಷೇಕ, ಏ.24ರಂದು ದೇವಸ್ಥಾನದ ಕಳಿಯಾಟ ಉತ್ಸವ ಭಂಡಾರ ಆಗಮನದ ಬಳಿಕ ಆರಂಭವಾಗಲಿದೆ. ಏ.25ರಂದು ಸಂಜೆ 5 ಗಂಟೆಗೆ ಪುಲ್ಲೂರನ್ ಕೋಲದೊಂದಿಗೆ ಆರಂಭದೊಂದಿಗೆ ವಿವಿಧ ಕೋಲಗಳು ನಡೆಯಲಿವೆ.

ನಡುಕಳಿಯಾಟ

ಏ.26ರಂದು ನಡುಕಳಿಯಾಟ, ರಾತ್ರಿ 9 ಗಂಟೆಗೆ ಕುತ್ತಿಕೋಲ್ ಸಮಿತಿ ವತಿಯಿಂದ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಪುಲಿಕಂಡನ್ ಕೋಲದ ವೆಳ್ಳಾಟ್ಟ ನಡೆಯಲಿದೆ. ಏ.27ರಂದು ಬೆಳಗ್ಗೆ 5.30ಕ್ಕೆ ಶ್ರೀ ಪುಳ್ಳಿ ಕರಿಂಕಾಳಿ ಅಮ್ಮನವರ ಆಯಿರ ತಿರಿ ಮಹೋತ್ಸವ ಜರಗಲಿದೆ. ನಂತರ ವಿವಿಧ ದೈವಗಳ ಕೋಲಗಳು ನಡೆಯಲಿವೆ.

ವಿವಿಧ ದೈವಗಳ ಕೋಲ

ಏ.28ರಂದು ಕಳಿಯಾಟದ ಕೊನೆಯ ದಿನವಾದ ಬೆಳಿಗ್ಗೆ 7 ಗಂಟೆಗೆ ವಿವಿಧ ದೈವಗಳ ಕೋಲಗಳು ನಡೆಯಲಿವೆ. ಸಂಜೆ 6 ಕ್ಕೆ ಶ್ರೀ ಪುಲ್ಲೂರನ್ ಕೋಲದ ತಿರುಮುಡಿಸಮರ್ಪಣೆನಡೆಯಲಿದೆ.ರಾತ್ರಿ8 ಗಂಟೆಗೆ ಶ್ರೀ ತಂಬುರಾಟ್ಟಿ ಅಮ್ಮನವರ ತಿರುಮುಡಿ ನಡೆಯಲಿದೆ. ರಾತ್ರಿ 10 ಗಂಟೆಗೆ ಶ್ರೀ ತಂಬುರಾಟಿ ಭಗವತಿ ಭಗವತಿಯ ಮುಡಿಯನ್ನು ಇಳಿಸುವುದರೊಂದಿಗೆ 10 ದಿನಗಳ ಕಾಲ ನಡೆದ ತಂಬುರಾಟ್ಟಿ ಭಗವತಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಕಳಿಯಾಟ ಉತ್ಸವ ಮುಕ್ತಾಯಗೊಳ್ಳಲಿದೆ.

ಆಚರಣಾ ಸಮಿತಿ ಪ್ರಧಾನ ಸಂಚಾಲಕ ಟಿ. ಕುಂಞಿಕೃಷ್ಣನ್, ಕೋಶಾಧಿಕಾರಿ ಪಿ.ವಿ. ಗೋಪಾಲನ್ ಬೇಡಗಂ, ದೇವಳ ವ್ಯವಸ್ಥಾಪನಾ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ಟಿ.ಶ್ರೀಧರನ್, ಬಿ.ವಿಜಯನ್‌ಪಾಣೂರು, ಕೆ.ಅರವಿಂದನ್, ರತೀಶ್ ಗೋಷ್ಠಿಯಲ್ಲಿದ್ದರು.

ಸುತ್ತಮುತ್ತ

ನಾಳೆ ವಿಶೇಷ ಕಾರ್ಯಕ್ರಮ

ಪೆರ್ಲ: ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಾಲಯದಲ್ಲಿ ಏ.19ರಂದು ಬೆಳಿಗ್ಗೆ 10.30ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಮಧ್ಯಾಹ್ನ 12ಗಂಟೆಗೆ ಮಂಗಳಾರತಿ, ಪ್ರಸಾದ ವಿತರಣೆ, 1ರಿಂದ ಅನ್ನ ಸಂತರ್ಪಣೆ, ಅಪರಾಹ್ನ 2.30ಕ್ಕೆ ಕಾರ್ಯಕರ್ತರ ಸಮಾವೇಶ, ರಾತ್ರಿ 7ರಿಂದ ಭಜನಾ ಕಾರ್ಯಕ್ರಮ ಜರಗಲಿದೆ.

ಕುಳದ ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ

ಮುಳ್ಳೇರಿಯ: ಬೆಳ್ಳೂರು ಕುಳದ ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ ಮಹೋತ್ಸವವು ಏ.22 ಮತ್ತು 23ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಲಿದೆ.

ಏ.22ರಂದು ರಾತ್ರಿ 7ಗಂಟೆಗೆ ಕುಳ ದೈವಸ್ಥಾನದಿಂದ ಕುಳದಪಾರೆಗೆ ಭಂಡಾರ ಹೊರಡುವುದು, 8ಗಂಟೆಗೆ ಮೇಲೇರಿಗೆ ಅಗ್ನಿಸ್ಪರ್ಶ, 8.30ಕ್ಕೆ ಕುಳದಪಾರೆ ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 9ಗಂಟೆಗೆ ನೃತ್ಯ ವೈವಿಧ್ಯ, 11ಗಂಟೆಗೆ ಶ್ರೀ ವಿಷ್ಣುಮೂರ್ತಿ ದೈವದ ಕುಳಿಚ್ಚಾಟ ನಂತರ ಯಕ್ಷಗಾನ ಬಯಲಾಟ ನಡೆಯಲಿದೆ. ಏ.23ರಂದು ಮುಂಜಾನೆ 5ಗಂಟೆಗೆ ಶ್ರೀ ವಿಷ್ಣುಮೂರ್ತಿ ದೈವದ ಅಗ್ನಿಸ್ನಾನ ಬಳಿಕ ವಿವಿಧ ಕಾರ್ಯಕ್ರಮ ನೆರವೇರಲಿದೆ.

ಬಾಕ್ಸೈಟ್ ಗಣಿಗಾರಿಕೆ: ಅರಣ್ಯ ಭೂಮಿ ಹೊರತುಪಡಿಸಲು ಆಗ್ರಹ

ಕಾಸರಗೋಡು: ಜಿಲ್ಲೆಯಲ್ಲಿ ನಡೆಸಲು ಉದ್ದೇಶಿಸಿರುವ ಬಾಕ್ಸೈಟ್ ಗಣಿಗಾರಿಕೆಯಿಂದ ಕಾರಡ್ಕದ ಅರಣ್ಯ ಭೂಮಿಯನ್ನು ಹೊರತುಪಡಿಸಬೇಕೆಂದು ಶಾಸ ಸಾಹಿತ್ಯ ಪರಿಷತ್‌ನ ಪರಿಸರ ವಿಷಯ ಸಮಿತಿ ಸಭೆಯು ಆಗ್ರಹಿಸಿದೆ.

ಮಂಜೇಶ್ವರ ತಾಲೂಕಿನ ಉಕ್ಕಿನಡ್ಕ ಬ್ಲಾಕ್, ಕಾಸರಗೋಡು ತಾಲೂಕಿನ ಕಾರಡ್ಕ ಮತ್ತು ನಾರ್ಳಂ ಬ್ಲಾಕ್‌ಗಳನ್ನು ಗಣಿಗಾರಿಕೆಗಾಗಿ ಗುರುತಿಸಲಾಗಿತ್ತು. ಈ ಪೈಕಿ ನಾರ್ಳಂ ಬ್ಲಾಕ್ ಪ್ರದೇಶವು ಪೂರ್ಣವಾಗಿ ಅರಣ್ಯ ಭೂಮಿಯಲ್ಲಿ ಒಳಗೊಂಡಿದೆ. ವನ್ಯಜೀವಿಗಳ ಉಪಟಳ ಈ ಪ್ರದೇಶದಲ್ಲಿ ಹೆಚ್ಚಾಗಿದ್ದು ಕಾಡಾನೆಗಳ ಪರಂಪರಾಗತ ಸಂಚಾರ ಮಾರ್ಗವೂ ಇದಾಗಿದೆ ಎಂದು ಸಮಿತಿ ಸಭೆಯಲ್ಲಿ ತಿಳಿಸಲಾಗಿದೆ.

ಕಾಸರಗೋಡಿನಲ್ಲಿ ಜರಗಿದ ಸಭೆಯಲ್ಲಿ ಸಮಿತಿಯ ಅಧ್ಯಕ್ಷ ಕೆ.ಬಾಲಚಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಪರಿಷತ್‌ನ ಜಿಲ್ಲಾಧ್ಯಕ್ಷ ಬಾಲಕೃಷ್ಣನ್, ಕಾರ್ಯದರ್ಶಿ ಡಾ.ವಿಜೇಶ್, ಪರಿಸರ ವಿಷಯ ಸಮಿತಿ ಸಂಚಾಲಕ ಪ್ರೊ.ಎಂ.ಗೋಪಾಲನ್, ಕೆ.ಬಾಲಕೃಷ್ಣನ್, ಪಿ.ವಿ.ದೇವರಾಜನ್, ಕೆ.ಕೆ.ರಾಘವನ್, ಸತ್ಯನ್ ಇಡಯಿಲಕ್ಕಾಡ್, ವಿ.ಟಿ.ಕಾರ್ತ್ಯಾಯಿನಿ ಮುಂತಾದವರು ಉಪಸ್ಥಿತರಿದ್ದರು.

ಪಿಯುಸಿಯಲ್ಲಿ 5ನೇ ರ‍್ಯಾಂಕ್ ಪಡೆದ ಕುಂಬಳೆಯ ಗಾಯತ್ರಿ

ಕುಂಬಳೆ: ಕರ್ನಾಟಕ ಪಿ.ಯು.ಪರೀಕ್ಷಾ ಮಂಡಳಿ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆಯ ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಮಂಗಳೂರು ಶ್ರೀ ಶಾರದಾ ಕಾಲೇಜಿನ ವಿದ್ಯಾರ್ಥಿನಿ ಗಾಯತ್ರಿ ಎಚ್. ಕಾಲೇಜ್ ಮಟ್ಟದಲ್ಲಿ ಪ್ರಥಮ ಹಾಗೂ ಕರ್ನಾಟಕ ರಾಜ್ಯದಲ್ಲೇ 5ನೇ ರ‍್ಯಾಂಕ್‌ನೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಕುಂಬಳೆ ಸಮೀಪದ ನಾಯ್ಕಾಪು ಮಜಲಿನ ದಿ.ಗೋಪಾಲಕೃಷ್ಣ ಭಟ್ ಹಾಗೂ ಜೀವವಿಮಾ ನೌಕರೆ ವಿಜಯಲಕ್ಷ್ಮೀ ಭಟ್ ದಂಪತಿಯ ಪುತ್ರಿ. ಕುಂಬಳೆ ಹೋಲಿ ಫ್ಯಾಮಿಲಿ ವಿದ್ಯಾಲಯ ಮತ್ತು ಕಾಸರಗೋಡು ಚಿನ್ಮಯ ವಿದ್ಯಾಲಯದ ಹಳೆ ವಿದ್ಯಾರ್ಥಿನಿ.



ವಿವಿಧ ಹುದ್ದೆಗಳಿಗೆ ಅರ್ಜಿ

ಕಾಸರಗೋಡು: ಜಿಲ್ಲೆಯ ಕಾಸರಗೋಡು ಮತ್ತು ಹೊಸದುರ್ಗ ಫಾಸ್ಟ್ ಟ್ರ್ಯಾಕ್ ವಿಶೇಷ ನ್ಯಾಯಾಲಯಗಳಲ್ಲಿ ಆಫೀಸ್ ಅಟೆಂಡೆಂಟ್ ಮತ್ತು ಪಿಯೂನ್ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ನ್ಯಾಯಾಲಯದ ನಿವೃತ್ತ ನೌಕರರು ಮತ್ತು ಸರಕಾರಿ ನೌಕರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪಿಎಸ್‌ಸಿ ನಿಗದಿತ ಅರ್ಹತೆಗಳು ಮತ್ತು ಐದು ವರ್ಷಗಳ ಕೆಲಸದ ಅನುಭವ ಅಗತ್ಯವಿದೆ. ಅರ್ಹ ಅಭ್ಯರ್ಥಿಗಳು ವಯಸ್ಸು, ಅರ್ಹತೆ ಮತ್ತು ಕೆಲಸದ ಅನುಭವವನ್ನು ಸಾಬೀತುಪಡಿಸುವ ಪ್ರಮಾಣಪತ್ರಗಳ ದೃಢೀಕೃತ ಪ್ರತಿಗಳೊಂದಿಗೆ ಮೇ 2 ರಂದು ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಜಿಲ್ಲಾ ನ್ಯಾಯಾಧೀಶರು, ಜಿಲ್ಲಾ ನ್ಯಾಯಾಲಯ, ಕಾಸರಗೋಡು – 671123 ಈ ವಿಳಾಸದ ಮೂಲಕ ಸಂಪರ್ಕಿಸಬಹುದು.

ಭರದಿಂದ ಸಾಗುತ್ತಿದೆ ಪೆರಿಯ ಚಾಲಿಂಗಾಲ್‌ನಲ್ಲಿ ಟೋಲ್ ಪ್ಲಾಜಾ ನಿರ್ಮಾಣ ಕಾರ್ಯ

ರಾಷ್ಟ್ರೀಯ ಹೆದ್ದಾರಿ ದ್ವಿತೀಯ ರೀಚ್ ಕಾಮಗಾರಿ ಶೇ.90 ಪೂರ್ಣ

ಕಾಸರಗೋಡು: ಕಾಸರಗೋಡು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 66ರಲ್ಲಿ 2ನೇ ಹಂತದ ಚೆಂಗಳ – ನೀಲೇಶ್ವರ ರೀಚ್‌ನ ನಿರ್ಮಾಣ ಕಾಮಗಾರಿ ಶೇ.90ರಷ್ಟು ಪೂರ್ಣಗೊಂಡಿದೆ. ಮಾರ್ಚ್ 31ರೊಳಗೆ ಹೆದ್ದಾರಿಯ ಪ್ರಮುಖ ಕಾಮಗಾರಿಗಳನ್ನು ಪೂರ್ತಿಗೊಳಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಈ ಹಿಂದೆ ಉದ್ದೇಶಿಸಿತ್ತು.

ಆದರೆ ಕಾಮಗಾರಿ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಈ ಅವಧಿಯನ್ನು ಜೂನ್ 30ರ ತನಕ ವಿಸ್ತರಿಸಲಾಗಿದೆ. ದ್ವಿತೀಯ ಹಂತದ ರೀಚ್‌ನ ಪೆರಿಯ ಚಾಲಿಂಗಾಲ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಟೋಲ್ ಪ್ಲಾಜಾ ಜೂನ್ 30ರೊಳಗೆ ಕಾರ್ಯನಿರ್ವಹಿಸುವಂತೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಪ್ರಾಥಮಿಕ ಹಂತದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಟೋಲ್ ಬೂತ್‌ನ ಇಕ್ಕೆಲಗಳಲ್ಲಿ ಐದು ಟ್ರ್ಯಾಕ್‌ಗಳಂತೆ ಒಟ್ಟು 10 ಟ್ರ್ಯಾಕ್‌ಗಳು ಇರಲಿವೆ. ಆರಂಭದ ಹಂತದಲ್ಲಿ 6ರಿಂದ ಎಂಟು ಟ್ರ್ಯಾಕ್‌ಗಳನ್ನು ಮಾತ್ರವೇ ಸ್ಥಾಪಿಸಲು ನಿರ್ಧರಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ 66ರ ಚೆಂಗಳ – ನೀಲೇಶ್ವರದ ಪೆರಿಯ ಚಾಲಿಂಗಾಲ್‌ನಲ್ಲಿ ಹೈದರಾಬಾದ್ ಮೂಲದ ಮೇಘ ಇಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಸಂಸ್ಥೆಯು ಟೋಲ್ ಪ್ಲಾಜಾದ ನಿರ್ಮಾಣ ಯೋಜನೆಯ ಗುತ್ತಿಗೆ ವಹಿಸಿಕೊಂಡಿದೆ.

ದ್ವಿತೀಯ ಹಂತದ ಈ ಹೆದ್ದಾರಿಯ ಸಂಪೂರ್ಣ ನಿರ್ಮಾಣ ಕಾಮಗಾರಿಯನ್ನು ಈ ಕಂಪೆನಿ ನಡೆಸುತ್ತಿದೆ. ತಲಪಾಡಿ ಟೋಲ್ ಬೂತ್‌ನ ಬಳಿಕ 22 ಕಿ.ಮೀ. ನಷ್ಟೇ ಅಂತರದಲ್ಲಿರುವ ಕುಂಬಳೆ ಆರಿಕ್ಕಾಡಿಯಲ್ಲಿ ಟೋಲ್ ಪ್ಲಾಜಾ ಸ್ಥಾಪಿಸಲಾಗಿದ್ದು ಆದರೆ ಜನರ ಪ್ರತಿರೋಧದ ಹಿನ್ನೆಲೆ ಯೋಜನೆ ಹಿಂತೆಗೆಯಲಾಗಿತ್ತು.

ಕುಂಬಳೆ ಆರಿಕ್ಕಾಡಿಯಲ್ಲಿ ಟೋಲ್ ಬೂತ್ ನಿರ್ಮಾಣ ದಂಗವಾಗಿ ಕೋಟಿಗ ಟ್ಟಲೆ ರೂ. ಹಣ ವ್ಯರ್ಥ ಮಾಡಲಾಗಿದೆಂಬ ಆರೋಪವೂ ವ್ಯಾಪಕಗೊಂಡಿದೆ. ಪ್ರತಿಭಟನೆಯ ನಿಟ್ಟಿನಲ್ಲಿ ಫೆಬ್ರವರಿ ಮೊದಲ ವಾರದಲ್ಲಿ ಕುಂಬಳೆ ಆರಿಕ್ಕಾಡಿ ಟೋಲ್ ಬೂತ್‌ನ ಕಾರ್ಯಾಚರಣೆ ಸ್ಥಗಿತಗೊಳಿಸಲು ಕೇಂದ್ರ ಸಾರಿಗೆ ಸಚಿವಾಲಯ ಆದೇಶ ನೀಡಿತ್ತು. ಇದೇ ಹೆದ್ದಾರಿಯಲ್ಲಿ ದ.ಕ. ಜಿಲ್ಲೆಯ ತಲಪಾಡಿಯಲ್ಲಿ ಟೋಲ್ ಬೂತ್ ಕಾರ್ಯವೆಸಗುತ್ತಿದೆ. ಈ ನಡುವೆ ರಾಷ್ಟ್ರೀಯ ಹೆದ್ದಾರಿ 66ರ ಪೆರಿಯ ಚಾಲಿಂಗಾಲ್‌ನಲ್ಲಿ ನಿರ್ಮಿಸುವ ಟೋಲ್ ಪ್ಲಾಜಾದ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ. ಸಿವಿಲ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. 2026ರ ಮಧ್ಯಭಾಗದಲ್ಲಿ ಪೆರಿಯ ಚಾಲಿಂಗಾಲ್ ಟೋಲ್ ಬೂತ್ ಕಾರ್ಯಪ್ರವೃತ್ತಗೊಳ್ಳಬಹುದೆಂಬ ನಿರೀಕ್ಷೆ ಇರಿಸಲಾಗಿದೆ. ಕುಂಬಳೆ ಆರಿಕ್ಕಾಡಿಯಲ್ಲಿದ್ದ ತಾತ್ಕಾಲಿಕ ಟೋಲ್ ಪ್ಲಾಜಾವು ಜನಪರ ಹೋರಾಟದ ಅಂಗವಾಗಿ ತೆರವುಗೊಳಿಸಿದ ಕಾರಣ ಪೆರಿಯ ಚಾಲಿಂಗಾಲ್‌ನ ಕಾಮಗಾರಿ ತ್ವರಿತಗೊಳಿಸಲಾಗುತ್ತಿದೆ.



ಕಾಮಗಾರಿಗೆ ವೇಗ

ಚೆಂಗಳದಿಂದ ನೀಲೇಶ್ವರವರೆಗಿನ ರಾಷ್ಟ್ರೀಯ ಹೆದ್ದಾರಿ, ಸರ್ವೀಸ್ ರಸ್ತೆಗಳ ಕೆಲಸ ಕಾರ್ಯಗಳು ಭರದಿಂದ ಸಾಗುತ್ತಿವೆ. ಚೆಂಗಳ – ನೀಲೇಶ್ವರ ಭಾಗದ ರಾ.ಹೆ.ಉದ್ದ 37 ಕಿಲೋ ಮೀಟರ್ ಆಗಿದೆ.

ಹೈವೇ ಪ್ರಥಮ ರೀಚ್ ವಾಹನ ಸಂಚಾರಕ್ಕೆ ಮುಕ್ತ

ಇದೇ ವೇಳೆ ರಾಷ್ಟ್ರೀಯ ಹೆದ್ದಾರಿ 66ರ ಪ್ರಥಮ ರೀಚ್ ಆಗಿರುವ ತಲಪಾಡಿ – ಚೆಂಗಳ ಹೈವೇ ಕಾಮಗಾರಿ ಈಗಾಗಲೇ ಮುಕ್ತಾಯಗೊಂಡಿದ್ದು, ವಾಹನ ಸಂಚಾರಕ್ಕೆ ಸಂಪೂರ್ಣ ತೆರೆದು ಕೊಡಲಾಗಿದೆ. ಈ ಹೆದ್ದಾರಿಯನ್ನು ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೊಚ್ಚಿಯಲ್ಲಿ ಜರಗಿದ ಸಮಾರಂಭವೊಂದರಲ್ಲಿ ಲೋಕಾರ್ಪಣೆಗೊಳಿಸಿದ್ದರು. ಒಟ್ಟಾರೆ ಕಾಸರಗೋಡು ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಅತ್ಯಾಧುನಿಕ ಮಾದರಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಕೇಂದ್ರದ ಈ ಜನಪರ ಯೋಜನೆಗೆ ಅಪಾರ ಜನಬೆಂಬಲ ವ್ಯಕ್ತವಾಗುತ್ತಿದೆ.

ಟೋಲ್ ಪ್ಲಾಜಾ ಅಂತರ 60 ಕಿ.ಮೀ.

ಕಾನೂನು ಪ್ರಕಾರ ಒಂದೇ ರಾಷ್ಟ್ರೀಯ ಹೆದ್ದಾರಿ ಎರಡು ಟೋಲ್ ಬೂತ್‌ಗಳ ಅಂತರ ಕನಿಷ್ಠ 60 ಕಿಲೋ ಮೀಟರ್ ಆಗಿದೆ. ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರ ನಿರ್ಣಯ ಹಾಗೂ ವಸೂಲಿ) ಕಾಯಿದೆ 2008ರ ಅನುಸಾರ ಈ ಮಾನದಂಡ ನಿಗದಿಗೊಳಿಸಲಾಗಿದೆ. ಆದರೆ ಕೆಲವು ಪ್ರತ್ಯೇಕ ಪರಿಸ್ಥಿತಿಗಳಲ್ಲಿ ಈ ದೂರ ವ್ಯಾಪ್ತಿಯಲ್ಲಿ ವಿನಾಯಿತಿ ನೀಡಲಾಗುತ್ತದೆ. ಸ್ಥಳಾವಕಾಶದ ಕೊರತೆ, ನಗರ ವ್ಯಾಪ್ತಿಗಳು, ಪರಂಪರಾಗತ ಸ್ಮಾರಕಗಳ ಸಾಮೀಪ್ಯ, ಪ್ರಧಾನ ಸೇತುವೆಗಳು, ಬೈಪಾಸ್‌ಗಳು ಅಥವಾ ಸುರಂಗಗಳಿಗೆ ಪ್ರತ್ಯೇಕ ಟೋಲ್ ವಸೂಲಿ ಮಾಡಬೇಕಾಗುವುದರಿಂದ ಅಂತಹ ಸಂದರ್ಭ ವಿನಾಯಿತಿಗಳನ್ನು ಒದಗಿಸಬಹುದಾಗಿದೆ.

ಉದ್ಯಾವರ ಮಾಡ ಶ್ರೀ ದೈವಗಳ ಉತ್ಸವಕ್ಕೆ ಉದ್ಯಾವರ ಸಾವಿರ ಜಮಾಅತ್‌ಗೆ ಆಹ್ವಾನ



ಮಂಜೇಶ್ವರ: ಇತಿಹಾಸ ಪ್ರಸಿದ್ಧ ಉದ್ಯಾವರ ಮಾಡ ಶ್ರೀ ಅರಸು ಮಂಜಿಷ್ಣಾರ್ ಅಣ್ಣ ತಮ್ಮ ದೈವಗಳ ಕ್ಷೇತ್ರದ ವಾರ್ಷಿಕ ಜಾತ್ರೆಯ ಪೂರ್ವಭಾವಿಯಾಗಿ ಉದ್ಯಾವರ ಸಾವಿರ ಜಮಾಅತ್ ಮಸೀದಿಗೆ ದೈವಗಳ ಭೇಟಿ ಕಾರ್ಯಕ್ರಮವು ಶುಕ್ರವಾರ ಮಧ್ಯಾಹ್ನ ಸಾಂಪ್ರದಾಯಿಕವಾಗಿ ನೆರವೇರಿತು.

ಈ ವೇಳೆ ಉದ್ಯಾವರ ಮಾಡ ದೈವಗಳ ಕ್ಷೇತ್ರದ ಗುರಿಕಾರರಾದ ತಿಮ್ಮ ಭಂಡಾರಿ, ಮಂಜ ರೈ, ಕುಂಞಣ್ಣ ಚೌಟ, ಉತ್ಸವ ಸಮಿತಿಯ ಅಧ್ಯಕ್ಷ ಉಮೇಶ್ ಪೂಮಣ್ಣು, ಪ್ರಧಾನ ಕಾರ್ಯದರ್ಶಿ ಸದಾನಂದ ಹತ್ತನೇ ಮೈಲು ಭಾಗವಹಿಸಿದ್ದರು.

ಹಿಂದು – ಮುಸ್ಲಿಂ ಭಾವೈಕ್ಯದ ಸಂಕೇತದೊಂದಿಗೆ ಕಳೆದ 800 ವರ್ಷಗಳಿಂದ ವಾಡಿಕೆಯಲ್ಲಿರುವ ವರ್ಷಂಪ್ರತಿ ಪದ್ಧತಿಯಂತೆ ಉದ್ಯಾವರ ಮಾಡ ಶ್ರೀ ಅರಸು ದೈವ ಪಾತ್ರಿಗಳು ಮತ್ತು ಶ್ರೀ ಕ್ಷೇತ್ರದ ಪ್ರತಿನಿಧಿಗಳು ಹಾಗೂ ನೂರಾರು ಮಂದಿ ಹಿಂದು ಬಾಂಧವರು ಜೊತೆಯಾಗಿ ಉದ್ಯಾವರ ಸಾವಿರ ಜಮಾಅತ್‌ಗೆ ಭೇಟಿ ನೀಡಿದರು.

ಹಿಂದು – ಮುಸ್ಲಿಂ ಭಾವೈಕ್ಯದ ಪ್ರತೀಕ

ಉದ್ಯಾವರ ಮಾಡ ಶ್ರೀ ಅರಸು ಮಂಜಿಷ್ಣಾರ್ ದೈವ ಕ್ಷೇತ್ರದ ವಾರ್ಷಿಕ ಜಾತ್ರೋತ್ಸವದ ಅಂಗವಾಗಿ ಪ್ರಾಚೀನ ಕಾಲದಿಂದಲೇ ಆಚರಿಸಿಕೊಂಡು ಬರುತ್ತಿರುವ ಶ್ರೀ ಅರಸು ದೈವಗಳ ಜಮಾಅತ್ ಭೇಟಿಯು ಇಂದಿಗೂ ಹಿಂದು – ಮುಸ್ಲಿಂ ಭಾವೈಕ್ಯದ ಪ್ರತೀಕವಾಗಿದೆ. ಮೇಷ ಸಂಕ್ರಮಣ ಕಳೆದು ಬರುವ ಮೊದಲ ಶುಕ್ರವಾರ ಈ ಸಾಂಪ್ರದಾಯಿಕ ಭೇಟಿ ನಡೆದು ಬರುತ್ತಿದೆ.

ಮೇ 9-12: ಬಂಡಿ ಉತ್ಸವ

ಮೇ 9 ರಿಂದ 12 ರ ತನಕ ಉದ್ಯಾವರ ಮಾಡ ಕ್ಷೇತ್ರದಲ್ಲಿ ವಾರ್ಷಿಕ ಐತಿಹಾಸಿಕ ಬಂಡಿ ಉತ್ಸವ ನಡೆಯಲಿದೆ. ಮೇ 14 ರಂದು ಧ್ವಜ ಇಳಿಯುವುದರೊಂದಿಗೆ ಉತ್ಸವವು ಸಮಾಪ್ತಿಗೊಳ್ಳಲಿದೆ.

ಮೋದಿ ವಿರುದ್ಧ ಬಾಲಿಶ ಹೇಳಿಕೆಗೆ ಆಕ್ರೋಶ: ರಾಹುಲ್ ಗಾಂಧಿ ಕ್ಷಮೆ ಯಾಚನೆಗೆ ಆಗ್ರಹ

ಕಾಸರಗೋಡು: ಬಾಲಕೋಟ್ ಮತ್ತು ಆಪರೇಷನ್ ಸಿಂಧೂರ್ ಕಾರ್ಯಾಚರಣೆಗಳು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮ್ಯಾಜಿಕ್ ಆಗಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಕುರಿತು ಚರ್ಚೆಯ ಸಂದರ್ಭ ಹೇಳಿದ್ದಾರೆ. ಅಲ್ಲದೆ ಈ ಕಾರ್ಯಾಚರಣೆಗಳ ಮೂಲಕ ನರೇಂದ್ರ ಮೋದಿ ಸಿಕ್ಕಿಬಿದ್ದಿದ್ದಾರೆ ಎಂಬುದಾಗಿ ಬಾಲಿಶ ಹೇಳಿಕೆ ನೀಡಿದ್ದಕ್ಕಾಗಿ ರಾಹುಲ್ ಗಾಂಧಿ ದೇಶದ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಒತ್ತಾಯಿಸಿದ್ದಾರೆ.

ದೇಶ ವಿರೋಧಿ ಹೇಳಿಕೆ

ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್‌ನ ಮಾಜಿ ರಾಷ್ಟ್ರೀಯ ಅಧ್ಯಕ್ಷ ರಾಹುಲ್ ಗಾಂಧಿ ಸಂಸತ್ತಿನಲ್ಲಿ ನೀಡಿದ ಹೇಳಿಕೆ ಅತ್ಯಂತ ಗಂಭೀರ, ಖಂಡನೀಯ ಮತ್ತು ಭಾರತೀಯ ಸೇನೆ, ನಮ್ಮ ದೇಶ ಮತ್ತು ಕೇಂದ್ರ ಸರಕಾರವನ್ನು ಅವಮಾನಿಸುತ್ತದೆ. ಹಿರಿಯ ಕಾಂಗ್ರೆಸ್ ನಾಯಕರು ಯಾವಾಗಲೂ ಭಾರತದ ಮೇಲೆ ದಾಳಿ ಮಾಡುವ ಭಯೋತ್ಪಾದಕರನ್ನು ಬೆಂಬಲಿಸುವ ದೇಶ ವಿರೋಧಿ ಹೇಳಿಕೆಗಳನ್ನು ನೀಡುತ್ತಾರೆ ಎಂದು ಅವರು ಉಲ್ಲೇಖಿಸಿದರು.



ಖಂಡನೀಯ

ಕಾಶ್ಮೀರದಲ್ಲಿ ಮುಗ್ಧ ಭಾರತೀಯರ ಮೇಲೆ ನಿರ್ದಯವಾಗಿ ಗುಂಡುಹಾರಿಸಿದ ಭಯೋತ್ಪಾದಕರು, ಭಯೋತ್ಪಾದಕ ಸಂಘಟನೆಗಳ ಗುರಿಯಾಗಿಸಿ ಕೊಂಡು ಪ್ರತಿಕಾರ ತೀರಿಸಲು ಭಾರತ ಆಪರೇಷನ್ ಸಿಂಧೂರ್ ನಡೆಸಲಾಗಿದೆ. ಈ ಕಾರ್ಯಾಚರಣೆಯನ್ನು ಮ್ಯಾಜಿಕ್ ಎಂದು ಹೇಳಿಕೆ ನೀಡಿರುವುದು ಖಂಡನೀಯ.

● ಎಂ.ಎಲ್.ಅಶ್ವಿನಿ

ಪ್ರತಿಕಾರ

ಕಾಶ್ಮೀರದಲ್ಲಿ ಮುಗ್ಧ ಭಾರತೀಯರ ಮೇಲೆ ನಿರ್ದಯವಾಗಿ ಗುಂಡು ಹಾರಿಸಿದ ಭಯೋತ್ಪಾದಕರ ವಿರುದ್ಧ , ದೇಶದ ಅನೇಕ ಮಂದಿ ಮಹಿಳೆಯರ ಹಣೆಯ ಕುಂಕುಮ ಅಳಿಸಿ ವಿಧವೆಯರನ್ನಾಗಿ ಮಾಡಿದವರಿಗೆ ಪ್ರತೀಕಾರ ತೀರಿಸುವ ಸಲುವಾಗಿಯೇ ಆಪರೇಷನ್ ಸಿಂಧೂರ್ ನಡೆಸಲಾಯಿತು. ಈ ಕಾರ್ಯಾಚರಣೆಯನ್ನು ಮ್ಯಾಜಿಕ್ ಎಂದು ಹೇಳಿಕೆ ನೀಡಿರುವುದು ರಾಹುಲ್ ಗಾಂಧಿ ಅವರ ಮಹಿಳಾ ವಿರೋಧಿ , ಭಾರತ ವಿರೋಧಿ ನಿಲುವನ್ನು ಸ್ಪಷ್ಟಪಡಿಸುತ್ತದೆ ಎಂದು ಎಂ.ಎಲ್.ಅಶ್ವಿನಿ ಗಮನ ಸೆಳೆದಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಗೆ ಬೆಂಬಲ ನೀಡಿ: ಮಹಿಳಾ ಮೋರ್ಚಾ

ಕಾಸರಗೋಡು: ಲೋಕಸಭಾ ಹಾಗೂ ವಿಧಾನಸಭಾಕ್ಷೇತ್ರಗಳಲ್ಲಿ ನಿರ್ದಿಷ್ಟ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿರಿಸಲು ಕೇಂದ್ರ ಸರಕಾರ ಜಾರಿಗೊಳಿಸಲು ಮುಂದಾಗಿರುವ ಮಸೂದೆಗೆ ಎಲ್ಲರೂ ಬೆಂಬಲ ನೀಡಬೇಕೆಂದು ಮಹಿಳಾ ಮೋರ್ಚಾದ ರಾಜ್ಯಾಧ್ಯಕ್ಷೆ ನವ್ಯಾ ಹರಿದಾಸ್ ಹೇಳಿದ್ದಾರೆ.



ಈ ಹೊಸ ಕಾನೂನು ಜಾರಿಗೊಂಡಲ್ಲಿ ಲೋಕಸಭೆ ಮಾತ್ರವಲ್ಲ ರಾಜ್ಯ ವಿಧಾನಸಭೆಗಳಲ್ಲೂ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಶೇ. 33ಕ್ಕೇರಲಿದೆ. ಇದಕ್ಕಾಗಿ ಕ್ಷೇತ್ರಗಳ ಮರು ವಿಂಗಡಣೆ ನಡೆಸಬೇಕಾಗಿ ಬರಲಿದೆ. ಹಾಗೆ ನಡೆದಲ್ಲಿ ಕೇರಳದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಈಗಿನ 140ರಿಂದ 210ಕ್ಕೇರಲಿದೆ. ಅದೇ ರೀತಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಈಗಿನ 541ರಿಂದ 816ಕ್ಕೇರಲಿದೆ. ಅದಕ್ಕೆ ಹೊಂದಿಕೊಂಡು ಲೋಕಸಭಾ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾಗಲಿದೆ. ಈ ವಿಧೇಯಕದ ಬಗ್ಗೆ ಎಲ್ಲರೊಂದಿಗೂ ಚರ್ಚೆ ನಡೆಸಿ ಅದನ್ನು ಜಾರಿಗೊಳಿಸಲು ಕೇಂದ್ರ ಸರಕಾರ ತಯಾರಾಗಿದೆ ಎಂದು ನವ್ಯಾ ಹರಿದಾಸ್ ಕಲ್ಲಿಕೋಟೆಯಲ್ಲಿ ನಡೆದ ಸಮಾರಂಭದಲ್ಲಿ ತಿಳಿಸಿದ್ದಾರೆ.

ನಾರಿಶಕ್ತಿ ಸಮ್ಮೇಳನ

ಮಹಿಳಾ ಮೀಸಲಾತಿ ಮಸೂದೆ ಜಾರಿಗೊಳಿಸಲು ಕೇಂದ್ರ ಸರಕಾರದ ಕ್ರಮ ಸ್ವಾಗತಿಸಿ ಮಹಿಳಾ ಮೋರ್ಚಾದ ನೇತೃತ್ವದಲ್ಲಿ ರಾಜ್ಯ ಮತ್ತು ವಿಧಾನಸಭಾ ಕ್ಷೇತ್ರಗಳ ಮಟ್ಟದಲ್ಲಿ ನಾರಿಶಕ್ತಿ ಸಮ್ಮೇಳನ ಹಾಗೂ ಬೈಕ್ ರ‍್ಯಾಲಿ ಮತ್ತು ಮೆರವಣಿಗೆಗಳನ್ನು ನಡೆಸಲಾಗುವುದು ಎಂದರು.

ನಾಳೆ ವೈದ್ಯಕೀಯ , ರಕ್ತದಾನ ಶಿಬಿರ

ಮಂಜೇಶ್ವರ: ಶ್ರೀ ಸದಾಶಿವ ಶೆಟ್ಟಿ ಸೇವಾ ಬಳಗ ಕೇಂದ್ರೀಯ ಸಮಿತಿ ಹಾಗೂ ಕೆ.ಎಸ್.ಹೆಗ್ಡೆ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ದೇರಳಕಟ್ಟೆ ಇದರ ಸಹಯೋಗದೊಂದಿಗೆ ಏ.19 ರಂದು ಕುಳೂರು ಸರಕಾರಿ ಕಿ.ಪ್ರಾ. ಶಾಲೆಯಲ್ಲಿ ಉಚಿತ ವೈದ್ಯಕೀಯ ಶಿಬಿರ, ರಕ್ತದಾನ ಶಿಬಿರ ನಡೆಯಲಿದೆ.

ಕಾರ್ಯಕ್ರಮವನ್ನು ಹೇರಂಭ ಇಂಡಸ್ಟ್ರೀಸ್ ಮುಂಬೈ ಇದರ ಸ್ಥಾಪಕಾಧ್ಯಕ್ಷರು, ಶ್ರೀ ಸದಾಶಿವ ಶೆಟ್ಟಿ ಸೇವಾ ಬಳಗದ ಕೇಂದ್ರೀಯ ಸಮಿತಿಯ ಅಧ್ಯಕ್ಷರೂ ಆಗಿರುವ ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಉದ್ಘಾಟಿಸುವರು. ಕೇಂದ್ರೀಯ ಸಮಿತಿ ಉಪಾಧ್ಯಕ್ಷ ನಾರಾಯಣ ನಾಯ್ಕ್ ನಡುಹಿತ್ಲು ಅಧ್ಯಕ್ಷತೆವಹಿಸುವರು. ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವೈಸ್ ಚಾನ್ಸಲರ್ ಡಾ.ಸತೀಶ್ ಭಂಡಾರಿ, ಖ್ಯಾತ ಎಲುಬು ತಜ್ಞ ಡಾ.ಅಶ್ವಿನ್ ಶೆಟ್ಟಿ, ಇಮ್ಮಿಡಿಯೇಟ್ ಪಾಸ್ಟ್ ಡಯಾಟ್ರಿಕ್ಟ್ ಗವರ್ನರ್ ರೋಟರಿ ಡಿಸ್ಟ್ರಿಕ್ಟ್ ಡಾ.ವಿಕ್ರಮ್ ದತ್ತ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಶ್ರೀ ಸದಾಶಿವ ಶೆಟ್ಟಿ ಸೇವಾ ಬಳಗದ ಕೇಂದ್ರೀಯ ಸಮಿತಿಯ ಉಪಾಧ್ಯಕ್ಷ ಚಂದ್ರಹಾಸ ಶೆಟ್ಟಿ ಕುಳೂರು ಕನ್ಯಾನ, ಮೀಂಜ ಗ್ರಾ.ಪಂ. ಸದಸ್ಯರಾದ ಶರ್ಮಿಳ ಎಂ. ಶೆಟ್ಟಿ ಚಾರ್ಲ, ಕುಳೂರಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಮಾಲತಿ, ಡಾ.ಪುನೀತ ಶೆಟ್ಟಿ ಕುಳೂರು ಉಪಸ್ಥಿತರಿರುವರು.

ವೈದ್ಯಕೀಯ ಶಿಬಿರದಲ್ಲಿ ಎಲುಬು ಮತ್ತು ಕೀಲು ಚಿಕಿತ್ಸೆ, ಕಣ್ಣಿನ ಚಿಕಿತ್ಸೆ, ಚರ್ಮ ರೋಗ ಚಿಕಿತ್ಸೆ, ಮಕ್ಕಳ ಚಿಕಿತ್ಸೆ, ಇಸಿಜಿ, ಇಎನ್‌ಟಿ, ಜನರಲ್ ಮೆಡಿಸಿನ್ ಎಂಬೀ ವಿಭಾಗಗಳಲ್ಲಿ ನುರಿತ ತಜ್ಞರಿಂದ ತಪಾಸಣೆಯ ಜೊತೆಗೆ ಸೂಕ್ತ ಔಷಧಿ ಹಾಗೂ ಕನ್ನಡಕ ವಿತರಣೆ ನಡೆಯಲಿದೆ. ಸಾರ್ವಜನಿಕರು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೇರಳ ರಾಜ್ಯ ಮೆಲಕುಡಿಯ ಸೇವಾ ಸಂಘದ 23ನೇ ವಾರ್ಷಿಕ ಸಮ್ಮೇಳನ



ಮಂಜೇಶ್ವರ: ಕೇರಳ ರಾಜ್ಯ ಮೆಲಕುಡಿಯ ಸೇವಾ ಸಂಘ ಧರ್ಮತ್ತಡ್ಕ ಇದರ ನೇತೃತ್ವದಲ್ಲಿ 23ನೇ ವಾರ್ಷಿಕ ಸಮ್ಮೇಳನವು ಬೆರಿಪದವು ಶ್ರೀ ವಿದ್ಯಾರಣ್ಯ ಎಎಲ್‌ಪಿ ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು. ಈ ಸಂದರ್ಭ ಹಮ್ಮಿಕೊಳ್ಳಲಾದ ಸಭಾ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟನೆ ಹಾಗೂ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಪ್ರಮುಖರಾದ ಕರಿಯ ಕುಡಿಯ ನೆರವೇರಿಸಿದರು.

ಶಂಕರ ಕುಡಿಯ ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ಸಮ್ಮೇಳನದಲ್ಲಿ ಸುಮಾರು 115 ಮಂದಿ ಭಾಗವಹಿಸಿದ್ದರು. ಸೌಮ್ಯಾ–ಪವಿತ್ರಾ ಪ್ರಾರ್ಥಿಸಿ, ಸಂಯೋಜಕ ಮಾಧವ ಕೊಜಪ್ಪೆ ಸ್ವಾಗತಿಸಿ, ವಂದಿಸಿದರು. ಶಕುಂತಲಾ ಕಾರ್ಯಕ್ರಮ ನಿರೂಪಿಸಿದರು.

ಸಮಿತಿ ಸದಸ್ಯರಾದ ವಿಘ್ನೇಶ್, ಹರಿಪ್ರಸಾದ್, ರಾಧಾಕೃಷ್ಣ , ರಮೇಶ್, ಅಣ್ಣಪ್ಪ, ಮಾಲತಿ, ಪವಿತ್ರಾ, ಸೌಮ್ಯಾ, ರವಿಚಂದ್ರ, ಸುಬ್ರಹ್ಮಣ್ಯ, ಕೇಶವ, ಗಂಗಾಧರ, ವಿಷ್ಣುಕುಮಾರ್ ಮೊದಲಾದವರು ಮತ್ತು ಸಂಘದ ಕಾರ್ಯಕರ್ತರು ಕಾರ್ಯಕ್ರಮದ ಸಂಪೂರ್ಣ ಯಶಸ್ವಿಗೆ ಸಹಕರಿಸಿದರು.

ಪುಸ್ತಕ ವಿತರಣೆ, ಸನ್ಮಾನ

ಕಾರ್ಯಕ್ರಮದಲ್ಲಿ 80 ಮಂದಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಿಸಲಾಯಿತು. 5 ಮಂದಿ ಕಲಿಕಾ ಪ್ರೋತ್ಸಾಹ ಧನ ನೀಡಲಾಯಿತು. ವಿವಿಧ ಇಲಾಖೆಗಳಲ್ಲಿ ಸೇವಾ ನಿವೃತ್ತಿ ಹೊಂದಿದ ಸಮಾಜದ 5 ಮಂದಿಯನ್ನು ಸನ್ಮಾನಿಸಲಾಯಿತು. ಬೆರಿಪದವು ವಿದ್ಯಾರಣ್ಯ ಎಎಲ್‌ಪಿ ಶಾಲೆಗೆ ಸಮುದಾಯ ಸಂಘದ ವತಿಯಿಂದ ಗೋದ್ರೆಜ್ ಕವಾಟು ಒದಗಿಸಲಾಯಿತು.

ಏ.26ರಿಂದ ಬಾಯಾರು ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ವರ್ಷಾವಧಿ ಜಾತ್ರಾ ಸಂಭ್ರಮ

ಉಪ್ಪಳ: ಬಾಯಾರು ಶ್ರೀ ಪಂಚಲಿಂಗೇಶ್ವರ ದೇವರು ಮತ್ತು ಮಲರಾಯ ದೈವಂಗಳ ಭಂಡಾರ ಇಲ್ಲಿನ ಜಾತ್ರೋತ್ಸವ ಏ.26ರಿಂದ 30ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಏ.26ರಂದು ರಾತ್ರಿ ಭಂಡಾರ ಇಳಿದು ಧ್ವಜಾರೋಹಣ, ಏ.27ರಂದು ಕೊಟ್ಯದಾಯನ, ಸಂಜೆ 6ರಿಂದ ಪಂಚಶ್ರೀ ಬಾಲಗೋಕುಲದ ಮಕ್ಕಳಿಂದ ನೃತ್ಯ ವೈವಿಧ್ಯ, ಏ.28ರಂದು ಅಪರಾಹ್ನ 4ಕ್ಕೆ ಅಯ್ಯರ ಬಂಟರ ನೇಮ ಪ್ರಥಮ ಬಂಡಿ ಉತ್ಸವ, ರಾತ್ರಿ 7ರಿಂದ ಬಾಯಾರು ಶ್ರೀ ಪಂಚಲಿಂಗೇಶ್ವರ ಕಲಾವೃಂದ ಇದರ ಮಕ್ಕಳ ತಂಡದ ಯಕ್ಷಗಾನ ಪ್ರದರ್ಶನಗೊಳ್ಳಲಿದೆ.

ಮಲರಾಯ ದೈವದ ನೇಮ ನಡುಬಂಡಿ

ಏ.29ರಂದು ಅಪರಾಹ್ನ 3ರಿಂದ ಶ್ರೀ ಮಲರಾಯ ದೈವದ ನೇಮ ನಡುಬಂಡಿ ಉತ್ಸವ, ಸಂಜೆ 5.30ರಿಂದ ನಡೆಯುವ ಧಾರ್ಮಿಕ ಸಭೆ ಮತ್ತು ಸನ್ಮಾನ ಸಮಾರಂಭದಲ್ಲಿ ಜಯಶಂಕರ್ ರೈ ಬಾಯಾರುಗುತ್ತು ಅಧ್ಯಕ್ಷತೆ ವಹಿಸುವರು. ಬಾಲಕೃಷ್ಣ ದೀಕ್ಷಾ ಕುಂಜತ್ತೂರು, ಪೈವಳಿಕೆ ಪಂಚಾಯತ್ ಸದಸ್ಯ ರಾಮ ಏದಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಬಾಲ ಸಂಸ್ಕಾರ ಶಿಕ್ಷಕರು ಮತ್ತು ವೀರರಾಣಿ ಅಬ್ಬಕ್ಕ ಗೌರವ ಪುರಸ್ಕೃತರಾದ ಗೀತಾ ಲಕ್ಷ್ಮೀಶ್ ಮಂಗಳೂರು ಧಾರ್ಮಿಕ ಉಪನ್ಯಾಸ ನೀಡುವರು.



ರಾಮಕೃಷ್ಣ ಭಟ್‌ಗೆ ಸನ್ಮಾನ

ಈ ಸಂದರ್ಭದಲ್ಲಿ ಡಾ.ರಾಮಕೃಷ್ಣ ಭಟ್ ಪದ್ಯಾಣ ಅವರನ್ನು ಸನ್ಮಾನಿಸಲಾಗುವುದು, ವೇದಿಕೆಯಲ್ಲಿ ಶ್ರೀ ಕ್ಷೇತ್ರದ ಆಡಳಿತ ಮಂಡಳಿ ಅಭಿವೃದ್ಧಿ ಸಮಿತಿ, ಸೇವಾ ಸಮಿತಿ ಹಾಗೂ ಉತ್ಸವ ಸಮಿತಿಯ ಪ್ರಮುಖರು ಉಪಸ್ಥಿತರಿರುವರು.

ರಾತ್ರಿ 8.30ರಿಂದ ಮ್ಯೂಸಿಕಲ್ ನೈಟ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಏ.30ರಂದು ಅಪರಾಹ್ನ 3ಕ್ಕೆ ಶ್ರೀ ಪಿಲಿಚಾಮುಂಡಿ ದೈವದ ನೇಮ ಕಡೇ ಬಂಡಿ ಉತ್ಸವ, ವಾಲಸರಿ ನೇಮ, ಧ್ವಜಾವರೋಹಣ, ಸಂಜೆ 6ರಿಂದ ಕಾಸರಗೋಡು ಸಾಂಸ್ಕೃತಿಕ ಕಲಾ ವೈಭವ ಕಲಾವಿದರ ಕಲರವ ಕಾರ್ಯಕ್ರಮ, ರಾತ್ರಿ 9ಕ್ಕೆ ಶೋಬಾಜಿ ತುಳು ನಾಟಕ ಪ್ರದರ್ಶನ, ಮೇ 2ರಂದು ಸಂಜೆ 5.30ರಿಂದ ಬಂಡಿಮಾರು ಕೊರತಿ, ಗುಳಿಗ ನೇಮ ಜರಗಲಿದೆ.



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನವನ್ನು ಕುಂಬಳೆ ಸಮೀಪದ ಕಿದೂರು ಜೋಡುಕಟ್ಟೆ ಶಿವನಾಥ ಜ್ಯೋತಿ ಅವರ ಮನೆಯಲ್ಲಿ ಆಚರಿಸಲಾಯಿತು. ಶಿವಪ್ರಸಾದ್ ರೈ ಮಡ್ವ , ಜೀವನ್ ಕುಮಾರ್ , ಉಜಾರು ವಾರ್ಡ್ ಪ್ರತಿನಿಧಿ ಅಮಿತಾ ಡಿ.ಆಳ್ವ, ಮಹೇಶ್ ಪುಣಿಯೂರು, ವಿನೋದ್ ಕುಮಾರ್, ಜ್ಯೋತಿ, ಕೃಷ್ಣ ಮೊತ್ತಿತರರು ಹಾಗೂ ಪುಟಾಣಿ ಮಕ್ಕಳು ಪಾಲ್ಗೊಂಡಿದ್ದರು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ | ವಿಶೇಷ ಆಕರ್ಷಣೆಯಾದ ಪೆರಡಾಲ ಬೇತಾಳ

ಕೆಡೆಂಜಿ ಶ್ರೀ ಮಹಾವಿಷ್ಣು ಕ್ಷೇತ್ರದಿಂದ ಅದ್ದೂರಿ ಮೆರವಣಿಗೆಯಲ್ಲಿ ಸಾಗಿದ ಹಸಿರುವಾಣಿ ಹೊರೆಕಾಣಿಕೆ

ಬದಿಯಡ್ಕ: ಬಿಸಿಲನ್ನು ಲೆಕ್ಕಿಸದೆ ಸಹಸ್ರಾರು ಮಂದಿ ಭಗವದ್ಭಕ್ತರ ಶ್ರದ್ಧಾಭಕ್ತಿಯ ಪಾಲ್ಗೊಳ್ಳುವಿಕೆಯೊಂದಿಗೆ ಅದ್ದೂರಿಯ ಮೆರವಣಿಗೆಯ ಮೂಲಕ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಹಸಿರುವಾಣಿ ಮೆರವಣಿಗೆ ಶುಕ್ರವಾರ ಜರಗಿತು.

ಪ್ರಾತಃಕಾಲ ಶ್ರೀ ಕ್ಷೇತ್ರದಲ್ಲಿ ಗಣಪತಿ ಹೋಮ, ಉಗ್ರಾಣ ಮುಹೂರ್ತ ನಡೆಯಿತು. ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಆನೆಮಜಲು ದೀಪಬೆಳಗಿಸಿದರು.

ಹಸಿರುವಾಣಿ ಮೆರವಣಿಗೆಗೆ ಚಾಲನೆ

ಕೆಡೆಂಜಿ ದೇವಸ್ಥಾನದಿಂದ ಹಸಿರುವಾಣಿ ಮೆರವಣಿಗೆ ಕೆಡೆಂಜಿ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಭಗವದ್ಭಕ್ತರು ಒಟ್ಟುಗೂಡಿ ಪ್ರಾರ್ಥನೆಯನ್ನು ಸಲ್ಲಿಸಿ ಹಸಿರುವಾಣಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳು, ಭಗವದ್ಭಕ್ತರು ಅಕ್ಕಿಮುಡಿಯನ್ನು ತಲೆಗೇರಿಸಿದರು. ನೂರಾರು ಬುಟ್ಟಿಗಳಲ್ಲಿ ತರಕಾರಿಗಳನ್ನು ಹೊತ್ತ ಮಾತೆಯರು, ಮುತ್ತುಕೊಡೆಗಳು, ಚೆಂಡೆಮೇಳ, ವಾದ್ಯ, ಕೋಲಾಟ, ಗೊಂಬೆಗಳ ನರ್ತನದೊಂದಿಗೆ ಸಾಗಿಬಂದ ಮೆರವಣಿಗೆ ಬದಿಯಡ್ಕ ಪೇಟೆಯನ್ನು ಸುತ್ತಿ ವರದಾ ನದಿಯನ್ನು ದಾಟಿ ಪೆರಡಾಲ ದೇವಸ್ಥಾನಕ್ಕೆ ತಲುಪಿತು. ಬಿಸಿಲನ್ನೂ ಲೆಕ್ಕಿಸದೆ ಮಾತೆಯರು, ಮಕ್ಕಳು ಕುಣಿತ ಭಜನೆಯೊಂದಿಗೆ ಜೊತೆಗೂಡಿದ್ದರು. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ, ಕೃಷ್ಣರಾಜ ಬಲ್ಲಾಳ್ ಕೊಡ್ಯಮ್ಮೆ ಅರಮನೆ, ಹಸಿರುವಾಣಿ ಸಮಿತಿಯ ಅಧ್ಯಕ್ಷ ಕೃಷ್ಣಮೂರ್ತಿ ಪುದುಕೋಳಿ ಸಂಚಾಲಕ ಶ್ಯಾಮಪ್ರಸಾದ ಮಾನ್ಯ, ಸದಾಶಿವ ಮುರಿಯಂಕೂಡ್ಲು, ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಮೊಕ್ತೇಸರರಾದ ಕೃಷ್ಣ ಬಿ., ಸೀತಾರಾಮ ವಿ., ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ಉದ್ಯಮಿ ಮಧುಸೂದನ ಆಯರ್ ಮಂಗಳೂರು, ಗಣೇಶ ಪ್ರಸಾದ ಕಡಪ್ಪು, ಭಾಸ್ಕರ ಪಂಜಿತ್ತಡ್ಕ, ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಡಿ.ಶಂಕರ, ವಿವಿಧ ಜನಪ್ರತಿನಿಧಿಗಳು, ವಿವಿಧ ದೇವಸ್ಥಾನದ ಪ್ರತಿನಿಧಿಗಳು, ನಾಡಿನ ಗಣ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಪೆರಡಾಲದ ಬೇತಾಳ

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಶ್ರೀ ದೇವರ ಬಲಿಯೊಂದಿಗೆ ಬೇತಾಳ ಸುತ್ತುಬರುವುದು ವಿಶೇಷ ಆಕರ್ಷಣೆಯಾಗಿದೆ. ಶ್ರೀ ಉದನೇಶ್ವರ ದೇವರ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಹಸಿರುವಾಣಿ ಮೆರವಣಿಗೆಯಲ್ಲೂ ಸಾಗಿಬಂದ ಬೇತಾಳವು ವಿಶೇಷ ಆಕರ್ಷಣೆಯಾಯಿತು.



ಪೆರಡಾಲ ಶ್ರೀ ಉದನೇಶ್ವರ ದೇವಳ ಬ್ರಹ್ಮಕಲಶ ಪ್ರಯುಕ್ತ ಶುಕ್ರವಾರ ಬೆಳಿಗ್ಗೆ ಉಗ್ರಾಣ ಮುಹೂರ್ತ ನಡೆಯಿತು. ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಳ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ಟ ಆನೆಮಜಲು ದೀಪ ಬೆಳಗಿಸಿದರು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನ

ಅಂಚೆ: ಪೆರಡಾಲ 671551, ಕಾಸರಗೋಡು ತಾಲೂಕು ಮತ್ತು ಜಿಲ್ಲೆ, ಕೇರಳ ರಾಜ್ಯ, ಮೊ. : 9496610794

ಕಾಸರಗೋಡು ಜಿಲ್ಲೆಯ ಕುಂಬಳೆ ಸೀಮೆಯ ಪ್ರಮುಖ ಐದನೆಯ ಕ್ಷೇತ್ರವಾಗಿರುವ ಪೆರಡಾಲದಲ್ಲಿ ನೆಲೆಯಾಗಿರುವ ಶ್ರೀ ಉದನೇಶ್ವರ ದೇವರು ಮಾಯಿಪ್ಪಾಡಿ ಯುವರಾಜರ ಪಟ್ಟದ ದೇವರೆಂಬುದು ಐತಿಹಾಸಿಕ ವಿಚಾರ. ಅಲ್ಲದೆ, ಬಹಳ ಹಿಂದಿನಿಂದಲೇ ಗ್ರಾಮ ದೇವಸ್ಥಾನವಾಗಿಯೂ ಪೆರಡಾಲ ಕ್ಷೇತ್ರವು ಗುರುತಿಸಲ್ಪಟ್ಟಿದೆ. ಜೀವಾತ್ಮರನ್ನು ಉದ್ಧರಿಸುವ ದೇವರಾಗಿ, ಗಂಗೆಯಿಂದ ಎದ್ದು ಬಂದ ಶ್ರೀ ಉದನೇಶ್ವರ ಇಲ್ಲಿ ನೆಲೆಸಿದ್ದರಿಂದ, ಈ ನೆಲ ಪಾವನ ಪುಣ್ಯವೆನಿಸಿದೆ.

ಶ್ರೀ ಶಾಸ್ತಾರ ದೇವರು ಬಹಳ ಹಿಂದಿನಿಂದಲೂ ಸ್ಥಳ ಸಾನ್ನಿಧ್ಯವಾಗಿದ್ದು ಅಯ್ಯಪ್ಪ ವ್ರತಧಾರಿಗಳು ಬಹಳವಾಗಿ ನಂಬಿಕೊಂಡು ಬರುತ್ತಿರುವರು. ಪೆರಡಾಲ ಕ್ಷೇತ್ರದಲ್ಲಿ ಸ್ತಂಭಿಸಲ್ಪಟ್ಟು ಒಳಗೋಪುರದಲ್ಲಿ ನೆಲೆಯಾಗಿರುವ ಶ್ರೀ ಕುಟ್ಟಿಚಾತ/ಕುಕ್ಷಿಶಾಸ್ತಾರ ಕಾರಣಿಕ ಶಕ್ತಿಯಾಗಿ ಪ್ರಸಿದ್ಧಿ ಪಡೆದಿದೆ. 'ಪಡೆ'' ಸಮರ್ಪಣೆಯು ಕುಟ್ಟಿಚಾತನಿಗೆ ಸಮರ್ಪಿಸುವ ಪ್ರಮುಖ ಸೇವೆಯಾಗಿದೆ. ಕಳೆದುಹೋದ ವಸ್ತುಗಳನ್ನು ಮರಳಿ ಸಿಗುವಂತೆ ಮಾಡುವ ಕುಟ್ಟಿಚಾತನ ವಿಶೇಷ ಪವಾಡವು ಊರಿನ ಹಾಗೂ ಪರವೂರಿನ ಹಲವಾರು ಭಕ್ತರಿಗೆ ಅನುಭವವೇದ್ಯವಾಗಿದೆ. ಅಲ್ಲದೆ ಪಿಲಿಚಾಮುಂಡಿ, ಭೈರವಾದಿ ಶಕ್ತಿಗಳು ಕ್ಷೇತ್ರದ ಕಾರಣಿಕತೆಯನ್ನು ಹೆಚ್ಚಿಸಿವೆ. ಪ್ರಸ್ತುತ ದೇವಾಲಯದಲ್ಲಿ ಬ್ರಹ್ಮಕಲಶೋತ್ಸವದ ಸಂಭ್ರಮ.

ಏ.17ನೇ ಶುಕ್ರವಾರದಿಂದ ಏ. 28ನೇ ಮಂಗಳವಾರದ ವರೆಗೆ






ಆತ್ಮೀಯ ಭಗವದ್ಭಕ್ತರೇ,
ಕಾಸರಗೋಡು ತಾಲೂಕು ಕುಂಬಳೆ ಸೀಮೆಯ ಇತಿಹಾಸ ಪ್ರಸಿದ್ಧ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ **ನವೀಕರಣ ಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ವರ್ಷಾವಧಿ ಉತ್ಸವ**ವು ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್ ಶ್ರೀಮದ್ ಎಡನೀರು ಮಠ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಪೂರ್ಣಾನುಗ್ರಹದೊಂದಿಗೆ, ಶ್ರೀಕ್ಷೇತ್ರ ಆಚಾರ್ಯ ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಇವರ ನೇತೃತ್ವದಲ್ಲಿ ಪರಮಪೂಜ್ಯ ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಾಧಿಕಾರಿ ಶ್ರೀಕ್ಷೇತ್ರ ಧರ್ಮಸ್ಥಳ ಇವರ ಮಾರ್ಗದರ್ಶನದಲ್ಲಿ ಸ್ವಸ್ತಿ ಶ್ರೀ ಪರಾಭವ ನಾಮ ಸಂವತ್ಸರದ ವೈಶಾಖ ಮಾಸ ೩ರಿಂದ ೧೪ರ ತನಕ **ದಿನಾಂಕ 17-04-2026 ಶುಕ್ರವಾರ ಮೊದಲ್ಗೊಂಡು 28-04-2026 ಮಂಗಳವಾರದ** ತನಕ ವಿವಿಧ ವೈದಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಶ್ರೀ ಕ್ಷೇತ್ರದ ಸಾನ್ನಿಧ್ಯ ವೃದ್ಧಿ, ಲೋಕಕಲ್ಯಾಣಾರ್ಥವಾಗಿ ಜರಗಲಿರುವ ಈ ಪುಣ್ಯ ಕಾರ್ಯದಲ್ಲಿ ಭಗವದ್ಭಕ್ತರಾದ ತಾವೆಲ್ಲರೂ ಆಗಮಿಸಿ, ಪ್ರಸಾದ ಸ್ವೀಕರಿಸಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಆದರಪೂರ್ವಕ ಆಮಂತ್ರಿಸುತ್ತಿದ್ದೇವೆ.

ಕಾರ್ಯಕ್ರಮಗಳು

ತಾ. 18-04-2026ನೇ ಶನಿವಾರ : ಅಪರಾಹ್ನ 3.30ರಿಂದ : **ನವೀಕರಿಸಿದ ರಾಜಗೋಪುರ, ರಾಜಾಂಗಣ ಮೇಲ್ಛಾವಣಿ ಮತ್ತು ನೂತನ ಭೋಜನಶಾಲೆ ಲೋಕಾರ್ಪಣೆ.** ಅಪರಾಹ್ನ 5.15ರಿಂದ : **ಧಾರ್ಮಿಕ ಸಭೆಗಳ ಉದ್ಘಾಟನಾ ಸಮಾರಂಭ.** ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು, ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್, ಶ್ರೀಮದ್ ಎಡನೀರು ಮಠ. ಪರಮಪೂಜ್ಯ ಶ್ರೀ ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದಂಗಳವರು, ಜಗದ್ಗುರು ಶ್ರೀಮದ್ ಮಧ್ವಚಾರ್ಯ ಮೂಲ ಮಹಾ ಸಂಸ್ಥಾನಮ್, ಶ್ರೀ ಚಿತ್ರಾಪುರ ಮಠ. ಉದ್ಘಾಟನೆ : ಶ್ರೀ ಭೀಮೇಶ್ವರ ಜೋಷಿ, ಧರ್ಮಕರ್ತರು, ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರ ಹೊರನಾಡು. ಸಭಾಧ್ಯಕ್ಷತೆ : ಡಾ. ಸದಾಶಿವ ಶೆಟ್ಟಿ ಕುಳೂರು, (ಉದ್ಯಮಿ) ಗೌರವಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ.

ತಾ. 19-04-2026ನೇ ಆದಿತ್ಯವಾರ : ಸಂಜೆ 4.30ರಿಂದ : **ಧಾರ್ಮಿಕ ಸಭೆ :** ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ, ಶ್ರೀ ನಿತ್ಯಾನಂದ ಯೋಗಾಶ್ರಮ, ಕೊಂಡೆವೂರು. ಮುಖ್ಯ ಅತಿಥಿಗಳಾಗಿ ಶ್ರೀ ಡಿ. ಹರ್ಷೇಂದ್ರ ಕುಮಾರ್ ಶ್ರೀ ಕ್ಷೇತ್ರ ಧರ್ಮಸ್ಥಳ ಭಾಗವಹಿಸಲಿದ್ದಾರೆ.

ತಾ. 20-04-2026ನೇ ಸೋಮವಾರ : ಸಂಜೆ 4.30ರಿಂದ : **ಧಾರ್ಮಿಕ ಸಭೆ** : ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಜಗದ್ಗುರು ಶ್ರೀಮದ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಮ್, ಶ್ರೀ ಸುಬ್ರಹ್ಮಣ್ಯ ಮಠ. ವಿಶೇಷ ಆಹ್ವಾನಿತರಾಗಿ ಶ್ರೀ ಮುರಳೀಕೃಷ್ಣ, ಮುಖ್ಯ ನ್ಯಾಯಾಧೀಶರು, ಕೇರಳ ಹೈಕೋರ್ಟು, ಎರ್ನಾಕುಳಂ. ದಿವ್ಯ ಉಪಸ್ಥಿತಿ : ಪರಮಪೂಜ್ಯ ಶ್ರೀ ಶ್ರೀ ಚನ್ನಬಸವ ದೇವರು ರುದ್ರಸ್ವಾಮಿಗಳ ಮಠ, ಅವರೊಳ್ಳಿ ಖಾನಾಪುರ ಬೆಳಗಾವಿ.

ತಾ. 21-04-2026ನೇ ಮಂಗಳವಾರ : ಸಂಜೆ 4.30ರಿಂದ : **ಮಾತೃ ಸಮಾವೇಶ** : ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಸಾಧ್ವಿ ಮಾತಾನಂದಮಯಿ, ಶ್ರೀ ದತ್ತಾತ್ರೇಯ ಕ್ಷೇತ್ರ, ಒಡಿಯೂರು. ಮುಖ್ಯ ಅತಿಥಿ : ಶ್ರೀಮತಿ ಭಾಗೀರಥಿ ಮುರುಳ್ಯ, ಶಾಸಕಿ, ಸುಳ್ಯ ವಿಧಾನ ಸಭಾ ಕ್ಷೇತ್ರ.

ತಾ. 22-04-2026ನೇ ಬುಧವಾರ : ಸಂಜೆ 4.30ರಿಂದ **ಧಾರ್ಮಿಕ ಸಭೆ.** ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಜಗದ್ಗುರು ಶ್ರೀಮದ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಮ್, ಶ್ರೀ ಪೇಜಾವರ ಮಠ, ಉಡುಪಿ.

ತಾ. 23-04-2026ನೇ ಗುರುವಾರ : ಪೂರ್ವಾಹ್ನ 4ರಿಂದ **108 ತೆಂಗಿನಕಾಯಿ ಗಣಪತಿ ಹೋಮ,** ಪ್ರತಿಷ್ಠಾಪಾಣಿ. ಪೂರ್ವಾಹ್ನ 7.40ರಿಂದ 9.30ರ ಮಧ್ಯೆ ಬರುವ ವೃಷಭ ಲಗ್ನ ಸುಮುಹೂರ್ತದಲ್ಲಿ **ಶ್ರೀ ದೇವರ ಪ್ರತಿಷ್ಠೆ,** ಪ್ರತಿಷ್ಠಾಬಲಿ, ಅಂಕುರ ಪೂಜೆ, ಮಹಾಪೂಜೆ. ಸಂಜೆ 4.30ರಿಂದ **ಧಾರ್ಮಿಕ ಸಭೆ:** ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್, ಶ್ರೀಮದ್ ಎಡನೀರು ಮಠ. ಪರಮಪೂಜ್ಯ ಶ್ರೀ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ, ಶ್ರೀಮದ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಮ್, ಶ್ರೀ ಅದಮಾರು ಮಠ, ಉಡುಪಿ. ಪರಮಪೂಜ್ಯ ಶ್ರೀ ಶ್ರೀ ಯೋಗಿ ಕೌಸ್ತುಭ ಮೋಹನದಾಸ ಪರಮಹಂಸ ಸ್ವಾಮೀಜಿ, ಶ್ರೀಧಾಮ ಮಾಣಿಲ.

ತಾ. 24-04-2026ನೇ ಶುಕ್ರವಾರ : ಸಂಜೆ 4.30ರಿಂದ **ಧಾರ್ಮಿಕ ಸಭೆ :** ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಈಶ ವಿಠಲದಾಸ ಸ್ವಾಮೀಜಿ, ಸಾಂದೀಪನೀ ಸಾಧನಾಶ್ರಮ, ಶ್ರೀಕ್ಷೇತ್ರ ಕೇಮಾರು.

ತಾ. 25-04-2026ನೇ ಶನಿವಾರ : ಸಂಜೆ 4.30ರಿಂದ **ಧಾರ್ಮಿಕ ಸಭೆ** : ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀ ಶ್ರೀ ಶ್ರೀ ವಾಸುದೇವ ಸದಾಶಿವಾಶ್ರಮ ಮಹಾಸ್ವಾಮಿಗಳು, ಶ್ರೀ ವಾಗೀಶ್ವರೀ ಲಕ್ಷ್ಮೀನರಸಿಂಹ ಭಾಗವತ ಮಹಾಪೀಠಂ ಪುಣ್ಯ ಸಂಗಮಕ್ಷೇತ್ರ, ಕದಳೀಪುರ ಶ್ರೀಮಠ, ಬಾಳೆಕುದ್ರು, ಹಂಗಾರಕಟ್ಟೆ. ರಾತ್ರಿ 8ರಿಂದ ಹನುಮಗಿರಿ ಮೇಳದವರಿಂದ **'ಸಂಪೂರ್ಣ ಶ್ರೀ ದೇವಿ ಮಹಾತ್ಮೆ'.**

ತಾ. 26-04-2026ನೇ ರವಿವಾರ : ಪೂರ್ವಾಹ್ನ 5ರಿಂದ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್, ಶ್ರೀಮದ್ ಎಡನೀರು ಮಠ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಗಳವರ ದಿವ್ಯ ಉಪಸ್ಥಿತಿಯಲ್ಲಿ **'ಸಹಸ್ರ ಕಲಶಾಭಿಷೇಕ-ಬ್ರಹ್ಮ ಕಲಶಾಭಿಷೇಕ'.** ಪೂರ್ವಾಹ್ನ 11-30ಕ್ಕೆ ಆಶೀರ್ವಚನ : ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಶ್ರೀ ಸಂಸ್ಥಾನ ಗೋಕರ್ಣ, ಶ್ರೀರಾಮಚಂದ್ರಪುರ ಮಠ. ಸಂಜೆ 4.30ರಿಂದ **ಧಾರ್ಮಿಕ ಸಭೆ:** ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್, ಶ್ರೀಮದ್ ಎಡನೀರು ಮಠ. ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಶ್ರೀ ಗುರುದೇವದತ್ತ ಸಂಸ್ಥಾನಮ್, ಶ್ರೀಕ್ಷೇತ್ರ ಒಡಿಯೂರು. ರಾತ್ರಿ 9ರಿಂದ **'ವಯೋಲಿನ್ ಫ್ಯೂಷನ್-ಗಂಗಾ ತರಂಗಂ'** ಕು। ಗಂಗಾ ಶಶಿಧರನ್ ತ್ರಿಶೂರು ಮತ್ತು ಬಳಗದವರಿಂದ.

ವರ್ಷಾವಧಿ ಉತ್ಸವ :

ತಾ. 27-04-2026ನೇ ಸೋಮವಾರ : ಮಧ್ಯಾಹ್ನ 12ರಿಂದ ತುಲಾಭಾರ, ರಾತ್ರಿ 9ರಿಂದ **ಶ್ರೀ ಭೂತಬಲಿ ಉತ್ಸವ, ಬೆಡಿಸೇವೆ.** ಅಪರಾಹ್ನ 5ರಿಂದ : **ವಯಲಿನ್** - ಖ್ಯಾತ ಅಂತರಾಷ್ಟ್ರೀಯ ವಯಲಿನ್ ವಾದಕರು, ಕೆ.ಜೆ. ದಿಲೀಪ್ ಜೇನುಮೂಲೆ, ಚೆನ್ನೈ ಮತ್ತು ಬಳಗದವರಿಂದ. ರಾತ್ರಿ 7.30ರಿಂದ ಶ್ರೀ ಪೆರ್ಡೂರು ಮೇಳದವರಿಂದ ಯಕ್ಷಗಾನ ಬಯಲಾಟ - **'ಶ್ರೀ ಶನೀಶ್ವರ ಮಹಾತ್ಮೆ'**

ತಾ. 28-04-2026ನೇ ಮಂಗಳವಾರ : ಬೆಳಿಗ್ಗೆ 10ರಿಂದ ಶ್ರೀ ದೇವರ ಬಲಿ ಉತ್ಸವ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಮಧ್ಯಾಹ್ನ 12.30ರಿಂದ : **ಶ್ರೀ ಪಿಲಿಚಾಮುಂಡಿ ದೈವದ ಕೋಲ.**

■ ಚಿತ್ರ : ಅಶ್ವಿನಿ ಸ್ಟುಡಿಯೋ ಬದಿಯಡ್ಕ

ನವೀಕರಣ ಪುನರ್‌ಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಮತ್ತು ವಾರ್ಷಿಕ ಉತ್ಸವಕ್ಕೆ ಶುಭ ಕೋರುವ


ಶ್ರೀ ವೆಂಕಟ್ರಮಣ ಭಟ್ ಚಂಬಲ್ತಿಮಾರ್ ಮತ್ತು ಮನೆಯವರು
(ವಕೀಲರು) ಆಡಳಿತ ಮೊಕ್ತೇಸರರು, ಶ್ರೀ ಉದನೇಶ್ವರ ಕ್ಷೇತ್ರ ಪೆರಡಾಲ


ಶ್ರೀ ಸೀತಾರಾಮ ವಿ. ಶ್ರೀಮತಿ ಶಾರದಾ
ಮೊಕ್ತೇಸರರು, ಶ್ರೀ ಉದನೇಶ್ವರ ಕ್ಷೇತ್ರ ಪೆರಡಾಲ


ಶ್ರೀ ಜಗನ್ನಾಥ ರೈ ಶ್ರೀಮತಿ ವಿನಯ ಪೆರಡಾಲಗುತ್ತು
ಮೊಕ್ತೇಸರರು ಹಾಗೂ ಕಾರ್ಯಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ ಹಾಗೂ ಮಹಿಳಾ ಸಮಿತಿ ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ


ಶ್ರೀ ಜಯದೇವ ಖಂಡಿಗೆ
ಗೌರವಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ


ಶ್ರೀ ನಿರಂಜನ್ ರೈ ಶ್ರೀಮತಿ ದಿವ್ಯಾಶ್ರೀ ಪೆರಡಾಲಗುತ್ತು ಮಾಸ್ಟರ್ ಧ್ಯಾನ್ ರೈ
ಪ್ರಧಾನ ಕಾರ್ಯದರ್ಶಿ ಶ್ರೀ ಉದನೇಶ್ವರ ದೇವಸ್ಥಾನ ಬ್ರಹ್ಮಕಲಶೋತ್ಸವ ಸಮಿತಿ


ಶ್ರೀ ಸೂರ್ಯನಾರಾಯಣ ಬಿ. ಶ್ರೀಮತಿ ಆಶಾ
ಕೋಶಾಧಿಕಾರಿ, ಬ್ರಹ್ಮಕಲಶೋತ್ಸವ ಸಮಿತಿ, ಪೆರಡಾಲ


ವೇದಮೂರ್ತಿ ಶಿವರಾಮ ಭಟ್
ಪ್ರಧಾನ ಅರ್ಚಕರು ಶ್ರೀ ಕ್ಷೇತ್ರ ಪೆರಡಾಲ


ಡಾ. ಶ್ರೀಶ ಕುಮಾರ್ ಪಂಜಿತ್ತಡ್ಕ
ಜೊತೆ ಕಾರ್ಯದರ್ಶಿ, ಅಧ್ಯಕ್ಷರು ಪ್ರಚಾರ ಸಮಿತಿ ಬ್ರಹ್ಮ ಕಲಶೋತ್ಸವ ಸಮಿತಿ ಪೆರಡಾಲ


ಡಿ. ಶಂಕರ
ಅಧ್ಯಕ್ಷರು ಬದಿಯಡ್ಕ ಗ್ರಾಮ ಪಂಚಾಯತ್


ಶ್ಯಾಮ್ ಪ್ರಸಾದ್ ಮಾನ್ಯ
ಸಂಚಾಲಕರು ಹೊರೆ ಕಾಣಿಕೆ ಸಮಿತಿ ಬ್ರಹ್ಮ ಕಲಶೋತ್ಸವ ಸಮಿತಿ ಪೆರಡಾಲ


ಶ್ರೀ ಚಂದ್ರಹಾಸ ರೈ ಶ್ರೀಮತಿ ಭಾಗೀರಥಿ ಸಿ. ರೈ ಪೆರಡಾಲಗುತ್ತು
ಮಾಜಿ ಮೊಕ್ತೇಸರರು ಶ್ರೀ ಕ್ಷೇತ್ರ ಪೆರಡಾಲ, ಉಪಾಧ್ಯಕ್ಷರು ಶ್ರೀ ಕ್ಷೇತ್ರ ಬ್ರಹ್ಮಕಲಶೋತ್ಸವ ಸಮಿತಿ


ಗಂಗಾಧರ ಗೋಳಿಯಡ್ಕ
ಉಪಾಧ್ಯಕ್ಷರು ಸ್ವಯಂ ಸೇವಕ ವಿಭಾಗ ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ ಬದಿಯಡ್ಕ ಗ್ರಾಮ ಪಂಚಾಯತ್ ಸದಸ್ಯರು


ಪ್ರೊ। ವಿ. ಶ್ರೀನಾಥ್ ಕಾಸರಗೋಡು
ಉಪಾಧ್ಯಕ್ಷರು ಸ್ವಾಗತ ಸಮಿತಿ ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ


ಉದನೇಶ್ ವೀರ ಕಿಳಿಂಗಾರು
ಸ್ವಯಂಸೇವಕರು ವಿಭಾಗ ಉಪಾಧ್ಯಕ್ಷರು ಬ್ರಹ್ಮ ಕಲಶೋತ್ಸವ ಸಮಿತಿ ಪೆರಡಾಲ


ನಟರಾಜ ರಾಜ್ ಪಟ್ಟಾಜೆ ಕೆಲ್ಲಡಂಬಿ
ಅಧ್ಯಕ್ಷರು ಸ್ವಯಂಸೇವಕ ವಿಭಾಗ ಬ್ರಹ್ಮಕಲಶೋತ್ಸವ ಪೆರಡಾಲ


ಜಯಪ್ರಕಾಶ್ ಶೆಟ್ಟಿ ಕಡಾರುಬೀಡು
ಉಪಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ


ಕರಿಂಬಿಲ ಲಕ್ಷ್ಮಣ ಪ್ರಭು
ದಸ್ತಾವೇಜು ಬರಹಗಾರರು ಬದಿಯಡ್ಕ ಉಪಾಧ್ಯಕ್ಷರು ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ಪೆರಡಾಲ


ಅಖಿಲೇಶ್ ನಗುಮುಗಂ
ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷರು ಕಾಸರಗೋಡು


ಸತೀಶ್ ಕುಮಾರ್ ಪುದ್ಯೋಡು
ಸದಸ್ಯರು ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ


ಕಮಲ ಪಂಜಿತ್ತಡ್ಕ ಮತ್ತು ಮಕ್ಕಳು
ಕಾರ್ಯಾಲಯ ಸಮಿತಿ ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ

ಶಿವಶಕ್ತಿ ಪೆರಡಾಲ
ಅಧ್ಯಕ್ಷರು ಹಾಗೂ ಸರ್ವ ಸದಸ್ಯರು


ಹರಿಪ್ರಸಾದ್ ಪೆರ್ಮುಖ
ಸೇವಾ ಪ್ರಸಾದ ವಿಭಾಗ ಬ್ರಹ್ಮ ಕಲಶೋತ್ಸವ ಸಮಿತಿ ಪೆರಡಾಲ


ಯೋಗೀಶ್ ಕಡಮಣ್ಣಾಯ ಮತ್ತು ಮನೆಯವರು
ಆರಿಕ್ಕಾಡಿ ಕುಂಬಳೆ

ಸತ್ಯನಾರಾಯಣ ಶರ್ಮ ಪಂಜಿತ್ತಡ್ಕ
ಮುಖ್ಯೋಪಾಧ್ಯಾಯರು
ಭಾರತೀ ವಿದ್ಯಾಪೀಠ ಬದಿಯಡ್ಕ

ವೆಂಕಟ್ರಮಣ ಭಟ್ ಪುದ್ಯೋಡು


ಲಕ್ಷ್ಮಿ ಡೆಕೋರೇಶನ್ ಪುತ್ತೂರು
ಸಂಪರ್ಕಿಸಿ 9844400706
ಲಕ್ಷ್ಮೀಶ ಓಣಿಯಡ್ಕ ನೀರ್ಚಾಲು

GANESH ELECTRICALS
SALES & SERVICE
SHRI BHAGAVATHI COMPLEX, MAIN ROAD, BADIADKA, P.O PERADALA 671 551, KASARAGOD DIST.
LICENCED ELECTRICAL SUPERVISOR & CONTRACTOR P.W.D. LICENCE HOLDER
GANESH PRASAD I.
MOB: 9447650339 9526409353